ಮಂಗಳೂರು
ಮಂಗಳವಾರ, 24 ಮಾರ್ಚ್ 2026
ಸಂಪುಟ 48, ಸಂಚಿಕೆ 5 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ | ೦೯ | ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್! | ೦೯ | ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ | ೦೯

ಶುಭ ದಿನ
ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ

ದಿನದ ಮಾತು
ಭವಿಷ್ಯ ಎದುರಿಸಲು ಸಿದ್ಧನಿರುವಾತ, ಯಾವುದೇ ಸಂದರ್ಭದಲ್ಲಿ ಜಾಣ್ಮೆಯಿಂದ ವರ್ತಿಸುವಾತ ಸುಖಿಗಳು. ಕೇವಲ ಅದೃಷ್ಟ ಅವಲಂಬಿಸಿ ಬದುಕುವವನು ಬೇಗ ಹಾಳಾಗುತ್ತಾನೆ.
▲ ಚಾಣಕ್ಯ ನೀತಿ

ಎಲ್‌ಪಿಜಿಗೆ ಪರ್ಯಾಯ- ಗೋಬರ್‌ಗ್ಯಾಸ್
ಧರಣಿ ಮಂಡಲ
• ಕೆ.ಎನ್.ಶೈಲೇಶ್ ಹೊಳ್ಳ
• ಪುಟ ೬

ಕಿರುಸುದ್ದಿ

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಐದು ಕೋಟಿ ರೂ. ವಂಚನೆ
• **ಬೆಂಗಳೂರು:** ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಸೈಬರ್ ವಂಚಕರು ಅಮಾಯಕರಿಗೆ ಮೋಸ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಇತ್ತೀಚೆಗಷ್ಟೇ ಉದ್ಯಮಿಯೊಬ್ಬರಿಗೆ 15 ಕೋಟಿ ರೂ. ವಂಚಿಸಿದ್ದ ಘಟನೆ



ಮಾಸುವ ಮುನ್ನವೇ, ಇದೀಗ 94 ವರ್ಷದ ನಿವೃತ್ತ ಸಂಶೋಧಕರೊಬ್ಬರಿಂದ ಬರೋಬ್ಬರಿ 4.91 ಕೋಟಿ ರೂ. ವಂಚಿಸಿರುವ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಸೈಬರ್ ವಂಚಕರು ನಿವೃತ್ತ ಸಂಶೋಧಕರೊಬ್ಬರ ಲ್ಯಾಂಡ್ ಲೈನ್‌ಗೆ ಕರೆ ಮಾಡಿ, ನಿಮ್ಮ ವಿರುದ್ಧ ಬಳ್ಳಾರಿಯಲ್ಲಿ ಮಾನವ ಕಳ್ಳಸಾಗಾಣಿಕೆ ಪ್ರಕರಣ ದಾಖಲಾಗಿದೆ ಎಂದು ಹೆದರಿಸಿದ್ದಾರೆ. ನಂತರ ಸಂದೀಪ್ ರಾವ್ ಎಂಬ ವ್ಯಕ್ತಿ ತಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು, ವೃದ್ಧರ ಆಧಾರ್ ವಿವರಗಳನ್ನು ವಾಟ್ಸ್‌ಆ್ಯಪ್ ಮೂಲಕ ಪಡೆದಿದ್ದಾನೆ. ➡ಪುಟ ೪

ಹಳದಿ ಲೋಹ, ಬೆಳ್ಳಿ ದರದಲ್ಲಿ ಭಾರೀ ಕುಸಿತ
• **ಹೊಸದಿಲ್ಲಿ:** ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಎ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತ ಕಂಡಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.
• ಪುಟ ೯

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ
• ಪುಟ ೫

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ: ಉಮಾನಾಥ್
• ಪುಟ ೪

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬರುತ್ತಿಲ್ಲ: ಬಿಜೆಪಿ
• ಪುಟ ೫

ಮಾತುಕತೆ, ರಾಜತಾಂತ್ರಿಕತೆ ಮಾತ್ರ ಸಂಘರ್ಷಕ್ಕೆ ಪರಿಹಾರ: ಮೋದಿ
ಕೋವಿಡ್ ವೇಳೆ ತೋರಿದ ತಾಳ್ಮೆಯಂತೆ ಈ ಸಂಕಷ್ಟ ಎದುರಿಸೋಣ
ಏಕತೆಯಿಂದ ಎದುರಿಸಿ



ಶಾಂತಿ, ಸಹನೆ, ಜಾಗೃತಿ ಇರಲಿ
ಕೊನೆಯಲ್ಲಿ ಪ್ರಧಾನಿ ಮೋದಿ ಅವರು ದೇಶದ ಜನರಿಗೆ ಶಾಂತಿ, ಸಹನೆ ಮತ್ತು ಜಾಗೃತಿಯಿಂದ ಇರಲು ಕರೆ ನೀಡಿದರು. ನಾವು ಒಟ್ಟಾಗಿ ನಡೆದುಕೊಂಡರೆ ಯಾವುದೇ ಸವಾಲನ್ನೂ ಎದುರಿಸಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂಕಷ್ಟದ ಸಂದರ್ಭದಲ್ಲಿ ಭಾರತದಿಂದ ಏಕತೆಯ ಧ್ವನಿ ಜಗತ್ತಿಗೆ ಕೇಳಿಸಬೇಕು ಎಂದು ಮೋದಿ ಹೇಳಿದರು.

ಹಡಗುಗಳ ಮೇಲೆ ದಾಳಿಗೆ ಖಂಡನೆ
ಅಂತಾರಾಷ್ಟ್ರೀಯ ಜಲಮಾರ್ಗಗಳಾದ ಹಾರ್ಮುಜ್



ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಮೇಲೆ ದಾಳಿಗಳು ನಡೆಯುತ್ತಿರುವುದು ಸ್ವೀಕಾರಾರ್ಹವಲ್ಲ ಎಂದು ಅವರು ಖಂಡಿಸಿದರು. ಜಗತ್ತಿನ ಸುಮಾರು ಶೇ.20 ಇಂಧನ ಸಾಗಾಣಿಕೆ ಈ ಮಾರ್ಗದ ಮೂಲಕ ನಡೆಯುವುದರಿಂದ ಇದರ ಭದ್ರತೆ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ದೀರ್ಘಕಾಲ ಮುಂದುವರಿಯುವ ಸಾಧ್ಯತೆ ಇದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ, ದೇಶವು ಕೊರೋನಾ ಸಂದರ್ಭದಲ್ಲಿ ತೋರಿಸಿದಂತೆ ಏಕತೆ ಮತ್ತು ತಾಳ್ಮೆಯಿಂದ ಈ ಸಂಕಷ್ಟವನ್ನೂ ಎದುರಿಸಬೇಕು ಎಂದು ಕರೆ ನೀಡಿದ್ದಾರೆ.

ಲೋಕಸಭೆಯಲ್ಲಿ ಸೋಮವಾರ ಹೇಳಿಕೆ ನೀಡಿರುವ ಅವರು, ಈ ಸಂಘರ್ಷವು ಇಂಧನ, ರಾಸಾಯನಿಕ



ಗೊಬ್ಬರ, ರಾಷ್ಟ್ರೀಯ ಭದ್ರತೆ ಸೇರಿದಂತೆ ಹಲವಾರು ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿದ್ದು, ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಭಾರತೀಯರ ಸುರಕ್ಷತೆ ಕುರಿತು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದರು.

ಮಾತುಕತೆಯಿಂದ ಪರಿಹಾರ: ಸಂಘರ್ಷಕ್ಕೆ ಅಂತಿಮ ಪರಿಹಾರ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕವೇ ಸಾಧ್ಯ. ಎಲ್ಲಾ ಸಂಬಂಧಿತ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಿರುವುದಾಗಿ ಪ್ರಧಾನಿ ಮೋದಿ ತಿಳಿಸಿದರು. ➡ಪುಟ ೪

ಎಲ್ಲಾ ರಾಷ್ಟ್ರಗಳಿಗೂ ಸವಾಲು • ಪುಟ ೪

ಭಾರತೀಯರ ಸುರಕ್ಷತೆಗೆ ವಿಶೇಷ ಕ್ರಮ
ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಭಾರತೀಯರ ಸುರಕ್ಷತೆ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಮೋದಿ ಹೇಳಿದರು. ಯುದ್ಧ ಆರಂಭವಾದ ಬಳಿಕ 3.75 ಲಕ್ಷಕ್ಕೂ ಹೆಚ್ಚು ಭಾರತೀಯರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲಾಗಿದೆ ಎಂದು ಮಾಹಿತಿ ನೀಡಿದರು. ಇರಾನ್‌ನಿಂದಲೇ ಸುಮಾರು 1,000 ಭಾರತೀಯರು, ಈ ಪೈಕಿ 700ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ ಎಂದು ಹೇಳಿದರು.

ಇಂಧನ ಭದ್ರತೆಗೆ ಯೋಜನೆ
ಇಂಧನ ಭದ್ರತೆಗಾಗಿ ಕಳೆದ ದಶಕದಲ್ಲಿ ಭಾರತ ಮಹತ್ವದ ಕ್ರಮಗಳನ್ನು ಕೈಗೊಂಡಿದೆ ಎಂದು ಮೋದಿ ವಿವರಿಸಿದರು.



27 ದೇಶಗಳಿಂದ ಇಂಧನ ಆಮದು ಮಾಡುತ್ತಿದ್ದ ಭಾರತ ಈಗ 41 ದೇಶಗಳಿಂದ ಇಂಧನ ಪಡೆಯುತ್ತಿದೆ ಎಂದು ಹೇಳಿದರು. ಭಾರತದ ಬಳಿ 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಸ್ಟ್ರಾಟೆಜಿಕ್ ಪೆಟ್ರೋಲಿಯಂ ಸಂಗ್ರಹವಿದ್ದು, ಇದನ್ನು 6.5 ಮಿಲಿಯನ್ ಟನ್‌ಗೆ ಹೆಚ್ಚಿಸಲು ಯೋಜನೆ ಇದೆ. ದೇಶೀಯ ತೈಲ ಕಂಪನಿಗಳಲ್ಲಿಯೂ ಸಾಕಷ್ಟು ಸಂಗ್ರಹವಿದೆ ಎಂದು ಹೇಳಿದರು.

ವಿದ್ಯುತ್ ವ್ಯವಸ್ಥೆ ಸಮರ್ಪಕ
ಬೇಸಿಗೆ ಆರಂಭವಾಗಿರುವುದರಿಂದ ವಿದ್ಯುತ್ ಬೇಡಿಕೆ



ಹೆಚ್ಚಾಗಿದೆ. ದೇಶದ ವಿದ್ಯುತ್ ಘಟಕಗಳಲ್ಲಿ ಸಾಕಷ್ಟು ಕಲ್ಲಿದ್ದಲು ಸಂಗ್ರಹವಿದೆ ಎಂದು ಹೇಳಿದರು. ಭಾರತವು 2ನೇ ವರ್ಷವೂ 1 ಬಿಲಿಯನ್ ಟನ್‌ಗಿಂತ ಹೆಚ್ಚು ಕಲ್ಲಿದ್ದಲು ಉತ್ಪಾದಿಸಿ ದಾಖಲೆ ನಿರ್ಮಿಸಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿಯೂ ದೇಶ ಮಹತ್ವದ ಸಾಧನೆ ಮಾಡಿದೆ ಎಂದು ಹೇಳಿದರು.

ಕಾಂಗ್ರೆಸ್–ಬಿಜೆಪಿಯಿಂದ ಶಕ್ತಿ ಪ್ರದರ್ಶನ
ರಂಗೇರಿದ ಉಪ ಕಣ



ದಾವಣಗೆರೆ ದಕ್ಷಿಣದಿಂದ ನಾಮಪತ್ರ ಸಲ್ಲಿಸಿದ ಸಮರ್ಥ್. ಸಿಎಂ, ಡಿಸಿಎಂ ಇದ್ದರು.



ಬಾಗಲಕೋಟೆಯಿಂದ ನಾಮಪತ್ರ ಸಲ್ಲಿಸಿದ ಚರಂತಿಮಠ. ಬಿಜೆಪಿ ನಾಯಕರು ಇದ್ದರು.

• **ಬಾಗಲಕೋಟೆ:** ಆಡಳಿತ ಕಾಂಗ್ರೆಸ್ ಮತ್ತು ವಿರೋಧ ಪಕ್ಷವಾದ ಬಿಜೆಪಿ ನಾಮಪತ್ರ ಸಲ್ಲಿಕೆಯ ಕೊನೆಯ ದಿನವಾದ ಸೋಮವಾರ ಭರ್ಜರಿಯಾಗಿ ನಾಮಪತ್ರ ಸಲ್ಲಿಕೆ ಮಾಡುವ ಮೂಲಕ ಬಾಗಲಕೋಟೆ ಉಪಸಮರ ಕಣಕ್ಕೆ ರಂಗೇರಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ,



ಡಿಸಿಎಂ ಡಿ.ಕೆ. ಶಿವ ಕುಮಾರ್ ಮತ್ತಿತರ ನಾಯಕರ ನೇತೃತ್ವದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರೆ, ಇತ್ತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಬಿ. ಶ್ರೀರಾಮುಲು ಮತ್ತಿತರ ನಾಯಕರ ನೇತೃತ್ವದಲ್ಲಿ ಭಾರೀ ಮೆರವಣಿಗೆ ನಡೆಸಿ ಬಿಜೆಪಿಯ ವೀರಣ್ಣ ಚರಂತಿಮಠ ತಮ್ಮ ನಾಮಪತ್ರ ಸಲ್ಲಿಸಿದರು.

> **ಬಿಜೆಪಿಯವರು ಕೇವಲ ಹಿಂದುತ್ವ ವಾದವನ್ನು ಮುಂದಿಡುತ್ತಾರೆಯೇ ಹೊರತು, ಕೃಷ್ಣಾ ಮೇಲ್ದಂಡೆ ಹಂತ-3 ಯೋಜನೆಗೆ ಅವರ ಅಧಿಕಾರಾವಧಿಯಲ್ಲಿ ಯಾವುದೇ ಅಭಿವೃದ್ಧಿ ಮಾಡಲಿಲ್ಲ. ನಮ್ಮ ಸರ್ಕಾರ ಈ ಯೋಜನೆಯಿಂದ ಮುಳುಗಡೆಯಾಗುವ ಜಮೀನಿಗೆ ಸೂಕ್ತ ಪರಿಹಾರ ನೀಡುವ ನಿರ್ಣಯ ಕೈಗೊಂಡಿದೆ.**
> ■ ಸಿದ್ದರಾಮಯ್ಯ, ಸಿಎಂ

ಬಿಜೆಪಿ ಚರಂತಿಮಠ, ಕಾಂಗ್ರೆಸ್‌ನಿಂದ ಉಮೇಶ್ ಅಖಾಡಕ್ಕೆ
• **ಬಾಗಲಕೋಟೆ:** ಬಿಜೆಪಿಯಿಂದ ವೀರಣ್ಣ ಚರಂತಿಮಠ ಅವರು ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಿದ ಬಳಿಕ ಹಳೆ ಬಾಗಲಕೋಟೆಯ ಕಣವಿ ವೀರಭದ್ರೇಶ್ವರ ದೇವಸ್ಥಾನದ ಆವರಣದಿಂದ ಬಸವೇಶ್ವರ ವೃತ್ತದ ತನಕ ಭರ್ಜರಿ ಮೆರವಣಿಗೆ ನಡೆಸಿದರು. ➡ಪುಟ ೪

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ
• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾಗಿದ್ದ ಸೋಮವಾರ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ನಾಯಕರೊಂದಿಗೆ ಬೃಹತ್ ಮೆರವಣಿಗೆ ನಡೆಸಿ ಶಕ್ತಿ ಪ್ರದರ್ಶಿಸುವ ಮೂಲಕ ನಾಮಪತ್ರ ಸಲ್ಲಿಸಿದರು. ➡ಪುಟ ೪

ಇರಾನ್ ವಿದ್ಯುತ್ ಸ್ಥಾವರ ಮೇಲಿನ ದಾಳಿ ಮುಂದಕ್ಕೆ: ಟ್ರಂಪ್
ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

• **ದುಬೈ:** ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ



ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು 5 ದಿನ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ. ತಾವೇ ವಿಧಿಸಿಕೊಂಡಿದ್ದ ಗಡುವು ಮುಗಿಯುವ ಕೆಲವೇ ಗಂಟೆಗಳ ಮೊದಲು ಟ್ರಂಪ್ ಸಾಮಾಜಿಕ ಜಾಲತಾಣದ ಮೂಲಕ ಈ ಘೋಷಣೆ ಮಾಡಿದ್ದಾರೆ. ನಾಲ್ಕು ವಾರಗಳ ಈ ಸಂಘರ್ಷಕ್ಕೆ ಸಂಪೂರ್ಣ ಪರಿಹಾರದ ನಿಟ್ಟಿನಲ್ಲಿ ನಡೆಯುತ್ತಿರುವ ಚರ್ಚೆಗಳ ಯಶಸ್ಸಿನಿಂದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ.

ಇರಾನ್ ಎಚ್ಚರಿಕೆಗೆ ಮಣಿಯಿತೇ?: ಇರಾನ್‌ನ ಸರ್ಕಾರಿ ದೂರದರ್ಶನ ಈ ಕ್ರಮವನ್ನು ಟೆಹ್ರಾನ್‌ನ ಎಚ್ಚರಿಕೆಗೆ ಅಮೆರಿಕ ಮಣಿದಿದೆ ಎಂದು ಬಣ್ಣಿಸಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್‌ಗೆ ಸಂಬಂಧಿಸಿದ ಸುದ್ದಿ ಸಂಸ್ಥೆಗಳು, ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಪ್ರತಿಪಾದಿಸಿವೆ. ➡ಪುಟ ೪

ಇಂಧನ ಮಾರುಕಟ್ಟೆ ತಲ್ಲಣ
• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ



ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾರಿಗೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ. • ವಿವರ ಪುಟ ೯

ಗೇಲ್‌ನಲ್ಲಿ ನೋಂದಾಯಿಸಿಕೊಳ್ಳಲು 1 ವಾರ ಕಾಲಾವಕಾಶ
ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

• **ವಿಧಾನ ಪರಿಷತ್ತು:** ವಾಣಿಜ್ಯ ಎಲ್‌ಪಿಜಿ ಬಳಕೆದಾರರು ವಿಶೇಷವಾಗಿ ಹೋಟೆಲ್‌ಗಳು ಒಂದು ವಾರದೊಳಗೆ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ(ಜಿಎಐಎಲ್) ಕಡ್ಡಾಯವಾಗಿ



ನೋಂದಾಯಿಸಿಕೊಳ್ಳಬೇಕು ಎಂದು ಆಹಾರ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಮೇಲ್ಮನೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿ ದ ಅವರು, ಪ್ರಮುಖವಾಗಿ ವಾಣಿಜ್ಯ ಉದ್ದೇಶಗಳಿಗೆ ಸಿಲಿಂಡರ್ ಪಡೆಯುವ ಸಂಸ್ಥೆಗಳು ಕಡ್ಡಾಯವಾಗಿ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ನೋಂದಣಿ ಮಾಡಬೇಕಾಗಿರುವುದು ಅಗತ್ಯವಾಗಿದ್ದು, ಕೇಂದ್ರ ಸರ್ಕಾರ ಇದನ್ನು ಕಡ್ಡಾಯಗೊಳಿಸಿದೆ. ವಾರದಲ್ಲಿ ಈ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದರೆ, ಮುಂಬರುವ ದಿನಗಳಲ್ಲಿ ವಾಣಿಜ್ಯಿಕ ಸಿಲಿಂಡರ್ ಪೂರೈಕೆಗೆ ಅನುಕೂಲವಾಗಲಿದೆ ಎಂದರು. ➡ಪುಟ ೪

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ
• **ಬೆಂಗಳೂರು:** ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ಸರಿಪಡಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ



ಕೋರಿ ಬೆಂಗಳೂರು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಲು ಹೈಕೋರ್ಟ್ ಸೋಮವಾರ ನಿರಾಕರಿಸಿತು. ಹಾಲಿ ವಿಚಾರವನ್ನು ಸರ್ಕಾರಕ್ಕೆ ಬಿಡುವುದು ಒಳಿತು ಎಂಬ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದವನ್ನು ನ್ಯಾ.ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿತು. ➡ಪುಟ ೪

ವಿಧಾನಸೌಧಕ್ಕೆ ಬೀಟೆ ಬಾಗಿಲು
• **ಬೆಂಗಳೂರು:** ರಾಜ್ಯದ ಆಡಳಿತ ಮತ್ತು ಪ್ರಜಾಪ್ರಭುತ್ವದ ಶಕ್ತಿಸೌಧ ಈಗ ಮತ್ತಷ್ಟು



ಆಕರ್ಷಕವಾಗಿದೆ. ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಇದನ್ನು ಮಂಗಳವಾರ ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಾಗುತ್ತಿದೆ.

ವಿಧಾನಸಭೆ ಸಭಾಂಗಣದ ಪಶ್ಚಿಮ ದ್ವಾರಕ್ಕೆ ಆಕರ್ಷಕವಾದ ಕೆತ್ತನೆಯುಳ್ಳ ನೂತನ ಬಾಗಿಲು ನಿರ್ಮಿಸಿದಂತೆ ಲೋಕೋಪಯೋಗಿ ಇಲಾಖೆಯ ಮೂಲಕ ವಿಧಾನಸೌಧದ ಸೌಂದರ್ಯಕ್ಕೆ ತಕ್ಕಂತೆ ನೆಲಮಹಡಿಯ ಪಶ್ಚಿಮ ದ್ವಾರದ ಕಬ್ಬಿಣದ ಗ್ರಿಲ್ ಬದಲಾಯಿಸಲಾಗಿದೆ. ಕುಸುರಿ ಕೆತ್ತನೆಯುಳ್ಳ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಬಾಗಿಲು ನಿರ್ಮಾಣಕ್ಕೆ ಜಿಎಸ್‌ಟಿ ಸೇರಿ ಒಟ್ಟು 84 ಲಕ್ಷ ರೂ. ವೆಚ್ಚವಾಗಿದೆ. ➡ಪುಟ ೪

ಜೀವಂತ ವ್ಯಕ್ತಿ ಸತ್ತಿದ್ದಾನೆಂದು ಘೋಷಣೆ | ಹೈ ಕಿಡಿ
ಬದುಕಿರುವವನಿಗೆ ಮರಣ ಪತ್ರ!

ಬೆಂಗಳೂರಿನ ಪ್ರಕರಣಕ್ಕೆ ನ್ಯಾಯಾಲಯ ತೀವ್ರ ಅಸಮಾಧಾನ

• **ಬೆಂಗಳೂರು:** ಒಬ್ಬ ಮನುಷ್ಯ ತಾನು ಜೀವಂತವಾಗಿದ್ದೇನೆ ಎಂದು ಸಾಬೀತುಪಡಿಸಲು ನ್ಯಾಯಾಲಯದ ಮೆಟ್ಟಿಲೇರಬೇಕಾದ ಪರಿಸ್ಥಿತಿ ಬಂದಿರುವುದು ವ್ಯವಸ್ಥೆಯ ಅತಿ ದೊಡ್ಡ ದುರಂತ. ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ನೀಡಿ, ಆತನಿಗೆ ಪಡಿತರವೂ ಸಿಗದೆ ಪರದಾಡುವಂತೆ ಮಾಡಿದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಅರ್ಜಿದಾರರು ಜೀವಂತವಾಗಿದ್ದು, ಅವರ ಹೆಸರಿನಲ್ಲಿ ನೀಡಿರುವ ಮರಣ ಪ್ರಮಾಣ ಪತ್ರ ರದ್ದುಪಡಿಸುತ್ತಿಲ್ಲ ಎಂದರೆ ಹೇಗೆ? ಎಂದು ಕಿಡಿಕಾರಿರುವ ಹೈಕೋರ್ಟ್, ಬುಧವಾರದೊಳಗೆ ಮರಣ ಪ್ರಮಾಣ ಪತ್ರ ರದ್ದುಪಡಿಸಿ ರುವ ಹಿಂಬರಹ ಸಲ್ಲಿಸಬೇಕು ಎಂದು ಜಿಬಿಎಯ ಜನನ ಮತ್ತು ಮರಣ ನೋಂದಣಾಧಿಕಾರಿಗೆ ತಾಕೀತು ಮಾಡಿದೆ. ಬೆಂಗಳೂರಿನ ಚಿಕ್ಕಪೇಟೆಯ ವಲಯ ಕಚೇರಿಯ ಜನನ ಮತ್ತು ಮರಣ ನೋಂದಣಾಧಿಕಾರಿಯು 2025ರ ಏ.23ರಂದು ನೀಡಿರುವ ತಾತ್ಕಾಲಿಕ ಮರಣ ಪ್ರಮಾಣ ಪತ್ರವನ್ನು ರದ್ದುಪಡಿಸಲು ನಿರ್ದೇಶಿಸಬೇಕು ಎಂದು ಕೋರಿ ಡಿ.ಮೆಹಬೂಬ್ ಬಾಷಾ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ.ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ನಡೆಸಿತು. ➡ಪುಟ ೪



ವಿವರಣೆ ಸಲ್ಲಿಸಲು ಗಡುವು
ಬುಧವಾರದೊಳಗೆ ಮರಣ ಪ್ರಮಾಣ ಪತ್ರ ನೀಡಿರುವುದನ್ನು ಹಿಂಪಡೆದು ನ್ಯಾಯಾಲಯಕ್ಕೆ ತಿಳಿಸಬೇಕು. ಜನನ ಮತ್ತು ಮರಣ ನೋಂದಣಾಧಿಕಾರಿಯು ಈ ಸಂಬಂಧ ವಿವರಣೆ ಸಲ್ಲಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಅಲ್ಲದೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜಿಬಿಎ ಜನನ ಮತ್ತು ಮರಣ ನೋಂದಣಾಧಿಕಾರಿ, ಕಿದ್ವಾಯಿ ಸ್ಮಾರಕ ಆಸ್ಪತ್ರೆಯ ಆಡಳಿತಾಧಿಕಾರಿ, ಚಿಕ್ಕಪೇಟೆಯ ವೈದ್ಯಾಧಿಕಾರಿ, ಜಿಬಿಎಯ ಸಾಂಖ್ಯಿಕ ವಿಭಾಗದ ಜಂಟಿ ನಿರ್ದೇಶಕರಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಎಐಎಡಿಎಂಕೆ 178ರಲ್ಲಿ, ಬಿಜೆಪಿ 27ರಲ್ಲಿ ಸ್ಪರ್ಧೆ



• **ಚೆನ್ನೈ:** ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ. • ವಿವರ ಪುಟ ೯

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ 2,27,000(2,45,000) ಅಪರಂಜಿ ಚಿನ್ನ 14,175(14,860) ಆಭರಣ ಚಿನ್ನ: 13,180(13,835) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 72,696(1,836↓) ಎನ್‌ಎಸ್‌ಇ 22,512(601↓) $1 = ₹93.72


ಕಿರುಸುದ್ದಿ

ಕಾಸರಗೋಡು ಜಿಲ್ಲೆಯಲ್ಲಿ ಒಟ್ಟು 47 ನಾಮಪತ್ರ ಸಲ್ಲಿಕೆ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಒಟ್ಟು 47 ಮಂದಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆ ಕಾರ್ಯ ಸೋಮವಾರ ಮುಕ್ತಾಯವಾಯಿತು. ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 47 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ನಾಮಪತ್ರಗಳ ಪರಿಶೀಲನೆ ಮಾ.24ರಂದು ನಡೆಯಲಿದೆ. ಮಾ.26ರ ವರೆಗೆ ನಾಮಪತ್ರಗಳನ್ನು ಹಿಂಪಡೆಯಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮತ್ತೆ ತ್ರಿವರ್ಣ ಧ್ವಜಾರೋಹಣ

ಪುತ್ತೂರು: ಇತ್ತೀಚೆಗೆ ಸುರಿದ ಭಾರಿ ಗಾಳಿ ಮಳೆಗೆ ನೆಲ್ಲಿಕಟ್ಟೆ ಉದ್ಯಾನವನದಲ್ಲಿ ಭೂಸ್ಪರ್ಶಗೊಂಡ ರಾಜ್ಯದ 3ನೇ ಅತಿ ಎತ್ತರದ ಧ್ವಜ ಸ್ತಂಭದ ತ್ರಿವರ್ಣ ಧ್ವಜವನ್ನು ಬದಲಾಯಿಸಿ ನೂತನ ಧ್ವಜವನ್ನು ಮಾ.23ರಂದು ಮಧ್ಯಾಹ್ನ ಧ್ವಜಾರೋಹಣಗೊಳಿಸಲಾಯಿತು.



ಮಾ.16ರಂದು ರಾತ್ರಿ ಸುರಿದ ಗಾಳಿ ಮಳೆಗೆ ರಾಷ್ಟ್ರಧ್ವಜಕ್ಕೆ ಹಾನಿಯಾಗಿ ಭೂಸ್ಪರ್ಶಗೊಂಡಿತ್ತು. ಬಳಿಕ ಹವಾಮಾನ ವೈಪರಿತ್ಯ ಗಮನಿಸಿ ಹೊಸ ಧ್ವಜ ಅಳವಡಿಸುವ ಕುರಿತು ನಗರಸಭೆ ಮಾಹಿತಿ ನೀಡಿದಂತೆ ಇದೀಗ ಸೋಮವಾರ ಮಧ್ಯಾಹ್ನ 1.30ರ ಸುಮಾರಿಗೆ ರಾಷ್ಟ್ರಧ್ವಜ ಬಾನೆತ್ತರಕ್ಕೆ ಏರಿಸಲಾಗಿದೆ. ಯಂತ್ರದ ಮೂಲಕ ಧ್ವಜಾರೋಹಣ ಮಾಡಲಾಗಿದೆ.

ತಲೆ ಮರೆಸಿಕೊಂಡಿದಾತನ ಸೆರೆ

ಪುತ್ತೂರು: ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದಾತನ ದಸ್ತಗಿರಿ ಮಾಡಿರುವ ಪುತ್ತೂರು ನಗರ ಠಾಣೆಯ ಪೊಲೀಸರು ತಲೆಮರೆಸಿಕೊಂಡ ಹಿನ್ನೆಲೆಯಲ್ಲಿ ಮತ್ತೊಂದು ಪ್ರಕರಣ ದಾಖಲು ಮಾಡಿದ್ದಾರೆ. ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪಿಯಾಗಿದ್ದ ಕೇರಳ ಮಲಪ್ಪುರಮ್ ನಿವಾಸಿ ನಿಖಿಲ್ ಕೆ. (36) ಎಂಬಾತನು, ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಪುತ್ತೂರು ನಗರ ಪೊಲೀಸ್ ಠಾಣಾ ಪೊಲೀಸ್ ಉಪನಿರೀಕ್ಷಕ ಜನಾರ್ದನ ಕೆ.ಎಂ. ಹಾಗೂ ಸಿಬ್ಬಂದಿ ತಂಡ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಶಿಲುವೈಪುರ ಎಂಬಲ್ಲಿಂದ ಆರೋಪಿಯನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಆರೋಪಿತನು ನ್ಯಾಯಾಲಯ ದಿಂದ ಷರತ್ತುಬದ್ಧ ಜಾಮೀನು ಪಡೆದು, ಆ ಬಳಿಕ ನ್ಯಾಯಾಲಯಕ್ಕೆ ಹಾಜರಾಗದೇ ನ್ಯಾಯಾಲಯದ ಷರತ್ತಿನ ಆದೇಶವನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಕೋಮು ದ್ವೇಷ ಪ್ರಚೋದನೆ ವಿಡಿಯೋ ಹಂಚಿದ ಆರೋಪಿಯ ಬಂಧನ

ಮಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಕೋಮು ದ್ವೇಷ ಪ್ರಚೋದನೆಯ ವಿಡಿಯೋ ಹಂಚಿದ ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ ಬಂಟ್ವಾಳ ತಾಲೂಕಿನ ಬಡಗಬೆಳ್ಳೂರಿನ ಮಹಮ್ಮದ್ ರಫೀಕ್ (38) ಬಂಧಿತ ಆರೋಪಿ. ಈತ ಕಳೆದ ಅಕ್ಟೋಬರ್ ನಲ್ಲಿ ಸಾಮಾಜಿಕ ಜಾಲತಾಣವಾದ ಫೇಸ್ ಬುಕ್‌ನಲ್ಲಿ 'ನಝೀರ ಮಂಗಳೂರು' ಎಂಬ ಫೇಸ್ ಬುಕ್ ಖಾತೆಯಿಂದ ಎಐ ತಂತ್ರಾಂಶದಲ್ಲಿ ತಿರುಚಿದ ವಿಡಿಯೋವನ್ನು ಶೇರ್ ಮಾಡಿದ್ದು. ಸಮಾಜದಲ್ಲಿ ಕೋಮುದ್ವೇಷವನ್ನು ಹುಟ್ಟುಹಾಕಲು ಪ್ರಚೋದಿಸಿದ ಬಗ್ಗೆ ಆತನ ವಿರುದ್ಧ ಬಗ್ಗೆ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಕಲಂ; 196, 353(1), 351(2) ಬಿಎನ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ಮಾ.22ರಂದು ಕಂಕನಾಡಿ ಠಾಣಾ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಲಯ ಆರೋಪಿಗೆ 15 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದೆ.



ಮನೆಗೆ ನುಗ್ಗಿ ಕಳವಿಗೆ ಯತ್ನ

ಉಪ್ಪಿನಂಗಡಿ: ಇಲ್ಲಿನ ಇಳಂತಿಲ ಗ್ರಾಮದ ಮನೆಯೊಂದಕ್ಕೆ ಹಾಡಹಗಲೇ ಕಿಟಕಿ ಬಾಗಿಲು ಮುರಿದು ಒಳನುಗ್ಗಲು ಯತ್ನಿಸಿದ ಘಟನೆ ಭಾನುವಾರದಂದು ಸಂಭವಿಸಿದೆ. ನೇತ್ರಾವತಿ ನದಿಯಲ್ಲಿ ಮರಳುಗಾರಿಕೆ ಮಾಡುತ್ತಿದ್ದ ತಂಡದ ಸದಸ್ಯನೆನ್ನಲಾದ ಉತ್ತರ ಭಾರತೀಯ ಮೂಲದ ಕಾರ್ಮಿಕ ಸಾಯಂಕಾಲದ ಸುಮಾರಿಗೆ ನದಿ ದಡದಲ್ಲಿನ ದಿನೇಶ್ ಎಂಬವರ ಮನೆಗೆ ಬೀಗ ಹಾಕಿರುವುದನ್ನು ಗಮನಿಸಿ ಮನೆಗೆ ನುಗ್ಗಲು ಯತ್ನಿಸಿದ್ದಾನೆ. ಮನೆಯ ಕಿಟಕಿಯ ಬಾಗಿಲು ಮುರಿದು ಒಳನುಗ್ಗಬೇಕೆನ್ನುವಷ್ಟರಲ್ಲಿ ಮನೆಯ ಯಜಮಾನ ಬೈಕಿನಲ್ಲಿ ಮಗುವಿನೊಂದಿಗೆ ಹಿಂತಿರುಗುವುದನ್ನು ಕಂಡು ಪರಾರಿಯಾಗಿದ್ದಾನೆ. ಘಟನೆಗೆ ಸಂಬಂಧಿಸಿ ಉಪ್ಪಿನಂಗಡಿ ಪೊಲೀಸರ ಗಮನಕ್ಕೆ ತರಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.



ಉಜಿರೆ ಎಸ್.ಡಿ.ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಮಾ.22 ರಂದು ಬೆಂಗಳೂರು ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ ಭೇಟಿ ನೀಡಿದರು. ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆಗಳು, ಇಲ್ಲಿನ ಶುಚಿತ್ವ ಬಹಳ ಉತ್ತಮವಾಗಿದೆ ಎಂದರು. ಈ ಸಂದರ್ಭ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಜನಾರ್ದನ್, ವೈದ್ಯರು ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಕಲಿ ಬಂಗಾರ ನೀಡಿ ವಂಚನೆ: ಪೊಲೀಸರಿಂದ ಮಹಿಳೆಯ ಸೆರೆ

ಉಡುಪಿ: ದಾರಿಯಲ್ಲಿ ಹೋಗುತ್ತಿದ್ದ ಮಹಿಳೆಗೆ ನಕಲಿ ಬಂಗಾರ ನೀಡಿ, ಅವರಿಂದ ಅಸಲಿ ಚಿನ್ನಾಭರಣ ಹಾಗೂ ನಗದು ಪಡೆದು ವಂಚಿಸಿ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳ ಪೈಕಿ ಓರ್ವ ಮಹಿಳೆಯನ್ನು ಪಡುಬಿದ್ರಿ ಪೊಲೀಸರು ಬಂಧಿಸಿದ್ದಾರೆ.





ಜನವರಿ 13 ರಂದು ಮಧ್ಯಾಹ್ನ ಕಾಪು ತಾಲೂಕಿನ ನಡ್ಸಾಲು ಗ್ರಾಮದ ಹಳೆ ಅಂಚೆ ಕಚೇರಿ ಬಳಿ ಬಸ್ಸಮ್ಮ ಎಂಬವರು ನಡೆದುಕೊಂಡು ಹೋಗುತ್ತಿದ್ದಾಗ, ಅಪರಿಚಿತ ಮಹಿಳೆ ಮತ್ತು ಪುರುಷ ಇವರನ್ನು ತಡೆದಿದ್ದರು. ತಮ್ಮ ಬಳಿ 9 ಲಕ್ಷ್ಮಿ ಪೆಂಡೆಂಟ್ ಇರುವ 6 ಪವನ್ ತೂಕದ ಚಿನ್ನದ ಸರವಿದೆ, ತುರ್ತು ಹಣದ ಅವಶ್ಯಕತೆಯಿದೆ ಎಂದು ನಂಬಿಸಿ ಆ ನಕಲಿ ಸರವನ್ನು ಬಸ್ಸಮ್ಮ ಅವರಿಗೆ ನೀಡಿದ್ದರು. ಇದನ್ನು ನಂಬಿದ ಬಸ್ಸಮ್ಮ ಅವರು ತಮ್ಮ ಬಳಿಯಿದ್ದ ಸುಮಾರು 1.50 ಲಕ್ಷ ರೂಪಾಯಿ ಮೌಲ್ಯದ 2 ಪವನ್ ಚಿನ್ನಾಭರಣ ಹಾಗೂ 6,000 ರೂ. ನಗದನ್ನು ಅವರಿಗೆ ನೀಡಿದ್ದರು. ಬಳಿಕ ಬಸ್ಸಮ್ಮ ಅವರು ಆ ಸರವನ್ನು ಅಂಗಡಿಯಲ್ಲಿ ಪರೀಕ್ಷಿಸಿದಾಗ ಅದು ನಕಲಿ ಎಂದು ತಿಳಿದುಬಂದಿತ್ತು.

ಉಡುಪಿ ಎಸ್ಪಿ ಹರಿರಾಮ್ ಶಂಕರ್ ಅವರ ಆದೇಶದಂತೆ, ಎಎಸ್ಪಿ ಸುಧಾಕರ ಎಸ್. ನಾಯಕ್, ಡಿವೈಎಸ್ಪಿ ಎಸ್. ವಿಜಯಪ್ರಸಾದ್ ಹಾಗೂ ವೃತ್ತ ನಿರೀಕ್ಷಕ ಅಜ್ಮತ್ ಅಲಿ ಮಾರ್ಗದರ್ಶನದಲ್ಲಿ ಪಡುಬಿದ್ರಿ ಪಿಎಸ್‌ಐಗಳಾದ ಶಕ್ತಿವೇಲು ಇ. ಮತ್ತು ಅನಿಲ್ ಕುಮಾರ್ ಟಿ. ನಾಯಕ್ ನೇತೃತ್ವದ ತಂಡ ತನಿಖೆ ಕೈಗೊಂಡಿತ್ತು.

ಮಾಹಿತಿ ಸಂಗ್ರಹಿಸಿದ ಪೊಲೀಸರು ಮಾರ್ಚ್ 23 ರಂದು ಆರೋಪಿ ಕಾವ್ಯ (ತುಮಕೂರು ಜಿಲ್ಲೆಯ ಬುಡುಗನಹಳ್ಳಿ ವಾಸಿ) ಎಂಬಾಕೆಯನ್ನು ಬಂಧಿಸಿದ್ದಾರೆ. ಬಂಧಿತಳಿಂದ 75,000 ರೂ. ಮೌಲ್ಯದ 7.610 ಗ್ರಾಂ ಚಿನ್ನಾಭರಣ ಹಾಗೂ 6,000 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಇನ್ನೊಬ್ಬ ಆರೋಪಿ ದಾವಣಗೆರೆ ಜಿಲ್ಲೆಯ ಸಂತೆಬೆನ್ನೂರಿನ ವೆಂಕಟೇಶ್ ಎಂಬಾತನಿಗಾಗಿ ಶೋಧ ಮುಂದುವರಿದಿದೆ. ಈ ಕಾರ್ಯಾಚರಣೆಯಲ್ಲಿ ಎಎಸ್‌ಐ ರಾಜೇಶ್ ಪಿ., ಸಿಬ್ಬಂದಿಗಳಾದ ಗಿರೀಶ್ ಯು.ಆರ್., ಕೃಷ್ಣಪ್ರಸಾದ್, ಸಂದೇಶ್ ಭಂಡಾರಿ, ರುಕ್ಮಿಣಿ ಮತ್ತು ಜ್ಯೋತಿ ಭಾಗವಹಿಸಿದ್ದರು.

ಆಳ್ವಾಸ್ ಕಾಲೇಜ್‌ನಲ್ಲಿ ಶಿಕ್ಷಕ-ರಕ್ಷಕ ಸಂಘ ವಾರ್ಷಿಕ ಸಭೆ
ಸ್ಪಷ್ಟವಿರಲಿ ಗುರಿ ನಿರ್ಧಾರ

ಮೂಡುಬಿದಿರೆ: ಶಿಕ್ಷಕರು ಮತ್ತು ಪೋಷಕರು ಮಕ್ಕಳ ಗುರಿ ನಿರ್ಧಾರದಲ್ಲಿ ಸ್ಪಷ್ಟತೆ ನೀಡಿದರೆ, ಮಕ್ಕಳ ಸಾಧನೆ ಮತ್ತಷ್ಟು ಉನ್ನತ ಮಟ್ಟಕ್ಕೆ ಏರಬಲ್ಲದು ಎಂದು ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್ ನುಡಿದರು.

ಆಳ್ವಾಸ್ ಕಾಲೇಜಿನ (ಸ್ವಾಯತ್ತ) ಕುವೆಂಪು ಸಭಾಂಗಣದಲ್ಲಿ ಸೋಮವಾರ ನಡೆದ ವ್ಯವಹಾರ ಆಡಳಿತ ವಿಭಾಗದ ಶಿಕ್ಷಕ-ರಕ್ಷಕ ಸಂಘದ ವಾರ್ಷಿಕ ಸಭೆ 2025-26ನ್ನು ಉದ್ಘಾಟಿಸಿ ಮಾತನಾಡಿದರು.

ಈಗಿನ ವಿದ್ಯಾರ್ಥಿಗಳು ಉದ್ಯೋಗದ ಸಮಸ್ಯೆ, ಆರ್ಥಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ ಹಲವು ಗೊಂದಲಗಳ ನಡುವೆ ಇದ್ದಾರೆ. 18 ರಿಂದ 21 ವರ್ಷದ ವಿದ್ಯಾರ್ಥಿಗಳು ಸಮಸ್ಯೆ, ಗೊಂದಲಗಳನ್ನು ದಾಟಿ ತಮ್ಮ ಗುರಿಯ ಕಡೆಗೆ ಗಮನ ನೀಡುತ್ತಾರೆಂದರೆ ಅವರನ್ನು ನಾವು ಅಭಿನಂದಿಸಬೇಕು. ತರಗತಿಗಳು ಪ್ರಪಂಚದಲ್ಲಿ ಅತ್ಯಂತ ಪವಿತ್ರವಾದ ಸ್ಥಳ. ನಾವು ತರಗತಿಯಲ್ಲಿ ಹೇಗೆ ಇದ್ದೇವು, ಏನನ್ನ ಕಲಿತಿದ್ದೇವೆ ಅನ್ನುವುದರ ಮೇಲೆ ನಮ್ಮ ವರ್ತಮಾನ ನಿರ್ಧರಿತವಾಗುತ್ತದೆ ಎಂದರು.

ವ್ಯವಹಾರ ಆಡಳಿತ ವಿಭಾಗದ 75 ವಿದ್ಯಾರ್ಥಿಗಳು ಇನ್ಫೋಸಿಸ್‌ನ ಅಪ್ರೆಂಟಿಸ್ ಶಿಪ್‌ಗೆ ಆಯ್ಕೆಯಾಗಿದ್ದಾರೆ. ಇನ್ಫೋಸಿಸ್‌ನ ಅಪ್ರೆಂಟಿಸ್‌ಶಿಪ್ ಆಯ್ಕೆಯಾದ ಆಳ್ವಾಸ್ ದೇಶದ ಏಕೈಕ ಸಂಸ್ಥೆ ಆಳ್ವಾಸ್ ಶಿಕ್ಷಣ ಸಂಸ್ಥೆ ಎಂದರು.

ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷೆ ಸೀತಾಲಕ್ಷ್ಮೀ ಮಾತನಾಡಿ ಶಿಕ್ಷಕ-ರಕ್ಷಕ ಸಭೆಯು ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ತಿಳಿದುಕೊಳ್ಳಲು ಒಂದು ಉತ್ತಮ ಅವಕಾಶ. ತಮ್ಮ ವಿದ್ಯಾರ್ಥಿಗಳ ಕಲಿಕೆ, ಚಟುವಟಿಕೆಗಳು ಕುರಿತು ಪೋಷಕರು ಶಿಕ್ಷಕರ ಜೊತೆಗೆ ಚರ್ಚಿಸಬೇಕು ಎಂದರು.



> ನಮ್ಮ ಕಲೆ ಸಂಸ್ಕೃತಿ ಸಂಗೀತಯ ಮಹತ್ವವನ್ನು ಆಳ್ವಾಸ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತದೆ. ವಿದ್ಯಾರ್ಥಿಗಳಿಗೆ ಒಳ್ಳೆಯ ವಾತಾವರಣದ ಜೊತೆಗೆ ಉತ್ತಮ ಯೋಚನೆಗಳನ್ನು ಸೃಷ್ಟಿಸುವುದು ಬಹು ಮುಖ್ಯ.
> ■ ಡಾ. ಕುರಿಯನ್

ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥೆ ಸುರೇಖಾ ಮಾತನಾಡಿ ಪೋಷಕರು ಮಕ್ಕಳಿಗೆ ಕಿವಿಯಾಗಬೇಕು. ಮಕ್ಕಳಿಗೆ ಪೋಷಕರ ಬಳಿ ಹೇಳಿಕೊಳ್ಳಬೇಕಾದ ವಿಷಯಗಳು ಹಲವು ಇರುತ್ತವೆ. ನೀವು ಅವರಿಗೆ ಸ್ಪಂದಿಸದೆ ಹೋದಲ್ಲಿ ಅವರು ಆ ವಿಷಯಗಳನ್ನು ಹಂಚಿಕೊಳ್ಳಲು ಬೇರೆಯವರನ್ನ ಹುಡುಕುತ್ತಾರೆ. ಆದರೆ ಆ ವ್ಯಕ್ತಿಗಳು ವಿದ್ಯಾರ್ಥಿಗಳ ಅಭಿವೃದ್ಧಿಗೆ ಅನುಗುಣವಾಗದೆ ಇರಬಹುದು. ಆದರಿಂದ ನಿಮ್ಮ ಮಕ್ಕಳು ಯಾರ ಜೊತೆ ಸ್ನೇಹ ಬೆಳೆಸುತ್ತಾರೆ ಯಾರ ಜೊತೆ ಒಡನಾಟ ನಡೆಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಿಸಲಾಯಿತು. ಸಭೆಯಲ್ಲಿ ಕಾಲೇಜಿನ ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ಶಿಕ್ಷಕ-ರಕ್ಷಕ ಸಂಘದ ಸದಸ್ಯೆ ಪ್ರಕಾಶಿನಿ ಪೂಜಾರಿ, ಪ್ರಾಧ್ಯಪಕಿ ಪ್ರಜ್ಞಾ ಎಸ್. ಬಿ. ಉಪಸ್ಥಿತರಿದ್ದರು. ವಚನ ಶೆಟ್ಟಿ ಸ್ವಾಗತಿಸಿದರು. ವಿದ್ಯಾರ್ಥಿನಿ ಜಾನ್ಸಿ ಶೆಟ್ಟಿ ನಿರೂಪಿಸಿದರು. ವಿದ್ಯಾರ್ಥಿನಿ ಶೀತಲ್ ವಂದಿಸಿದರು.

ಕಟೀಲು ದೇಗುಲದ ನೂತನ ರಕ್ತೇಶ್ವರೀ ಗುಡಿಯಲ್ಲಿ ಪುನಃಪ್ರತಿಷ್ಠೆ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವರ ಪರಿವಾರ ದೇವತೆಯಾದ ಶ್ರೀ ರಕ್ತೇಶ್ವರೀ ಗುಡಿಯನ್ನು ಬರೋಡ ಶಶಿಧರ ಶೆಟ್ಟಿ ಸೇವಾರೂಪದಲ್ಲಿ ಸುಮಾರು ರೂ.90ಲಕ್ಷ ವೆಚ್ಚದಲ್ಲಿ ನವೀಕರಿಸಿ ನೀಡಿದ್ದು, ಇಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ ಹಾಗೂ ಅಷ್ಟೋತ್ತರ ಕಲಶಾಭಿಷೇಕ ಏಪ್ರಿಲ್ 2ರಂದು ನಡೆಯಲಿದೆ.

ಆ ಪ್ರಯುಕ್ತ ಮಾಚ್ 31ರಂದು ತೋರಣ ಮುಹೂರ್ತ, ವಾಸ್ತುಪೂಜೆ, ವಾಸ್ತುಹೋಮಾದಿಗಳು ನಡೆಯಲಿದ್ದು, ಏ. 1ರಂದು ಪ್ರಾಯಶ್ಚಿತ್ತ ಹೋಮಾದಿಗಳು, ರಕ್ತೇಶ್ವರಿಯ ಅ ವಾಸಹೋಮ, ಶಕ್ತಿದಂಡಕ ಮಂಡಲ ಪೂಜೆ, ತಾ. 2ರ ಬೆಳಿಗ್ಗೆ ಕಲಶಾಽವಾಸ, ದುರ್ಗಾಹೋಮ, ರಕ್ತೇಶ್ವರೀ ದೇವಿಯ ಪ್ರತಿಷ್ಠೆ, ಬೆಳಿಗ್ಗೆ ಗಂಟೆ 11ಕ್ಕೆ ಬ್ರಹ್ಮಕಲಶಾಭಿಷೇಕ ನಡೆಯಲಿದೆ.

ಸಭಾ ಕಾರ್ಯಕ್ರಮ

ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಎಂಆರ್‌ಜಿ ಸಮೂಹ ಸಂಸ್ಥೆಗಳ ಡಾ.ಕೆ.ಪ್ರಕಾಶ್ ಶೆಟ್ಟಿ, ಡಾ. ಮೋಹನ ಆಳ್ವ, ಪುಣೆಯ ಸಂತೋಷ್ ಕುಮಾರ್ ಶೆಟ್ಟಿ, ಕಾರ್ಕಳ ಡಾ.ಸುಧಾಕರ ಶೆಟ್ಟಿ, ಉಮಾನಾಥ ಕೋಟ್ಯಾನ್, ಗುರ್ಮೆ ಸುರೇಶ್ ಶೆಟ್ಟಿ, ಹರೀಶ್ ಪೂಂಜ, ನಳಿನ್ ಕುಮಾರ್, ಅಭಯಚಂದ್ರ ಮುಂತಾದವರು ಭಾಗವಹಿಸಲಿದ್ದಾರೆ.



ರಕ್ತೇಶ್ವರೀ ಮಹತ್ವ

ಕಟೀಲು ದೇಗುಲದ ಎದುರಿನಲ್ಲಿರುವ ರಕ್ತೇಶರೀ ಸಾನ್ನಿಧ್ಯವನ್ನು ದೇಗುಲದ ಒಳ ಹೋಗುವ ಭಕ್ತರೆಲ್ಲರೂ ನಮಿಸಿಯೇ ಹೋಗುತ್ತಾರೆ. ಇಲ್ಲಿ ಒಂದು ಕಟ್ಟೆ ಇದೆ. ರಥಬೀದಿಯಲ್ಲಿ ಆಟ ಆಗುವಾಗ ಯಕ್ಷಗಾನ ಪ್ರಿಯೆ ಭ್ರಾಮರೀ ಇದೇ ಕಟ್ಟೆಯಲ್ಲಿ ಕೂತು ಯಕ್ಷಗಾನ ನೋಡುತ್ತಾಳೆ ಎಂಬ ನಂಬಿಕೆ. ನಿಗ್ರಹ ಶಕ್ತಿಯುಳ್ಳ ರಕ್ತೇಶ್ವರೀ ಸಾನ್ನಿಧ್ಯದಲ್ಲಿ ದಿನಂಪ್ರತಿ ಎರಡು ಸಲ ಅಜೀಕಾಯಿ ಸೇವೆ, ಸಂಕ್ರಮಣಕ್ಕೆ ಪರ್ವ ನಡೆಯುತ್ತದೆ. ರಕ್ತೇಶ್ವರೀ ಸಾನ್ನಿಧ್ಯ ಇರುವ ಇದೇ ಬಂಡೆಕಲ್ಲಿನಲ್ಲಿ ದುರ್ಗಾಪರಮೇಶ್ವರೀ ಭ್ರಮರರೂಪ ತಾಳಿ ಅಡಗಿ ಕೂತಳು. ಆಗ ಅರುಣಾಸುರ ಕತ್ತಿಯಲ್ಲಿ ಬಂಡೆಗೆ ಹೊಡೆದಾಗ, ಒಡೆದ ಬಂಡೆಯೊಳಗಿಂದ ಹೊರಬಂದ ಜಗನ್ಮಾತೆ ದುರುಳ ಅರುಣನನ್ನು ತರಿದಳು ಎಂದು ಕಥೆಯಿದೆ. ಕಟೀಲು ಕ್ಷೇತ್ರ ಮಾಹಾತ್ಮ್ಯೆ ಪ್ರಸಂಗದಲ್ಲಿ ಭ್ರಮರ ವೇಷ ಬರುವಾಗ ಇದೇ ಬಂಡೆಯ ಚಿತ್ರವನ್ನು ಇರಿಸಲಾಗುತ್ತದೆ. ಈ ಬಂಡೆ ಕಲ್ಲಿನ ಚಿತ್ರಕ್ಕೆ ಅರುಣಾಸುರ ವೇಷಧಾರಿ ಖಡ್ಗದಿಂದ ಹೊಡೆದಾಗ ಭ್ರಾಮರಿ ಹೊರಬರುವುದನ್ನು ಕಾಣಬಹುದಾಗಿದೆ.

ಅಗಲಿದ ಕಲಾವಿದ ಗೋವಿಂದ ಭಟ್‌ಗೆ ಸಾರ್ವಜನಿಕ ಶ್ರದ್ಧಾಂಜಲಿ ಸಮರ್ಪಣೆ

ಮಂಗಳೂರು: ಇತ್ತೀಚೆಗೆ ಅಗಲಿದ ಯಕ್ಷಗಾನದ ಮೇರು ಕಲಾವಿದ ಕೆ. ಗೋವಿಂದ ಭಟ್ ಅವರಿಗೆ ಸೋಮವಾರ ಸಾರ್ವಜನಿಕ ಶ್ರದ್ಧಾಂಜಲಿ ಕಾರ್ಯಕ್ರಮ ನಗರದ ಕೊಡಿಯಾಲ್‌ಬೈಲ್‌ನ ಶಾರದಾ ವಿದ್ಯಾಲಯ ಸಭಾಂಗಣದಲ್ಲಿ ನಡೆಯಿತು. ಹಲವು ಮಂದಿ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು.

ಕಸಾಪ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಮಾತನಾಡಿ, ಸಮಾಜದಲ್ಲಿ ಕುಗ್ಗುತ್ತಿರುವ ಧಾರ್ಮಿಕ ಪ್ರಜ್ಞೆಯನ್ನು ಯಕ್ಷಗಾನದ ಮೂಲಕ ಜಾಗೃತಗೊಳಿಸಿದವರು ಗೋವಿಂದ ಭಟ್ ಅವರು ಎಂದರು.

ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್. ಪ್ರದೀಪ ಕುಮಾರ ಕಲ್ಕೂರ ಮಾತನಾಡಿ, ಕೋಡಂಗಿವೇಷದಿಂದರಾಜವೇಷದವರೆಗೆ ಯಕ್ಷಗಾನದ ಎಲ್ಲ ಆಯಾಮಗಳನ್ನು ಆಳವಾಗಿ ಅರಿತುಕೊಂಡಿದ್ದ ಗೋವಿಂದ ಭಟ್ ಅವರು ಯಕ್ಷಗಾನ ಕಲೆಯನ್ನು ಬೆಳೆಸಿದ ಮಹಾನ್ ಚೇತನ. ರಂಗಸ್ಥಳಕ್ಕೆ ಯಾವುದೇ ಚ್ಯುತಿ ಬರದಂತೆ ಶಿಸ್ತು ಕಾಪಾಡುವಲ್ಲಿ ಅವರ ಪಾತ್ರ ಅಪಾರ ಎಂದು ಹೇಳಿದರು.



ಪ್ರೊ.ಜಿ.ಕೆ. ಭಟ್ ಮಾತನಾಡಿ, ಗೋವಿಂದ ಭಟ್ ಅವರ ಪ್ರತಿ ಹೆಜ್ಜೆಯಲ್ಲೂ ಲಯವಿತ್ತು. ಯಾವುದೇ ಪಾತ್ರವನ್ನು ಜೀವಂತಗೊಳಿಸುವ ಅಪೂರ್ವ ಸಾಮರ್ಥ್ಯ ಅವರಲ್ಲಿತ್ತು ಎಂದು ಸ್ಮರಿಸಿದರು.

ಎಲ್ಲೂರು ರಾಮಚಂದ್ರ ಭಟ್, ಮಾಜಿ ಎಂಎಲ್ಸಿ ಕ್ಯಾ. ಗಣೇಶ್ ಕಾರ್ಣಿಕ್, ಹಿರಿಯ ಕಲಾವಿದ ಸಂಜಯ್ ಕುಮಾರ್ ಗೋಣಿಬೀಡು, ಯಕ್ಷಗಾನ ವಿದ್ವಾಂಸ ಪ್ರಭಾಕರ ಜೋಶಿ, ಭಾಸ್ಕರ ರೈ ಕುಕ್ಕುವಳ್ಳಿ, ರವಿ ಅಲೆವೂರಾಯ, ಶಾರದಾ ಕಾಲೇಜು ಪ್ರಾಂಶುಪಾಲ ದಯಾನಂದ ಕಟೀಲ್, ಯುಗಪುರುಷ ಕಿನ್ನಿಗೋಳಿಯ ಭುವನಾಭಿರಾಮ ಉಡುಪ, ಸನತ್ ಕುಮಾರ್ ಜೈನ್, ಯಕ್ಷಗಾನ ಕಲಾವಿದ ಶ್ರೀಕರ್ ಭಟ್, ಶಾರದ ಹೆಗ್ಡೆ, ಶ್ರೀಕೃಷ್ಣ ಭಟ್ ಸುಣ್ಣಂಗುಳ, ಹರಿಪ್ರಸಾದ್ ರೈ ಮುಂಬೈ, ಡಾ. ಮಾಧವ ಎಂ.ಕೆ., ಯಕ್ಷಲಹರಿಯ ವಿನಯ್ ಆಚಾರ್ಯ ಸುರತ್ಕಲ್, ಹಿರಿಯ ಪ್ರಸಂಗಕರ್ತ ನಿತ್ಯಾನಂದ ಕಾರಂತ್ ಪೊಳಲಿ, ತಮ್ಮ ಲಕ್ಷ್ಮಣ, ಶಂಕರ್ ಶೆಟ್ಟಿ ಪೊಳಲಿ ಇದ್ದರು. ಸುಧಾಕರ ರಾವ್ ಪೇಜಾವರ ಹಾಗೂ ಕದ್ರಿ ನವನೀತ ಶೆಟ್ಟಿ ನಿರೂಪಿಸಿದರು.

ಮಸೀದಿ ವಿಚಾರಕ್ಕೆ ಇತ್ತಂಡಗಳ ಹೊಡೆದಾಟ: 'ಹೊಡಿಬಡಿ' ದೃಶ್ಯ ಜಾಲತಾಣದಲ್ಲಿ ವೈರಲ್

ಬಂಟ್ವಾಳ: ಮಸೀದಿ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ತಂಡಗಳ ನಡುವಿನ ಹೊಡಿಬಡಿ ದೃಶ್ಯದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ವೈರಲ್ ಆಗಿದ್ದು, ಈ ಬಗ್ಗೆ ಇತ್ತಂಡಗಳ ವಿರುದ್ಧಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ.

ಉಳ್ಳಾಲ ತಾಲೂಕಿನ ಸಜೀಪ ನಡು ಗ್ರಾಮದ ತಲೆಮೊಗರು ಮಸೀದಿಯ ಬಳಿ ಈ ಹೊಡೆದಾಟ ನಡೆದಿದ್ದು, ಇತ್ತಂಡಗಳ ಒಟ್ಟು 17 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ.

ತಲೆಮೊಗೆರು ಮಸೀದಿ ಬಳಿ ಅಂಗಡಿಯೊಂದರಲ್ಲಿ ವ್ಯಾಪಾರ ಮಾಡುತ್ತಿದ್ದ ವೇಳೆ ದಾವೂದ್ ಎಂಬವರ ತಂಡ ಬಂದು ಏಕಾಏಕಿ ಹಲ್ಲೆ ನಡೆಸಿದೆ ಎಂದು ಶೌಕತ್ ಆಲಿ ಎಂಬವರು ನೀಡಿದ ದೂರಿನಂತೆ ಸ್ಥಳೀಯ ನಿವಾಸಿಗಳಾದ ದಾವೂದ್, ಜುಬೈರ್, ಸೈದುದ್ದೀನ್, ನವಾಜ್, ಗಫೂರ್, ಶರೀಫ್, ಆಶಿಕ್, ಹೈದರ್, ಆಸೀಫ್, ಆಶ್ರಫ್ ಎಸ್. ಕೆ.ಇರ್ಫಾನ್ ಎಸ್.ಕೆ. ಮತ್ತಿತರರ ಮೇಲೆ ಪ್ರಕರಣ ದಾಖಲಾಗಿದೆ.



ಶೌಕತ್ ಆಲಿಗೆ ಆರೋಪಿಗಳು ಹಲ್ಲೆ ನಡೆಸುವ ವೇಳೆ ಜಗಳ ಬಿಡಿಸಲೆಂದು ಮಧ್ಯಪ್ರವೇಶಿಸಿದ ರಬಿಯತ್,ನಿಜಾಲ್, ಆಶ್ರಫ್, ಇಸಾಕ್, ಸಫಾನಾ ಮತ್ತು ಆಯಿಷಾ ಎಂಬವರಿಗೂ ಹಲ್ಲೆ ನಡೆಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಇದಕ್ಕೆ ಪ್ರತಿಯಾಗಿಅಬ್ದುಲ್ ನವಾಝ್ ಎಂಬವರು ನೀಡಿದ ದೂರಿನನ್ವಯ ಶೌಕತ್, ಇಸಾಕ್, ಸಫೀಕ್, ಯಾಕೂಬ್, ಮಹಮ್ಮದ್ ಮುಸ್ತಫಾ, ನಾಸೀರ್ ಮತ್ತು ನಿಝಾಲ್ ಎಂಬವರ ಮೇಲೆ ಕೇಸು ದಾಖಲಾಗಿದೆ.

ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಇತ್ತಂಡಗಳ ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಶಾಲೆಗೆ ಪ್ರೊಜೆಕ್ಟರ್ ಖರೀದಿಸಲು 34 ಸಾವಿರ ರೂಪ್ಯಾ ಸಂಗ್ರಹಿಸಿ ದೇಣಿಗೆಯಾಗಿ ನೀಡಿದ ವಿದ್ಯಾರ್ಥಿನಿಯರು

ಕುಂದಾಪುರ: ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ 2025-26ನೇ ಸಾಲಿನ 10ನೇ ತರಗತಿಯ ವಸತಿ ನಿಲಯದ ವಿದ್ಯಾರ್ಥಿನಿಯರು ಶಾಲೆಗೆ ಪ್ರೊಜೆಕ್ಟರ್ ಖರೀದಿಸಲು ಸುಮಾರು 34 ಸಾವಿರ ರೂ.ಗಳನ್ನು ಸಂಗ್ರಹಿಸಿ ಶಾಲೆಗೆ ದೇಣಿಗೆಯಾಗಿ ನೀಡುವ ಮೂಲಕ ಶಿಕ್ಷಣ ಸಂಸ್ಥೆಯ ಮೇಲಿನ ತಮ್ಮ ಬದ್ಧತೆಯನ್ನು ತೋರಿಸಿದ್ದಾರೆ.

ಪ್ರೊಜೆಕ್ಟರ್ ಮೊದಲಾದ ಆಧುನಿಕ ಉಪಕರಣಗಳ ಮೂಲಕ ಶಾಲೆಯಲ್ಲಿ ಬಹಳಷ್ಟು ಬೋಧನೆಗಳನ್ನು ನಡೆಸುತ್ತಾ ಬಂದಿದ್ದು, ಬಹಳಷ್ಟು ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳ ಕಲಿಕೆಯ ಅನುಭವವನ್ನು ಸಮೃದ್ಧಗೊಳಿಸುತ್ತಿದ್ದವು. ಸಾಮಾನ್ಯ ಯಂತ್ರೋಪಕರಣಗಳಂತೆ ಇವುಗಳಲ್ಲಿ ವರ್ಷಕ್ಕೆ ಒಂದೆರಡು ಯಂತ್ರಗಳು ಹಾಳಾಗುತ್ತಿದ್ದವು. ಇದನ್ನು ನೋಡಿ ಅರಿತ ವಿದ್ಯಾರ್ಥಿನಿಯರ ತಂಡ ತಮ್ಮ ಮುಂದಿನ ವಿದ್ಯಾರ್ಥಿಗಳಿಗೆ ಸಹಾಯವಾಗಲಿ ಎಂಬ ಆಶಯದಂತೆ ಹಿರಿಯರ ಮನವೊಲಿಸಿ 34,000 ರೂ. ಹಣವನ್ನು ಸಂಗ್ರಹಿಸಿ, ಶಾಲೆಗೆ ಪ್ರೊಜೆಕ್ಟರ್ ಖರೀದಿಸಲು ದೇಣಿಗೆಯಾಗಿ ನೀಡಿದ್ದಾರೆ.



ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ, ಶಾಲಾ ಪ್ರಾಂಶುಪಾಲ ಶರಣ ಕುಮಾರ ದೇಣಿಗೆಯನ್ನು ಸ್ವೀಕರಿಸಿ ಶುಭಹಾರೈಸಿದರು. ಶಾಲೆಯ ಆಡಳಿತಾಧಿಕಾರಿ ವೀಣಾ ರಶ್ಮಿ ಎಂ., ಉಪಪ್ರಾಂಶುಪಾಲ ರಾಮ ದೇವಾಡಿಗ, ಶಾಲಾ ಸಂಯೋಜಕ ಸವಿತಾ ಭಟ್, ಲತಾ ದೇವಾಡಿಗ, ಶ್ರೀಮಧು ಕೆ.ಎಲ್. ಹಾಗೂ ಶಿಕ್ಷಕ ಮತ್ತು ಶಿಕ್ಷಕೇತರರು ಉಪಸ್ಥಿತರಿದ್ದರು.

ಕೇರಳ ವಿಧಾನಸಭಾ ಚುನಾವಣೆ | ಪಳ್ಳಿಕೆರೆ ಕಡಲತೀರದಲ್ಲಿ ಜಾಗೃತಿ ಕಾರ್ಯ
ಮನಸೆಳೆಯಿತು ಬೃಹತ್ ಮರಳು ಶಿಲ್ಪ

ಕಾಸರಗೋಡು: ಬೆರಳಿನ ಮೇಲಿನ ಶಾಯಿ ಗುರುತು ಪ್ರಜಾಪ್ರಭುತ್ವದ ರಕ್ಷಕ ಎಂಬ ಸಂದೇಶದೊಂದಿಗೆ ಪಳ್ಳಿಕೆರೆ ಕಡಲತೀರದಲ್ಲಿ ಬೃಹತ್ ಮರಳು ಶಿಲ್ಪವನ್ನು ಸಿದ್ಧಪಡಿಸಲಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ 100 ರಷ್ಟು ಮತದಾನವಾಗುವಂತೆ ನೋಡಿಕೊಳ್ಳಲು ಜಿಲ್ಲಾಡಳಿತ ಮತ್ತು ಸ್ವೀಪ್ ಜಂಟಿಯಾಗಿ ಆಯೋಜಿಸಿದ್ದ ವೋಟಯಾನಂ 2026 ಅಭಿಯಾನದ ಭಾಗವಾಗಿ ಈ ಶಿಲ್ಪವನ್ನು ತಯಾರಿಸಲಾಗಿದೆ. ಪ್ರಸಿದ್ಧ ಶಿಲ್ಪಿ ಚಿತ್ರನ್ ಕುಂಞಿಮಂಗಲಂ ಅವರು ಐದು ಗಂಟೆಗಳ ಅವಧಿಯಲ್ಲಿ ಮತ ಚಲಾಯಿಸಿದ ಎಡಗೈಯ ಸುಂದರ ಶಿಲ್ಪವನ್ನು ಪೂರ್ಣಗೊಳಿಸಿದರು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಸೋಮವಾರ ಶಿಲ್ಪಕಲೆಯನ್ನು ಉದ್ಘಾಟಿಸಿ, ನಮ್ಮ ಪ್ರಜಾಪ್ರಭುತ್ವದ ಶಕ್ತಿ ಪ್ರತಿಯೊಂದು ಮತದಲ್ಲೂ ಅಡಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಶೇಕಡಾ 100 ರಷ್ಟು ಮತದಾನ ಸಾಧಿಸುವ ಗುರಿಯೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಯುವಜನರಲ್ಲಿ ಮತದಾನದ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ನುಡಿದರು.



ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ. ಮಧುಸೂದನನ್, ಬ್ಲಾಕ್ ಸಂಯೋಜಕರಾದ ಕೆ.ಜಿಜ, ಕೆ.ನಿಮಿಷಾ, ಕೆ.ಪಿ.ರಮ್ಯಾ ಮೋಳ್, ಕೆ.ರಜನಿ, ಕೆ.ಜ್ಯೋತಿಷ್, ಅನಸ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ.ಕಿಶೋರ್ ಸ್ವಾಗತಿಸಿ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಅದಿರಾ ಟಿ.ಪಿ. ವಂದಿಸಿದರು.

ಕಿರುಸುದ್ದಿ

ಪಳ್ಳಿ ಶ್ರೀ ಕ್ಷೇತ್ರ ಮಹಾಕಾಳಿ ಮಠ: ಮಾ.31ರಂದು ಕಾಲಾವಧಿ ನೇಮೋತ್ಸವ

ಮಂಗಳೂರು: ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಪಳ್ಳಿ ಶ್ರೀ ಕ್ಷೇತ್ರ ಮಹಾಕಾಳಿ ಮಠ (ಮಂಗಲ್ದಿ ಮಠ) ಮತ್ತು ವರ್ತೆ ಕಲ್ಕುಡ ದೈವಸ್ಥಾನ ಇಲ್ಲಿ ಮಾ.31ರಂದು ಕಾಲಾವಧಿ ನೇಮೋತ್ಸವ ವಿಜೃಂಭಣೆಯಿಂದ ಜರಗಲಿದೆ. ನೇಮೋತ್ಸವದ ಪೂರ್ವಭಾವಿಯಾಗಿ ಮಾ.29 ರಂದು ಸಂಜೆ 4 ಗಂಟೆಯಿಂದ ಹಸಿರು ಹೊರೆ ಕಾಣಿಕೆ ಮೆರವಣಿಗೆಯು ಪಳ್ಳಿ ಶ್ರೀ ಮಹಾ ಗಣಪತಿ ವೇದಿಕೆಯಿಂದ ಮಠಕ್ಕೆ ತೆರಳಲಿದೆ. ಮಾ.30ರಂದು ಪೂರ್ವಾಹ್ನ 10 ಗಂಟೆಗೆ ಕ್ಷೇತ್ರದ ನಾಗ ಸನ್ನಿದಾನದಲ್ಲಿ ಆಶ್ಲೇಷ ಬಲಿ ನಡೆಯಲಿದೆ. ಮಾ.31ರಂದು ಬೆಳಗ್ಗೆ 10ರಿಂದ ತೋರಣ ಮಹೋತ್ಸವ, 10.15ಕ್ಕೆ ನವಕ ಪ್ರಧಾನ ಹೋಮ ಮತ್ತು ಸಾರ್ವಜನಿಕ ಚಂಡಿಕಾ ಹೋಮ, 12 ಗಂಟೆಗೆ ಮಹಾಪೂಜೆ, ಬಳಿಕ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 7ರಿಂದ ಶ್ರೀ ಮಹಾಕಾಳಿ ಭಜನಾ ಮಂಡಳಿ ಇವರಿಂದ ಭಜನಾ ಸೇವೆ, ರಾತ್ರಿ 8.30ಕ್ಕೆ ಅಷ್ಟಪಟ್ಟೆ ಪೂಜೆ, 9 ಗಂಟೆಗೆ ಶ್ರೀ ದೇವಿಗೆ ರಂಗಪೂಜೆ, 10.30ರಿಂದ ವರ್ತೆ ಕಲ್ಕುಡ ದೈವದ ನೇಮೋತ್ಸವ(ಗಗ್ಗರ ಸೇವೆ) ಬಳಿಕ 1 ಗಂಟೆಗೆ ದರ್ಶನ ಸೇವೆ ನಡೆಯಲಿದೆ. ಏ.4ರಂದು ಶ್ರೀ ಮಹಾಕಾಳಿ ಭಜನಾ ಮಂಡಳಿ ಪಳ್ಳಿ ಇದರ 49ನೇ ವಾರ್ಷಿಕೋತ್ಸವದ ಅಂಗವಾಗಿ ವಿಜಯ ಕಲಾವಿದರು ಕಿನ್ನಿಗೋಳಿ ತಂಡದಿಂದ 'ಅಮ್ಮ ಆಮುಂಡಾರಾ...' ಹಾಸ್ಯಮಯ ಸಾಂಸಾರಿಕ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಶ್ರೀ ಕ್ಷೇತ್ರದ ಪ್ರಕಟಣೆ ತಿಳಿಸಿದೆ.



ಏ. 1-16: ರಾಮಗಿರಿ ನಾಟಿಯಲ್ಲಿ ಸಂಸ್ಕೃತಿ ಶಿಕ್ಷಣ ಶಿಬಿರ

ಬಂಟ್ವಾಳ: ಬಂಟ್ವಾಳ ತಾಲೂಕಿನ ನರಿಕೊಂಬು ಗ್ರಾಮದ ರಾಮಗಿರಿ, ನಾಟಿಯ ಜನಕಲ್ಯಾಣ ಟ್ರಸ್ಟ್ ಆಶ್ರಯದಲ್ಲಿ ಮೂರ್ಕಜೆಯ ಮೈತ್ರೇಯಿ ಗುರುಕುಲ, ನರಿಕೊಂಬು-ಶಂಭೂರಿನ ಗ್ರಾಮ ವಿಕಾಸ ಸಮಿತಿ ಹಾಗೂ ಬೆಂಗಳೂರಿನ ವೇದ ವಿಜ್ಞಾನ ಗುರುಕುಲದ ಸಹಯೋಗದಲ್ಲಿ ಏ. 10ರಿಂದ 11ರ ವರೆಗೆ ಬಾಲಕಿಯರ ಸಂಸ್ಕೃತಿ ಶಿಕ್ಷಣ ಶಿಬಿರ ನಡೆಯಲಿದೆ. ಏ. 2ರಂದು ಬೆಳಿಗ್ಗೆ 8 ಗಂಟೆಗೆ ಶಿಬಿರವನ್ನು ಮಾನಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡುವರು. ಅಧ್ಯಕ್ಷತೆಯನ್ನು ರಾಷ್ಟ್ರ ಸೇವಿಕಾ ಸಮಿತಿಯ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹಿಕಾ ಮತ್ತು ಜನಕಲ್ಯಾಣ ಟ್ರಸ್ಟ್‌ನ ಸದಸ್ಯೆ ಸಾವಿತ್ರಿ ಸೋಮಯಾಜಿ ವಹಿಸಲಿದ್ದು, ರಾಷ್ಟ್ರ ಸೇವಿಕಾ ಸಮಿತಿಯ ಹೊಯ್ಸಳ ಪ್ರಾಂತ ಮಾರ್ಗದರ್ಶಿ ಮಂಡಳಿ ಸದಸ್ಯೆ ಡಾ. ಕಮಲಾ ಪ್ರಭಾಕರ ಭಟ್ ಕಲ್ಲಡ್ಕ ಉಪಸ್ಥಿತರಿರುವರು. ಏ. 11ರಿಂದ 16ರ ವರೆಗೆ ಬಾಲಕರ ಸಂಸ್ಕೃತಿ ಶಿಕ್ಷಣ ಶಿಬಿರ ನಡೆಯಲಿದ್ದು, ಪೊಳಲಿಯ ರಾಮಕೃಷ್ಣ ತಪೋವನದ ಶ್ರೀ ಸ್ವಾಮಿ ವಿವೇಕಚೈತನ್ಯಾನಂದ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ ಅಧ್ಯಕ್ಷತೆ ವಹಿಸಲಿದ್ದು, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಉಪಸ್ಥಿತರಿರುವರು.

ಜನಮನ ಸೂರೆಗೊಳಿಸಿತು 500ಕ್ಕೂ ಅಧಿಕ ವಿದ್ಯಾರ್ಥಿಗಳ 'ಆಳ್ವಾಸ್ ಸಾಂಸ್ಕೃತಿಕ ವೈಭವ'

ಉಜಿರೆಯಲ್ಲಿ ಧರೆಗಿಳಿದ ಕಲಾ ಲೋಕ!







ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ರಥಬೀದಿಯಲ್ಲಿ ಭಾನುವಾರ ಆಳ್ವಾಸ್ ನುಡಿಸಿರಿ ವಿರಾಸತ್ ಬೆಳ್ತಂಗಡಿ ಘಟಕದ ವತಿಯಿಂದ 500ಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಅವರು, ಓದಿನ ಜತೆ ಸಾಂಸ್ಕೃತಿಕ ವಿಚಾರಗಳಿಗೂ ಹೆಚ್ಚಿನ ಒತ್ತು ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ಅಡಗಿರುವ ಕಲೆಯನ್ನು ಎತ್ತರಕ್ಕೇರಿಸಬಹುದು. ಈ ವಿಚಾರದಲ್ಲಿ ಡಾ.ಮೋಹನ್ ಆಳ್ವ ಅವರು ಮಹತ್ವದ ಪಾತ್ರ ವಹಿಸಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹರೀಶ್ ಪೂಂಜ ಮಾತನಾಡಿ, ವಿದ್ಯಾರ್ಥಿಗಳ ಪ್ರೌಢಿಮೆಗೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳು ಉತ್ತಮ ಅಡಿಪಾಯ ನಿರ್ಮಿಸುತ್ತಿವೆ. ಕೀರ್ತಿ ಶೇಷರಾದ ವಿಜಯರಾಘವ ಪಡುವೆಟ್ನಾಯ ಪ್ರೊ.ಎಸ್. ಪ್ರಭಾಕರ್ ಡಾ. ಯಶೋವರ್ಮ ಮಾರ್ಗದರ್ಶನದಲ್ಲಿ ಬೆಳೆದಿರುವ ಉಜಿರೆ ಸಾಂಸ್ಕೃತಿಕ ವಿಚಾರಗಳಿಗೆ ಸದಾ ಬೆನ್ನೆಲುಬಾಗಿದೆ ಎಂದರು.



ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ಜಾಗತಿಕವಾಗಿ 17 ನುಡಿಸಿರಿ, 30 ವಿರಾಸತ್ ಕಾರ್ಯಕ್ರಮಗಳು ಮೂಡಿಬಂದಿವೆ. 88 ಘಟಕಗಳು ದೇಶ-ವಿದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ನಮ್ಮದು ಸಂಸ್ಕೃತಿ ಬೆಳೆಸುವ ಉದ್ದೇಶವೇ ಹೊರತು ಸ್ಪರ್ಧೆಯಲ್ಲ. ಕಲೆಯ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಹೊಸ ರೂಪಗಳು ಮೂಡಿ ಬರಬೇಕು ಎಂದರು.

ಉದ್ಯಮಿ ಶಶಿಧರ ಶೆಟ್ಟಿ ಬರೋಡ ಮಾತನಾಡಿ, ಬೆಳ್ತಂಗಡಿ ಘಟಕದಿಂದ ವರ್ಷಕ್ಕೆ ಕನಿಷ್ಠ ಎರಡು ಕಾರ್ಯಕ್ರಮ ನಡೆಸುವ ಯೋಜನೆ ರೂಪಿಸಲಾಗಿದೆ ಎಂದರು.

ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ಶುಭ ಹಾರೈಸಿದರು. ಎಂ.ಎಲ್. ಸಿ. ಪ್ರತಾಪ ಸಿಂಹ ನಾಯಕ್, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಡಾ.ಸತೀಶ್ಚಂದ್ರ ಎಸ್., ಅನಿಲ್ ಕುಮಾರ್ ಎಸ್. ಎಸ್., ಪೂರನ್ ವರ್ಮ, ಮೋಹನ್ ಕುಮಾರ್, ಡಾ.ಎಂ.ಪಿ. ಶ್ರೀನಾಥ್, ಡಾ. ಹರ್ಷ ಸಂಪಿಗೆತ್ತಾಯ,ಮಚ್ಚಿಮಲೆ ಅನಂತ ಭಟ್, ವಸಂತ ಶೆಟ್ಟಿ, ರವೀಂದ್ರ ಶೆಟ್ಟಿ, ರಾಜೇಶ್ ಪೈ, ಡಾ. ಪ್ರದೀಪ್ ಆಟಿಕುಕ್ಕೆ, ಅರವಿಂದ ಕಾರಂತ್, ಶ್ರೇಯಾ ಶೆಟ್ಟಿ, ಉಮೇಶ್ ಶೆಟ್ಟಿ, ಅಶ್ವಿನಿ ಎ. ಹೆಬ್ಬಾರ್, ಪ್ರಕಾಶ ನಾರಾಯಣ ರಾವ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಉಪನ್ಯಾಸಕವೇಣುಗೋಪಾಲಶೆಟ್ಟಿಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ಅಂಬರೀಶ ಚಿಪಳೂಣ್ಕರ್ ಕಾರ್ಯಕ್ರಮ ಸಂಘಟಿಸಿದರು. 3 ಗಂಟೆ ಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯ ಕಲಾಸಕ್ತರು ಭಾಗವಹಿಸಿದ್ದರು.



ಮಂಗಳೂರು ವಿವಿ ಮತ್ತು ರೋಶನಿ ಕಾಲೇಜಿನ ಆಶ್ರಯದಲ್ಲಿ ಜರುಗಿದ ಮಂಗಳೂರು ವಿ.ವಿ. ಅಂತರ್ ಕಾಲೇಜು ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಆಳ್ವಾಸ್ ಕಾಲೇಜಿನ ಪುರುಷರ ಮತ್ತು ಮಹಿಳೆಯರ ಎರಡೂ ವಿಭಾಗದಲ್ಲೂ ತಂಡ ಪ್ರಶಸ್ತಿಯನ್ನು ಪಡೆದು ಸತತ 22ನೇ ಬಾರಿ ಸಮಗ್ರ ತಂಡ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಮಹಿಳಾ ವಿಭಾಗದಲ್ಲಿ 2 ಚಿನ್ನ, 3 ಬೆಳ್ಳಿ ಹಾಗೂ 3 ಕಂಚಿನ ಪದಕ, ಪುರುಷರ ವಿಭಾಗದಲ್ಲಿ 1 ಚಿನ್ನ, 2 ಬೆಳ್ಳಿ ಹಾಗೂ 3 ಕಂಚಿನ ಪದಕ ಪಡೆದಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅಭಿನಂದನೆ ಸಲ್ಲಿಸಿದ್ದಾರೆ.

ಮಾ.27ರಿಂದ ಸಂಸ್ಕೃತಿ ಕುಂಭ ಮಲೆನಾಡು ಉತ್ಸವ

ಕಾರವಾರ: ಹೊನ್ನಾವರ ತಾಲೂಕಿನ ಬಂಗಾರಮಕ್ಕಿಯಲ್ಲಿ ಮಾ.27ರಿಂದ ಏ.2ರ ವರೆಗೆ ಸಂಸ್ಕೃತಿ ಕುಂಭ ಮಲೆನಾಡು ಉತ್ಸವ 2026 ನಡೆಯಲಿದೆ ಎಂದು ಬಂಗಾರಮಕ್ಕಿ ವೀರಾಂಜನೇಯ ಶ್ರೀ ಕ್ಷೇತ್ರದ ಶ್ರೀ ಮಾರುತಿ ಗುರೂಜಿ ಹೇಳಿದರು.

ಅವರು ಕಾರವಾರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾ.27ರಂದು ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷ ಎ.ಎಸ್ ಕಿರಣಕುಮಾರ ಉತ್ಸವ ಉದ್ಘಾಟನೆ ಮಾಡಲಿದ್ದಾರೆ. ಈ ದಿನ ವಿಜ್ಞಾನ ಪ್ರದರ್ಶನ ಮತ್ತು ಮಕ್ಕಳೊಂದಿಗೆ ವಿಜ್ಞಾನಿಗಳ ಸಂವಾದ ನಡೆಯಲಿದೆ. ಮಾ.28ರಂದು ಸಾಹಿತ್ಯೋತ್ಸವ ಕವಿಗೋಷ್ಠಿಯು ಕವಿ ಸುಬ್ಬು ಹೊಲೆಯಾರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾ.29ರಂದು ಪಶ್ಚಿಮಘಟ್ಟ ರಕ್ಷಣೆಯ ಜನಾಂದೋಲನ ಹಾಗೂ ಶರಾವತಿ ಉಳಿಸಿ ಜಾಗೃತಿ ಸಮಾವೇಶ ನಡೆಯಲಿದೆ.

ಈ ಸಮಾವೇಶದಲ್ಲಿ ವಿವಿಧ ಮಠದ ಗುರೂಜಿಗಳು, ರೈತ ನಾಯಕರು ಕರಬೂರು ಶಾಂತಕುಮಾರು, ರಾಜ್ಯ ರೈತ ಸಂಘ ಹಾಘು ಹಸಿರು ಸೇನೆ ರಾಜ್ಯಾಧ್ಯಕ್ಷ ಎಚ್.ಆರ್.ಬಸವರಾಜಯ್ಯ ಭಾಗವಹಿಸಲಿದ್ದಾರೆ. ಸಮರೋಪ ಮಹಿಮಾ ಪಟೇಲ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾ.30ರಂದು ಬೃಹತ್ ಉದ್ಯೋಗ ಮೇಳ ನಡೆಯಲಿದೆ. ಇದಕ್ಕೆ ವಿಧಾನಪರಿಷತ್ ಸದಸ್ಯ ಎಸ್.ವಿ.ಸಂಕನೂರು, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣ ಗೌಡ , ಈಡೀಗ ಸಮಾಜದ ಅಧ್ಯಕ್ಷ ನಾಗರಾಜ ಗುತ್ತೇದಾರ ಆಗಮಿಸಲಿದ್ದಾರೆ. ಮಾ.31ರಂದು ಮೀನುಗಾರರ ಸಮ್ಮೇಳನ. ಏಪ್ರಿಲ್ 1ರಂದು ರೈತೋತ್ಸವ ಮತ್ತು ಪಾರಂಪರಿಕ ವೈದ್ಯರ ಸಮಾವೇಶ ನಡೆಯಲಿದೆ. ಇದರಲ್ಲಿ ವಿವಿಧ ಪಾರಂಪರಿಕ ವೈದ್ಯರು, ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಏ.2ರಂದು ಬೃಹತ್ ಆರೋಗ್ಯ ತಪಾಸಣೆ ದಾವಣಗೆರೆ ಎಸ್.ಎಸ್.ಆಸ್ಪತ್ರೆಯಿಂದ 30 ನುರಿತ ವೈದ್ಯರ ತಂಡದಿಂದ ನಡೆಯಲಿದೆ. ಶ್ರೀ ಕ್ಷೇತ್ರ ಬಂಗಾರಮಕ್ಕಿಯು ಅನ್ನ ದಾಸೋಹ, ಅಕ್ಷರ ದಾಸೋಹ ಮತ್ತು ಆಶ್ರಯ ದಾಸೋಹ ಸೇವೆಯ ಮೂಲಕ ಸಮಾಜದ ಹಿಂದುಳಿದ ವರ್ಗಗಳಿಗೆ ಸೇವೆ ಸಲ್ಲಿಸುತ್ತಿದೆ. ಗೋಶಾಲೆ, ಶಿಕ್ಷಣ ಸಂಸ್ಥೆಗಳು, ಮಹಿಳಾ ಸಬಲೀಕರಣ ಕಾರ್ಯಕ್ರಮ, ಆರೋಗ್ಯ ಮತ್ತು ಆಶ್ರಯ ಸೇವೆಯು ನಡೆಯುತ್ತಿದೆ ಎಂದು ಶ್ರೀ ಮಾರುತಿ ಗುರೂಜಿ ಹೇಳಿದರು.

ಉತ್ಸವದ ಎಲ್ಲ ದಿನಗಳಂದು ಕ್ಷೇತ್ರದಲ್ಲಿ ನಿತ್ಯದ ಪೂಜಾನುಷ್ಠಾನದ ಜೊತೆಗೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆಯಲಿದೆ. ಉತ್ಸವದ ಕಾರ್ಯಕ್ರಮಗಳಿಗೆ ಧನಸಹಾಯ ಮಾಡುವವರು ಶ್ರೀ ವೀರಾಂಜನೇಯ ರಿಲಿಜಿಯಸ್ ಎಂಡ್ ಚಾರಿಟೇಬಲ ಟ್ರಸ್ಟ್, ಖಾತೆ ಸಂ, 120024182530, ಐ.ಎಫ್.ಸಿ ಕೋಡ್ ಸಿಎನ್‌ಆರ್‌ಬಿ 0010339,, ಕೆನರಾ ಬ್ಯಾಂಕ್, ಶಾಖೆಗೆ ರಸೊಪ್ಪಾ ಇಲ್ಲಿಗೆ ಸಂದಾಯ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

ಕಾಸರಗೋಡು ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಾ ಕಣಕ್ಕೆ

ಎಂ.ಎಲ್. ಅಶ್ವಿನಿ ನಾಮಪತ್ರ ಸಲ್ಲಿಕೆ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಚುನಾವಣಾಧಿಕಾರಿ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್ ಅವರಿಗೆ ಸೋಮವಾರ ಬೆಳಗ್ಗೆ ತಮ್ಮ ನಾಮಪತ್ರ ಸಲ್ಲಿಸಿದರು.

ಇದಕ್ಕೂ ಮೊದಲು ತಾಳಿಪಡ್ಪು ಮೈದಾನದಿಂದ ಚೆಂಡೆ ವಾದ್ಯಮೇಳಗಳೊಂದಿಗೆ ತೆರೆದ ವಾಹನದಲ್ಲಿ ರೋಡ್ ಶೋ ಮೂಲಕ ಹೊರಟ ಬೃಹತ್ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಪಿಲಿಕುಂಜೆಯಲ್ಲಿ ಸಮಾಪ್ತಿಗೊಂಡಿತು. ಈ ವೇಳೆ ಅವರಿಗೆ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಮಹಾರಾಷ್ಟ್ರದ ಪನ್ವೇಲ್ ಶಾಸಕ ಪ್ರಶಾಂತ್ ಠಾಕೂರ್, ಕನ್ನಡ ಚಲನಚಿತ್ರ ನಟಿ ಕೊಡಗಿನ ಹರ್ಷಿಕ ಪೂಣಚ್ಚ, ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್, ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ರವೀಶ ತಂತ್ರಿ ಕುಂಟಾರು, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಬಿಡಿಜೆಎಸ್ ಜಿಲ್ಲಾಧ್ಯಕ್ಷ ಗಣೇಶ್ ಪಾರೆಕಟ್ಟೆ ಮತ್ತಿತರರು ಸಾಥ್ ನೀಡಿದರು.

ಮೆರವಣಿಗೆಯಲ್ಲಿ ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ ಎಂ.ಸುಧಾಮ ಗೋಸಾಡ, ರಾಜ್ಯ ಸಮಿತಿ ಸದಸ್ಯೆ ಸವಿತಾ ಟೀಚರ್, ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಬಿಜೆಪಿ ಹಾಗೂ ರಾಜ್ಯ ಕೌನ್ಸಿಲ್ ಸದಸ್ಯ ಶಿವಕೃಷ್ಣ ಭಟ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಡಿ.ಶಂಕರ, ಕುಂಬ್ಡಾಜೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಯಶೋಧಾ, ಬೆಳ್ಳೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ನಳಿನಿ, ಕಾರಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷೆ ಎಂ.ಜನನಿ, ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ವಿವಿಧ ಗ್ರಾಮ, ಬ್ಲಾಕ್ ಪಂಚಾಯತ್‌ಗಳ ಜನಪ್ರತಿನಿಧಿಗಳು, ಬಿಜೆಪಿಯ ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳು ಮತ್ತಿತರಿದ್ದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರಿಗಿರುವ ಇಡು ಗಂಟನ್ನು ಆಟೋರಿಕ್ಷಾ ಚಾಲಕರ ಸಂಘ (ಬಿಎಂಎಸ್)ದ ವತಿಯಿಂದ ಮೆರವಣಿಗೆ ಪ್ರಾರಂಭಗೊಳ್ಳುವ ಮೊದಲು ರಿಕ್ಷಾ ಚಾಲಕರು ಎಂ.ಎಲ್.ಅಶ್ವಿನಿ ಅವರಿಗೆ ಹಸ್ತಾಂತರಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ಮಾಜಿ ಜಿಲ್ಲಾಧ್ಯಕ್ಷ ರವೀಶ ತಂತ್ರಿ ಕುಂಟಾರು, ಬಿಡಿಜೆಎಸ್ ಜಿಲ್ಲಾಧ್ಯಕ್ಷ ಗಣೇಶ್ ಪಾರೆಕಟ್ಟೆ, ಬಿಜೆಪಿ ರಾಜ್ಯ ಕೌನ್ಸಿಲ್ ಸದಸ್ಯ, ವಕೀಲ ಬಿ.ರವೀಂದ್ರನ್, ಸಹಕಾರ ಭಾರತಿ ರಾಜ್ಯಾಧ್ಯಕ್ಷ, ವಕೀಲ ಕರುಣಾಕರನ್ ನಂಬ್ಯಾರ್ ಇದ್ದರು.

ಕಾಸ್ಮೋಪಾಲಿಟನ್ ಕ್ಲಬ್ ಅಧ್ಯಕ್ಷರಾಗಿ ರತನ್ ತಮ್ಮಯ್ಯ

ಮಡಿಕೇರಿ: ಕೊಡಗು ಜಿಲ್ಲೆಯ ಪ್ರತಿಷ್ಠಿತ ಕ್ಲಬ್‌ಗಳಲ್ಲೊಂದಾದ ಮಡಿಕೇರಿಯ ಕಾಸ್ಮೋಪಾಲಿಟನ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ವಕೀಲ, ಕಿರಿಯಮಾಡ ರತನ್ ತಮ್ಮಯ್ಯ ಆಯ್ಕೆಯಾಗಿದ್ದಾರೆ. ಮಾ. 21 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ 2 ವರ್ಷಗಳ ಅವಧಿಗೆ ರತನ್ ತಮ್ಮಯ್ಯ ಅವರನ್ನು ಅಧ್ಯಕ್ಷರನ್ನಾಗಿ, ಮುಕ್ಕಾಟೀರ ಸಂಜು ಪೊನ್ನಪ್ಪ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಮತ್ತು ಸಂಜಯ್ ಹೆಚ್. ಎಲ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಸುಮಾರು 121 ವರ್ಷಗಳ ಸುದೀರ್ಘ ಇತಿಹಾಸವಿರುವ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ 240 ಸದಸ್ಯರಿದ್ದಾರೆ. ರತನ್ ತಮ್ಮಯ್ಯ ರೋಟರಿ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.



ಕೊಟ್ಟಾರಚೌಕಿ ಪಂಪ್‌ಹೌಸ್‌ನಲ್ಲಿ ಹೆಚ್ಚುವರಿ ಪಂಪ್‌ಗೆ ಬೇಡಿಕೆ

ಕಾವೂರಿಗೆ ನೀರು ಪೂರೈಕೆ ಕಡಿಮೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಕಾವೂರು ವಾರ್ಡ್‌ನ ಬಹುತೇಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇದೆ. ಇಲ್ಲಿಗೆ ಪೂರೈಕೆಯಾಗುವ ನೀರಿನ ಪ್ರಮಾಣವೇ ಕಡಿಮೆ. ಜತೆಗೆ ಟ್ಯಾಂಕರ್ ಮೂಲಕವೂ ನೀರು ಬರುತ್ತಿಲ್ಲ ಎಂದು ಕಾವೂರು ವಾರ್ಡ್‌ನ ನಿವಾಸಿಗಳು ಗೋಳು ಹೇಳಿಕೊಂಡಿದ್ದಾರೆ.

ಕಾವೂರು ವಾರ್ಡ್‌ನ ಪೆರ್ಲಗುರಿ, ಈಶ್ವರನಗರ, ಕಾಪ್ರಿಗುಡ್ಡ, ಸೂಜಿಕಲ್ಲು ಗುಡ್ಡ, ಶಿವನಗರ, ದೇವಸ, ಮಂಜಲಕಟ್ಟೆ, ಗೊಲ್ಲರಬೆಟ್ಟು ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿಂದ ಜನತೆ ತೊಂದರೆ ಅನುಭವಿಸುತ್ತಿದ್ದಾರೆ.

ಇಲ್ಲಿನ ಸೂಜಿಕಲ್‌ನಲ್ಲಿ ಟ್ಯಾಂಕ್ ಇದೆ. ಈ ಟ್ಯಾಂಕ್‌ಗೆ ಮೇರಿಹಿಲ್ ಮುಖ್ಯ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಈ ಪ್ರದೇಶದ ಒಟ್ಟು ಐದು ವಾರ್ಡ್‌ಗಳಿಗೆ ಇಲ್ಲಿಂದ ನೀರು ಸರಬರಾಜು ಆಗುತ್ತಿದೆ. ಆದರೆ, ಮೇರಿಹಿಲ್ ಟ್ಯಾಂಕ್‌ನಿಂದ ಪೂರೈಕೆಯಾಗುವ ನೀರಿನ ಪ್ರಮಾಣವೇ ಕಡಿಮೆ. ಈ ಮಧ್ಯೆ ಪೈಪ್‌ಲೈನ್‌ನಲ್ಲಿ ಅಲ್ಲಲ್ಲಿ ನೀರಿನ ಸೋರಿಕೆ ಉಂಟಾಗುತ್ತಿದೆ, ಪೈಪ್‌ಲೈನ್‌ಗೆ ಅಕ್ರಮ ಸಂಪರ್ಕಗಳಿವೆ. ಈ ಎಲ್ಲದರ ಒಟ್ಟು ಪರಿಣಾಮ ಕಾವೂರು ವಾರ್ಡ್‌ಗೆ ನೀರಿನ ಕೊರತೆ ಉಂಟಾಗಿದೆ ಎನ್ನುತ್ತಾರೆ ಸ್ಥಳೀಯರು. ಮೇರಿಹಿಲ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಕೆ ಮಾಡಬೇಕು, ಅಕ್ರಮ ಸಂಪರ್ಕ ಕಡಿತಗೊಳಿಸಿ ಸೋರಿಕೆ ತಡೆಗಟ್ಟಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕಾವೂರಿಗೆ ಪ್ರತ್ಯೇಕ ಟ್ಯಾಂಕರ್ ನೀಡಿ

ಮಂಗಳೂರು ಮಹಾನಗರ ಪಾಲಿಕೆಯಿಂದ ಇಲ್ಲಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಆಗುತ್ತಿಲ್ಲ. ಮನಪಾದ ಮಂಗಳೂರು ಉತ್ತರ ವಿಧಾನ ಸಭಾ ವ್ಯಾಪ್ತಿಗೆ ನೀರು ಪೂರೈಸಲು ಎರಡು ಟ್ಯಾಂಕರ್ ಮಾತ್ರ ಇದೆ. ಈ ಎರಡು ಟ್ಯಾಂಕರ್ ಸುರತ್ಕಲ್ ಭಾಗಕ್ಕೆ ಸಾಕಾಗುತ್ತಿಲ್ಲ. ಕಾವೂರು ವ್ಯಾಪ್ತಿಗೆ ಪ್ರತ್ಯೇಕ ಟ್ಯಾಂಕರ್ ವ್ಯವಸ್ಥೆ ಮಾಡಿಕೊಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಇಲ್ಲಿನ ನೀರಿನ ಸಮಸ್ಯೆ ಬಗೆಹರಿಸಲು ಈಗಾಗಲೇ 10 ಕಡೆ ಕೊಳವೆಬಾವಿ ನಿರ್ಮಿಸಲಾಗಿದೆ. ಆದರೆ, ಈಶ್ವರನಗರದಲ್ಲಿ ನಿರ್ಮಾಣಗೊಂಡ ಕೊಳವೆಬಾವಿಯಲ್ಲಿ ಹಳದಿ ಬಣ್ಣ ಮಿಶ್ರಿತ ನೀರು ಬರುತ್ತಿದ್ದು, ಕುಡಿಯಲು, ನಿತ್ಯ ಬಳಕೆಗೆ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ.

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



ಕಾವೂರು ವಾರ್ಡ್‌ಗೆ ನೀರು ಪೂರೈಸುವ ಕೊಟ್ಟಾರಚೌಕಿ ಪಂಪ್‌ಹೌಸ್



ಕಾವೂರು ವಾರ್ಡ್‌ನ ಬಹುತೇಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇದೆ. ಇಲ್ಲಿನ ಸ್ಥಳೀಯ ಟ್ಯಾಂಕ್‌ಗಳಿಗೆ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆಯಾದ ಕಾರಣದಿಂದ ನೀರು ಕೊರತೆ ಉಂಟಾಗಿದೆ. ಕಾವೂರು ವಾರ್ಡ್ ಸೂಜಿಕಲ್ಲು ಗುಡ್ಡ ಸಹಿತ ಅನೇಕ ಎತ್ತರದ ಸ್ಥಳಗಳನ್ನು ಒಳಗೊಂಡಿದ್ದು, ಅಲ್ಲಿಗೆ ನೀರು ತಲುಪುತ್ತಿಲ್ಲ. ಹೊಸ ಪೈಪ್‌ಲೈನ್ ಅಳವಡಿಕೆ ಸಹಿತ ನೀರಿನ ಸಮಸ್ಯೆ ಬಗೆಹರಿಸಲು ನನ್ನ ಅವಧಿಯಲ್ಲಿ ಸಾಕಷ್ಟು ಪ್ರಯತ್ನ ನಡೆಸಿದ್ದೇನೆ. ನಮ್ಮ ವಾರ್ಡ್‌ಗೆ ನೀರು ಪೂರೈಸುವ ಕೊಟ್ಟಾರಚೌಕಿ ಪಂಪ್‌ಹೌಸ್‌ಗೆ ಮೇಲ್ಛಾವಣಿ ಅಳವಡಿಸಲಾಗಿದೆ. 10 ಕೊಳವೆ ಬಾವಿ ನಿರ್ಮಾಣಗೊಂಡಿದ್ದು, ಹೆಚ್ಚುವರಿಯಾಗಿ ಕಾಪ್ರಿಗುಡ್ಡೆ ಆಕಾಶಭವನ, ಅಂಬೇಡ್ಕರ್ ನಗರ, ಈಶ್ವರನಗರ, ಶಿವನಗರ, ಪೆರ್ಲಗುರಿಯಲ್ಲಿ ಐದು ಕೊಳವೆಬಾವಿ ಕೊರೆಯಿಸಲು ಮಂಜೂರಾತಿ ದೊರೆತಿದೆ.

■ ಗಾಯತ್ರಿ ಎ., ಕಾವೂರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



ಕಾವೂರು ವಾರ್ಡ್ ಗುಡ್ಡ ಪ್ರದೇಶಗಳಿಂದ ಕೂಡಿದ್ದು, ತುಂಬೆ ಡ್ಯಾಂನಿಂದ ಇಲ್ಲಿಗೆ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆಯಾದ ಕಾರಣ ಎತ್ತರದ ಸ್ಥಳಗಳಿಗೆ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಅಗತ್ಯ ಇರುವ ಕಡೆಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ತುರ್ತಾಗಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ವ್ಯವಸ್ಥೆ ಮಾಡಿಕೊಡಬೇಕು.

■ ಕೊರಗಪ್ಪ ಶೆಟ್ಟಿ ಸ್ಥಳೀಯ ನಿವಾಸಿ

ಹೆಚ್ಚುವರಿ ಪಂಪ್ ಒದಗಿಸಲು ಆಗ್ರಹ

ಕಾವೂರು ವಾರ್ಡ್‌ನ ಪ್ರದೇಶಗಳಿಗೆ ಕೊಟ್ಟಾರಚೌಕಿ ಪಂಪ್‌ಹೌಸ್ ಮೂಲಕ ನೀರು ಪೂರೈಸಲಾಗುತ್ತಿದೆ. ಇಲ್ಲಿನ ಪಂಪ್ 15 ವರ್ಷ ಹಳೆಯದು. ಈ ಪಂಪ್ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ನಿರಂತರ ಚಾಲನೆಯಲ್ಲಿ ಇರುತ್ತದೆ. ಈ ಮಧ್ಯೆ ಪಂಪ್ ಹಾಳಾದರೆ ತಕ್ಷಣಕ್ಕೆ ದುರಸ್ತಿಯಾಗುತ್ತಿಲ್ಲ. ಇದರಿಂದಾಗಿ ಪಂಪ್ ಹಾಳಾದರೆ ಈ ಪಂಪ್‌ಹೌಸ್‌ನಿಂದ ನೀರು ಪೂರೈಕೆಯಾಗುವ ಪ್ರದೇಶಗಳಿಗೆ ಮೂರು ದಿನದವರೆಗೂ ನೀರು ಸರಬರಾಜು ಸ್ಥಗಿತಗೊಂಡ ಉದಾಹರಣೆಗಳಿವೆ. ಹಳೆಯ ಹಾಗೂ ನಿರಂತರ ಚಾಲನೆಯಲ್ಲಿ ಇರುವ ಈ ಪಂಪ್ ಆಗಾಗ್ಗೆ ಹಾಳಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೊಟ್ಟಾರಚೌಕಿ ಪಂಪ್‌ಹೌಸ್‌ಗೆ ಹೆಚ್ಚುವರಿ ಪಂಪ್ ಒದಗಿಸ ಬೇಕು ಎಂಬುದು ಸ್ಥಳೀತರ ಬೇಡಿಕೆಯಾಗಿದೆ. 'ಕೊಟ್ಟಾರಚೌಕಿ ಪಂಪ್ ಹೌಸ್‌ನಲ್ಲಿ ಇನ್ನೊಂದು ಪಂಪ್ ಅಳವಡಿಕೆ ಆಗಲೇಬೇಕು. ಈ ಬಗ್ಗೆ ಮನಪಾ ಪರಿಷತ್ ಸಭೆಯಲ್ಲೂ ಧ್ವನಿ ಎತ್ತಿದ್ದೇನೆ' ಎನ್ನುತ್ತಾರೆ ಕಾವೂರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್ ಗಾಯತ್ರಿ ಎ.

ನಾಳೆ ವಾರ್ಡ್ 19 ಪಚ್ಚನಾಡಿ ಪರಿಸರದ ಸ್ಥಿತಿಗತಿ

ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

ಪುಟ 1 ➔ ರಾಜ್ಯದಲ್ಲಿ ಹೋಟೆಲ್ ಮೊದಲಾದ ವಾಣಿಜ್ಯ ಬಳಕೆಯ ಉದ್ದೇಶಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಕೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ರಾಜ್ಯಕ್ಕೆ ಪ್ರತಿದಿನ 16 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿವೆ. ಈ ಪೈಕಿ 10 ಸಾವಿರ ಸಿಲಿಂಡರ್‌ಗಳನ್ನು ಹೋಟೆಲ್, ರೆಸ್ಟೋರೆಂಟ್‌ಗಳು ಸೇರಿದಂತೆ ಮುಂತಾದ ಆಹಾರ ಸಂಬಂಧ ಉದ್ಯಮದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಆದ್ಯತೆ ಮೇರೆಗೆ ಪೂರೈಕೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಪತ್ರಕ್ಕೆ ಕೇಂದ್ರ ಸ್ಪಂದನೆ: ವಾಣಿಜ್ಯ ಉದ್ದೇಶದ ಸಿಲಿಂಡರ್ ಪೂರೈಕೆ ಪ್ರಮಾಣ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದಿರುವ ಪತ್ರಕ್ಕೆ ಕೇಂದ್ರ ಸರ್ಕಾರ ಸ್ಪಂದಿಸಿರುವುದು ಸಂತೋಷ. ಈ ಸಂಬಂಧ ಸೋಮವಾರ ಬೆಳಗ್ಗೆ ತೈಲ ಕಂಪನಿಗಳ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಯಿತು. ರಾಜ್ಯಕ್ಕೆ 45 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಅಗತ್ಯವಿದೆ. ಮೊದಲು ರಾಜ್ಯಕ್ಕೆ ಸುಮಾರು 9 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿದ್ದವು. ಇದೀಗ ಅದರ ಪ್ರಮಾಣ 16 ಸಾವಿರಕ್ಕೆ ಏರಿಕೆಯಾಗಿವೆ ಎಂದು ಮಾಹಿತಿ ನೀಡಿದರು.

ಸಿಲಿಂಡರ್ ಪೂರೈಕೆ ಮೂಲಕ ಹಾಸ್ಟೆಲ್‌ಗಳಿಗೆ ಪ್ರತಿ ದಿನದ ಲೆಕ್ಕದಂತೆ 4,200, ಕ್ಯಾಂಟೀನ್‌ಗಳಿಗೆ ಹಾಗೂ ಇತರ ಸಂಸ್ಥೆಗಳಿಗೆ 1,200 ಹಾಗೂ ಹೋಟೆಲ್, ಡಾಬಾ, ಸೇರಿದಂತೆ ಇತರೆ ಆಹಾರ ಸಂಸ್ಕರಣಾ ಉದ್ಯಮೆಯಲ್ಲಿ ತೊಡಗಿರುವವರಿಗೆ ಸುಮಾರು 10 ಸಾವಿರ ಸಿಲಿಂಡರ್‌ಗಳನ್ನು ಪ್ರತಿದಿನ ಪೂರೈಸಲಾಗುತ್ತಿದೆ. ತುರ್ತು ಅಗತ್ಯತೆ ಗಳಿಗೆ ಸುಮಾರು 205 ಸಿಲಿಂಡರ್‌ಗಳನ್ನು ಶೇಖರಿಸಲಾಗಿದ್ದು, ಆದ್ಯತೆ ಮೇರೆಗೆ ಅವುಗಳನ್ನು ವಿತರಿಸಲಾಗುವುದು ಎಂದರು.

ಇದೇ ವೇಳೆ ಮೇಲ್ಮನೆ ಸದಸ್ಯ ಐವನ್ ಡಿಸೋಜಾ ಅವರು, ಕೇಂದ್ರ ಸರ್ಕಾರ ಶೇ.20 ರಷ್ಟು ಮಾತ್ರ ವಾಣಿಜ್ಯ ಸಿಲಿಂಡರ್ ಪೂರೈಕೆ ಹೆಚ್ಚಿಸಿದೆ. ಆದರೆ, ಇನ್ನೂ ಶೇ.80 ರಷ್ಟು ಹೋಟೆಲ್‌ಗಳು ಮುಚ್ಚಬೇಕೇ? ಸಿಲಿಂಡರ್ ಇಲ್ಲದ ಪಕ್ಷದಲ್ಲಿ ಸೌದೆ–ಕಟ್ಟಿಗೆಯಾದರೂ ಹೋಟೆಲ್‌ನವರಿಗೆ ಪೂರೈಸಿದರೆ ಅವರು ಹೋಟೆಲ್ ನಡೆಸುತ್ತಾರೆ ಎಂದು ಹೇಳಿದರು. ಆಗ ಪರಿಸರ ಸಚಿವ ಈಶ್ವರ ಖಂಡ್ರೆ, ಗಿಡ–ಮರಗಳನ್ನು ಕಡಿಯುವ ಹಾಗಿಲ್ಲ, ಈಗಾಗಲೇ ಸ್ಪಷ್ಟವಾದ ಆದೇಶವನ್ನು ಹೊರಡಿಸಲಾಗಿದೆ ಎಂದು ಹೇಳಿದರು.

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ

ಪುಟ 1 ➔ **ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ನಮ್ಮ ಸರ್ಕಾರವು ಶಕ್ತಿಮೀರಿ ಕೆಲಸ ಮಾಡುತ್ತಿದೆ. ಇದನ್ನು ನ್ಯಾಯಾಂಗ ಪರಿಶೀಲನೆಗೆ ಒಳಪಡಿಸಲಾಗದು. ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯಗಳು ಈ ವಿಚಾರದಲ್ಲಿ ಭಾಗಿಯಾಗಬಾರದು. ಹೀಗಾಗಿ ಈ ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದು ಪೀಠ ಹೇಳಿತು. ಇದಕ್ಕೂ ಮುನ್ನ, ತುಷಾರ್ ಮೆಹ್ತಾ ಅವರು ಪರಿಸ್ಥಿತಿ ಬದಲಾಗುತ್ತಿದ್ದು, ಭಾರತದಲ್ಲಿ ಎಲ್‌ಪಿಜಿ ಪೂರೈಕೆ ವ್ಯತ್ಯಯ ಕಡಿಮೆ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ನಮ್ಮ ನಿಯಂತ್ರಣದಲ್ಲಿಲ್ಲದ ಕೆಲವು ಬೆಳವಣಿಗೆಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗಿದ್ದು, ಎಲ್‌ಪಿಜಿ ಪೂರೈಕೆಯಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಭಾರತ ಸರ್ಕಾರ ಕೆಲಸ ಮಾಡುತ್ತಿದೆ. ಈ ವಿಚಾರವನ್ನು ಕಾರ್ಯಾಂಗಕ್ಕೆ ಬಿಡಬೇಕು. ಪ್ರತಿದಿನ ಪರಿಸ್ಥಿತಿ ಬದಲಾಗುತ್ತಿದ್ದು, ಆದ್ಯತೆ ಬದಲಾಗಬೇಕಿದೆ. ಹೋಟೆಲ್‌ಗಳಿಗೆ ಎಲ್‌ಪಿಜಿ ಪೂರೈಸಬೇಕೋ ಅಥವಾ ಮನೆಗಳಿಗೋ ಎಂಬುದು ನಮಗೆ ತಿಳಿಯದಾಗಿದೆ. ಹಲವು ವಿಚಾರಗಳು ನಮ್ಮ ನಿಯಂತ್ರಣದಲ್ಲಿಲ್ಲ ಎಂದರು. ಆಗ ಪೀಠವು ಹೋಟೆಲ್‌ಗಳಿಗೆ ಶುಭ ಸುದ್ದಿ ಇದೆಯೇ? ಹೆಚ್ಚುವರಿ ಸೂಚನೆ ಏನಾದರೂ ಇದೆಯೇ ಎಂದು ಕೇಳಿತು. ಇದಕ್ಕೆ ಮೆಹ್ತಾ ಅವರು ಸದ್ಯಕ್ಕೆ ಇಲ್ಲ ಎಂದರು. ಒಂದು ಹಂತದಲ್ಲಿ ಪೀಠವು ರಾಷ್ಟ್ರವ್ಯಾಪಿ ಎಲ್‌ಪಿಜಿ ಸಿಲಿಂಡರ್ ಹಂಚಿಕೆಯ ಕುರಿತು ಕಳವಳ ವ್ಯಕ್ತವಾಗಿರುವುದರ ಕುರಿತು ಪ್ರಸ್ತಾಪಿಸಿತು. ಇದಕ್ಕೆ ಮೆಹ್ತಾ ಅವರು ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜತೆ ಸಮಾಲೋಚನೆ ನಡೆಸುತ್ತದೆ. ಎರಡೂ ಕಡೆಯ ಸರ್ಕಾರಗಳು ಒಂದೇ ನಿಲುವು ತಳೆಯಬೇಕಾಗುತ್ತದೆ. ಹಂಚಿಕೆದಾರರಿಂದ ಎಲ್‌ಪಿಜಿ ಪೂರೈಕೆಯಲ್ಲಿ ವಂಚನೆ ಕಂಡುಬಂದರೆ ರಾಜ್ಯ ಸರ್ಕಾರವು ಕಠಿಣ ಕ್ರಮಕೈಗೊಳ್ಳಬೇಕು ಎಂದರು.**

ಮತಪತ್ರ ಬಳಕೆಗೆ ಬಿಜೆಪಿ–ಕೈ ಜಟಾಪಟಿ

• **ಬೆಂಗಳೂರು:** ಇವಿಎಂ ಬೇಡ, ಮತಪತ್ರ ಬೇಕು ಎಂಬ ವಿಚಾರದಲ್ಲಿ ವಿಧಾನಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷದ ನಡುವೆ ತೀವ್ರ ಜಟಾಪಟಿ ನಡೆಯಿತು. ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಪರ್ಯಾಲೋಚನೆಗೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಸಭಾತ್ಯಾಗ ನಡೆಸಿದರು.

ವಿಧೇಯಕ ಪರ್ಯಾಲೋಚನೆಗೆ ಕೋರಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಇವಿಎಂ ಮೇಲೆ ವಿಶ್ವಾಸ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಆಯೋಗದ ವರದಿ 58.22% ನಷ್ಟಿತ್ತು. ಆದರೆ, ರಾತ್ರಿ 11.30ಗೆ 68.02% ಆಗಿದೆ. ಅಂದರೆ ಐದು ಗಂಟೆಯಲ್ಲಿ 50 ಲಕ್ಷ ಮತ ಸೇರ್ಪಡೆಯಾಗುತ್ತದೆ. ಹರ್ಯಾಣ ಮತ್ತು ಮಧ್ಯಪ್ರದೇಶದಲ್ಲಿ ಅದೇ ರೀತಿ ಆಗಿದೆ. ಹಲವಾರು ಸಂಸ್ಥೆಗಳು ಈ ಬಗ್ಗೆ ಪ್ರಶ್ನೆ ಮಾಡಿವೆ. ಆದರೆ ಚುನಾವಣಾ ಆಯೋಗ ಈ ಬಗ್ಗೆ ಸಮರ್ಪಕ ಉತ್ತರ ಬಂದಿಲ್ಲ ಎಂದರು. ಈ ಮಸೂದೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮತಪತ್ರದ ಮೂಲಕ ಮಾಡಲು ಈ ತಿದ್ದುಪಡಿ ತರುತ್ತಿದ್ದೇವೆ. ಮತಯಂತ್ರದ ಬದಲು ಮತಪತ್ರ ಬಳಕೆ ಮಾಡಲು ಈ ಮಸೂದೆ ತರಲಾಗುತ್ತಿದೆ. ಮಸೂದೆಯಲ್ಲಿ 6 ಬದಲಾವಣೆಗಳನ್ನು ತರಲಾಗುತ್ತಿದೆ ಎಂದು ವಿವರಿಸಿದರು.

ಶಾಸಕ ಸುನಿಲ್ ಕುಮಾರ್ ಮಾತನಾಡಿ, ಈ ಮಸೂದೆಯಲ್ಲಿ ಜನಸಾಮಾನ್ಯನಿಗೆ ಯಾವುದೇ ಲಾಭ ಇಲ್ಲ. ಇದರಿಂದ ಕಾಂಗ್ರೆಸ್‌ಗೆ ಮಾತ್ರ ಲಾಭ. ಬ್ರ್ಯಾಂಡ್ ಬೆಂಗಳೂರು ಘೋಷಣೆ ಮಾಡುವ ನೀವು ಸ್ಥಳೀಯ ಸಂಸ್ಥೆಗಳಲ್ಲಿ ಇವಿಎಂ ಬಿಟ್ಟು ಮತಪತ್ರ ಬಳಕೆ ಮಾಡಲು ಮುಂದಾಗಿದ್ದೀರಿ. ಬೂತ್ ಕೇಂದ್ರಗಳಿಗೆ ಹೋಗಲು ಆಗುತ್ತಿರಲಿಲ್ಲ. ಅದನ್ನು ದೂರ ಮಾಡಲು ಇವಿಎಂ ತರಲಾಗಿತ್ತು. ಇದರ ಹಿಂದೆ ದೊಡ್ಡ ಹುನ್ನಾರ ಇದ್ದಂತಿದೆ. ಸರ್ಕಾರ ಆಡಳಿತ ವ್ಯವಸ್ಥೆಯನ್ನು ದುರುಪಯೋಗ ಮಾಡಲು ಮುಂದಾದಂತೆ ಕಂಡು ಬರುತ್ತಿದೆ ಎಂದರು.

ತುಘಲಕ್ ದರ್ಬಾರ್: ಅಶೋಕ



ವಿರೋಧ ಪಕ್ಷದ ನಾಯಕ ಆರ್.ಅಶೋಕ, ಇದು ತುಘಲಕ್ ದರ್ಬಾರ್ ಆಗಿದೆ. ಇವಿಎಂ ತಂದವರು ಕಾಂಗ್ರೆಸ್‌ನವರೇ. ಅವರೇ ತಂದ ಇವಿಎಂನ್ನು ತೆಗೆದು ಹಾಕುತ್ತಿದ್ದಾರೆ. ಸುಪ್ರೀಂಕೋರ್ಟ್ ಈ ಇವಿಎಂನಲ್ಲೇ ಮತದಾನ ನಡೆಯಬೇಕು ಅಂದಿದೆ. ಕರ್ನಾಟಕದಲ್ಲಿ ಮತದಾನ ನಡೆಯುವಾಗ ಇವಿಎಂ ಸರಿ ಇತ್ತು. ತೆಲಂಗಾಣದಲ್ಲಿ ಇವಿಎಂ ಸರಿ ಇತ್ತು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಹಲ್ಲಿ ಹೊಡೆಯಿತು. ಆಗ ಚರ್ಚೆ ಆರಂಭವಾಯಿತು ಎಂದು ತಿರುಗೇಟು ನೀಡಿದರು.

ದಿನ ಭವಿಷ್ಯ

ಮೇಷ
ಕಾರ್ಯಸಿದ್ಧಿ. ಯಶಸ್ಸು ಸುಲಭದಲ್ಲಿ ಸಿಗಲಿದೆ. ವ್ಯವಹಾರದಲ್ಲಿ ಪ್ರಗತಿ. ವೃತ್ತಿ ಸಂಬಂಧ ವಾಗ್ವಾದಕ್ಕೆ ಇಳಿಯದಿರಿ. ಸಹನೆಯಿಂದ ವರ್ತಿಸಿ.

ವೃಷಭ
ನಾಯಕನ ರೀತಿ ಕಾರ್ಯಾಚರಿಸಿ. ಪ್ರತಿ ವಿಷಯದಲ್ಲಿ ಮುಂದಾಳತ್ವ ವಹಿಸಿ. ಅನುಕರಣೆ ಬೇಡ. ಕೌಟುಂಬಿಕ ಅಶಾಂತಿ ನಿವಾರಣೆ, ನಿರಾಳತೆ.

ಮಿಥುನ
ವೃತ್ತಿ ಮತ್ತು ಖಾಸಗಿ ವ್ಯವಹಾರದಲ್ಲಿ ಉನ್ನತಿ. ಪ್ರೀತಿಯ ವಿಷಯದಲ್ಲಿ ನಿರಾಳತೆ ತರುವ ಬೆಳವಣಿಗೆ. ಖರ್ಚು ನಿಯಂತ್ರಣ, ಸಮಾಧಾನ.

ಕಟಕ
ಇತರರಿಗೆ ನೆರವು ನೀಡುವಲ್ಲಿ ಖುಷಿ ಕಾಣುವಿರಿ. ಕೌಟುಂಬಿಕ ಉದ್ದೇಶವೊಂದು ಈಡೇರಲಿದೆ. ಆಪ್ತರ ಸಂಗದಲ್ಲಿ ಸಂತೋಷ.

ಸಿಂಹ
ನೀವು ತಳೆವ ನಿರ್ಧಾರ ನಿರೀಕ್ಷಿತ ಫಲ ನೀಡಲಾರದು. ಹಾಗಾಗಿ ಅತಿಯಾದ ನಿರೀಕ್ಷೆ ಬೇಡ. ಅನವಶ್ಯ ಖರ್ಚು ಚಿಂತೆಗೆ ಕಾರಣವಾದೀತು.

ಕನ್ಯಾ
ಕೆಲದಿನಗಳ ಅಶಾಂತಿ ನಿವಾರಣೆಯಾಗುವ ಕಾಲ ಬಂದಿದೆ. ನೆಮ್ಮದಿ ನೀಡಬಲ್ಲ ಬೆಳವಣಿಗೆ ಉಂಟಾಗಲಿದೆ. ಕೌಟುಂಬಿಕ ಸಹಕಾರ.

ತುಲಾ
ವೃತ್ತಿ ಒತ್ತಡ ಮರೆಯಲು ಮೆಚ್ಚಿನ ಕಾರ್ಯದಲ್ಲಿ ತೊಡಗಿ. ಕೆಲವು ಬೆಳವಣಿಗೆ ಹಿತ ತಾರದು. ಏನೋ ಬೇಸರ, ಅಸಮಾಧಾನ.

ವೃಶ್ಚಿಕ
ಇತರರ ಜತೆ ಚೆನ್ನಾದ ಸಂವಹನ ಸಾಧಿಸುವಿರಿ. ವಿಶ್ವಾಸ ವೃದ್ಧಿ. ಮಹತ್ವದ ಸುದ್ದಿ ನಿರೀಕ್ಷಿಸಿದ್ದರೆ ಇಂದು ಸಿಗದು. ಸ್ವಲ್ಪ ಕಾಲ ಕಾಯಬೇಕಾಗುತ್ತದೆ.

ಧನು
ವೃತ್ತಿಯಲ್ಲಿ ಉನ್ನತಿ. ಇತರರ ಸಹಕಾರ. ಭಿನ್ನಮತ ನಿವಾರಣೆ. ಅವಿವಾಹಿತರಿಗೆ ಸಂಗಾತಿ ಹುಡುಕಾಟದಲ್ಲಿ ಯಶ. ಆರ್ಥಿಕ ಪ್ರಗತಿ.

ಮಕರ
ಹಲವು ಬಗೆಯ ಒತ್ತಡ ಏಕಕಾಲದಲ್ಲಿ ಉಂಟಾದೀತು. ಸಹನೆ ಕಳಕೊಳ್ಳದೆ ನಿಭಾಯಿಸಿ. ದುಡುಕಿನ ಮಾತು, ವರ್ತನೆ ತಪ್ಪಿಸಿರಿ.

ಕುಂಭ
ವೃತ್ತಿಪರವಾಗಿ ಯಶಸ್ವೀ ದಿನ. ಆದರೆ ಭಾವನಾತ್ಮಕವಾಗಿ ಅಶಾಂತಿ. ಆಪ್ತರ ಜತೆ ಮುನಿಸುವ ಸಂಭವ. ಆಧ್ಯಾತ್ಮದತ್ತ ಒಲವು.

ಮೀನ
ಅಂದುಕೊಂಡ ಕೆಲಸ ಸಾಧ್ಯವಾಗಲಿದೆ. ಹಣ ಗಳಿಕೆಯ ಹಾದಿ ಸುಗಮ. ಹೊಸ ವ್ಯವಹಾರದಲ್ಲಿ ಹಣ ಹೂಡಬಹುದು. ಕೌಟುಂಬಿಕ ಸಮಾಧಾನ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 4,0,3,7

ಪ್ರತಿಪಕ್ಷ ನಾಯಕರಲ್ಲಿ ಸಚಿವ ಕೃಷ್ಣ ಬೈರೇಗೌಡ ಮನವಿ

ಅಪರಾಧೀಕರಿಸುವ ಕೃತ್ಯ ನಿಲ್ಲಿಸಿ

• **ವಿಧಾನಸಭೆ:** ಸಮಾಜದಲ್ಲಿ ತೀರಾ ಕೆಳ ಹಂತದಲ್ಲಿರುವ ಬಡ ಜನರಿಗೆ ನೀಡುವ ಸಬ್ಸಿಡಿಯನ್ನು ತುಚ್ಛಗೊಳಿಸುವ, ಅಪರಾಧೀಕರಿಸುವ ಕೃತ್ಯವನ್ನು ನಿಲ್ಲಿಸಿ ಎಂದು ಸಚಿವ ಕೃಷ್ಣ ಬೈರೇಗೌಡ ಪ್ರತಿಪಕ್ಷ ನಾಯಕರಲ್ಲಿ ಮನವಿ ಮಾಡಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್, ಸಬ್ಸಿಡಿ ಸಂಸ್ಕೃತಿಗೆ ರಾಜ್ಯವನ್ನು ತಳ್ಳುತ್ತಿದ್ದೀರಾ? ಆಯವ್ಯಯದ ಶೇ.14ರಷ್ಟು ಹಣ ಸಬ್ಸಿಡಿ ಯೋಜನೆಗಳಿಗೆ ಬಳಕೆಯಾಗುತ್ತಿದೆ. ಇದರಿಂದ ದೂರಗಾಮಿ ಯೋಜನೆಗಳಿಗೆ ಹೊಡೆತ ಬೀಳಲಿದೆ. ಸಬ್ಸಿಡಿ ಬಡವರ ಕಣ್ಣೀರು ಒರೆಸಬೇಕೇ ವಿನಾ ಚುನಾವಣೆಯ ಸರಕಾಗಬಾರದು ಎಂದು ಹೇಳಿದರು.



ಅವರ ಮಾತಿನ ನಡುವೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಬಡವರಿಗೆ ನೀಡುವ ಸಬ್ಸಿಡಿಯನ್ನು ಭಾರತದಂತೆ ಬೇರೆ ದೇಶದಲ್ಲೂ ತುಚ್ಛವಾಗಿ ಕಾಣಲಾಗುತ್ತದೆ. ಆದರೆ, ಕಳೆದ 150 ವರ್ಷಗಳ ಆರ್ಥಿಕ ಚಿಂತನೆಗಳ ಕಡೆಗೆ ಒಮ್ಮೆ ಗಮನ ಹರಿಸಿದರೆ ದೇಶವೊಂದನ್ನು ಆರ್ಥಿಕ ಹಿಂಜರಿತದಿಂದ ಪ್ರಗತಿಪಥದತ್ತ ಮುನ್ನಡೆಸಲು ಬಡವರಿಗೆ ಸಬ್ಸಿಡಿ ನೀಡುವ ಮೂಲಕ ಬೇಡಿಕೆಯ ವಲಯವನ್ನು ಬಲಪಡಿಸುವುದೊಂದೇ ಪರಿಹಾರವಾಗಿ ಕಂಡುಬಂದಿದೆ ಎಂದು ವ್ಯಾಖ್ಯಾನಿಸಿದರು.

ಸ್ವಾಭಾವಿಕವಾಗ ಎರಡು ರೀತಿಯ ಆರ್ಥಿಕ ಚಿಂತನೆಗಳು ಕಾಣಸುತ್ತವೆ. ಮೊದಲನೆಯದು ಉತ್ಪಾದಕ ವಲಯದ ಅಭಿವೃದ್ಧಿಗೆ ಸಹಾಯ ಮಾಡುವುದು, ಮತ್ತೊಂದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು ಜನ ಸಾಮಾನ್ಯರ ಆರ್ಥಿಕ ಸ್ಥಿತಿ, ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು. ಉತ್ಪಾದನಾ ವಲಯಕ್ಕೆ ತೆರಿಗೆ ಕಡಿತ ಮಾಡುವ ಮೂಲಕ ನೇರವಾಗಿ ಸಹಾಯ ಮಾಡಬಹುದು. ಹೀಗೆ ಮಾಡಿದಲ್ಲಿ ಅವರ ಉಳಿತಾಯ ಹೆಚ್ಚಾಗಿ ಆ ಹಣವನ್ನು ಅವರು ಮತ್ತೆ ಉತ್ಪಾದನಾ ವಲಯದಲ್ಲಿ ಹೂಡಿಕೆ ಮಾಡಲು ಅನುಕೂಲವಾಗುತ್ತದೆ. ಅದೇ ರೀತಿ ಜನರಿಗೆ ಕನಿಷ್ಠ ಆದಾಯ ಲಭ್ಯವಾಗುವುದನ್ನು ಖಾತರಿಪಡಿಸಿ, ಅವರೂ ಜೀವನ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಆರ್ಥಿಕತೆಯನ್ನು ವೃದ್ಧಿಸಬಹುದಾಗಿದೆ ಎಂದು ವಿವರಿಸಿದರು.

ಒಬ್ಬ ವ್ಯಕ್ತಿ ಕೈಗೆ ಒಂದು ರೂಪಾಯಿ ಕೊಟ್ಟರೆ ಆ ಹಣ ಮಾರುಕಟ್ಟೆಯಲ್ಲಿ ಕನಿಷ್ಠ ಐದು ಬಾರಿ ಮರು ಚಲಾವಣೆಯಾಗುತ್ತದೆ. ಈ ಮೂಲಕ ಐದರಷ್ಟು ಆರ್ಥಿಕತೆಯನ್ನು ಸೃಷ್ಟಿಸುತ್ತದೆ. ಪರಿಣಾಮ ಆರ್ಥಿಕತೆಯೂ ವೃದ್ಧಿಸುತ್ತದೆ. ಬೇಡಿಕೆ ಜಾಸ್ತಿಯಾದಾಗ ಉತ್ಪಾದನಾ ವಲಯಕ್ಕೂ ಅನುಕೂಲವಾಗುತ್ತದೆ. ಉತ್ಪಾದನಾ ವಲಯವನ್ನು ಬಲಪಡಿಸಿ ಬೇಡಿಕೆ ಇಲ್ಲದೆ ಹೋದರೆ ಆರ್ಥಿಕ ಅಭಿವೃದ್ಧಿಯೂ ಕುಂಠಿತಗೊಳ್ಳುತ್ತದೆ. ಅಸಲಿಗೆ ಬೇಡಿಕೆ ಇಲ್ಲದೆ ಹೂಡಿಕೆ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಸಮಾಜದ ಕೆಳ ಹಂತದಲ್ಲಿರುವವರು, ಬಡವರಿಗೆ ನೀಡುವ ಸಬ್ಸಿಡಿ ಅವರ ಉಳಿತಾಯ ಖಾತೆಯಲ್ಲಿ ಜಮೆಯಾಗುವುದಿಲ್ಲ. ಬದಲಾಗಿ ನಾವು ನೀಡುವ ಪ್ರತಿಯೊಂದು ರೂಪಾಯಿಯೂ ಪುನಃ ಮಾರುಕಟ್ಟೆಗೆ ಹಿಂತಿರುಗುತ್ತದೆ.

> **ಹಿಮಾಚಲ ಪ್ರದೇಶದಲ್ಲಿ ಸಬ್ಸಿಡಿಗಳನ್ನು ನೀಡುವುದರಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಶಾಸಕರ ವೇತನವನ್ನು ಕಡಿತಗೊಳಿಸಲಾಗಿದೆ. ಸರ್ಕಾರಿ ನೌಕರರ ವೇತನ ಕಂತಿನಲ್ಲಿ ನೀಡಲಾಗುತ್ತಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಸಬ್ಸಿಡಿ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ.**
> ■ **ಸುರೇಶ್ ಕುಮಾರ್, ಬಿಜೆಪಿ ಶಾಸಕ**

ಆ ಮೂಲಕ ಆರ್ಥಿಕತೆ ಮತ್ತಷ್ಟು ಬೆಳೆಯುತ್ತದೆ. ಇದು ನೂರಾರು ವರ್ಷಗಳ ಇತಿಹಾಸವಿರುವ ಜಾನ್ ಮೇನಾರ್ಡ್ ಕೇನ್ಸ್ ಪ್ರತಿಪಾದಿಸಿದ ಆರ್ಥಿಕತೆ.


ಯಾವ್ಯಾವ ದೇಶಗಳು ಆರ್ಥಿವಾಗಿ ಹಿಂದುಳಿದ್ದವೋ ಆ ಎಲ್ಲಾ ಈ ದೇಶಗಳು ಈ ಸಿದ್ಧಾಂತವನ್ನೇ ಅಳವಡಿಸಿಕೊಂಡು ಬೇಡಿಕಾ ವಲಯದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಮೂಲಕ ಆರ್ಥಿಕ ಹಿಂಜರಿತ ದಿಂದ ಪ್ರಗತಿಯ ಪಥದತ್ತ ಹೆಜ್ಜೆ ಇಟ್ಟಿವೆ. ಹೀಗಾಗಿ ಸಬ್ಸಿಡಿ ಎಂಬ ವಿಚಾರವನ್ನು ತುಚ್ಛಗೊಳಿಸುವುದು ಮತ್ತು ಅಪರಾಧೀ ಕರಿಸುವುದನ್ನು ನಿಲ್ಲಿಸಿ ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ತಲಾ ಆದಾಯದಲ್ಲಿ ಹಾಗೂ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರಲು ಸಬ್ಸಿಡಿಗಳೇ ಕಾರಣ. ಕೇಂದ್ರ ಸರ್ಕಾರ ಇತ್ತೀಚೆಗೆ ಜಿಎಸ್‌ಟಿ ತೆರಿಗೆಯನ್ನು ಸರಳೀಕರಣಗೊಳಿಸಿದಾಗ ಇತರೆ ಎಲ್ಲಾ ರಾಜ್ಯಗಳಿಗೂ ಹೋಲಿಸಿದರೆ ಕರ್ನಾಟಕದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹ ಅಷ್ಟೇನೂ ಕೊರತೆಯಾಗಿಲ್ಲ. ಗ್ಯಾರಂಟಿ ಯೋಜನೆಗಳು ಅಷ್ಟರ ಮಟ್ಟಿಗೆ ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿವೆ ಎಂದು ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

2028ಕ್ಕೆ ನನ್ನ ಶಕ್ತಿ ತೋರಿಸುತ್ತೇನೆ

• **ವಿಧಾನಸಭೆ:** ರೇವಣ್ಣ ಮುಗಿದೇ ಹೋದ ಅಂದ್ಕೊಂಡಿದ್ದಾರೆ. 2028ಕ್ಕೆ ನನ್ನ ಶಕ್ತಿ ಏನೆಂಬುದನ್ನು ತೋರಿಸುತ್ತೇನೆ ಎಂದು ಜೆಡಿಎಸ್‌ನ ಹಿರಿಯ ಸದಸ್ಯ ಎಚ್.ಡಿ.ರೇವಣ್ಣ ಸವಾಲು ಹಾಕಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿದ ಅವರು, ದೇವೇಗೌಡರ ಕುಟುಂಬ ಪಾಪದ ಕೆಲಸ ಮಾಡಿಲ್ಲ. 2028ರ



ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಮೇಲೆ ರಾಜಕೀಯ ದ್ವೇಷ ಹೆಚ್ಚಾಗಿದೆ ಎಂದು ಆರೋಪಿಸಿದರು. ಪ್ರತಿಪಕ್ಷಗಳನ್ನು ಉದ್ದೇಶಪೂರ್ವಕವಾಗಿ ದಮನ ಮಾಡಲಾಗುತ್ತಿದೆ. ನೀವೇ ನಮಗೆ ದಾರಿ ತೋರಿದ್ದೀರಿ. ಯಾವುದೇ ಆಧಾರವಿಲ್ಲದೆ ನನ್ನ ಮೇಲೆ ಎಫ್‌ಐಆರ್ ಹಾಕಲಾಯಿತು. ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಲು ನನ್ನ ಒಂದು ಫೋಟೋ ಇತ್ತಾ? ಆಡಿಯೋ ಇತ್ತಾ? ಬೆಂಗಳೂರಿನಲ್ಲಿ ಎಫ್‌ಐಆರ್ ಹಾಕಿಸಿದರು. ಗೃಹ ಸಚಿವರು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಹಾಸನ ಜಿಲ್ಲೆಯಲ್ಲಿ ಇರುವುದು ಎರಡೇ ಪಕ್ಷ. ಒಂದು ದೇವೇಗೌಡರದ್ದು ಮತ್ತು ಅವರ ವಿರೋಧಿಗಳ ಪಕ್ಷ ಎಂದರು.

ಆರು ಬಾರಿ ಶಾಸಕನಾಗಿ ಮೂವತ್ತು ವರ್ಷಗಳಿಂದ ರಾಜಕೀಯ ಜೀವನದಲ್ಲಿದ್ದೇನೆ. ಏನಾದರೂ ಮಾಡಿ ರೇವಣ್ಣ ಅವರನ್ನು ಮುಗಿಸಬೇಕೆಂಬ ಹುನ್ನಾರ ಮಾಡಲಾಗುತ್ತಿದೆ. ಇನ್ನೂ 10 ಕೇಸುಗಳನ್ನು ಹಾಕಲಿ ಎದುರಿಸುತ್ತೇನೆ. ನಮಗೂ ಎಲ್ಲವೂ ಗೊತ್ತಿದೆ, ಮುಂದೆ ನಾವು ಅಧಿಕಾರಕ್ಕೆ ಬಂದಾಗ ಏನು ಮಾಡಬೇಕೆಂದು ತೋರಿಸಿಕೊಡುತ್ತಿದ್ದಾರೆ. ಹಾಸನದಲ್ಲಿ ರೇವಣ್ಣ ನಾಲ್ಕೈದು ಶಾಸಕರನ್ನು ಗೆಲ್ಲಿಸುತ್ತಾನೆಂದು ನನ್ನ ವಿರುದ್ಧ ಪಿತೂರಿ ನಡೆಯಿತು ಎಂದು ಅವರು ದೂರಿದರು.

ಕಂದಾಯ ಸಚಿವರು ಬಹಳ ಪ್ರಾಮಾಣಿಕರು, ಅವರ ಬಗ್ಗೆ ಮಾತಾಡುವುದಿಲ್ಲ. ಕುಮಾರಸ್ವಾಮಿ ಅವರಿಗೆ 40 ವರ್ಷಗಳ ಅನುಭವವಿದೆ. ಅವರು ಏನೋ ಒತ್ತುವರಿ ಮಾಡಿದ್ದಾರೆಂದು ಅವರ ಮೇಲೆ ಪ್ರಕರಣ ದಾಖಲಿಸಿದರು. ಆದರ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನೂ ರಚಿಸಲಾಯಿತು. ಈಗ ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಲಾಗುತ್ತಿದ್ದು, ಕಂದಾಯ ಇಲಾಖೆಯಲ್ಲಿ ಲೂಟಿಯಾಗುತ್ತಿದೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಅಮಾನತ್ತು ಆದ ಅಧಿಕಾರಿಗಳನ್ನೇ ಹಾಸನ ಜಿಲ್ಲೆಗೆ ವರ್ಗಾಯಿಸಲಾಗುತ್ತಿದ್ದು, ಇದರಲ್ಲಿ ಸರ್ಕಾರವೂ ಶಾಮೀಲಾಗಿದೆಯೇ ಎಂಬ ಸಂಶಯವಿದೆ ಎಂದು ಟೀಕಿಸಿದರು.

ಏಕತೆಯಿಂದ ಎದುರಿಸಿ

ಪುಟ 1 ➔ **ಭದ್ರತೆ ಬಲಪಡಿಸಿದ ಸರ್ಕಾರ:** ಆಂತರಿಕ ಭದ್ರತೆಯ ದೃಷ್ಟಿಯಿಂದಲೂ ಸರ್ಕಾರ ಎಚ್ಚರಿಕೆಯಿಂದಿದೆ ಎಂದು ಮೋದಿ ಹೇಳಿದರು. ಕರಾವಳಿ, ಗಡಿಭಾಗ, ಸೈಬರ್ ಹಾಗೂ ತಂತ್ರಜ್ಞಾನ ಮೂಲಸೌಕರ್ಯಗಳ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಲಾಗಿದೆ. ತಪ್ಪು ಮಾಹಿತಿ ಹರಡುವಿಕೆ, ಕಾಳಸಂತೆಯಲ್ಲಿ ಸಂಗ್ರಹಣೆ ಮುಂತಾದ ಚಟುವಟಿಕೆಗಳನ್ನು ತಡೆಯಲು ಕಠಿಣ ಕ್ರಮ ಅಗತ್ಯ ಎಂದರು.

ಸಾಕಷ್ಟು ಆಹಾರ ಧಾನ್ಯ ಸಂಗ್ರಹ: ಸಂಘರ್ಷದಿಂದ ಕೃಷಿ ಕ್ಷೇತ್ರಕ್ಕೂ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಆದರೆ ದೇಶದಲ್ಲಿ ಸಾಕಷ್ಟು ಆಹಾರ ಧಾನ್ಯ ಸಂಗ್ರಹವಿರುವುದರಿಂದ ಆತಂಕ ಬೇಡ ಎಂದು ಭರವಸೆ ನೀಡಿದರು. ಖಾರಿಫ್ ಬಿತ್ತನೆ ಸುಗಮವಾಗಿ ನಡೆಯಲು ಅಗತ್ಯ ಗೊಬ್ಬರ ವ್ಯವಸ್ಥೆ ಮಾಡಲಾಗಿದೆ. ಹಿಂದೆ ಕೂಡ ಜಾಗತಿಕ ಸಂಕಷ್ಟಗಳು ರೈತರ ಮೇಲೆ ಪರಿಣಾಮ ಬೀರದಂತೆ ಸರ್ಕಾರ ಕ್ರಮ ತೆಗೆದುಕೊಂಡಿತ್ತು ಎಂದರು.

ಎಲ್ಲಾ ರಾಷ್ಟ್ರಗಳಿಗೂ ಸವಾಲು

ಪಶ್ಚಿಮ ಏಷ್ಯಾ ಸಂಘರ್ಷವು ಜಾಗತಿಕ ಆರ್ಥಿಕತೆಯ ಮೇಲೆ ತೀವ್ರ ಪರಿಣಾಮ ಬೀರಿದೆ ಎಂದು ಪ್ರಧಾನಿ ಒಪ್ಪಿಕೊಂಡರು. ಇಂಧನವು ಆರ್ಥಿಕತೆಯ ಬೆನ್ನೆಲುಬಾಗಿರುವುದರಿಂದ ಈ ಸಂಕಷ್ಟ ಎಲ್ಲ ದೇಶಗಳಿಗೂ ಸವಾಲಾಗಿದೆ ಎಂದು ಹೇಳಿದರು. ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದೆ. ಪ್ರತಿ ದಿನ ಸಭೆ ನಡೆಸುವ ವಿದೇಶಾಂಗ ಸಚಿವಾಲಯ ಸಮಿತಿ ಮೂಲಕ ಆಮದು–ರಫ್ತು ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಹೇಳಿದರು.

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ₹5 ಕೋಟಿ ವಂಚನೆ

ಪುಟ 1 ➔ ಅಷ್ಟಕ್ಕೇ ನಿಲ್ಲದ ಖದೀಮರು, ಸಿಬಿಐ ಅಧಿಕಾರಿಗಳಂತೆ ವೇಷ ಧರಿಸಿ ವಿಡಿಯೋ ಕಾಲ್ ಮಾಡುವ ಮೂಲಕ ವೃದ್ಧನನ್ನು ಡಿಜಿಟಲ್ ಅರೆಸ್ಟ್ ಭೀತಿಯಲ್ಲಿ ಇರಿಸಿದ್ದರು. ನಕಲಿ ಎಫ್‌ಐಆರ್ ಪ್ರತಿಯನ್ನು ಕಳುಹಿಸಿ ಪೂರ್ಣವಾಗಿ ನಂಬಿಸಿದ್ದರು. ಪ್ರಕರಣದಿಂದ ಪಾರು ಮಾಡುವುದಾಗಿ ನಂಬಿಸಿದ ವಂಚಕರು, ಜ.17ರಿಂದ ಫೆ.23ರ ಅವಧಿಯಲ್ಲಿ ಹಂತ ಹಂತವಾಗಿ ಒಟ್ಟು 4.91 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ. ವೃದ್ಧನ ತಮ್ಮ ಜೀವನದ ಉಳಿತಾಯವನ್ನೆಲ್ಲಾ ಕಳೆದುಕೊಂಡರೂ ವಂಚಕರ ಹಸಿವು ನೀಗಿರಲಿಲ್ಲ. ಮತ್ತೆ ಹಣಕ್ಕಾಗಿ ಬೇಡಿಕೆ ಇಟ್ಟಾಗ ಅನುಮಾನಗೊಂಡು ಕೂಡಲೇ ಪೊಲೀಸರ ಮೊರೆ ಹೋಗಿದ್ದಾರೆ.

ಸೈಬರ್ ಪೊಲೀಸರ ಎಚ್ಚರಿಕೆ: ಈ ಸಂಬಂಧ ಸೆಂಟ್ರಲ್ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ತೀವ್ರಗೊಂಡಿದೆ. ಯಾವುದೇ ಸರ್ಕಾರಿ ಅಥವಾ ತನಿಖಾ ಸಂಸ್ಥೆಗಳು ವಿಡಿಯೋ ಕಾಲ್ ಮೂಲಕ ಯಾರನ್ನೂ ಬಂಧಿಸುವುದಿಲ್ಲ ಅಥವಾ ಹಣಕ್ಕೆ ಬೇಡಿಕೆ ಇಡುವುದಿಲ್ಲ. ಇಂತಹ ಕರೆಗಳು ಬಂದರೆ ಸಾರ್ವಜನಿಕರು ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಬದುಕಿರುವವನಿಗೆ ಮರಣ ಪತ್ರ!

ಪುಟ 1 ➔ ಅರ್ಜಿದಾರ ಬಾಷಾ ಪರ ವಕೀಲ ಓ.ಅಶ್ವಿನಿ ಅವರು ಅರ್ಜಿದಾರರು ಜೀವಂತವಾಗಿ ಬದುಕಿದ್ದರೂ ಮರಣ ಪ್ರಮಾಣ ಪತ್ರ ನೀಡಲಾಗಿದೆ. ಅರ್ಜಿದಾರರು ಬದುಕಿದ್ದಾರೆ ಅವರ ಪಾನ್, ಆಧಾರ್ ಕಾರ್ಡ್ ಎಲ್ಲವೂ ಇದೆ ಎಂದು ಜಿಬಿಎ ಆಸ್ಪತ್ರೆಗೆ ತಿಳಿಸಿದೆ. ಆಧಾರ್ ಕಾರ್ಡ್ ಅನ್ನು ಪಡಿತರ ಚೀಟಿಗೆ ಸಂಪರ್ಕಿಸಲಾಗಿದೆ.

ಕಠಿಣ ಕ್ರಮದ ಎಚ್ಚರಿಕೆ: ಆಗ ಪೀಠವು ಜನನ ಮತ್ತು ಮರಣಗಳ ನೋಂದಣಾಧಿಕಾರಿ ಅವರು ಬುಧವಾರದೊಳಗೆ ಮರಣ ಪ್ರಮಾಣಪತ್ರ ರದ್ದುಪಡಿಸಿರುವ ಹಿಂಬರಹ ಸಲ್ಲಿಸಬೇಕು. ಇಲ್ಲವಾದಲ್ಲಿ ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು. ಮರಣ ಪ್ರಮಾಣ ಪತ್ರ ನೀಡಿರುವುದನ್ನು ರದ್ದುಪಡಿಸುವಂತೆ ಕಳೆದ ವರ್ಷ ಆದೇಶಿಸಲಾಗಿದೆ. ಇದನ್ನು ಪಾಲಿಸದೇ ಇರುವುದರಿಂದ ದಂಡ ಏಕೆ ವಿಧಿಸಬಾರದು ಎಂದು ಸರ್ಕಾರವನ್ನು ಪ್ರಶ್ನಿಸಿತು. ಸರ್ಕಾರದ ಪರ ವಕೀಲ ಆದಿತ್ಯ ಅವರು ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯವು, ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ನೀಡಲಾಗಿರುವ ಮರಣ ಪ್ರಮಾಣ ಪತ್ರವನ್ನು ಹಿಂಪಡೆಯದೇ ಇರುವುದರಿಂದ ಅವರು ಅನಿವಾರ್ಯವಾಗಿ ನ್ಯಾಯಾಲಯದ ಕದತಟ್ಟುವಂತಾಗಿದೆ.

ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

ಪುಟ 1 ➔ ಅಮೆರಿಕ ಅಧಿಕಾರಿಗಳು ಮಾತ್ರ ಮಾತುಕತೆಗಳ ಮೂಲಕ ಪ್ರಗತಿ ಸಾಧಿಸುವ ಆಶಯ ವ್ಯಕ್ತಪಡಿಸಿದ್ದಾರೆ.

ಪ್ರಾದೇಶಿಕ ಮೂಲಸೌಕರ್ಯಗಳಿಗೆ ಬೆದರಿಕೆ: ಹಾರ್ಮುಜ್ ಜಲಸಂಧಿಯ ಮೂಲಕ ಅಂತಾರಾಷ್ಟ್ರೀಯ ಹಡಗು ಸಂಚಾರವನ್ನು ಪುನರಾರಂಭಿಸದಿದ್ದರೆ ಇರಾನ್‌ನ ವಿದ್ಯುತ್ ಜಾಲವನ್ನು ಧ್ವಂಸಗೊಳಿಸುವುದಾಗಿ ಅಮೆರಿಕ ಎಚ್ಚರಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಕಲಿಬಾಫ್, ಅಮೆರಿಕದ ನೆಲೆಗಳಿಗೆ ಅಥವಾ ಪಾಶ್ಚಿಮಾತ್ಯ ಹಿತಾಸಕ್ತಿಗಳಿಗೆ ವಿದ್ಯುತ್ ಮತ್ತು ನೀರು ಸರಬರಾಜು ಮಾಡುವ ಮಧ್ಯಪ್ರಾಚ್ಯದ ಎಲ್ಲಾ ಸ್ಥಾವರಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಯಾವುದೇ ಭೂಸೇನಾ ದಾಳಿ ನಡೆದರೆ ಪರ್ಷಿಯನ್ ಕೊಲ್ಲಿಯ ಎಲ್ಲಾ ಪ್ರವೇಶ ಮಾರ್ಗಗಳಲ್ಲಿ ಮೈನ್‌ಗಳನ್ನು(ಸುರಂಗ ಸ್ಫೋಟಕ) ಅಳವಡಿಸುವುದಾಗಿ ಇರಾನ್ ರಕ್ಷಣಾ ಮಂಡಳಿ ಎಚ್ಚರಿಕೆ ನೀಡಿದೆ.

ವಿಧಾನಸೌಧಕ್ಕೆ ಬೀಟೆ ಬಾಗಿಲು

ಪುಟ 1 ➔ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಈ ಬಾಗಿಲನ್ನು ಅಳವಡಿಸಿದೆ. ಬಾಗಿಲಿನಲ್ಲಿ ಮೈಸೂರು ಅರಮನೆಯಲ್ಲಿನ ಬಾಗಿಲುಗಳ ಮಾದರಿಯ ಕುಸುರಿ ಕೆತ್ತನೆ, ದ್ವಾರದ ಮೇಲ್ಭಾಗದಲ್ಲಿ ರಾಜ್ಯ ಲಾಂಛನ ಗಂಡಭೇರುಂಡ, ರಾಷ್ಟ್ರದ ಅಶೋಕ ಸ್ತಂಭ ಕಲಾಕೃತಿಗಳ ಕೆತ್ತನೆ ಮಾಡಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

1,448 ಸಿಲಿಂಡರ್ ವಶ

• **ಬೆಂಗಳೂರು:** ಗೃಹಬಳಕೆ ಸಿಲಿಂಡರ್ ಅನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿದ 1,448 ಸಿಲಿಂಡರ್‌ಗಳನ್ನು ವಶಪಡಿಸಲಾಗಿದೆ ಎಂದು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಬಾಗಲಕೋಟೆ 64, ಶಿವಮೊಗ್ಗ 7, ಯಾದಗಿರಿ 100, ದಾವಣಗೆರೆ 68 ಸೇರಿದಂತೆ ರಾಜ್ಯದಲ್ಲಿ 1,448 ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಿದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955 ರ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿ ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಇದುವರೆವಿಗೂ ಗೃಹಬಳಕೆಯ 30,51,045 ಸಿಲಿಂಡರ್, ವಾಣಿಜ್ಯ ಬಳಕೆಯ 67,641 ರಷ್ಟು ಸಿಲಿಂಡರ್‌ಗಳನ್ನು ವಿತರಣೆಯಾಗಿರುತ್ತದೆ. ಆಟೋ ಎಲ್‌ಪಿಜಿ ಸುಮಾರು 40,083 ವಾಣಿಜ್ಯ ಸಿಲಿಂಡರ್‌ಗಳಷ್ಟು (761.655 ಮೆ.ಟನ್.ಗಳು) ವಿತರಣೆಯಾಗಿರುತ್ತದೆ.

ಕಾಡಾನೆ ದಾಳಿ ತಡೆಗೆ ಬ್ಯಾರಿಕೇಡ್ ನಿರ್ಮಾಣ

• **ವಿಧಾನಪರಿಷತ್:** ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಂಚಿನ ರೈತರ ಜಮೀನುಗಳಿಗೆ ಕಾಡಾನೆ ಸೇರಿದಂತೆ ಕಾಡು ಪ್ರಾಣಿಗಳು ಬಾರದಂತೆ ತಡೆಯಲು ರೈಲ್ವೆ ಹಳಿಗಳ ಬ್ಯಾರಿಕೇಡ್ ನಿರ್ಮಾಣ, ಸೋಲಾರ್ ತಂತಿಬೇಲಿ, ಆನೆ ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಸದಸ್ಯ ಎಸ್.ರವಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಬೆಂಗಳೂರು ದಕ್ಷಿಣ ಜಿಲ್ಲೆಗೆ ಮಾನವ – ಕಾಡಾನೆ ಸಂಘರ್ಷ ತಡೆಗಟ್ಟಲು 52.5 ಕಿ.ಮೀ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಅವಶ್ಯವಿದ್ದು, 89.35 ಕೋಟಿ ರೂ. ಅನುದಾನದ ಅಗತ್ಯವಿದೆ. ಆರ್ಥಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಹಂತ–ಹಂತವಾಗಿ ಅನುಷ್ಠಾನ ಮಾಡುತ್ತೇವೆ ಎಂದು ಹೇಳಿದರು.

ಬನ್ನೇರುಘಟ್ಟ ವಿಭಾಗ ವ್ಯಾಪ್ತಿಯಲ್ಲಿ ಆನೆ ಕಾರ್ಯಪಡೆ 24/7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ ಎಂದರು.

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ

• **ವಿಧಾನಸಭೆ:** ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಬೇಕು ಎಂದು ಬಿಜೆಪಿ ಶಾಸಕ ಉಮಾನಾಥ್ ಎ. ಕೋಟ್ಯಾನ್ ಆಗ್ರಹಿಸಿದರು.

ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ತಲಪಾಡಿಯಿಂದ ಕಾರವಾರದವರೆಗಿನ ಕಡಲ ಕಿನಾರೆಯಲ್ಲಿ ವರ್ತುಲ ರಸ್ತೆ ನಿರ್ಮಿಸಲು ಕನಿಷ್ಠ 1500 ಕೋಟಿ ರೂ. ಅನುದಾನ ಒದಗಿಸಬೇಕು. ಕರಾವಳಿಯ ಕಡಲ ಕಿನಾರೆಯ ಬದಿಯಲ್ಲಿ ರಸ್ತೆ ನಿರ್ಮಿಸುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ. ಮಾತ್ರವಲ್ಲ, ಕಡಲ ಕೊರೆತ ತಡೆಗಟ್ಟಲು ಸಹಾಯವಾಗಲಿದೆ. ಹೀಗಾಗಿ, ಸರ್ಕಾರ ಈ ವಿಷಯದ ಬಗ್ಗೆ ಆಸಕ್ತಿ ವಹಿಸಬೇಕು ಎಂದು ಮನವಿ ಮಾಡಿದರು.

ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಬೇಕು. ಅಲ್ಲದೆ, ಕರಾವಳಿ ಪ್ರದೇಶದಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಮೂಲಸೌಲಭ್ಯ ಅಭಿವೃದ್ಧಿಪಡಿಸಬೇಕು. ಕಂದಾಯ ಇಲಾಖೆಯಲ್ಲಿ ನಕ್ಷೆ ಪಡೆದುಕೊಳ್ಳಲು ಉಂಟಾಗಿ ರುವ ತಾಂತ್ರಿಕ ಸಮಸ್ಯೆಯನ್ನು ಕೂಡಲೇ ಪರಿಹರಿಸ ಬೇಕು ಎಂದು ಒತ್ತಾಯಿಸಿದರು. ವಿತ್ತ ಸಚಿವರೂ ಆಗಿರುವ ಸಿಎಂ ಅವರು ಸಾಲ ಮಾಡಿ ಬಜೆಟ್ ಮಂಡನೆ ಮಾಡಿದ್ದಾರೆ. ಆದರೆ, ಶಾಸಕರಾಗಿ ಎರಡುವರೆ ವರ್ಷ ಕಳೆದರೂ 2 ಕೋಟಿ ರೂ.ಅನುದಾನ ನೀಡಿದ್ದನ್ನು ಬಿಟ್ಟರೆ ಮೂಲ ಸೌಕರ್ಯಕ್ಕೆ ಒಂದು ನಯಾಪೈಸೆ ಹಣ ಬಿಡುಗಡೆ ಮಾಡಲಿಲ್ಲ ಎಂದರು.

ಬಿಜೆಪಿ ಚರಂತಿಮಠ, ಕೈನಿಂದ ಉಮೇಶ್ ಅಖಾಡಕ್ಕೆ

ಪುಟ 1 ➔ ತೆರೆದ ವಾಹನದಲ್ಲಿ ನಡೆದ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಭ್ಯರ್ಥಿ ವೀರಣ್ಣ ಚರಂತಿಮಠ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಸಂಸದ ಗೋವಿಂದ ಕಾರಜೋಳ, ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣ ಸಾ. ಭಾಂಡಗೆ, ಶಾಸಕ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಸಚಿವ ಬಿ. ಶ್ರೀರಾಮುಲು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ವಿಪ ಸದಸ್ಯ ಪಿ.ಎಚ್.ಪೂಜಾರ ಮತ್ತಿತರರು ಸಾಗಿದರೆ, ಉರಿ ಬಿಸಿಲನ್ನು ಲೆಕ್ಕಿಸದೇ ಬಿಜೆಪಿ ಕಾರ್ಯಕರ್ತರು, ಮುಖಂಡರು ಕೈಯಲ್ಲಿ ಬಿಜೆಪಿ ಬಾವುಟ ಹಿಡಿದು ಘೋಷಣೆ ಕೂಗುತ್ತ ಸಾಗಿ ಪಕ್ಷದ ಶಕ್ತಿ ಪ್ರದರ್ಶನ ನಡೆಸಿದರು. ನಂತರ ನಡೆದ ಸಭೆಯಲ್ಲಿ ಮಾತನಾಡಿದ ಬಿ.ವೈ.ವಿಜಯೇಂದ್ರ ಸಹಿತ ಪ್ರಮುಖರು ಅಭಿವೃದ್ಧಿಯೇ ನಮಗೆ ಮುಖ್ಯ ಆಧಾರ. ಅದನ್ನೇ ಆಧಾರವಾಗಿಟ್ಟುಕೊಂಡು ಮತ ಕೇಳುತ್ತೇವೆ. ನಿಶ್ಚಿತವಾಗಿ ಈ ಕ್ಷೇತ್ರದಲ್ಲಿ ನಾವು ಗೆಲುವು ಸಾಧಿಸಿ ತೋರಿಸುವುದಾಗಿ ಸವಾಲು ಹಾಕಿದರು.

ಕಾಂಗ್ರೆಸ್‌ನಿಂದ ಉಮೇಶ ಮೇಟಿ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಅಭ್ಯರ್ಥಿ ಉಮೇಶ ಮೇಟಿಯವರು ಸೋಮವಾರ ಭಾರೀ ಮೆರವಣಿಗೆಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಕೈಯಲ್ಲಿ ಕಾಂಗ್ರೆಸ್ ಭಾವುಟ ಹಿಡಿದುಕೊಂಡು ಪಕ್ಷದ ಅಭ್ಯರ್ಥಿ ಉಮೇಶ ಮೇಟಿಯವರ ಪರವಾಗಿ ಜೈ ಘೋಷಣೆಗಳನ್ನು ಕೂಗಿದರು.



ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಇದ್ದರು.

> **ಕಾಂಗ್ರೆಸ್ ಸರ್ಕಾರದ ಆಡಳಿತ ಬಗ್ಗೆ ಜನರಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಕುಟುಂಬ ರಾಜಕಾರಣದ ವಿರುದ್ಧ ಜನ ತೀರ್ಪು ನೀಡಲಿದ್ದು, ಬಾಗಲಕೋಟೆಯಲ್ಲಿ ಮೇಟಿಯವರ ಮಗ, ದಾವಣಗೆರೆಯಲ್ಲಿ ಮೊಮ್ಮಗನನ್ನು ಮನೆಗೆ ಕಳುಹಿಸುವ ಕಾಲ ಬಂದಿದೆ.**
> ■ **ಪ್ರಲ್ಹಾದ ಜೋಶಿ, ಕೇಂದ್ರ ಸಚಿವ**

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ

ಪುಟ 1 ➔ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಮಾಜಿ ಸಚಿವ ಡಾ.ಜಿ.ಎಂ. ಸಿದ್ದೇಶ್ವರ್, ಮಾಜಿ ಸಚಿವ ರೇಣುಕಾಚಾರ್ಯ, ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಜತೆಗೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಟಿ. ದಾಸಕರಿಯಪ್ಪ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್‌ನಿಂದ ಸಮರ್ಥ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ. ಶಾಮನೂರು ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವತಃ ಸಮರ್ಥ ಅವರ ಕೈ ಹಿಡಿದು ಕಚೇರಿಗೆ ಕರೆತಂದು ಬೆಂಬಲ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್,



ಶಾಸಕ ಪ್ರದೀಪ್ ಈಶ್ವರ್ ಸಾಥ್ ನೀಡಿದರು. ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್. ಆಂಜನೇಯ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಇನ್ನಿತರರಿದ್ದರು.

ಸಾದಿಕ್ ಪೈಲ್ವಾನ್ ಬಂಡಾಯ ಉಮೇದುವಾರಿಕೆ

ಕಾಂಗ್ರೆಸ್ ಟಿಕೆಟ್ ತಪ್ಪಿದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಮುಖಂಡ ಸಾದಿಕ್ ಪೈಲ್ವಾನ್ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮೂಲಕ ಕಾಂಗ್ರೆಸ್ಸಿಗೆ ಬಂಡಾಯದ ಆಘಾತ ನೀಡಿದ್ದಾರೆ. ಅದ್ಧೂರಿ ಮೆರವಣಿಗೆಯೊಂದಿಗೆ ಮಹಾ ನಗರ ಪಾಲಿಕೆಯ ಚುನಾವಣಾ ಕಚೇರಿಗೆ ಆಗಮಿಸಿದ ಸಾದಿಕ್ ಪೈಲ್ವಾನ್‌ಗೆ ಮುಸ್ಲಿಂ ಸಮುದಾಯದ ಮಹಿಳೆಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲ ತೋರಿದರು.

ತಡೆಯಾಜ್ಞೆ ತೆರವಿನ ನಂತರ ಕಾನೂನು ಕ್ರಮ: ಸುಧಾಕರ್



ವಿಧಾನಪರಿಷತ್: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕಾಮಗಾರಿಗಳಲ್ಲಿ ಉಪ ಕುಲಪತಿ ಅವರು ಅಕ್ರಮ ನಡೆಸಿರುವುದು ಸಾಬೀತಾದರೆ ನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಭೋಜೆಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ನಡೆದ ಕಾಮಗಾರಿಯ ಟೆಂಡರ್‌ಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದ್ದು, ಸರ್ಕಾರವೇ ಇದನ್ನು ರಕ್ಷಣೆ ಮಾಡಲಿದೆ ಎಂದರು.

ಕಾಮಗಾರಿ ಅಕ್ರಮ ನಡೆದ ಸಂಬಂಧ ಕುಲಪತಿಯೊಬ್ಬರು ನೇರವಾಗಿ ರಾಜ್ಯಪಾಲರಿಗೆ ದೂರು ಕೊಡಲಾಗಿತ್ತು. ಇದಕ್ಕೆ ಏಕ ನ್ಯಾಯಮೂರ್ತಿ ಸಮಿತಿಯನ್ನು ಮಾಡಿದ್ದರು. ಅದರ ವರದಿ ನೇರವಾಗಿ ಅವರಿಗೆ ಸಲ್ಲಿಕೆಯಾಗಿದೆ. ಈ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ. ನ್ಯಾಯಾಲಯದಲ್ಲಿ ಇದಕ್ಕೆ ತಡೆ ಹಿಡಲಾಗಿದೆ. ಪ್ರಕರಣ ನ್ಯಾಯಾಲಯದ ಹಂತದಲ್ಲಿರುವುದರಿಂದ ಹೆಚ್ಚು ಮಾತನಾಡಲಾಗುವುದಿಲ್ಲ ಎಂದರು.

ಇನ್ನೂ ಕುಲಪತಿಗಳನ್ನು ಬೇಕಂತಲೇ ಬದಲಾವಣೆ ಮಾಡಲಾಗಿದೆ. ಕೋಟ್ಯಂತರ ಭ್ರಷ್ಟಾಚಾರ ನಡೆದಿದೆ. ಹಳೆಯ ಕಟ್ಟಡ ಕಾಮಗಾರಿ ಬಗ್ಗೆ ಏಕೆ ಮಾತನಾಡಿಲ್ಲ. ಕುಲಪತಿಗಳನ್ನು ವರ್ಗಾವಣೆ ಮಾಡಿ, ಇನ್ನೊಬ್ಬರನ್ನು ತರಲಾಗಿದೆ ಎಂಬ ಭೋಜೆಗೌಡ ಆರೋಪಕ್ಕೆ ಉತ್ತರಿಸಿದ ಸಚಿವರು, ಕುಲಪತಿಗಳನ್ನು ನಾವು ಕಳುಹಿಸಿಲ್ಲ. ಅವರ ಸಮಯ 4 ವರ್ಷ ಅವಧಿ ಮುಗಿದಿತ್ತು. ಅದಕ್ಕೆ ಬದಲಾವಣೆಯಾಗಿದ್ದಾರೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ತೆರವಾದರೆ ಕ್ರಮ ವಹಿಸುತ್ತೇವೆ ಎಂದು ವಿವರಿಸಿದರು. ಇದಕ್ಕೆ ಮಧ್ಯ ಪ್ರವೇಶಿಸಿದ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಇದು ಭ್ರಷ್ಟಾಚಾರದ ವಿಚಾರವಾಗಿದೆ ಎಂದು ಹೇಳಿದರು.

ಕಲಾಪ ವೀಕ್ಷಣೆ



ವಿಧಾನಪರಿಷತ್‌ನಲ್ಲಿ ಸೋಮವಾರ ಶಾಲಾ - ಕಾಲೇಜು ವಿದ್ಯಾರ್ಥಿಗಳು ಕಲಾಪ ವೀಕ್ಷಿಸಿದರು.

ಬಜೆಟ್ ಭೀಷ್ಮ ಮಲಗಿದ್ದಾರೆ: ಪ್ರತಾಪ್ ಸಿಂಹ ನಾಯಕ



ವಿಧಾನಪರಿಷತ್: 17 ಬಾರಿ ಬಜೆಟ್ ಮಂಡಿಸಿರುವ ಬಜೆಟ್ ಭೀಷ್ಮ ಮಲಗಿದ್ದಾರೆ. ಅವರಿಗೆ ತಮ್ಮವರೇ ಬಾಣ ಬಿಟ್ಟಿದ್ದಾರೆ. ದಾಖಲೆಯ ಬಜೆಟ್ ಮಂಡಿಸಿರುವ ಖ್ಯಾತಿ ಪಡೆದಿರುವ ಸಿದ್ದರಾಮಯ್ಯ, ತಮ್ಮದೇ ಸರ್ಕಾರ ಮಾಡಿರುವ ಸಾಲದಿಂದಾಗಿ ಇತಿಹಾಸದಲ್ಲಿ ಸಾಲದ ರಾಮಯ್ಯ ಆಗಿ ಉಳಿಯಲಿದ್ದಾರೆ ಎಂದು ಬಿಜೆಪಿ ಸದಸ್ಯ ಪ್ರತಾಪ್ ಸಿಂಹ್ ನಾಯಕ ಲೇವಡಿ ಮಾಡಿದರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಇದು ನನ್ನ ಅವಧಿಯ ಕೊನೆಯ ಭಾಷಣ ಆರಂಭಿಸಿದ ಅವರು ಮಾತಿನುದ್ದಕ್ಕೂ ಕಾಂಗ್ರೆಸ್ ಸರ್ಕಾರದ ವೈಫಲ್ಯ ಹಾಗೂ ಬಜೆಟ್‌ನಲ್ಲಿರುವ ಲೋಪಗಳನ್ನು ಪ್ರಸ್ತಾಪಿಸಿದರು. 17 ಬಾರಿ ಬಜೆಟ್ ಮಂಡಿಸುವ ಸುದೈವ ಮತ್ಯಾರಿಗೂ ಸಿಗುವುದಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ಸಿಗರು ಬಜೆಟ್ ಭೀಷ್ಮ ಎಂದು ಹಾಡಿಹೊಗಳುತ್ತಿದ್ದಾರೆ. ಆದರೆ, ಬಜೆಟ್ ಮಂಡನೆ ವೇಳೆ ಕಾಂಗ್ರೆಸ್‌ನ ಯಾವೊಬ್ಬ ಶಾಸಕನೂ ಮೇಜು ಕುಟ್ಟಲಿಲ್ಲ. ಇದು ಬಜೆಟ್ ವಾಸ್ತವತೆ ಎಂದು ಟೀಕಿಸಿದರು.

ಸಿದ್ಧರಾಮಯ್ಯ ಅವರು ಉತ್ತರಾಯಣ ಕಾಲ ಅಂದರೆ ಹೈಕಮಾಂಡ್ ಆದೇಶವನ್ನು ಕಾಯುತ್ತಾ ಮಲಗಿದ್ದಾರೆ, ಅವರಿಗೆ ಬಿಟ್ಟ ಬಾಣಗಳು ವಿರೋಧಿಗಳು ಅಲ್ಲ. ಸ್ವಪಕ್ಷದವರೇ. ಸಿಎಂ ಕುರ್ಚಿ ಕಿತ್ತಾಟದ ಮಾತುಗಳು ಸ್ವಪಕ್ಷೀಯರಿಂದಲೇ ಬಂದಿವೆ. ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಳೆದ ಡಿಸೆಂಬರ್‌ನಲ್ಲಿ ವಿಶೇಷ ಅಧಿವೇಶನ ನಡೆಸಿ, ಸ್ವಪಕ್ಷದಲ್ಲಿ ಉಂಟಾಗಿದ್ದ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕುವುದೇ ಆಗಿತ್ತು. ಆದರೆ, ಹೈಕಮಾಂಡ್ ಸೂಚನೆಯಂತೆ ವಿಬಿ ಜಿ ರಾಮ್ ಜಿ ಕುರಿತ ಅಧಿವೇಶನ ಎಂಬುದು ಹೇಳಿಕೊಂಡಿತು. ಸರ್ಕಾರಕ್ಕೆ ಅಂತಹ ಕಾಳಜಿಯಿದ್ದರೆ, ಮೋದಿ ಅವರ 10 ವರ್ಷ ಹಾಗೂ ಮನಮೋಹನ ಸಿಂಗ್ ಅವರ 10 ವರ್ಷದ ಆಡಳಿತದ ಬಗ್ಗೆ ಚರ್ಚೆಗೆ ಈಗ 3 ದಿನ ಅಧಿವೇಶನ ಕರೆಯಲಿ ಚರ್ಚಿಸೋಣ ಎಂದು ಸವಾಲು ಹಾಕಿದರು.

ಕಿರುಸುದ್ದಿ

ಸದನದಲ್ಲಿ ಸಂತಾಪ ಸೂಚನಾ ನಿರ್ಣಯ ಮಂಡನೆ

ವಿಧಾನಪರಿಷತ್ತು: ಅಕಾಲಿಕವಾಗಿ ನಿಧನರಾದ ವಿಧಾನ ಪರಿಷತ್‌ನ ಮಾಜಿ ಶಾಸಕ ಕರಿಯಣ್ಣ ಎಚ್. ಸಂಗಟಿ ಅವರಿಗೆ ಸಂತಾಪ ವ್ಯಕ್ತಪಡಿಸಿ, ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನದಲ್ಲಿ ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಜ್ಜನ ರಾಜಕಾರಣಕ್ಕೆ ಉದಾಹರಣೆಯಾಗಿದ್ದ ಕರಿಯಣ್ಣ ಸಂಗಟಿ ಅವರನ್ನು ನಾನು ಆತ್ಯಂತ ಹತ್ತಿರದಿಂದ ಅವರನ್ನು ಬಲ್ಲೆ. ಅವರನ್ನು ರಾಗಿ ಮುದ್ದೆ ಎಂದೇ ತಮಾಷೆ ಮಾಡುತ್ತಿದ್ದೆವು. ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಸಂತಾಪ ವ್ಯಕ್ತಪಡಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಹಿರಿಯ ನಾಯಕರಾಗಿದ್ದ ಕರಿಯಣ್ಣ ಸಂಗಟಿ ಅವರ ಅಕಾಲಿಕ ನಿಧನರಿಂದ ನಾವು ಓರ್ವ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ. ಯುವ ಕಾಂಗ್ರೆಸ್ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅನನ್ಯ ಎಂದು ಸ್ಮರಿಸಿದರು.

ವನ್ಯಜೀವಿ ಸಂರಕ್ಷಣಾ ಕಾಯ್ದೆ ತಿದ್ದುಪಡಿ ಅಧಿಕಾರ ಸರ್ಕಾರಕ್ಕಿಲ್ಲ



ವಿಧಾನಪರಿಷತ್: ವನ್ಯ ಜೀವಿಗಳ ಅಂಗಾಂಗ, ಟ್ರೋಫಿಗಳನ್ನು ಸರ್ಕಾರಕ್ಕೆ ನೀಡಬೇಕು ಎಂಬುದು ಕೇಂದ್ರ ಸರ್ಕಾರದ ಕಾನೂನು. ಈ ಬಗ್ಗೆ ಉಲ್ಲೇಖಿಸುವ ವನ್ಯಜೀವಿ (ಸಂರಕ್ಷಣಾ) ಕಾಯ್ದೆ-1972 ಗೆ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ರಾಜ್ಯಕ್ಕೆ ಅಧಿಕಾರವಿಲ್ಲ ಎಂದು ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ ಹೇಳಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕುಶಾಲಪ್ಪ ಎಂ. ಪಿ. (ಸುಜಾ) ಕೇಳಿದ ಪ್ರಶ್ನೆಗೆ ಉತ್ತರಿ ಸಿದ ಅವರು, ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿರುವ ವಸ್ತುಗಳನ್ನು ಅವರ ಬಳಿಯೇ ಇಟ್ಟುಕೊಳ್ಳಲು ಅವಕಾಶ ನೀಡುವಂತೆ ಈಗಾಗಲೇ 2 ಬಾರಿ ಕೇಂದ್ರ ಸಚಿವರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ. ಮತ್ತೊಮ್ಮೆ ಕೇಂದ್ರ ಸಚಿವರನ್ನು ಭೇಟಿಯಾಗಲು ನಾನು ಸಿದ್ದನಿದ್ದೇನೆ ಎಂದರು. ರಾಜ್ಯ ಸರ್ಕಾರವು ವನ್ಯ ಜೀವಿಗಳ ವಸ್ತುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ 2024ರ ಜ.10 ರಂದು ಆದೇಶಿಸಿ, 90 ದಿನಗಳ ಕಾಲವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 192 ಜನರು, 705 ವನ್ಯ ಜೀವಿ ಅಂಗಾಂಗ, ಟ್ರೋಫಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ ಎಂದರು.

ಅರಣ್ಯ ಭೂಮಿ ಮಂಜೂರು ಮಾಡಲ್ಲ: ಈಶ್ವರ ಖಂಡ್ರೆ

ವಿಧಾನಪರಿಷತ್: ರಾಜ್ಯದಲ್ಲಿ ಮೀಸಲು ಅರಣ್ಯ, ಪರಿಭಾವಿತ ಅರಣ್ಯ ಸೇರಿದಂತೆ ಯಾವುದೇ ಅರಣ್ಯ ಭೂಮಿಯನ್ನು ಸಾರ್ವಜನಿಕರಿಗೆ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟ ಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಅಕ್ರಮ ಸಕ್ರಮದ ಅಡಿ ನಮೂನೆ 50, 53, 57ರಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿಗಳನ್ನು ಸಲ್ಲಿಸಲಾಗಿದೆ. ಆದರೆ ಕಂದಾಯ ಭೂಮಿ ಮಂಜೂರು ಮಾಡಲು ಬರುತ್ತದೆಯೇ ಹೊರತು ಅರಣ್ಯ ಭೂಮಿಯನ್ನು ಅಲ್ಲ ಎಂದು ತಿಳಿಸಿದರು.

ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ: ಕೆ.ಎಚ್.ಮುನಿಯಪ್ಪ

ವಾಣಿಜ್ಯ ಸಿಲಿಂಡರ್ ಪೂರೈಕೆ



ಬೆಂಗಳೂರು: ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ ಎಂದು ಆಹಾರ ಇಲಾಖೆಯ ಸಚಿವ ಕೆ.ಎಚ್.ಮುನಿಯಪ್ಪ ಸೂಚಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ. ಇದರ ಜೊತೆಗೆ, ಹೋಟೆಲ್ ಹಾಗೂ ಸಂಬಂಧಿತ ಉದ್ಯಮಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕನಿಷ್ಠ ಶೇ.50 ಪೂರೈಕೆ ಅಗತ್ಯವಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಪ್ರತಿದಿನ ಸುಮಾರು 7000 ಕಮರ್ಷಿಯಲ್ ಸಿಲಿಂಡರ್‌ಗಳನ್ನು ಹಂಚಿಕೆ ಮಾಡಲಾಗುತ್ತಿತ್ತು, ಪ್ರಸ್ತುತ ಆಟೋ ಗ್ಯಾಸ್ ಸೇರಿದಂತೆ ವಿವಿಧ ವಲಯಗಳನ್ನು ಸೇರಿಸಿ ಒಟ್ಟು 15,000-16,000 ಸಿಲಿಂಡರ್‌ಗಳ ವಿತರಣೆ ಮಾಡಲು ನಿರ್ಧರಿಸಿದ್ದು, ಇದರಲ್ಲಿ ಹೋಟೆಲ್, ರೆಸ್ಟೋರೆಂಟ್, ಡಾಬಾ, ಕ್ಯಾಂಟೀನ್, ಫುಡ್ ಪ್ರೊಸೆಸಿಂಗ್ ಘಟಕಗಳು ಸೇರಿದಂತೆ ವಿವಿಧ ಸೇವಾ ವಲಯಗಳಿಗೆ ಪ್ರತಿ ದಿನ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆಯನ್ನು ಮಾಡಲಾಗುವುದು. ಅಂದರೆ ಪ್ರಸ್ತುತ ಬಳಕೆ ಮಾಡುತ್ತಿರುವ ವಾಣಿಜ್ಯ ಸಿಲಿಂಡರ್‌ನಲ್ಲಿ ಶೇ.20ರಷ್ಟು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ಇದರೊಂದಿಗೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಔಷಧ ಉದ್ಯಮಕ್ಕೆ, ಮೀನುಗಾರಿಕೆ, ರೇಷ್ಮೇ ಹಾಗೂ ಇತರೆ ಅಗತ್ಯ ವಲಯಗಳಿಗೆ ಪ್ರತ್ಯೇಕ ಆದ್ಯತೆ ನೀಡಿ ಸುಮಾರು 500 ಸಿಲಿಂಡರ್‌ಗಳನ್ನು ಮೀಸಲಿಡಲಾಗಿದೆ ಎಂದು ತಿಳಿಸಿದರು.

ಕಳ್ಳಸಂತೆ ನಿಯಂತ್ರಣ ಹಾಗೂ ಪಾರದರ್ಶಕತೆ ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ವಾಣಿಜ್ಯ ಅಡಿಗೆ ಅನಿಲ ಬಳಕೆದಾರರು ಒಂದು ವಾರದೊಳಗೆ ಗೈಲ್‌ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಇದರಿಂದ ಮುಂದಿನ ದಿನಗಳಲ್ಲಿ ಪೈಪ್ಲೈನ್ ಆಧಾರಿತ ಗ್ಯಾಸ್ ಪೂರೈಕೆಯನ್ನು ವಿಸ್ತರಿಸಲು ಸಹಾಯಕವಾಗಲಿದೆ ಎಂದರು. ವಾಣಿಜ್ಯ ಅಡಿಗೆ ಅನಿಲ ಬಳಸುವವರು ಒಂದು ವಾರದೊಳಗೆ ಕಡ್ಡಾಯವಾಗಿ ಗೇಲ್‌ನಲ್ಲಿ ನೊಂದಣಿ ಮಾಡಿಸಬೇಕು ಎಂದು ಮುನಿಯಪ್ಪ ತಿಳಿಸಿದರು.

25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್

ನಗರದ ಭಾಗದಲ್ಲಿ ಸುಮಾರು 25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳಲ್ಲಿ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಯಾಕೆಂದರೆ ಗ್ರಾಮೀಣ ಭಾಗದಲ್ಲಿ ಜನರಿಗೆ ಸೌದೆ ಸೇರಿದಂತೆ ಇತರ ವ್ಯವಸ್ಥೆಗಳಿರುತ್ತದೆ. ಹಾಗಾಗಿ ಗ್ರಾಮೀಣ ಭಾಗದವರಿಗೆ 45 ದಿನಕ್ಕೊಮ್ಮೆ ಅನಿಲ ಪೂರೈಕೆ ಮಾಡಲಾಗುತ್ತದೆ. ಅದಕ್ಕೂ ಮೊದಲು ಗ್ರಾಹಕರು ಅನಿಲದ ಅಂಗಡಿಗೆ ಬರುವ ಅಗತ್ಯವಿಲ್ಲ. ಫೋನ್ ಮಾಡಿದರೆ ಮನೆ ಬಾಗಿಲಿಗೆ ಸಿಲಿಂಡರ್ ಬರಲಿದೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಉದ್ಯೋಗ ಸೃಷ್ಟಿಗೆ ಒತ್ತು



ವಿಧಾನಪರಿಷತ್: ಹೊಸ ಹುದ್ದೆಗಳ ಸೃಷ್ಟಿ ಸೇರಿದಂತೆ ಹಲವಾರು ಸಮಸ್ಯೆಗಳ ಮಧ್ಯೆಯೂ ವೃಂದ, ನೇಮಕಾತಿ ಪರಿಷ್ಕರಣೆಗೆ ಸ್ವರೂಪ ನೀಡಲು ಪ್ರಯತ್ನಿಸಲಾಗುತ್ತಿದೆ. ಇನ್ನೆರಡು ತಿಂಗಳಲ್ಲಿ, ಕಳೆದ 40 ವರ್ಷಗಳಲ್ಲಿ ಆಗದಿರುವ ಕೆಲಸ ಪೂರ್ಣಗೊಳ್ಳಲಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಎಸ್.ವಿ. ಸಂಕನೂರ ಅವರ ಆರೋಗ್ಯ ಇಲಾಖೆಯ ವೈದ್ಯರ ಸಮಸ್ಯೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಬಿ, ಸಿ, ಡಿ ದರ್ಜೆಯ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಮಾಡ ಲಾಗಿದ್ದು, ಎ ವರ್ಗದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದು ಕಳೆದ 13 ವರ್ಷಗಳಿಂದ ಬಾಕಿ ಉಳಿದಿತ್ತು. ಗ್ರಾಮೀಣ ಸೇವೆ ಸಲ್ಲಿಸಿದ ಕುರಿತು ವಿವರಗಳು ಸೇರಿದಂತೆ ಹಲವಾರು ಮಾಹಿತಿಗಳ ಕೊರತೆ ಇತ್ತು. ಅವನ್ನೆಲ್ಲ ಸರಿ ಪಡಿಸಿ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಪಟ್ಟಿಯಲ್ಲಿ ದೋಷ ಇದ್ದರೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದರು.

ವರ್ಗಾವಣೆಗೆ ಕೌನ್ಸಿಲಿಂಗ್ ಮುಖಾಂತರ ಆಗಬೇಕು ಎಂದು ದಶಕಗಳ ಹಿಂದೆಯೆ ಕಾನೂನು ಮಾಡಿದ್ದರೂ ಜಾರಿಗೆ ಬಂದಿರಲಿಲ್ಲ. ಮೆಡಿಕಲ್, ಶಿಫಾರಸ್ಸಿನ ಮುಂತಾದ ರೀತಿಯಲ್ಲಿ ವರ್ಗಾವಣೆ ನಡೆಯುತ್ತಿತ್ತು. ಕಳೆದ ವರ್ಷ 5,700 ವರ್ಗಾವಣೆ ಕೌನ್ಸಿಲಿಂಗ್ ಮೂಲಕ ಮಾಡಿದ್ದೇವೆ. ಈಗ ಮತ್ತೆ ಮುಂದಿನ ತಿಂಗಳು ಕೌನ್ಸಿಲಿಂಗ್ ಮೂಲಕವೇ ಪಾರದರ್ಶಕವಾಗಿ ಮಾಡು ತ್ತೇವೆ. ನಮ್ಮ ಇಲಾಖೆ ಪಾರದರ್ಶಕವಾಗಿ ಮುನ್ನಡೆಸಲು ಎಲ್ಲ ರೀತಿಯಲ್ಲಿ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಔಷಧ ಖರೀದಿಗೆ ಟೆಂಡರ್ ಕರೆಯಲು ನಿರ್ಧಾರ

ರಾಜ್ಯದ ಔಷಧ ಉಗ್ರಾಣಗಳಲ್ಲಿ ಔಷಧಗಳ ಕೊರತೆ ನೀಗಿಸಲು 2026-27ನೇ ಸಾಲಿನ ಔಷಧಿಗಳ ಖರೀದಿ ಸಂಬಂಧ ಬರುವ ಜೂನ್‌ನಲ್ಲಿ ಟೆಂಡರ್ ಕರೆಯಲು ನಿರ್ಧರಿಸ ಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯೆ ಹೇಮಲತಾ ನಾಯಕ್ ಅವರು ಕಲ್ಯಾಣ ಕರ್ನಾಟಕ ಭಾಗದ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಉಂಟಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ವರ್ಷ 534 ಔಷಧಿಗಳ ಖರೀದಿ ಪೈಕಿ 234 ಔಷಧಿಗಳ ಟೆಂಡರ್ ಕರೆದು ಖರೀದಿಸಿ, ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಮಾಡಲಾಗಿದೆ ಎಂದರು.

ಅಂತಿಮ ಕಂತಿನ ಬೇಡಿಕೆಗೆ ಸದನ ಒಪ್ಪಿಗೆ



ವಿಧಾನಸಭೆ: ರಾಜ್ಯ ಸರ್ಕಾರ 2025-26ನೇ ಸಾಲಿನ ಪೂರಕ ಅಂದಾಜುಗಳ ವರದಿ ಮಂಡಿಸಿದ್ದು, ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳಿಗೆ ಒಟ್ಟು 14,767.89 ಕೋಟಿ ರೂ.ಗಳ ಪೂರಕ ಅಂದಾಜು ಮಂಡಿಸಲಾಗಿದೆ.

2025-26ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸದನದಲ್ಲಿ ಮಂಡಿಸಿದರು.

2026ನೇ ಮಾರ್ಚ್ 31ರ ಅಂತ್ಯದೊಳಗಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ 467.7 ಕೋಟಿ ರೂ.ಗಳನ್ನು ಮಂಜೂರು ಮಾಡಬೇಕು. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ 12.5 ಕೋಟಿ ರೂ., ಆರ್ಥಿಕ ಇಲಾಖೆಗೆ 32 ಕೋಟಿ ರೂ., ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಗೆ 50.10 ಕೋಟಿ ರೂ., ಒಳಾಡಳಿತ ಮತ್ತು ಸಾರಿಗೆ ಇಲಾಖೆಗಳಿಗೆ 1,024.61 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 415.66 ಕೋಟಿ ರೂ.ಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ ಇಲಾಖೆಗೆ 300.38 ಕೋಟಿ ರೂ., ಸಹಕಾರ ಇಲಾಖೆಗೆ 120.32 ಕೋಟಿ ರೂ., ಸಮಾಜ ಕಲ್ಯಾಣ ಇಲಾಖೆಗೆ 699.77 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 106.7 ಕೋಟಿ ರೂ., ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಇಲಾಖೆಗೆ 207 ಕೋಟಿ ರೂ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ 113 ಕೋಟಿ ರೂ., ಕಂದಾಯ ಇಲಾಖೆಗೆ 860.97 ಕೋಟಿ ರೂ., ಶಿಕ್ಷಣ ಇಲಾಖೆಗೆ 68 ಕೋಟಿ ರೂ., ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ 753.97 ಕೋಟಿ ರೂ., ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗೆ 975.5 ಕೋಟಿ ರೂ., ಲೋಕೋಪಯೋಗಿ ಇಲಾಖೆಗೆ 533 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವ ಸಲ್ಲಿಸಲಾಗಿದೆ.

ಅನುದಾನಕ್ಕೆ ಬೇಡಿಕೆ

ನೀರಾವರಿ ಇಲಾಖೆಗೆ 1,227 ಕೋಟಿ ರೂ., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 431.27 ಕೋಟಿ ರೂ., ಕಾರ್ಮಿಕ ಮತ್ತು ಕೌಶಲಾಭಿವೃದ್ಧಿ ಇಲಾಖೆಗಳಿಗೆ 537 ಕೋಟಿ ರೂ., ಇಂಧನ ಇಲಾಖೆಗೆ 5764 ಕೋಟಿ ರೂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 31 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವಿಸಲಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ

ವಿಧಾನಪರಿಷತ್ತು: ರಾಜ್ಯದಲ್ಲಿ 16 ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳನ್ನು, ಮೊಬೈಲ್ ಬಳಕೆಯನ್ನು ನಿಷೇಧಿಸಲು ಸರ್ಕಾರ ಮಹತ್ವದ ಹೆಜ್ಜೆ ಇರಿಸಿದ್ದು, ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪಾಲಕರ ಸಲಹೆ ಆಧರಿಸಿ ಶೀಘ್ರ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಬಿಜೆಪಿ ಸದಸ್ಯ ಪ್ರತಾಪ್ ಸಿಂಹ್ ನಾಯಕ ಹಾಗೂ ಜೆಡಿಎಸ್ ಸದಸ್ಯ ಟಿ.ಎನ್. ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚೆಗೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳು ಒಂದೊಳ್ಳೆ ರೀತಿಯಲ್ಲಿ ಉಪಯೋಗವಾದರೆ ಸರಿ. ಆದರೆ ಹೆಚ್ಚಾಗಿ ಇದು ದುರಂತವಾಗಿ ಕಾಡುತ್ತಿದೆ. ಅಲ್ಲದೇ, ಮಕ್ಕಳ ಮನಸ್ಸಿನ ಮೇಲೆ ಘೋರ ಪರಿಣಾಮ ಬೀರುತ್ತಿದೆ ಎಂದರು.

ಇಡೀ ಭಾರತ ದೇಶದಲ್ಲಿ ಮೊದಲು ನಮ್ಮ ರಾಜ್ಯದಲ್ಲಿ ಈ ಕ್ರಮಕೈಗೊಳ್ಳಲಾಗಿದೆ. ಈ ಯೋಜನೆಯ ಮೂಲಕ ಹದಿಹರೆಯದ ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಮಾನಸಿಕ ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯವನ್ನು ವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಮುಂಬರುವ ಅಧಿವೇಶನದಲ್ಲಿಯೂ ಈ ವಿಷಯವಾಗಿ ಸಮಗ್ರ ಚರ್ಚೆ ನಡೆಯಬೇಕು. ಈ ಸಂಬಂಧ ಪಾಲಕರ ಜತೆಯೂ ಸಮಾಲೋಚನೆ ನಡೆಸಿದರು.

ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಇಲ್ಲ: ಸಚಿವ



ವಿಧಾನಪರಿಷತ್: ತಾಲೂಕು ಮಟ್ಟದಲ್ಲಿ ಮಕ್ಕಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಸಿಂಧನೂರಿನಲ್ಲಿ ಪರೀಕ್ಷಾ ಮೌಲ್ಯಮಾಪನ ಕೇಂದ್ರ ತೆರೆ ಯುವಂತೆ ಬಸನ ಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗುಣಮಟ್ಟ ಮತ್ತು ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ತಾಲೂಕು ಮಟ್ಟದಲ್ಲಿ ಮೌಲ್ಯಮಾಪನ ಕೇಂದ್ರ ತೆರೆಯುವ ಚಿಂತನೆ ಇಲ್ಲ ಎಂದು ತಿಳಿಸಿದರು. ತಾಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಮೌಲ್ಯಮಾಪಕರಿಗೆ ತೆರಳಲು ಸಮಸ್ಯೆ ಆಗುತ್ತದೆ. ಸಾರಿಗೆ ಖರ್ಚು ಹೆಚ್ಚಾಗುತ್ತದೆ. ಸಮಯ ವ್ಯರ್ಥವಾಗುತ್ತದೆ ಎಂಬ ಕಾರಣಕ್ಕೆ ಮೌಲ್ಯಮಾಪನವನ್ನು ತಾಲೂಕು ಕೇಂದ್ರಗಳಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ನಮಗೆ ಗೌಪ್ಯತೆ ಕಾಪಾಡಿ ಕೊಳ್ಳುವುದು ಮುಖ್ಯ ಎಂದು ಸಚಿವರು ಸ್ಪಷ್ಟಪಡಿಸಿದರು.

ಬುಡಕಟ್ಟು ಜನರಿಗೆ ಹಕ್ಕುಪತ್ರ ಸಿಕ್ಕಿಲ್ಲ: ಶಾಂತಾರಾಮ್

ವಿಧಾನಪರಿಷತ್: ಆಳುವ ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಬುಡಕಟ್ಟು ಜನರು ಬಲವಂತವೋ, ಆಮೀಷಕ್ಕೊಳಗಾಗಿಯೋ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಪರಿಣಾಮ ಅವರು ತಮ್ಮ ಬುಡಕಟ್ಟು ಸಂಸ್ಕೃತಿಯಿಂದ ವಿಮುಖರನ್ನಾಗಿಸುವ ಪ್ರಯತ್ನಗಳು ನಿರಂತರವಾಗಿದ್ದು, ಸರ್ಕಾರ ಆದಕ್ಕೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ಸದಸ್ಯ ಶಾಂತಾರಾಮ್ ಬುಡ್ನ ಸಿದ್ದಿ ಒತ್ತಾಯಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ದೇಶ ಸ್ವತಂತ್ರಗೊಂಡು ದಶಕಗಳು ಕಳೆದರೂ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಾಯ್ದೆಯ ಅಡಿ ಹಕ್ಕು ಪತ್ರಗಳು ಸಿಕ್ಕಿಲ್ಲ. ಈ ಕಾಯ್ದೆಯ ಅಡಿ ಕೆಲವರಿಗೆ ಅರಣ್ಯ ಹಕ್ಕು ಸಿಕ್ಕಿದ್ದರೂ, ಅವರ ಹೆಸರಲ್ಲಿ ಪಹಣಿ ಬಂದಿಲ್ಲ. ಪರಿಣಾಮ ಗಂಗಾ ಕಲ್ಯಾಣ ಯೋಜನೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಸೂಕ್ತ ದಾಖಲೆಗಳಿಲ್ಲದ ಕಾರಣ ಪಕ್ಕಾ ಮನೆಗಳೂ ಸಿಗದೇ ಅವರು, ಇಂದಿಗೂ ಟಾರ್ಪಲಿನ್ ಟೆಂಟ್‌ಗಳಲ್ಲಿ ಜೀವನ ಸಾಗಿಸುವಂತಾಗಿದೆ ಎಂದರು.

ರಾಜ್ಯದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿಲ್ಲ | ಸರ್ಕಾರದ ವಿರುದ್ಧ ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕೆ

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬರುತ್ತಿಲ್ಲ



ವಿಧಾನಸಭೆ: ರಾಜ್ಯ ಸರ್ಕಾರದಲ್ಲಿ ಯೋಜನೆ, ಅನುದಾನ ಮತ್ತು ಅನುಷ್ಠಾನದ ನಡುವೆ ತಾಳಮೇಳವೇ ಬರುತ್ತಿಲ್ಲ. ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯವ್ಯಯ ಮಂಡಿಸಿದ್ದಾರೆ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕಿಸಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿ, ಆಯವ್ಯಯದಲ್ಲಿರುವ ಅಂಕಿ ಅಂಶಗಳ ಬಗ್ಗೆಯೇ ಅನುಮಾನ ವಿದೆ. ಮುಖ್ಯಮಂತ್ರಿಯವರು ಒಂದು ಲೆಕ್ಕ ಹೇಳಿದರೆ, ಮಾಧ್ಯಮದಲ್ಲಿ ಇನ್ನೊಂದು ಸಂಖ್ಯೆ ಬಂದಿದೆ. ಅದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನೀಡಿದ ಸ್ಪಷ್ಟೀಕರಣದಲ್ಲಿ ಬೇರೆಯದೇ ಸಂಖ್ಯೆಯಿದೆ. ಆದ್ದರಿಂದ ಈ ಅಂಕಿ ಅಂಶಗಳ ಬಗ್ಗೆ ಗೊಂದಲವಿದೆ ಎಂದರು.

ಆಯವ್ಯಯದಲ್ಲಿ 74,000 ಕೋಟಿ ರೂ.ಗಳನ್ನು ಬಂಡವಾಳ ವೆಚ್ಚಕ್ಕೆ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಅದೇ ರೀತಿ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಘೋಷಣೆ ಮಾಡಲಾಗಿದೆ. ಆದರೆ, ಅದಕ್ಕೆ ಅನುದಾನ ಮೀಸಲಿಟ್ಟಿಲ್ಲ. ಹೋರಾಟದ ದಿಕ್ಕು ತಪ್ಪಿಸುವುದಕ್ಕಾಗಿ ಈ ಭರವಸೆ ನೀಡಲಾಗಿದೆ. ಅನುದಾನ ನೀಡದ್ದನ್ನು ನೋಡಿದರೆ ನೇಮಕಾತಿ ಮಾಡುವುದರ ಬಗ್ಗೆ ಅನುಮಾನ ಬರುತ್ತಿದೆ. ಅದೇ ರೀತಿ ವೇತನ ಆಯೋಗದ ಶಿಫಾರಸ್ಸು ಒಪ್ಪುತ್ತೇವೆ ಎನ್ನುವವರು ಅದಕ್ಕೆ ಬೇಕಾಗಿರುವ 20,000 ಕೋಟಿ ರೂ.ಗಳನ್ನು ಎಲ್ಲಿ ಹೊಂದಾಣಿಕೆ ಮಾಡುತ್ತೀರಿ ಎಂದು ಹೇಳಿಲ್ಲ. ಕೇಂದ್ರದ ವಿಬಿ ಜಿ ರಾಮ್ ಜಿ ಯೋಜನೆಯನ್ನು ವಿರೋಧಿಸುವ ರಾಜ್ಯ ಸರ್ಕಾರ ಮನರೇಗಾ ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ ಎಂದು ಉಲ್ಲೇಖಿಸಿದರು.

ರಾಜ್ಯದಲ್ಲಿ ಸುಮಾರು 38,000 ಕೋಟಿ ರೂ. ಬಾಕಿ ಬಿಲ್ ಪಾವತಿಸಬೇಕಿದೆ. ಅದಕ್ಕೆ ಅನುದಾನ ಎಲ್ಲಿದೆ? ಎರಡು ತಿಂಗಳು ಬಿಟ್ಟು ಹೋಗಿರುವ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಎಲ್ಲಿ ಜೋಡಿಸುತ್ತೀರಿ ಎಂದು ತಿಳಿಸಿಲ್ಲ. ಮೇಲ್ನೋಟಕ್ಕೆ ಕಂಡುಬಂದಿರುವ ಹತ್ತಾರು ಯೋಜನೆಗಳಿಗೆ ಅನುದಾನ ಇಟ್ಟಿಲ್ಲ. ಆದ್ದರಿಂದ ನೀವು ಇಂದಿರಾ ಕಿಟ್‌ನ ಜೊತೆಗೆ ಎಲ್ಲರಿಗೂ ಒಂದೊಂದು ಚೊಂಬು ಕೂಡ ನೀಡಿ ಎಂದು ಲೇವಡಿ ಮಾಡಿದರು.

ಸಾಮಾನ್ಯ ಜನರಿಗೆ ಆಯವ್ಯಯ ಎಂದರೆ ಸಾಲ, ಲೆಕ್ಕಾಚಾರ ಇದನ್ನೆಲ್ಲ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಈ ಸರ್ಕಾರದ ಯೋಜನೆಗಳೇನು? ಅದಕ್ಕೆಷ್ಟು ಅನುದಾನ ಇಟ್ಟಿದ್ದಾರೆ? ಅದರಲ್ಲಿ ಎಷ್ಟು ಅನುಷ್ಠಾನವಾಗಿದೆ ಇದನ್ನಷ್ಟೇ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ, ಇದಕ್ಕೆ ಒಂದಕ್ಕೊಂದು ಸಂಬಂಧ ಇಲ್ಲದ ವಾತಾವರಣ ಸೃಷ್ಟಿ ಮಾಡಿದೆ. ಸರ್ಕಾರ ತರಾತುರಿಯಲ್ಲಿ ಜಾತಿಗಣತಿ ಮಾಡಲು ಆಯೋಗ ರಚಿಸಿ ಒಂದು ತಿಂಗಳೊಳಗೆ ಸಮೀಕ್ಷೆ ಮುಗಿಸಿ ವರದಿ ನೀಡಲು ಸೂಚಿಸಿತು. ಏಳು ತಿಂಗಳಾದರೂ ವರದಿ ನೀಡಿಲ್ಲ. ಈ ಬಗ್ಗೆ ಆಯವ್ಯಯ ದಲ್ಲಿ ಅಥವಾ ರಾಜ್ಯಪಾಲರ ಭಾಷಣದಲ್ಲಿ ಒಂದು ಸಾಲೂ ಉಲ್ಲೇಖಿಸಿಲ್ಲ. 500 ಕೋಟಿ ರೂ. ವೆಚ್ಚ ಮಾಡಿ ಮಾಡಿದ ಸಮೀಕ್ಷೆಯ ವರದಿಯನ್ನು ಮತ್ತೆ 50 ರೂ. ಹೆಚ್ಚುವರಿ ಇಟ್ಟು ಕಸದ ಬುಟ್ಟಿಗೆ ಸೇರಿಸಲಾಗುತ್ತದೆ ಎಂದು ಟೀಕಿಸಿದರು.

ವ್ಯಾಕರಣತಜ್ಞ ಸಿದ್ದರಾಮಯ್ಯ

ಸಿದ್ದರಾಮಯ್ಯ ಅವರನ್ನು ಆರ್ಥಿಕ ತಜ್ಞ ಎಂದು ಕರೆಯಲಾಗುತ್ತದೆ. ಅವರನ್ನು ಆರ್ಥಿಕ ತಜ್ಞ ಎಂದು ಹೇಳುವ ಜೊತೆಗೆ ವ್ಯಾಕರಣ ತಜ್ಞ ಎಂದೂ ಕರೆಯಬಹುದು. ಯಾಕೆಂದರೆ ಈ ಬಾರಿ ಆಯವ್ಯಯದಲ್ಲಿ ಅವರು ಹೊಸ ಹೊಸ ಶಬ್ದಗಳನ್ನು ಉಲ್ಲೇಖಿಸಿದ್ದಾರೆ. ತೆರಿಗೆಯ ಟ್ರಸ್ಟಿ, ಟ್ರೋಟಿಂಗ್ ಎಕಾನಮಿ, 11ಜಿ, ಫಲಧಾರೆ, ಭೀಷ್ಮ ತತ್ತ್ವ, ಬೆಂಕಿಯನ್ನು ಬೆಳಕಾಗಿಸುವುದು ಎಂಬಿತ್ಯಾದಿ ಪದಗಳಿವೆ. ಮುಂದಿನ ಬಾರಿ ಆಯವ್ಯಯ ಮಂಡಿಸುವಾಗ ನಮಗೆ ಡಿಕ್ಷನರಿ ಕೊಟ್ಟುಬಿಡಿ ಎಂದು ಕಾಲೆಳೆದರು.

> ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತಿರಸ್ಕರಿಸಿರುವ ಸರ್ಕಾರ ರಾಜ್ಯ ಶಿಕ್ಷಣ ನೀತಿಯನ್ನು ತರುವುದಾಗಿ ಹೇಳಿ ಮೂರು ವರ್ಷಗಳಾದರೂ ಇನ್ನೂ ಜಾರಿಗೆ ತಂದಿಲ್ಲ. ರಾಜ್ಯದ ವಿದ್ಯಾರ್ಥಿಗಳು ಯಾವ ನೀತಿಯ ಆಧಾರದಲ್ಲಿ ಶಿಕ್ಷಣ ಪಡೆಯಬೇಕೆಂಬ ಸ್ಪಷ್ಟತೆ ಇಲ್ಲದಂತಾಗಿದೆ.
>
> ■ ಸುನೀಲ್ ಕುಮಾರ್, ಬಿಜೆಪಿ ಶಾಸಕ

ಜಾಹೀರಾತು ನೀತಿ ಮರು ಪರಾಮರ್ಶಿಸಲಿ

ವಿಧಾನಪರಿಷತ್: ಹೊಸ ಜಾಹೀರಾತು ನೀತಿಗೆ ಒಪ್ಪಿಗೆ ಸೂಚಿಸಿರುವ ಸಚಿವ ಸಂಪುಟ ನಿರ್ಣಯವನ್ನು ಮರು ಪರಿಶೀಲಿಸಬೇಕು ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಶಿವಕುಮಾರ್ ಕೆ. ಒತ್ತಾಯಿಸಿದರು. ಮೇಲ್ಮನೆಯಲ್ಲಿ ಆಯವ್ಯಯದ ಕುರಿತು ಮಾತನಾಡಿ, ಇಂದಿನ ದಿನಗಳಲ್ಲಿ ವಸ್ತು ನಿಷ್ಠ ಹಾಗೂ ಪ್ರಾಮಾಣಿಕವಾಗಿ ಮುದ್ರಣ ಮಾಧ್ಯಮಗಳ ನಿರ್ವಹಣೆ ಕಷ್ಟಕರ. ಹೀಗಾಗಿ ಸರ್ಕಾರ ರೂಪಿಸಿರುವ ಹೊಸ ಜಾಹೀರಾತು ನೀತಿಯಿಂದಾಗಿ ಸಮಾಜವನ್ನು ಜಾಗೃತಗೊಳಿಸುವಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಪತ್ರಿಕೆಗಳಿಗೆ ಸಮಸ್ಯೆಯಾಗುತ್ತದೆ. ಈ ಕುರಿತಂತೆ ಸರ್ಕಾರ ತನ್ನ ನಿರ್ಧಾರವನ್ನು ಮತ್ತೊಮ್ಮೆ ಪರಾಮರ್ಶಿಸಬೇಕು. ಹಿರಿಯ ಪತ್ರಕರ್ತರಿಗೆ ಮಾಶಾಸನಕ್ಕೆ ಅನೇಕ ನಿಬಂಧನೆಗಳನ್ನು ವಿಧಿಸಲಾಗಿದೆ. ಮಾಶಾಸನಕ್ಕೆ ಸ್ವಂತ ಮನೆ ಇರಬಾರದು ಎಂಬ ಷರತ್ತು ವಿಧಿಸಿದೆ. ಹಾಗಾದರೆ ಪತ್ರಕರ್ತರು ಜೋಪಡಿಯಲ್ಲಿರಬೇಕೆ? ಈ ಹಿಂದೆ ನೆಹರೂ, ಇಂದಿರಾ ಗಾಂಧೀ ಅವರ ಆಡಳಿತದಲ್ಲಿ ಅನೇಕ ಪತ್ರಕರ್ತರಿಗೆ ನವದೆಹಲಿಯಲ್ಲಿ ಮನೆ ನೀಡಲಾಗಿತ್ತು ಎಂದರು.

ಸಂಪಾದಕೀಯ

ಸುದೀರ್ಘ ಜನಸೇವಕ!

ನರೇಂದ್ರ ಮೋದಿಯವರು ತಮ್ಮ ಹಲವಾರು ದಾಖಲೆಗಳ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿದ್ದು, ಸುದೀರ್ಘ ಅವಧಿಗೆ ಸರಕಾರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ವಿನೂತನ ದಾಖಲೆಯೂ ಈಗ ಅವರದಾಗಿದೆ. ಮಾರ್ಚ್ 22ರ ಭಾನುವಾರದ ವೇಳೆಗೆ ಅವರು 8931 ದಿನಗಳ ಸುದೀರ್ಘ ಕಾಲ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ನಿರ್ವಹಿಸಿದ ಸಾಧನೆ ಮಾಡಿದ್ದು, ಇದು ಈ ಹಿಂದೆ ಸಿಕ್ಕಿಂನ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ 8930



ದಿನಗಳ ಕಾಲ ಅಧಿಕಾರದಲ್ಲಿದ್ದ ಸಾಧನೆಯನ್ನು ಮೀರಿದಂತಾಗಿದೆ. 2007ರ ಅಕ್ಟೋಬರ್ 21ರಂದು ಗುಜರಾತಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನರೇಂದ್ರ ಮೋದಿಯವರು, ಅಲ್ಲಿ 13 ವರ್ಷಗಳ ಕಾಲ ರಾಜ್ಯಭಾರ ನಡೆಸಿ, ಅಲ್ಲಿಂದ ಬಳಿಕ 2014ರ ಮೇ 26ರಂದು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. 2014, 2019 ಮತ್ತು 2024ರ ಮೂರೂ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿ ನಿರಂತರ ಮೂರು ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಹೆಗ್ಗಳಿಕೆಯೂ ಅವರದಾಗಿದೆ. ಲೋಕಸಭೆಯಲ್ಲಿ ಪೂರ್ಣ ಬಹುಮತ ಪಡೆದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ ಎಂಬ ಶ್ರೇಯಸ್ಸೂ ಮೋದಿಯವರದಾಗಿದೆ.

ಸರಕಾರವೊಂದು ಅಥವಾ ಸರಕಾರಿ ಮುಖ್ಯಸ್ಥರೊಬ್ಬರು ಅತ್ಯಲ್ಪಾವಧಿಯಲ್ಲೇ 'ಆಡಳಿತ ವಿರೋಧಿ ಅಲೆ' ಎದುರಿಸುವ ನಿದರ್ಶನಗಳು ಸಾಕಷ್ಟಿರುವಾಗ ಮೋದಿಯವರು ಇಷ್ಟೊಂದು ದೀರ್ಘ ಕಾಲ ಆಡಳಿತದಲ್ಲಿ ಮುಂದುವರಿದುಕೊಂಡು ಬಂದಿರುವುದು ಸಾಮಾನ್ಯ ಸಾಧನೆಯೇನಲ್ಲ. ಆರಂಭದಲ್ಲಿ ಗುಜರಾತಿನ ಜನರು ಹಾಗೂ ಈಗ ದೇಶದ ಜನರು ಮೋದಿಯವರ ಮೇಲಿಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ಇದು ಸಾಕ್ಷಿಯೆನ್ನಬಹುದು. ಮುಖಂಡನೊಬ್ಬ ಜನತೆಯ ಕಲ್ಯಾಣಕ್ಕೆ ಶ್ರಮಿಸದ ಹೊರತು ಹೀಗೆ ನಿರಂತರವಾಗಿ ಜನರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಅಂತಿರುವಾಗ ಮೋದಿಯವರು ಈಗಲೂ ಜನರ ವಿಶ್ವಾಸ ಉಳಿಸಿಕೊಂಡಿರಬೇಕಾದರೆ, ಅವರು ನೀಡಿದ ಸುಶಾಸನವೇ ಅದಕ್ಕೆ ಕಾರಣ. ಮೋದಿಯವರು ಅನುಷ್ಠಾನಿಸಿರುವ ಹಲವಾರು ಕಾರ್ಯಕ್ರಮಗಳು ದೇಶದ ಅಭಿವೃದ್ಧಿಗೆ ಕಾರಣವಾಗಿವೆ, ಜನರ ಜೀವನಮಟ್ಟವನ್ನು ಸುಧಾರಿಸಿವೆ, ಜನತೆಯ ಸಂಕಷ್ಟಗಳನ್ನು ನಿವಾರಿಸಿವೆ. ದೇಶದ ಹಲವಾರು ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆ ಮೋದಿಯವರದು.

ದೇಶೀಯವಾಗಿಯಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಮೋದಿಯವರು ಈಗ ಜನಪ್ರಿಯ ನಾಯಕರಾಗಿದ್ದಾರೆ. ಜಾಗತಿಕವಾಗಿ ಭಾರತಕ್ಕೆ ಒಂದು ಘನತೆ ತಂದುಕೊಟ್ಟ ಕೀರ್ತಿ ಮೋದಿಯವರಿಗೆ ಸಲ್ಲಬೇಕಾಗಿದೆ. ಯಾವುದೇ ದೇಶ, ಯಾವುದೇ ರಾಷ್ಟ್ರ ಮುಖಂಡ ಈಗ ಮೋದಿಯವರ ಮಾತಿಗೆ ಕಿವಿಗೊಡುವ, ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುವ ಪರಿಸ್ಥಿತಿಯೀಗ ಸೃಷ್ಟಿಯಾಗಿದೆ. ಒಟ್ಟಿನಲ್ಲಿ ಭಾರತವು ವಿಶ್ವಗುರುವಾಗುವ ನಿಟ್ಟಿನಲ್ಲಿ ಮೋದಿ ಕೊಡುಗೆ ಮಹತ್ವದ್ದಾಗಿದೆ.

ಎಲ್‌ಪಿಜಿಗೆ ಪರ್ಯಾಯ-ಗೋಬರ್‌ಗ್ಯಾಸ್

ಧರಣಿ ಮಂಡಲ
ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಕಾವಿಗೆ ಇಲ್ಲಿಯ ವಿರೋಧ ಪಕ್ಷದವರು ರಸ್ತೆಯಲ್ಲಿ ಸೌದೆ ಒಲೆ ಹಚ್ಚಿ ಚಹಾ ತಯಾರಿಸಿ ಕುಡಿಯುತ್ತಿದ್ದಾರೆ.ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಬಿದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ನಮ್ಮ ದೇಶಕ್ಕೆ ತೈಲೋತ್ಪನ್ನಗಳು ವಿದೇಶಗಳಿಂದಲೇ ಇಂದಿಗೂ ಪೂರೈಕೆ ಆಗಬೇಕು ಎನ್ನುವುದು ಇವರಿಗೆ ತಿಳಿಯದ ಸಂಗತಿಯೇನಲ್ಲ. ಭಾರತ ಇಂದಿಗೂ ತೈಲೋತ್ಪನ್ನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿಲ್ಲ. ಈಗ ಮಧ್ಯಪ್ರಾಚ್ಯವು ಯುದ್ಧದಿಂದ ಧಗಧಗಿಸುತ್ತಿರೋದು ಚಿಕ್ಕ ಮಕ್ಕಳಿಗೂ ತಿಳಿದ ವಿಚಾರ. ಯುದ್ಧದ ತೀವ್ರತೆ ಯುದ್ಧದಲ್ಲಿ ಪಾಲ್ಗೊಂಡ ದೇಶಗಳಷ್ಟೇ ಅಲ್ಲದೇ, 'ನಮಗೆ ಯುದ್ಧ ಬೇಡ ಬುದ್ಧ ಬೇಕು' ಎಂದು ತಟಸ್ಥವಾಗಿ ಉಳಿದುಕೊಂಡ ದೇಶಗಳನ್ನೂ ಸಹ ಬಿಟ್ಟಿಲ್ಲ. ತೈಲವನ್ನು ಉತ್ಪಾದಿಸುವ ದೇಶಗಳೇ ಯುದ್ಧದ ಹೊಡೆತಕ್ಕೆ ತತ್ತರಿಸುತ್ತಿವೆ. ಅರಬ್ ದೇಶಗಳಲ್ಲಿನ ಕೆಲವು ಪ್ರಮುಖ ತೈಲ ಸಂಸ್ಕರಣಾ ಘಟಕಗಳು ದಾಳಿಯಲ್ಲಿ ಧ್ವಂಸಗೊಂಡಿವೆ. ಇದರ ಪರಿಣಾಮ ರಫ್ತು ಮಾಡೋದು ಪಕ್ಕಕ್ಕಿರಲಿ ಅವರ ಬಳಕೆಗೂ ಪೆಟ್ರೋಲಿಯಂ ಉತ್ಪನ್ನಗಳು ಸಿಗೋದು ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಕಚ್ಚಾ ತೈಲವನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಭಾರತದಂತಹ ದೇಶಗಳ ಪರಿಸ್ಥಿತಿ ಬಿಗಡಾಯಿಸುವುದು ಸಹಜ. ಇಂತಹ ಪರಿಸ್ಥಿತಿಯಲ್ಲಿ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ರೀತಿಯ ತೈಲೋತ್ಪನ್ನಗಳಿಗೆ ದೇಶದಲ್ಲಿ ಅಭಾವವಾಗುವುದು ಸಾಮಾನ್ಯ. ಇಷ್ಟೆಲ್ಲಾ ತೊಂದರೆಗಳು ಎದುರಾಗಿದ್ದಾಗಿಯೂ ಕೇಂದ್ರ ಸರ್ಕಾರದ ಮುಂದಾಲೋಚನೆ ಹಾಗೂ ಕೈಗೊಂಡಿರುವ ಕೆಲವು ರಾಜತಾಂತ್ರಿಕ ನಿಲುವುಗಳ ಕಾರಣದಿಂದ ಇತರೆ ಕೆಲವು ದೇಶಗಳಿಗೆ ಹೋಲಿಸಿದರೆ ಇದರ ಬಿಸಿ ಅಷ್ಟಾಗಿ ಭಾರತಕ್ಕೆ ಮುಟ್ಟಿಲ್ಲ. ಒಂದರ್ಥದಲ್ಲಿ ಭಾರತೀಯರಾದ ನಾವು ಸಾಕಷ್ಟು ಸುರಕ್ಷಿತರಾಗಿದ್ದೇವೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಕೇಂದ್ರ ಸರ್ಕಾರಕ್ಕೆ ನೈತಿಕ ಬೆಂಬಲ ನೀಡಬೇಕೆ ವಿನಃ ಜನಸಾಮಾನ್ಯರ ನಡುವೆ ಸುಳ್ಳು ಸುದ್ದಿಗಳನ್ನು ಹರಡುತ್ತಾ, ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಪ್ರಯತ್ನಿಸುವುದು ಸರಿಯಲ್ಲ. ಎಲ್‌ಪಿಜಿ ಅಥವಾ ಇತರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಉತ್ಪಾದಿಸಬಲ್ಲ ಯಾವುದಾದರೂ ತಂತ್ರಜ್ಞಾನ, ಯಂತ್ರೋಪಕರಣಗಳು ವಿರೋಧ ಪಕ್ಷದ ಬತ್ತಳಿಕೆಯಲ್ಲಿದ್ದರೆ ದಯವಿಟ್ಟು ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸುವ ಮೂಲಕ ಈ ಸಮಸ್ಯೆಗೆ ಪರಿಹಾರವನ್ನು ನೀಡಿ ದೇಶವಾಸಿಗಳಿಗೆ ನೆರವಾಗಬೇಕು.

ಇಂದಿನ ತೈಲೋತ್ಪನ್ನಗಳ ಅಭಾವದ ಎಲ್ಲಾ ಸಮಸ್ಯೆಗಳಿಗೆ ಪ್ರಮುಖ ಕಾರಣ ಇರಾನ್ ಸಮುದ್ರ ಮಾರ್ಗದ ಮೂಲಕ ತೈಲ ಸಾಗಾಟಕ್ಕೆ ಅಡಚಣೆಯನ್ನು ಉಂಟು ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ತೈಲೋತ್ಪನ್ನಗಳನ್ನು ಹೊತ್ತು ಸಾಗುವ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಇರಾನ್‌ನ ಈ ಧೋರಣೆಯಿಂದ ಹಲವು ದೇಶಗಳ ಆರ್ಥಿಕ ಸ್ಥಿತಿ ಪಾತಾಳ ಮುಟ್ಟಿದೆ. ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ಗ್ಯಾಸ್, ಪ್ರೆಟ್ರೋಲ್, ಡೀಸೆಲ್ ಮತ್ತು ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳಿಗೆ ಹಾಹಾಕಾರ ಉಂಟಾಗಿದೆ. ಭಾರತದ ಇಂಧನ ಭವಿಷ್ಯದ ಬಗ್ಗೆ ಚರ್ಚೆ ನಡೆಯುವಾಗ ಬಹುಶಃ ನಮ್ಮ ದೃಷ್ಟಿ ಎಲ್‌ಪಿಜಿ, ನೈಸರ್ಗಿಕ ಅನಿಲ ಅಥವಾ ಜಾಗತಿಕ ಇಂಧನ ಮಾರುಕಟ್ಟೆಯತ್ತ ಹೋಗುತ್ತದೆ. ಇದರ ಬದಲಿಗೆ ಸ್ವದೇಶಿ ಚಳುವಳಿಯ ಹರಿಕಾರರಾದ ರಾಜೀವ್ ದೀಕ್ಷಿತ್ ಹೇಳಿದ ಸ್ವಾವಲಂಬಿ ಗ್ರಾಮೀಣ ವ್ಯವಸ್ಥೆಯತ್ತ ಯಾರ ಕಣ್ಣು ಹೊರಳುವುದೇ ಇಲ್ಲ. ಗ್ರಾಮಗಳು ತಮ್ಮ ಅಗತ್ಯಗಳನ್ನು ತಮ್ಮಲ್ಲೇ ದೊರೆಯುವ ಸಂಪನ್ಮೂಲಗಳಿಂದ ಪೂರೈಸಿಕೊಳ್ಳುವ ಮೂಲಕ ತಮ್ಮ ಗ್ರಾಮಗಳನ್ನಷ್ಟೇ ಅಲ್ಲದೆ ದೇಶವನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಯಾರೂ ಯೋಚಿಸುವುದೇ ಇಲ್ಲ. ಇಂಧನ ಕ್ಷೇತ್ರದಲ್ಲಿಯೂ ಇದೇ ತತ್ವ ಅನ್ವಯಿಸುತ್ತದೆ. ತೀರ ಇತ್ತೀಚಿನವರೆಗೂ ಭಾರತದ ಗ್ರಾಮೀಣ ಜೀವನದಲ್ಲಿ ಬೆರಣಿ, ಮರದ ಇಂಧನ, ಕೃಷಿ ಅವಶೇಷಗಳು, ತೆಂಗಿನ ಚಿಪ್ಪುಗಳು ಮತ್ತು ಬಯೋಗ್ಯಾಸ್ ಘಟಕಗಳು ಸಾಮಾನ್ಯವಾಗಿದ್ದವು. ಇದು ಕೇವಲ ಅಡುಗೆಗಾಗಿ ಬಳಸುವಂತಹ ಇಂಧನವಾಗಿರಲಿಲ್ಲ. ಅದೊಂದು ಸಂಪೂರ್ಣ ಶೂನ್ಯ ಖರ್ಚಿನ ಮತ್ತು ತ್ಯಾಜ್ಯ ನಿರ್ವಹಣೆಯ ಒಂದು ಜೀವನ ಪದ್ಧತಿಯ ಭಾಗವಾಗಿತ್ತು. ಗೋಮಯ ಅಥವಾ ಆಹಾರ ತ್ಯಾಜ್ಯವನ್ನು ಬಯೋಗ್ಯಾಸ್ ಘಟಕದಲ್ಲಿ ಹಾಕಿದರೆ ಮಿಥೇನ್ ಅನಿಲ ದೊರೆಯುತ್ತಿತ್ತು. ಈ ಅನಿಲ ಅಡುಗೆಯ ಉರುವಲಾಗಿ ಬಳಕೆಯಾಗುತ್ತಿತ್ತು. ಉಳಿದ ಸ್ಲರಿ ಅಥವಾ ತ್ಯಾಜ್ಯ ಉತ್ತಮ ಸಾವಯವ ಗೊಬ್ಬರವಾಗಿ ಕೃಷಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿತ್ತು.

ವಿಜ್ಞಾನಿಗಳು ಹೇಳುವ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಸುಮಾರು 450 ರಿಂದ 500 ಮಿಲಿಯನ್ ಟನ್ ಬಯೋಮಾಸ್ ಸಂಪನ್ಮೂಲಗಳು ಲಭ್ಯವಿದೆ. ಕೃಷಿ ಅವಶೇಷಗಳು, ಕಬ್ಬಿನ ಗ್ಯಾಸ್, ಅಕ್ಕಿ ಹುಲ್ಲು, ತೆಂಗಿನ ಚಿಪ್ಪು, ಪಶು ಮಲ ಮೂತ್ರ ಸೇರಿದಂತೆ ದೊರೆಯುವ ಎಲ್ಲಾ ರೀತಿಯ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ಗ್ರಾಮೀಣ ಭಾರತದಲ್ಲಿ ದೊಡ್ಡ ಮಟ್ಟದ ಇಂಧನ ಸ್ವಾವಲಂಬನೆ ಸಾಧ್ಯ. ನಿರಂತರ ನಡೆಯುತ್ತಿರುವ ಗೋವುಗಳ ಹತ್ಯೆಯ ನಂತರವೂ ಇವರು ಹೇಳುವಂತೆ ಸದ್ಯಕ್ಕೆ ದೇಶದಲ್ಲಿ ದೊರೆಯುವ ಗೋಸಂಪತ್ತಿನಿಂದ ಅನಿಲ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧ್ಯವಿರುವುದು ಅಂಕಿ ಅಂಶಗಳಿಂದ ದೃಢಪಡುತ್ತದೆ. ಸಗಣಿ ಗೊಬ್ಬರದಿಂದ ಉತ್ಪತ್ತಿಯಾಗುವ ಗೋಬರ್ ಗ್ಯಾಸನ್ನು ಇಂಧನ ಮತ್ತು ಬೆಳಕಿಗೆ ಪರ್ಯಾಯವಾಗಿ ಬಳಸುವುದರೊಂದಿಗೆ ಪರಿಸರವನ್ನು ಕಾಪಾಡಬಹುದಾಗಿದೆ.

ಒಂದು ಸಮೀಕ್ಷೆಯ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೆ ಸರಾಸರಿ 8 ಘನ ಅಡಿ ಬಯೋಗ್ಯಾಸ್ ಒಂದು ದಿನದ ಊಟ ತಯಾರಿಸಲು ಮತ್ತು 3 ರಿಂದ 4 ಘಂಟೆ ದೀಪಗಳನ್ನು ಬೆಳಗಿಸಲು ಬೇಕಾಗುತ್ತದೆ. 4 ರಿಂದ 5 ಜನರಿರುವ ಪರಿವಾರಕ್ಕೆ 35 ಘನ ಅಡಿ ಗ್ಯಾಸ್‌ನ ಅವಶ್ಯಕತೆ ಇದೆ. ಒಂದು ಹಸು 7 ರಿಂದ 8 ಕೆ.ಜಿ ಮತ್ತು ಒಂದು ಜೋಡಿ ಎತ್ತು 12 ರಿಂದ 15 ಕೆ.ಜಿ. ಗೊಬ್ಬರವನ್ನು ಪ್ರತಿದಿನ ಕೊಡುತ್ತದೆ. 35 ಘನ ಅಡಿ ಗ್ಯಾಸ್ ತಯಾರಿಕೆಗೆ 25 ಕೆ.ಜಿ.ಯಷ್ಟು ಗೊಬ್ಬರದ ಅವಶ್ಯಕತೆ ಇದೆ. ಈ ರೀತಿ 4 ರಿಂದ 5 ಜನರಿರುವ ಪರಿವಾರಕ್ಕೆ ಒಂದು ಹಸು ಅಥವಾ ಎರಡು ಎತ್ತುಗಳು ಅಡುಗೆ ಅನಿಲ ಮತ್ತು ಬೆಳಕಿನ ಅಭಾವವನ್ನು ನೀಗುತ್ತವೆ.

ತಾಜಾ ಗೋಮಯವನ್ನು ಅಡಿಗೆ ಅನಿಲ ಉತ್ಪಾದಕ ಘಟಕದಲ್ಲಿ ದ್ರಾವಣ ಮಾಡಿ ಹಾಕಿದಾಗ ಗೋಮಯದಲ್ಲಿ ಸೂಕ್ಷ್ಮ ಜೀವಾಣುಗಳು ಅನಿಲ ಉತ್ಪಾದನೆಯನ್ನು ಮಾಡುತ್ತವೆ. ಇಂತಹ ಅನಿಲದಿಂದ ಅಡುಗೆ ಮಾಡುವುದರಿಂದ ವಾತಾವರಣ ಕಲುಷಿತವಾಗುವುದನ್ನು ತಪ್ಪಿಸಬಹುದಾಗಿದೆ. ಈಗಾಗಲೇ ಹೇಳಿದಂತೆ ಈ ಅನಿಲವನ್ನು ದೀಪ ಬೆಳಗಲು, ಆಯಿಲ್ ಎಂಜಿನ್ ನಡೆಸಲು, ವಿದ್ಯುತ್ ಉತ್ಪಾದನೆಗೂ ಬಳಸಬಹುದು. ಹೇಳಬೇಕೆಂದರೆ ಸಗಣಿಯಿಂದ ಉತ್ಪತ್ತಿಯಾಗುವ ಈ ಅನಿಲದಿಂದ ಹೆಚ್ಚಿನ ಉಳಿತಾಯವಾಗುತ್ತದೆ. ವಿಪರ್ಯಾಸವೆಂದರೆ ಬಹುಭಾಗ ನಗರವಾಸಿಗಳ ಇಂಧನದ ಮತ್ತು ಅಡಿಗೆ ಅನಿಲದ ಬೇಡಿಕೆಯನ್ನು ಪೂರೈಸಲು ಅಡಿಗೆ ಅನಿಲ ಮತ್ತು ಇಂಧನವನ್ನು ವಿದೇಶಿ ವಿನಿಮಯ ನೀಡಿ ಆಮದು ಮಾಡಿಕೊಳ್ಳಲಾಗುತ್ತಿದೆ.

ನಮ್ಮಲ್ಲಿರುವ ಗೋಸಂಪತ್ತಿನಿಂದ ದೊರೆಯುವ ಸಗಣಿಯ ಕೆಲ ಭಾಗ ಪರಿಸರ ಹಾಗೂ ಇತರ ಬಳಕೆಗಳಿಗೆ, ಅಡುಗೆ ಮತ್ತು ಇಂಧನಕ್ಕೆ ಪರ್ಯಾಯವಾಗಿ ಬಳಸಿದ್ದೇ ಆದಲ್ಲಿ ದೇಶದ ಬಹುಪಾಲು ಇಂಧನ ಮತ್ತು ಅಡುಗೆ ಅನಿಲದ ಬೇಡಿಕೆಯನ್ನು ಯಾವುದೇ ವೆಚ್ಚವಿಲ್ಲದೆ ನೀಗಿಸಬಹುದು. ಇದರಿಂದ ದೇಶದಲ್ಲಿ ಅಡುಗೆ ಮತ್ತು ಇನ್ನಿತರ ಕಾರ್ಯಗಳಿಗಾಗಿ ಆಗುತ್ತಿರುವ ಬೆಲೆ ಕಟ್ಟಲಾಗದಷ್ಟು ಕಟ್ಟಿಗೆ ಮತ್ತು ಇದ್ದಿಲಿನ ಬಳಕೆ ಕಡಿಮೆಯಾಗಿ ಅರಣ್ಯ ನಾಶ ತಪ್ಪುತ್ತದೆ ಹಾಗೂ ಪರಿಸರ ಹಾಳಾಗುವುದು ನಿಲ್ಲುತ್ತದೆ. ಮುಖ್ಯವಾಗಿ ಇಂಧನ ಮತ್ತು ಅಡುಗೆ ಅನಿಲದ ಆಮದು ಕಡಿಮೆಯಾಗಿ ದೇಶದ ಹಣ ದೇಶದಲ್ಲೇ ಉಳಿಯುವುದರಿಂದ ಬೇರೆ ರಚನಾತ್ಮಕ ಕಾರ್ಯಗಳನ್ನು ನಡೆಸಲು ಸಹಾಯವಾಗುತ್ತದೆ.

ಈ ರೀತಿ ಪ್ರತಿ ಪರಿವಾರ, ಪ್ರತಿ ಹಳ್ಳಿಯೂ ಇಂಧನದಿಂದ ಸ್ವಾವಲಂಬಿಯಾದರೆ ದೇಶವೇ ತೈಲ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುತ್ತದೆ. ಸದ್ಯ ಬಳಸುತ್ತಿರುವ ತೈಲದ ಹಣವನ್ನು ಇನ್ನಿತರ ಅಭಿವೃದ್ಧಿ ಬೆಳವಣಿಗೆಗೆ ಬಳಸಿಕೊಂಡಲ್ಲಿ ದೇಶವು ಪ್ರಗತಿ ಪಥದತ್ತ ಸಾಗಬಹುದಾಗಿದೆ. ಒಂದರ್ಥದಲ್ಲಿ ಭಾರತದ ಹೊಲ ಗದ್ದೆಗಳಲ್ಲಿ, ಪಶು ಸಂಪತ್ತಿನಲ್ಲಿ ಮತ್ತು ಕೃಷಿ ವ್ಯವಸ್ಥೆಯಲ್ಲಿ ಅಪಾರ ಪ್ರಮಾಣದ ಇಂಧನ ಸಂಪತ್ತು ಅಡಗಿದೆ. ಅದನ್ನು ಗುರುತಿಸಿ ಬಳಸುವುದು ನಮ್ಮ ಮುಂದಿನ ಹೆಜ್ಜೆಯಾಗಬೇಕು. ಸ್ವಾವಲಂಬನೆ ಎಂದರೆ ಹೊಸ ಸಂಪನ್ಮೂಲಗಳನ್ನು ಹುಡುಕುವುದು ಮಾತ್ರವಲ್ಲ. ನಮ್ಮದೇ ಭೂಮಿಯಲ್ಲಿ ಇರುವ ಸಂಪತ್ತನ್ನು ಅರಿತು ಬಳಸುವುದೇ ನಿಜವಾದ ಸ್ವಾವಲಂಬನೆ.

ಗೆಲ್ಲುವವನು ಗುಣಶಾಲಿ

ಸಭಾ ಜಿತಾ ವಸ್ತ್ರವತಾ ಮಿಷ್ಟಾಶಾ ಗೋಮಾತಾ ಜಿತಾ ।
ಅಧ್ವಾಜಿತೋ ಯಾನವತಾ ಸರ್ವಂ ಶೀಲವತಾ ಜಿತಾ ॥ – ಮಹಾಭಾರತ

ಉಡುಗೆಯಿದ್ದವನು ಸಭೆಯನ್ನು ಜಯಿಸುತ್ತಾನೆ. ಹಸುಗಳು ಇದ್ದವನು ಸಿಹಿ ತಿನಿಸುಗಳ ಆಸೆಯನ್ನು ಗೆಲ್ಲುತ್ತಾನೆ. ವಾಹನವಿದ್ದವನು ದಾರಿಯನ್ನು ಗೆಲ್ಲುತ್ತಾನೆ. ಗುಣಶಾಲಿಯು ಎಲ್ಲವನ್ನೂ ಗೆಲ್ಲುತ್ತಾನೆ – ಎಂಬುದು ಶ್ಲೋಕಾರ್ಥ.

ಬಟ್ಟೆಯಿಂದೇನು ಮಹಾ! ಅದರಿಂದೇನಾಗಲಿಕ್ಕಿದೆ? ಮಾನ ಮುಚ್ಚಲು ಬಟ್ಟೆಯಿದ್ದರೆ ಸಾಕು ಎನ್ನುವವರು ಕೆಲವರಿದ್ದಾರೆ. ಹಾಗಂದುಕೊಳ್ಳಬಾರದು. ತೊಟ್ಟ ಬಟ್ಟೆಯನ್ನೇ ನೋಡಿ ಗೌರವ ಕೊಡುವವರಿದ್ದಾರೆ. ಅದಕ್ಕಾಗಿ ಕವಿಯೊಬ್ಬ ಹೇಳುತ್ತಾನೆ. 'ಕಿಂ ವಾಸಸೈವಂ ನ ವಿಚಾರಣೀಯಮ್' ಅಂದರೆ ಉಡುವ ಉಡುಪಿನಿಂದೇನು? ಎಂದು ಚರ್ಚೆ ಮಾಡಬಾರದಂತೆ. ಯೋಗ್ಯತೆಗೆ ಉಡುಗೆಯೂ ಮುಖ್ಯವೆಂದು ದೃಷ್ಟಾಂತದೊಂದಿಗೆ ಋಜುವಾತು ಪಡಿಸುತ್ತಾನೆ. ಸಮುದ್ರ ಮಥನ ಮಾಡಿ ವಿಷ ಬಂದಾಗ ಚರ್ಮಾಂಬರಧಾರಿಯಾದ ಶಿವನಿಗೆ ಕೊಟ್ಟನಂತೆ. ಮುಂದೆ ಲಕ್ಷ್ಮಿ ಬಂದಾಗ ಪೀತಾಂಬರಧಾರಿಯಾದ ವಿಷ್ಣುವಿಗೆ ಇತ್ತನಂತೆ. ಧರಿಸುವ ಆಕರ್ಷಕ ಉಡುಪುಗಳು ಲಾಭವನ್ನುಂಟು ಮಾಡುತ್ತವೆ. ಗೌರವವನ್ನು ತಂದುಕೊಡುತ್ತವೆ.

ಇಂದೂ ಕೂಡ ತೊಟ್ಟ ಬಟ್ಟೆಯನ್ನು ನೋಡಿ ಗೌರವ ಕೊಡುವವರಿದ್ದಾರೆ. ಸಾರ್ವಜನಿಕ



ಸಭೆ ಸಮಾರಂಭಗಳಲ್ಲಿ, ಕಾರ್ಯಕ್ರಮಗಳಲ್ಲಿ ಉತ್ತಮ ಪೋಷಾಕನ್ನು ಧರಿಸಿದ್ದರೆ ಆದರಾತಿಥ್ಯ ಹೆಚ್ಚು. ವಿದ್ವತ್ ಶಾಲನ್ನು ಹೊದ್ದು ಸಭೆಯನ್ನು ಪ್ರವೇಶಿಸಿದರೆ ಜ್ಞಾನಿಯೆಂದೇ ಗೌರವಿಸುತ್ತಾರೆ. ಸಭೆಯಲ್ಲಿದ್ದವರನ್ನೆಲ್ಲ ಗೆದ್ದಂತೆ ತೊಡುವ ಬಟ್ಟೆಗೂ ಗೌರವವಿದೆಯೆಂಬುದನ್ನು ಮರೆಯಬಾರದು. ಎಲ್ಲಿ? ಹೇಗೆ? ಹೋಗಬೇಕು? ಯಾವ ಉಡುಗೆ ಧರಿಸಿ ಹೋಗಬೇಕು. ಇತ್ಯಾದಿ ವಸ್ತ್ರಸಂಹಿತೆ ಪ್ರಜ್ಞೆ ಇದ್ದರೆ ಒಳ್ಳೆಯದು. ದೇವಸ್ಥಾನದಂತಹ ಭಕ್ತಿ ಕೇಂದ್ರಕ್ಕೆ ಹೋಗುವಾಗ ಅರ್ಧ ಚಡ್ಡಿ, ಮುಕ್ಕಾಲು ಚಡ್ಡಿ, ಚಿಕ್ಕ ಬಟ್ಟೆ ಇವುಗಳು ಗೌರವವನ್ನು ತಂದುಕೊಡುವುದಿಲ್ಲ; ಸಂಸ್ಕೃತಿಯೂ ಅಲ್ಲ, ಸಂಸ್ಕೃತಿಗೆ ಪೂರಕ ಉಡುಪು ಎಲ್ಲೆಡೆಯೂ ಗೌರವಕ್ಕೆ ಕಾರಣವಾಗುತ್ತದೆ. ಯಾರು ಹಸು ಸಾಕುತ್ತಾರೋ ಅವರ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪಗಳಿಗೆ ಕೊರತೆಯಿರದು. ಹೆಚ್ಚಿನ ತಿನಿಸುಗಳಿಗೆ ಇವುಗಳು ಬೇಕೇ ಬೇಕು. ಸಿಹಿಯಾದ ಖಾದ್ಯ ತಯಾರಿಕೆಗೆ ತುಪ್ಪ ತೀರಾ ಅವಶ್ಯಕ. ಮನೆಯಲ್ಲಿ ತುಪ್ಪವೊಂದಿದ್ದರೆ ಯಾವುದೇ ಸಮಯದಲ್ಲಿ ವೈವಿಧ್ಯಮಯ ಸಿಹಿ ತಿಂಡಿಗಳನ್ನು ಮಾಡಿ ಸವಿಯಲು ಸಾಧ್ಯ.

ವಾಹನವೊಂದಿದ್ದರೆ ಬೇಕಾದಲ್ಲಿಗೆ ಹೋಗಬಹುದು. ಬೇಕಾದ ಸಮಯ, ಸಂದರ್ಭಕ್ಕೆ ಹೋಗಬಹುದು. ಇದರಿಂದ ನಡೆಯುವ ಆಯಾಸವೂ ತಪ್ಪುವುದು. ದೂರದೂರದ ಮಾರ್ಗವನ್ನು ಬಿಂಬಿಸುವುದಕ್ಕೆ ವಾಹನ ತುಂಬ ಉಪಯೋಗಿ. ಕಡಿಮೆ ಸಮಯದಲ್ಲಿ ಹೆಚ್ಚು ದೂರ ಕ್ರಮಿಸಬಹುದು. ಹೆಚ್ಚು ಕಾರ್ಯಕ್ರಮಗಳಿಗೆ ಹೋಗಬಹುದು. ಸಮಯವನ್ನು ಉಳಿಸುವುದಕ್ಕೂ, ಆಯಾಸವನ್ನು ಕಡಿಮೆ ಮಾಡುವುದಕ್ಕೂ ವಾಹನ ಅತ್ಯಂತ ಉಪಯುಕ್ತ. ಮೇಲೆ ಹೇಳಿದ ಸಂದರ್ಭಗಳಲ್ಲಿ ಅವುಗಳಿಗೆ ಸಂಬಂಧಿಸಿದ ಸನ್ನಿವೇಶವನ್ನು ಜಯಿಸಿ ಯಶಸ್ವಿಯಾಗುವುದನ್ನು ಹೇಳಲಾಗಿದೆ. ಇವುಗಳಿಗೆಲ್ಲಕ್ಕಿಂತಲೂ ಮುಖ್ಯವಾದದ್ದು ಶೀಲ. ಶೀಲವೆಂದರೆ ಉತ್ತಮ ಗುಣನಡತೆ. ಮನುಷ್ಯರಲ್ಲಿ ಇದೊಂದು ಸರಿಯಾಗಿದ್ದರೆ ಎಲ್ಲವನ್ನೂ ಜಯಿಸಬಹುದು. ಉತ್ತಮ ಗುಣ ನಡತೆಗೆ ಮನಸೋಲದವರು ವಿರಳ. ಇದೊಂದರಿಂದಲೇ ಎಲ್ಲವನ್ನೂ ಸಾಧ್ಯ ಮಾಡಲು ಆಗುವಾಗ ನಾವೆಲ್ಲ ಪ್ರಯತ್ನಪೂರ್ಣವಾಗಿ ಶೀಲವಂತರಾಗಬೇಕು.

ಮೋದಿಯವರ ಸಮರ್ಥ 'ತೈಲ ರಾಜತಾಂತ್ರಿಕತೆ'

ಅರವಿಂದ ಶೆಣೈ

ಕೊಲ್ಲಿಯಲ್ಲಿ ಸಮರ ವ್ಯಾಪಿಸಿ, ವಿಶ್ವಾದ್ಯಂತ ತೈಲ ಬಿಕ್ಕಟ್ಟು ನಿರ್ಮಾಣವಾಗಿರುವ ಮಧ್ಯೆಯೇ ಕೆಲ ದಿನಗಳ ಹಿಂದೆ ಶಿವಾಲಿಕ್ ಮತ್ತು ನಂದಾದೇವಿ ಹೆಸರಿನ ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಗುಜರಾತಿಗೆ ಬಂದಿಳಿದವು. ಅವೆರಡರಲ್ಲಿದ್ದ ಒಟ್ಟು ಅಡುಗೆ ಅನಿಲ 92,712 ಮೆಟ್ರಿಕ್ ಟನ್. ಅದರ ಬೆನ್ನಿಗೇ 81000 ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತ ಮತ್ತೊಂದು ಹಡಗು ಕೂಡಾ ಭಾರತಕ್ಕೆ ಬಂದಿಳಿಯಿತು. ಪರ್ಷಿಯನ್ ಗಲ್ಫ್ ಸಾಗರದಲ್ಲಿ ಇನ್ನೂ ಕೆಲವು ಭಾರತದ ಹಡಗುಗಳು ಸ್ವದೇಶಕ್ಕೆ ಬರಲು ಸಿದ್ಧವಾಗುತ್ತಿವೆ. ಅವು 2 ಲಕ್ಷ ಮೆಟ್ರಿಕ್ ಟನ್ ಎಲ್‌ಎನ್‌ಜಿ ಮತ್ತು 16.7 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊಂದಿವೆ. ಇದರ ಜತೆಗೇ ಹೊರ್ಮುಜ್ ಜಲಸಂಧಿಯನ್ನು ದಾಟಲು ಕಾದಿರುವ ಹಡಗುಗಳಲ್ಲಿ 3 ಲಕ್ಷ ಮೆಟ್ರಿಕ್ ಟನ್ ಅಡುಗೆ ಅನಿಲವಿದೆ.

ಕಳೆದ ವಾರವಷ್ಟೇ ಭಾರತವು ರಷ್ಯಾದಿಂದ 30 ಮಿಲಿಯ ಬ್ಯಾರೆಲ್ ಕಚ್ಚಾತೈಲ ಖರೀದಿಸಿದೆ. ಚೀನಾದೆಡೆಗೆ ಕಚ್ಚಾ ತೈಲ ಕೊಂಡೊಯ್ಯುತ್ತಿದ್ದ 7 ನೌಕೆಗಳನ್ನು ನಡುದಾರಿಯಲ್ಲಿ ಭಾರತದತ್ತ ತಿರುಗಿಸಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ತೈಲ ಮತ್ತು ಅಡುಗೆ ಅನಿಲ ಕೊರತೆಯಾಗಬಾರದೆಂಬ ಕಾರಣಕ್ಕಾಗಿ ಕೈಗೊಂಡ ರಾಜತಾಂತ್ರಿಕ ಕ್ರಮಗಳ ಫಲವಾಗಿ ಈ ನೌಕೆಗಳು ಚೀನಾದ ದಾರಿ ಬಿಟ್ಟು ಭಾರತದತ್ತ ಪಯಣಿಸಿದವು.

ಜಗತ್ತು ಯುದ್ಧಗ್ರಸ್ತವಾದಾಗ ಉಂಟಾಗುವ ಇಂಧನ ಬಿಕ್ಕಟ್ಟು ಯಾವುದೇ ರಾಷ್ಟ್ರಕ್ಕೂ ದೊಡ್ಡ ಸವಾಲೇ ಆಗಿದೆ. ಕೊಲ್ಲಿಯಲ್ಲಿ ಈಗ ನಡೆಯುತ್ತಿರುವ ಸಮರವು ಜಗತ್ತಿನಾದ್ಯಂತ ಇಂಧನ ಮಾರುಕಟ್ಟೆಯಲ್ಲಿ ಕೋಲಾಹಲ ಎಬ್ಬಿಸಿದೆ. ಹೊರ್ಮುಜ್ ಜಲಸಂಧಿ ಬಹುತೇಕವಾಗಿ ಮುಚ್ಚಲ್ಪಟ್ಟಿರುವುದರಿಂದ ತೈಲ ಪೂರೈಕೆಗೆ ತಡೆ ಉಂಟಾಗಿ ಜಾಗತಿಕ ತೈಲ ಬೆಲೆ ಗಗನಕ್ಕೇರಿದ್ದು, ಅಡುಗೆ ಅನಿಲ ಪೂರೈಕೆ ಕುಂಠಿತಗೊಂಡಿದೆ.

ಶೇ. 85ರಷ್ಟು ಕಚ್ಚಾ ತೈಲವನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವ ಭಾರತದ ಪಾಲಿಗೆ ಇದು ಭಾರೀ ದೊಡ್ಡ ಬಿಕ್ಕಟ್ಟೇ ಸರಿ. ಇದು ಹಣದುಬ್ಬರ, ತೈಲ ಕೊರತೆ ಹಾಗೂ ಆ ಕಾರಣವಾಗಿ ಆರ್ಥಿಕ ಹಿನ್ನಡೆಗೆ ಕಾರಣವಾಗುವಂತಹ ಪರಿಸ್ಥಿತಿ. ಆದರೆ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಸರಕಾರವು ಈ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಬಹುತೇಕ ಯಶಸ್ಸು ಕಂಡಿದೆ. ಜನಕೇಂದ್ರಿತ ನೀತಿಗಳ ಮೂಲಕ ಈ ತೈಲ ಬಿಕ್ಕಟ್ಟು ಜನರ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಂಡಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ಫಲವಾಗಿ ಭಾರತವು ಈಗ 35ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಪೆಟ್ರೋಲಿಯಂ ಮೀಸಲು ಸಂಗ್ರಹವನ್ನು ಹೊಂದಿದೆ. ಸರಕಾರದ ಈ ನೀತಿಯ ಕಾರಣದಿಂದಾಗಿ ದೇಶದಲ್ಲಿರುವ 26000 ಎಲ್‌ಪಿಜಿ ಔಟ್‌ಲೆಟ್‌ಗಳು, 100000 ಪೆಟ್ರೋಲಿಯಂ ಬಂಕ್‌ಗಳು ಮತ್ತು 9000 ಸಿಎನ್‌ಜಿ ಸ್ಟೇಷನ್‌ಗಳು ಈಗಲೂ ಕಾರ್ಯಾಚರಿಸುವಂತಾಗಿವೆ.

ಫೆಬ್ರವರಿ ಅಂತ್ಯದಲ್ಲಿ ಪಶ್ಚಿಮ ಏಷ್ಯಾ ಸಮರ ಸ್ಫೋಟಗೊಂಡಿದ್ದು, ಕೆಲವೇ ದಿನಗಳಲ್ಲಿ ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ಈ ಜಲಸಂಧಿಯ ಮೂಲಕ ಜಗತ್ತಿನ ಶೇ. 20ರಷ್ಟು ತೈಲ ಸಾಗಣೆ ನಡೆಯುತ್ತದೆ. ಭಾರತದ ಪಾಲಿನ ಎಲ್‌ಪಿಜಿ ಕೂಡಾ ಈ ದಾರಿಯ ಮುಖಾಂತರವೇ ಸಾಗಿಬರುವುದು.ಈ ದಾರಿಯಲ್ಲಿ ಭಾರತಕ್ಕೆ ದಿನಂಪ್ರತಿ 2.5 ಮಿಲಿಯ ಬ್ಯಾರೆಲ್‌ಗಳಷ್ಟು ತೈಲ ಪೂರೈಕೆಯಾಗುತ್ತಿತ್ತು. ಶೇ. 60ರಷ್ಟು ಎಲ್‌ಪಿಜಿ ಕೂಡಾ ಇಲ್ಲಿಂದಲೇ ಬರುತ್ತಿತ್ತು. ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ಕುವೈಟ್ ಭಾರತಕ್ಕೆ ತೈಲ ರಫ್ತು ಮಾಡುವ ರಾಷ್ಟ್ರಗಳು.

ಜಾಗತಿಕವಾಗಿ ತೈಲ ಬೆಲೆ ಏರಿಕೆಯಿಂದಾಗಿ ಭಾರತದ ಆಮದು ವೆಚ್ಚ ಹೆಚ್ಚುವಂತಾಗಿದೆ. ಇದು ದೇಶದ ಜಿಡಿಪಿ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲುದು. ತೈಲದ ಮೇಲೆ ಶೇ. 10ರಷ್ಟು ಹೆಚ್ಚುವರಿ ದರ ಉಂಟಾದರೂ ಅದು ಭಾರತದ ಜಿಡಿಪಿ ಪ್ರಗತಿಯನ್ನು ಶೇ. 0.25 ದಷ್ಟು ಕುಗ್ಗಿಸುತ್ತದೆ.

2012–13ರ ಎಲ್‌ಪಿಜಿ ಸಬ್ಸಿಡಿ ಬಿಕ್ಕಟ್ಟಿನ ವೇಳೆ ಯುಪಿಎ ಸರಕಾರದಡಿಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಭಾರೀ ಕೊರತೆ ಉಂಟಾಗಿತ್ತು. ಜನರಿಗೆ ಗ್ಯಾಸ್ ಸಿಲಿಂಡರ್ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಬ್ಲ್ಯಾಕ್‌ಮಾರ್ಕೆಟ್ ದಂಧೆ ಜೋರಾಗಿತ್ತು. ಸಬ್ಸಿಡಿ ಸಿಲಿಂಡರ್‌ಗಳನ್ನು ಕಮರ್ಷಿಯಲ್ ಬಳಕೆಗೆ ಸ್ಥಳಾಂತರಿಸಲಾಗಿತ್ತು.

ದೂರದೃಷ್ಟಿ ಯೋಜನೆ

ಆದರೆ ಈಗ ಹಾಗಲ್ಲ. ಸಮರ ಸ್ಫೋಟಗೊಂಡ ಕೂಡಲೇ ಮೋದಿ ಸರಕಾರದ ಸ್ಪಂದನೆಯು ಕ್ಷಿಪ್ರವಾಗಿತ್ತು.ದಿನಬಳಕೆಯ ಎಲ್‌ಪಿಜಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಆದ್ಯತೆ ನೀಡಲಾಯಿತು. ಇದು ದಶಕಗಳ ಕಾಲದ ಯೋಜನೆ ಮತ್ತು ಕಾರ್ಯತಂತ್ರದ ಪರಿಣಾಮ. ಜತೆಗೇ ಎಲ್ಲ ರಾಷ್ಟ್ರಗಳೊಂದಿಗೂ ಸೌಹಾರ್ದ ಸಂಬಂಧ ಕಾಯ್ದುಕೊಳ್ಳುವ ಮೋದಿ ರಾಜತಾಂತ್ರಿಕತೆಯ ಫಲ. ಮಾರ್ಚ್ ಮೊದಲ ವಾರದಲ್ಲಿ ಸ್ವತಃ ಪ್ರಧಾನಿಯವರೇ ಕೊಲ್ಲಿ ರಾಷ್ಟ್ರಗಳ ಮುಖಂಡರೊಡನೆ ಮಾತುಕತೆ ನಡೆಸಿದರು. ಸೌದಿ ದೊರೆ ಮೊಹಮ್ಮದ್ ಬಿನ್ ಸುಲ್ತಾನ್, ಯುಎಇ ಅಧ್ಯಕ್ಷ, ಬಹ್ರೇನ್ ದೊರೆ, ಜೋರ್ಡಾನ್ ದೊರೆ, ಕುವೈತ್‌ನ ಶೇಖ್, ಕತಾರಿನ ದೊರೆ ಮೊದಲಾದವರೊಡನೆ ಮಾತುಕತೆ ನಡೆಸಿದರು. ಭಾರತವು ಶಾಂತಿ ಮತ್ತು ಸ್ಥಿರತೆಯನ್ನು ಬಯಸುತ್ತದೆ ಎಂಬುದು ಇವರೊಡನೆ ಮೋದಿ ಸಾರಿದ ಸಂದೇಶ.



ಎಲ್ಲಾ ಗಲ್ಫ್ ರಾಷ್ಟ್ರಗಳೊಂದಿಗೆ ಸಂಬಂಧ ಸುಧಾರಿಸಲು ಮೋದಿ ಸರಕಾರವು ಆರಂಭದಿಂದಲೇ ಆದ್ಯತೆ ಕೊಟ್ಟಿತ್ತು. ಮೋದಿಯವರು ಕೊಲ್ಲಿ ರಾಷ್ಟ್ರಗಳಿಗೆ ಕೆಲವಾರು ಬಾರಿ ಭೇಟಿ ನೀಡಿದ್ದರು. ಕೊಲ್ಲಿ ರಾಷ್ಟ್ರಗಳ ಮುಖಂಡರಿಗೆ ಭಾರತದಲ್ಲಿ ಆತಿಥ್ಯ ನೀಡಿದ್ದರು. ಹಾಗಾಗಿಯೇ ಎಲ್ಲಾ ಕೊಲ್ಲಿ ರಾಷ್ಟ್ರಗಳೂ ಈಗ ಭಾರತವನ್ನು ಗೌರವಿಸುತ್ತವೆ.

ಕೆಲವರು ಭಾರತದ ನೀತಿಯನ್ನು ಹಳೆಯ ಅಲಿಪ್ತ ನೀತಿ ಎಂದು ಟೀಕಿಸುವುದಿದೆ. ಆದರೆ ಅವರಿಗೆ ನೂತನ ಜಗತ್ತಿನ ವಾಸ್ತವಿಕತೆಯ ಅರಿವಿಲ್ಲ ಎಂದೇ ಹೇಳಬೇಕಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ದೇಶವೊಂದು ತನ್ನ ಸ್ವಹಿತಾಸಕ್ತಿ ಕಾಯ್ದುಕೊಳ್ಳಲು ಆದ್ಯತೆ ನೀಡಬೇಕಾಗುತ್ತದೆ. ಅದನ್ನು ಸಮಾಧಾನದಿಂದ ಹಾಗೂ ಲೆಕ್ಕಾಚಾರದಿಂದ ಮಾಡಬೇಕಾಗುತ್ತದೆ. ಮೋದಿಯವರು ಅದನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ.

ಕೊಲ್ಲಿ ರಾಷ್ಟ್ರಗಳೊಂದಿಗೆ ಮೋದಿ ಸರಕಾರವು ವ್ಯವಹರಿಸಿದ ರೀತಿಯು ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಅಂಕಿಅಂಶಗಳೇ ಸಾಕ್ಷಿ. 2014ರಿಂದ ಈ ರಾಷ್ಟ್ರಗಳ ಜತೆ ದ್ವಿಪಕ್ಷೀಯ ವ್ಯವಹಾರ ದ್ವಿಗುಣಗೊಂಡಿದೆ. ಭಾರತದ ಇಂಧನ ವಲಯದಲ್ಲಿ ಯುಎಇ ಈಗ ಪ್ರಮುಖ ಹೂಡಿಕೆದಾರ.

ಅಡುಗೆ ಅನಿಲ ಬೆಲೆ ನಿಯಂತ್ರಣ

ಯುದ್ಧದಿಂದಾಗಿ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾದಾಗಲೂ ಸರಕಾರವು ಆ ಹೊರೆಯನ್ನು ಜನರ ಮೇಲೆ ಹೇರುವ ಬದಲಾಗಿ ತೈಲ ಮಾರುಕಟ್ಟೆ ಕಂಪೆನಿಗಳಿಗೆ ತಾನೇ ಸಬ್ಸಿಡಿ ಒದಗಿಸಿತು. ಇತ್ತೀಚೆಗೆ ಅನಿವಾರ್ಯವಾಗಿ ಮನೆಬಳಕೆಯ ಸಿಲಿಂಡರಿಗೆ ರೂ. 60 ಹೆಚ್ಚಳ ಮಾಡಲಾಯಿತು. ಉಜ್ವಲ ಯೋಜನೆಯಡಿ ಈಗಲೂ ರೂ.300ಕ್ಕೆ ಸಿಲಿಂಡರ್ ಸಿಗುತ್ತಿದೆ.

ಭಾರತದ ಪೆಟ್ರೋಲಿಯಂ ಮೀಸಲು ಸಂಗ್ರಹವು ಮೋದಿ ಆಡಳಿತದಡಿಯಲ್ಲಿ 40 ದಿನಗಳ ಬೇಡಿಕೆ ಪೂರೈಸುವಷ್ಟು ಹೆಚ್ಚಿದೆ. ಹಿಂದಿನ ಕಾಂಗ್ರೆಸ್ ಆಡಳಿತದವಧಿಯಲ್ಲಿ ಇದು ಶೂನ್ಯವಾಗಿತ್ತು. ಕಾಂಗ್ರೆಸ್ ಆಳ್ವಿಕೆಯಡಿಯಲ್ಲಿ ಜಾಗತಿಕವಾಗಿ ಯಾವುದೇ ಬಿಕ್ಕಟ್ಟು ಇರದಿದ್ದರೂ 2014ರಲ್ಲಿ ಸಿಲಿಂಡರ್ ಬೆಲೆ ದಿಲ್ಲಿಯಲ್ಲಿ 1241 ರೂ., ಮುಂಬಯಿಯಲ್ಲಿ ರೂ. 1264, ಮತ್ತು ಕೊಲ್ಕತಾದಲ್ಲಿ ರೂ. 1270 ಇದ್ದಿತು.

ಕೊಲ್ಲಿ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಮೋದಿ ಸರಕಾರವು ದೂರದೃಷ್ಟಿ ಪ್ರಯೋಗಿಸಿ, ಯಾವುದೇ ಒಂದು ರಾಷ್ಟ್ರವನ್ನಷ್ಟೇ ಅವಲಂಬಿಸದೆ, ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡುವ ಪ್ರಕ್ರಿಯೆಗೆ ತೊಡಗಿತು. ಯಾವುದೇ ದೇಶದಿಂದ ತೈಲ ಆಮದಿನ ಮಿತಿಯನ್ನು ಶೇ. 25ಕ್ಕೆ ಸೀಮಿತಗೊಳಿಸಿದ್ದು, ಸುಮಾರು 40 ದೇಶಗಳಿಂದ ತೈಲ ಆಮದಿಗೆ ಗಮನ ಕೊಡಲಾಗಿದೆ. ರಷ್ಯಾ, ಅಮೆರಿಕ, ಬ್ರೆಜಿಲ್, ಸೌದಿ ಅರೇಬಿಯಾ, ವೆನೆಜುವೆಲಾ ಮುಂತಾಗಿ ಅಟ್ಲಾಂಟಿಕ್ ವಲಯದಿಂದಲೂ ತೈಲ ಆಮದಿಗೆ ಚಾಲನೆ ನೀಡಲಾಗಿದೆ. 2026ರ ವೇಳೆಗೆ ಭಾರತದ ತೈಲ ಆಮದಿನ ಶೇ. 40ರಷ್ಟು ಮಾತ್ರ ಹೊರ್ಮುಜ್ ಜಲಸಂಧಿಯಿಂದಾಗಿ ಬರುತ್ತಿದೆ. ಉಳಿದ ಶೇ.60ರಷ್ಟು ತೈಲ ಬೇರೆ ದಾರಿಯಾಗಿ ಬರುತ್ತಿವೆ. ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುತ್ತಿದ್ದು, ಇದು ಜಾಗತಿಕ ತೈಲ ಮಾರುಕಟ್ಟೆಯನ್ನು ಸಮತೋಲನದಲ್ಲಿಡಲೂ ಸಫಲವಾಗಿದೆ. ಇದೇವೇಳೆ, ಪೆಟ್ರೋಲಿಗೆ ಎಥನಾಲ್ ಬೆರೆಸುವ ಕ್ರಮಗಳ ಮೂಲಕ ದೇಶೀ ಸ್ವಾವಲಂಬನೆಯ ಉಪಕ್ರಮಕ್ಕೂ ಕೈಹಚ್ಚಲಾಗಿದೆ.

ಮೋದಿ ಸರಕಾರದ ಉಪಕ್ರಮಗಳಿಂದಾಗಿ ಹಣದುಬ್ಬರ ಸಮಸ್ಯೆಯಿಂದ ದೇಶ ಪಾರಾಗಿದೆ. ತೈಲ ಹಣದುಬ್ಬರ ಕೂಡಾ ನಿಯಂತ್ರಣದಲ್ಲೇ ಉಳಿದಿದೆ. ನೆರೆಯ ಕೆಲವು ದೇಶಗಳು ತೈಲ ಪಡಿತರ ವ್ಯವಸ್ಥೆಗೆ ಕೈಹಚ್ಚಿರಬೇಕಾದರೆ ಭಾರತವಿನ್ನೂ ಅಂತಹ ಕ್ರಮಕ್ಕೆಳಸಿಲ್ಲ. ಜಾಗತಿಕ ರೇಟಿಂಗ್ ಸಂಸ್ಥೆ ಮೂಡಿ ಕೂಡಾ ಭಾರತದ ಇಂಧನ ಭದ್ರತೆಯನ್ನು ಶ್ಲಾಘಿಸಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಆದ್ಯತೆಯಾಗಿಟ್ಟುಕೊಂಡು ಮೋದಿ ಸರಕಾರ ವ್ಯವಹರಿಸುತ್ತಿದ್ದ ನಾಗರಿಕ ಹಿತಾಸಕ್ತಿಗೆ ಗಮನ ಕೊಟ್ಟಿದೆ.

ತೈಲ ಬಿಕ್ಕಟ್ಟನ್ನು ಭಾರತವು ಗಂಭೀರವಾಗಿ ಎದುರಿಸದಿರಲು ಕಳೆಕೊಂದು ದಶಕದಿಂದ ಸರಕಾರ ಕೈಗೊಂಡ ಇನ್ನಿತರ ಕ್ರಮಗಳೂ ಕಾರಣವಾಗಿದೆ. 9 ಲಕ್ಷಕ್ಕೂ ಅಧಿಕ ರೈತರು ಈಗ ನೀರಾವರಿಗೆ ತೈಲಾಧಾರಿತ ಪಂಪ್ ಸೆಟ್ ಬದಲಿಗೆ ಸೋಲಾರ್ ಆಧಾರಿತ ವಿದ್ಯುತ್ ಬಳಸುತ್ತಿದ್ದಾರೆ. ಸುಮಾರು ಶೇ.20ರಷ್ಟು ಪೆಟ್ರೋಲ್‌ಗೆ ಕಬ್ಬನಿಂದ ತೆಗೆದ ಎಥನಾಲ್ ಬೆರೆಸಲಾಗುತ್ತಿದೆ. ಯುರೋಪ್ ಕೇವಲ ರಷ್ಯಾದ ತೈಲದ ಮೇಲಷ್ಟೇ ಅವಲಂಬಿತವಾಗಿದ್ದರೆ ಭಾರತವು ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡಿಕೊಳ್ಳತೊಡಗಿದೆ. ಅಮೆರಿಕದ ನಿರ್ಬಂಧದ ಹೊರತಾಗಿಯೂ ಭಾರತವು ತನ್ನ ಹಿತಾಸಕ್ತಿಯ ದೆಸೆಯಿಂದ ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲಿಲ್ಲ.

ವಿವಿಧ ರಾಷ್ಟ್ರಗಳು ಕೊಲ್ಲಿ ಯುದ್ಧದ ಕಾರಣದಿಂದ ತೈಲ ಬಿಕ್ಕಟ್ಟು ಎದುರಿಸುತ್ತಿರಬೇಕಾದರೆ, ಭಾರತವು ಈ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುತ್ತಿರಬೇಕಾದರೆ ಅದಕ್ಕೆ ಕಾರಣ – ಮೋದಿಯವರ ತೈಲ ರಾಜತಾಂತ್ರಿಕತೆ.

ಲಕ್ಷಾಂತರ 'ತರುಣರಿಗೆ' ಜೆಸಿಬಿ ನ್ಯಾಯ ಒದಗಿಸಿತೇ?

ಪೃಥ್ವಿರಾಜ್ ಕುಲಕರ್ಣಿ



ಅಂದು ಹೋಳಿ! ಎಲ್ಲೆಲ್ಲೂ ಹಬ್ಬದ ಸಡಗರ. ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳು ನೆರವೇರುತ್ತಿದ್ದವು. ಜನರು ಬಣ್ಣದಲ್ಲಿ ಮುಳುಗೇಳುತ್ತಿದ್ದರು. ಆದರೆ ಅಲ್ಲೊಂದು ಕಡೆ ಸುಮಾರು 20–25ಜನರು ಕೈಯಲ್ಲಿ ಹಾಕಿ ಸ್ಟಿಕ್, ಮಾರಕಾಸ್ತ್ರಗಳನ್ನು ಹಿಡಿದು ಯುವಕನೊಬ್ಬನಿಗೆ ಕಾಯುತ್ತಿದ್ದರು. 2 ತಾಸಿನ ಹಿಂದೆ ದಿಲ್ಲಿಯ ಉತ್ತಮನಗರದ 12 ವರ್ಷದ ಮುಗ್ಧ ಬಾಲಕಿ ಕೈಯಲ್ಲಿ ಬಣ್ಣ ತುಂಬಿದ ಬಲೂನ್ ಹಿಡಿದು ಹೋಳಿ ಆಡುತ್ತಿದ್ದಳು. ಮನೆಯ ಅಂಗಳದಲ್ಲಿ ನಿಂತಿದ್ದ ತನ್ನ ಅಜ್ಜನತ್ತ ಬಾಲಕಿ ಅಜ್ಜನತ್ತ ಬಲೂನ್ ಬಿಟ್ಟಳು. ಅದು ಒಂದು ಜೀವವನ್ನೇ ತೆಗೆದುಕೊಳ್ಳುತ್ತದೆ ಎಂಬುದು ಅಕ್ಷರಶಃ ಆವಳಿಗೆ ಗೊತ್ತಿರಲಿಲ್ಲ.

ಅದೇ ಬೀದಿಯಲ್ಲಿ ಮುಸ್ಲಿಂ ಮಹಿಳೆಯೊಬ್ಬಳು ಹಾದು ಹೋಗುತ್ತಿದ್ದಳು. ಬಾಲಕಿ ಬಿಟ್ಟ ಬಲೂನ್ ನೆಲಕ್ಕೆ ಪುಟಿದು ಮುಸ್ಲಿಂ ಮಹಿಳೆಯ ಮೇಲೆ ಬಣ್ಣ ಹಾರಿತು. ಬಾಲಕಿಯನ್ನು ಬೈಯ್ಯತೊಡಗಿದ ಮಹಿಳೆ ಜಗಳಕ್ಕಿಳಿದಳು. ಬಿಡಿಸಲು ಬಂದವರಿಗೂ ಬೈದಳು. ಒಂದು ಪುಟ್ಟ ಜಗಳ. ಸಾಮಾನ್ಯ ಮನುಷ್ಯರಾಗಿದ್ದರೆ 'ನೋಡಿಕೊಂಡು ಆಡಮ್ಮಾ' ಅನ್ನುತ್ತಿದ್ದರು. ಆದರೆ ಅಲ್ಲಿಗೆ ನಿಲ್ಲದ ಜಗಳ ಮುಸ್ಲಿಂ ಮಹಿಳೆಯ ಮನೆಯವರನ್ನು ಕರೆತಂದಿತು. ಬಾಯಿಗೆ ಬಾಯಿ ಹತ್ತಿತು, ಕೈಕೈ ಮಿಲಾಯಿಸುವ ಹಂತಕ್ಕೂ ಹೋಯಿತು. ನೆರೆದ ಮುಸ್ಲಿಮರು ಬಾಲಕಿಯ ಮನೆಯವರನ್ನು ಥಳಿಸಿದರು. ಮನೆಯೊಳಗೆ ಕೂಡಿಸಿ ಹೊರಗಿನಿಂದ ಗೇಟುಗಳನ್ನು ಹಾಕಿದರು.

ಇತ್ತ ವಿಷಯದ ತಿಳಿಯದೇ ಅದೇ ಮನೆಯ ತರುಣ್ ಎಂಬ ಯುವಕ ಹೋಳಿ ಸಡಗರದಲ್ಲಿ ಮುಳುಗಿದ್ದ. ಮನೆಗೆ ಬರುವಷ್ಟರಲ್ಲಿ ಸುಮಾರು 15ಕ್ಕೂ ಹೆಚ್ಚು ಮುಸ್ಲಿಂ ಯುವಕರು ಗೇಟಿನ ಮುಂದೆ ಕಾಯುತ್ತ ನಿಂತಿದ್ದರು. ಬಂದ ತಕ್ಷಣಕ್ಕೆ ತರುಣನನ್ನು ಥಳಿಸಲಾರಂಭಿಸಿದರು. ರಾಡಿನಿಂದ ಬಡಿದರು. ವಿಲವಿಲ ಒದ್ದಾಡುತ್ತಿದ್ದ ಆ ತರುಣನ ಉಸಿರು ನಿಂತಿತು. ಒಂದಿಷ್ಟು ಬಣ್ಣ ಮೈಗೆ ಚೆಲ್ಲಿತು ಎಂಬ ಕಾರಣಕ್ಕೆ ಒಂದು ಜೀವವೇ ಹೋಗುತ್ತದೆಂದರೆ!? ತರುಣನ ಹತ್ಯೆಯ ಸುದ್ದಿ ಕ್ಷಣದಲ್ಲಿ ಹರಡಿತು. ಹಿಂದು ಸಂಘಟನೆಗಳು ಹೋರಾಟಕ್ಕಿಳಿದರು. ಅಲ್ಲಿಗೆ ಖ್ಯಾತ ನ್ಯಾಯವಾದಿ ಜೆ. ಸಾಯಿ ದೀಪಕ್ ಅವರ you can proudly criticize RSS and BajarangDal until the day a mob comes to your door, screaming for your head ಎಂಬ ಮಾತು ನೆನಪಿಗೆ ಬಂತು. ಜನರ ಆಕ್ರೋಶಕ್ಕೆ ಸರ್ಕಾರ ನಲುಗಿತು. ತ್ವರಿತ ಕ್ರಮ ಕೈಗೊಂಡ ಸ್ಥಳೀಯ ಆಡಳಿತ ಆರೋಪಿಗಳ ಅಕ್ರಮ ಮನೆಗಳನ್ನು ಕೆಡವಿತು. ಆದರೆ ಜೆಸಿಬಿಯಿಂದ ಸಂಪೂರ್ಣ ಶಿಕ್ಷೆ ನೀಡಿದಂತಾಯಿತೇ? ಆರೋಪಿಗಳ ಮೇಲೆ ಸೆಕ್ಷನ್ (302) ಕೊಲೆ ಆರೋಪದಡಿ ಕೇಸು ದಾಖಲಿಸಲಾಯಿತು. ಜನರ ಪ್ರತಿಭಟನೆಯ ನಂತರ sc/st prevention of atrocities act ಸೇರಿಸಲಾಯಿತು. ಇದು ಅವಶ್ಯವಾಗಿತ್ತು. ಏಕೆಂದರೆ ಅಲ್ಲಿ ನಡೆದಿದ್ದು ಜಾತಿ ಆಧಾರಿತ ಹತ್ಯೆ. ಹಾಗಾಗಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಅನ್ನು ಕೂಡ ಇದರಲ್ಲಿ ಸೇರಿಸಬೇಕಿತ್ತು. ಆದರೆ ಆದಾಗಲಿಲ್ಲ.

ಧರ್ಮಾಧರಿತ ಹತ್ಯೆಗಳಿಗಾಗಿಯೇ ಈ ಹೊಸ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ವೈಯಕ್ತಿಕ ದ್ವೇಷದಿಂದ ಹತ್ಯೆ ಮಾಡಿದರೆ ಅದು ಕೊಲೆ. ಆ ಕೊಲೆಯಲ್ಲಿ ಇನ್ನಷ್ಟು ಜನರು ಸೇರಿಕೊಂಡರೆ ಗುಂಪು ಹತ್ಯೆ. ಆದರೆ ತರುಣನ ಕೇಸಿನಲ್ಲಿ ನಡೆದಿದ್ದು Mob lynching. ಭಾರತೀಯ ನ್ಯಾಯ ಸಂಹಿತೆಯ 103(02) ಪ್ರಕಾರ ಇದು ಅಕ್ಷರಶಃ Mob lynching. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಒಂದು ಗುಂಪು (mob) ಕಾನೂನು ಕೈಗೆ ತೆಗೆದುಕೊಂಡು ಅನುಮಾನ, ಕೋಪ, ಜಾತಿ/ಧರ್ಮ ಅಥವಾ ವದಂತಿಗಳ ಆಧಾರದ ಮೇಲೆ ಕೊಲ್ಲುವುದನ್ನು ಗುಂಪುಹತ್ಯೆ ಎನ್ನುತ್ತದೆ. ಇಲ್ಲಿ ಆಗಿದ್ದು ಕೂಡ ಅದೇ. ಆದರೆ ಎಡಪಂಥೀಯ ಮಾಧ್ಯಮಗಳು ಪ್ರಕರಣದ ದಿಕ್ಕು ತಪ್ಪಿಸಲು, ತರುಣ್ ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ಜಗಳವಿತ್ತು. ಇದು ಜಾತಿ ಆಧರಿತ ಕೊಲೆ ಅಲ್ಲ ಅನ್ನುತ್ತಿದ್ದಾರೆ. ಆದರೆ ಕೊಲೆ ನಡೆದಿದ್ದು ಹೋಳಿಯ ಬಣ್ಣ ತಾಗಿದಕ್ಕೆ! ಅದು ಸಾಮಾನ್ಯ ದ್ವೇಷವೇ? ಇತರ ಅನೇಕ ಪ್ರಕರಣಗಳಲ್ಲಿ ಹಿಂದು ಹಬ್ಬಗಳಲ್ಲಿ ಅನ್ಯ ಕೋಮಿನ ಜನರು ಕಲ್ಲೆಸೆದು ನೆಮ್ಮದಿ ಹಾಳು ಮಾಡುತ್ತಲೇ ಬಂದಿದ್ದಾರಲ್ಲ? ಭಾರತದಲ್ಲಿ ಶಿವಾಜಿ ಜಯಂತಿ ಮಾಡಿದಾಗ ಕಲ್ಲೆಸೆಯಲಾಗುತ್ತದೆ, ರಾಮನವಮಿ ಮೆರವಣಿಗೆ ವೇಳೆ ದಂಗೆಗಳಾಗುತ್ತವೆ. ಹಿಂದು ಹಬ್ಬಗಳಲ್ಲಿ ದಾಂಧಲೆಗಳು ನಡೆಯುತ್ತಲೇ ಬಂದಿವೆ. ಭಾರತ ಟಿ20 ವಿಶ್ವಕಪ್ ಗೆದ್ದಾಗ ಪಟಾಕಿ ಸಿಡಿಸಿದ್ದಕ್ಕಾಗಿ ಉಜ್ಜೈನಿಯ ಮುಸ್ಲಿಂ ಗುಂಪೊಂದು ಹಿಂದುಗಳ ಮೇಲೆ ಹಲ್ಲೆ ಮಾಡಿದೆ. ಯಾವ ಪುರುಷಾರ್ಥಕ್ಕಾಗಿ ಇದೆಲ್ಲಾ ಮಾಡುತ್ತಾರೆ ಎಂಬುದು ತಿಳಿಯದ ವಿಚಾರವೇನಲ್ಲ. ಅಮರಿಕ, ದುಬೈ ಇತ್ಯಾದಿ ದೇಶಗಳಲ್ಲಿ ಹಿಂದುಗಳು ನೆಮ್ಮದಿಯಾಗಿ ಹಬ್ಬದ ಆಚರಣೆ ಮಾಡುತ್ತಾರೆ. ಹಲವು ದೇಶಗಳ ಸರ್ಕಾರಗಳು ಹಿಂದುಗಳ ಹಬ್ಬಕ್ಕೆ ರಜೆಯನ್ನೂ ನೀಡುತ್ತವೆ. ಆದರೆ ಭಾರತದಲ್ಲೇ ಹಿಂದುಗಳು ನೆಮ್ಮದಿಯಿಂದ ಹಬ್ಬ ಹುಣ್ಣಿಮೆಗಳನ್ನು ಆಚರಿಸುವಂತಿಲ್ಲ. ಬಾಂಗ್ಲಾದೇಶದಲ್ಲಿ ಹಿಂದುಗಳ ರಕ್ಷಣೆಗಾಗಿ ಕೈಚಾಚಬೇಕಾಗುತ್ತದೆ. ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ರಕ್ಷಣೆಗಾಗಿ ಕೈಚಾಚುವ ಪರಿಸ್ಥಿತಿ ಬರುತ್ತಿದೆ.

"100 ಹಿಂದು ಕುಟುಂಬಗಳಿರುವ ಸ್ಥಳದಲ್ಲಿ ಒಂದು ಮುಸ್ಲಿಂ ಕುಟುಂಬ ಆರಾಮಾಗಿರಬಹುದು. ಆದರೆ 100 ಮುಸ್ಲಿಂ ಕುಟುಂಬಗಳಿರುವಲ್ಲಿ ಒಂದು ಹಿಂದು ಕುಟುಂಬ ಸುರಕ್ಷಿತವಾಗಿರುವರೇ?" ಎಂಬ ಯೋಗಿಯವರ ಮಾತಿನಲ್ಲಿ ಎಷ್ಟೊಂದು ಸತ್ಯ ಅಡಗಿದೆ ಅನ್ನಿಸುತ್ತದೆ. ನಮ್ಮ ಕರ್ನಾಟಕದಲ್ಲೇ ಕೆಲವು ಭಾಗಗಳ ಕೆಲವು ಏರಿಯಾಗಳಲ್ಲಿ ಗಣೇಶನ ಮೆರವಣಿಗೆ ಮಾಡುವಂತಿಲ್ಲ. ಮಾಡಿದರೂ ಆಜಾನ್ ಆಗುವ ಸಮಯಕ್ಕೆ ಬಂದ್ ಮಾಡಬೇಕಾಗುತ್ತದೆ. ಸೂಕ್ಷ್ಮ ಪ್ರದೇಶದ ಪ್ರತಿಯೊಂದು ಏರಿಯಾದಲ್ಲಿ ಇಂಥವರ ಗುಂಪೊಂದು ಇರುತ್ತದೆ. ತಕ್ಷಣಕ್ಕೆ ಇಡೀ ಗುಂಪು ಸಕ್ರೀಯವಾಗುತ್ತದೆ. ಆದಕ್ಕೆ ದೆಹಲಿಯ ತರುಣ್ ಹತ್ಯೆ ಕೂಡ ಇಂಥವರಿಂದಲೇ ನಡೆದಿದೆ. ಕಠಿಣ ಕಾನೂನಿನ ಮೂಲಕ ಅದನ್ನು ನಿಗ್ರಹಿಸಬೇಕಾಗಿದೆ. ತರುಣ್ ಹತ್ಯೆಗೈದವರ ಮೇಲೆ ಎಸ್‌ಸಿ ಕಾಯ್ದೆ ಒಂದೇ ಅಲ್ಲ. Mob lynching ಕೂಡ ದಾಖಲಾಗಬೇಕು.

ಕಿರುಸುದ್ದಿ

ಬಸ್ರೂರು : ಏ. 5 : ಉಚಿತ ಆರೋಗ್ಯ ತಪಾಸಣಾ ಶಿಬಿರ

ಕುಂದಾಪುರ : ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನ ಟ್ರಸ್ಟ್ ಬಸ್ರೂರು, ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಬಸ್ರೂರು ಹಾಗೂ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಇವರ ಸಹಯೋಗದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಬಸ್ರೂರು ಮಂಡಿಕೇರಿ ಶ್ರೀ ಮಹಾಲಸಾ ನಾರಾಯಣೀ ಸಭಾಭವನದಲ್ಲಿ ಏ. 5 ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ನಡೆಯಲಿದೆ. ಶಿಬಿರದಲ್ಲಿ ಚರ್ಮರೋಗ, ಮೂಳೆ ಸಂಬಂಧಿ ತಪಾಸಣೆ ರಕ್ತದಲ್ಲಿನ ಸಕ್ಕರೆ ಅಂಶ ಪರೀಕ್ಷೆ, ಮಧುಮೇಹ ಪಾದದ ಪರೀಕ್ಷೆ, ಶರೀರ ಸಂಯೋಜನೆ ವಿಶ್ಲೇಷಣೆ ಮೊದಲಾದ ಪರೀಕ್ಷೆಗಳನ್ನು ನಡೆಸಲಾಗುವುದು ಮತ್ತು ಉಚಿತವಾಗಿ ಔಷಧಿಗಳನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9448311618, 9481259158, 9343888657, 9945985178 ಸಂಪರ್ಕಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

ಮಾ.26: ಚಿತ್ರಾಪು ಶ್ರೀ ಸೀತಾರಾಮ ಭಜನಾ ಮಂದಿರದಲ್ಲಿ 78ನೇ ಮಂಗಲೋತ್ಸವ

ಮುಲ್ಕಿ: ಚಿತ್ರಾಪು ಮೊಗವೀರ ಸಭಾ ಸಂಚಾಲಕತ್ವದ ಶ್ರೀ ಸೀತಾರಾಮ ಭಜನಾ ಮಂದಿರದಲ್ಲಿ ಮಾ.26ರಂದು ಶ್ರೀರಾಮನವಮಿಯಂದು 78ನೇ ಮಂಗಲೋತ್ಸವ ಹಾಗೂ 7ನೇ ಏಕಾಹ ಭಜನಾ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 5ಕ್ಕೆ ಗಣಹೋಮ, ಕಲಶಾಭಿಷೇಕ, ಮಹಾಪೂಜೆ, ಸೂರ್ಯೋದಯ 6.32ಕ್ಕೆ ದೀಪೋದ್ಘಾಟನೆಗೊಂಡು ಭಜನೆ ಪ್ರಾರಂಭ. ಮಧ್ಯಾಹ್ನ ಗಂಟೆ 12.30ಕ್ಕೆ ಮಹಾ ಅನ್ನಸಂತರ್ಪಣೆ, ರಾತ್ರಿ 8.30ಕ್ಕೆ ಶ್ರೀ ದೇವರ ಮೂರ್ತಿ ಮೆರವಣಿಗೆ ನಡೆಯಲಿದೆ. ಮಾ. 27ರಂದು ಸೂರ್ಯೋದಯ 6.32 ಕ್ಕೆ ಭಜನಾ ಮಂಗಲೋತ್ಸವ, ಪ್ರಸಾದ ವಿತರಣೆ, ಸಂಜೆ 5ರಿಂದ ಕಲಾರತ್ನ ಶಂನಾಡಿಗ ಕುಂಬ್ಳೆ ಅವರಿಂದ 'ಹರಿಕಥಾ ಸತ್ಸಂಗ', ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಮಾ. 28ರಂದು ಬೆಳಿಗ್ಗೆ 11ರಿಂದ ಸಾಮೂಹಿಕ ಶನಿಪೂಜೆ ನಡೆಯಲಿದೆ ಚಿತ್ರಾಪು ಮೊಗವೀರ ಸಭಾ ಹಾಗೂ ಮುಂಬೈ ಸಮಿತಿ, ಮೊಗವೀರ ಮಹಿಳಾ ಸಮಾಜ ಶ್ರೀ ಸೀತಾರಾಮ ಭಜನಾ ಮಂಡಳಿಯ ಪ್ರಕಟಣೆ ತಿಳಿಸಿದೆ.

ಎನ್ಎಂಪಿಎಯಿಂದ ಬೀಚ್ ವಾಲಿಬಾಲ್ ಪಂದ್ಯಾಟ

ಮಂಗಳೂರು: ಮೇಜರ್ ಪೋರ್ಟ್ಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ಹಾಗೂ ನವ ಮಂಗಳೂರು ಪೋರ್ಟ್ ಸ್ಪೋರ್ಟ್ಸ್ ಕೌನ್ಸಿಲ್ ಸಹಯೋಗದಲ್ಲಿ, ಅಖಿಲ ಭಾರತ ಪ್ರಮುಖ ಬಂದರುಗಳ ವಾಲಿಬಾಲ್ ಮತ್ತು ಬೀಚ್ ವಾಲಿಬಾಲ್ ಪಂದ್ಯಾಟವನ್ನು ಮಾ.24ರಿಂದ 27ರವರೆಗೆ ಬಂದರು ಪ್ರಾಧಿಕಾರದ ಕ್ರೀಡಾ ಸಂಕೀರ್ಣ ಮತ್ತು ಪಣಂಬೂರು ಕಡಲತೀರದಲ್ಲಿ ಆಯೋಜಿಸಲಾಗಿದೆ. ಮಾ.24ರಂದು ಸಂಜೆ 5 ಗಂಟೆಗೆ ನವ ಮಂಗಳೂರು ಬಂದರು ಪ್ರಾಧಿಕಾರದ ಉಪಾಧ್ಯಕ್ಷೆ ಎಸ್. ಶಾಂತಿ ಅವರು ಉದ್ಘಾಟಿಸಲಿದ್ದಾರೆ. ಈ ಪ್ರತಿಷ್ಠಿತ ಟೂರ್ನಮೆಂಟ್‌ನಲ್ಲಿ ದೇಶದ ಪ್ರಮುಖ ಬಂದರುಗಳಾದ ಮುಂಬೈ, ದೀನದಯಾಳ್, ಕೊಲ್ಕತ್ತಾ, ಪರದೀಪ್, ಚೆನ್ನೈ, ವಿಶಾಖಪಟ್ಟಣಂ, ಕೊಚ್ಚಿನ್, ಮರ್ಮುಗಾವ್, ವಿ.ಒ.ಸಿ ಬಂದರು ಹಾಗೂ ಆತಿಥೇಯವಾದ ನವ ಮಂಗಳೂರು ಬಂದರು ಪ್ರಾಧಿಕಾರ ಭಾಗವಹಿಸಲಿವೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಡಾ। ಚಂದ್ರಪ್ರಭಾ, 'ಶ್ರೀಭ್ರಾಮರಿ', ಬ್ರಹ್ಮಸ್ಥಾನದ ಬಳಿ, ಕುಲಶೇಖರ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಬತ್ತೇರಿ ಫ್ರೆಂಡ್ಸ್ (ರಿ) ಬೋಳೂರು, ಬತ್ತೇರಿ ಮೈದಾನದಲ್ಲಿ, ಮಂಗಳೂರು (ತಾ).
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಮತ್ತು ನೌಕರರ ಸಂಘ, ತಾಲೂಕು ಪಂಚಾಯತ್ ಕಛೇರಿ, ಮಂಗಳೂರು.
4. ಪ್ರಕಾಶ್ ಹೆಗ್ಡೆ, ಹಲೆಕ್ಕಿಮನೆ, ಮೂಡುಕೋಡಿ, ವೇಣೂರು, ಬೆಳ್ತಂಗಡಿ (ತಾ).
5. ತಿಮ್ಮಪ್ಪ ನಾಯ್ಕ, 'ಸ್ವಸ್ತಿಕ್ ನಿವಾಸ', ಬಿ.ಟಿ. ರೋಡ್, ಜನತಾ ನಗರ, ಕಡಂದಲೆ.
6. ಪೂವಪ್ಪ ಎಲ್. ಸಾಲ್ಯಾನ್, ಕೆಮ್ರಾಲ್, ಅತ್ತೂರು ಶರಣ ವಯಾ ಪಕ್ಷಿಕೆರೆ.
7. ಮಿಥುನ್, 'ದುರ್ಗಾನಿವಾಸ', ಬಜಾಲ್, ಕಾವು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಬಳಿ ವಯಾ ಪಡೀಲ್.

ಶ್ರೀ ಧರ್ಮಸ್ಥಳ ಮೇಳ
ಯಡೂರಿನಲ್ಲಿ
ಶ್ರೀ ಗುತ್ತಿರೇಣುಕಾಂಬ ಯಕ್ಷಗಾನ ಬಯಲಾಟ ಸಮಿತಿ

ಶ್ರೀ ಹನುಮಗಿರಿ ಮೇಳ
ಬೆಂಗಳೂರಿನಲ್ಲಿ

ಶ್ರೀ ಪಾವಂಜೆ ಮೇಳ
ಕನ್ಯಾನ-ಹೆಬ್ರಿ
ಶ್ರೀ ದೇವಿ ಮಹಾತ್ಮೆ



ಕ್ಯಾಂಪ್ಕೋ ಸಂಸ್ಥೆಯ 'ಸಾಂತ್ವನ' ಯೋಜನೆಯಡಿಯಲ್ಲಿ ಆರ್ಥಿಕ ನೆರವಿನ ಚೆಕ್ ಹಸ್ತಾಂತರ ಕಾರ್ಯಕ್ರಮವು ಕಾವು ಶಾಖೆಯಲ್ಲಿ ನಡೆಯಿತು. ಕ್ಯಾಂಪ್ಕೋ ಸಂಸ್ಥೆ ಕಾವು ಶಾಖೆಯ ಸದಸ್ಯರಾದ ಸುಂದರ ಪೂಜಾರಿ ಕೆರೆಮಾರು ಅವರ ಆಂಜಿಯೋಪ್ಲಾಸ್ಟಿ ಶಸ್ತ್ರಕ್ರಿಯೆಗೆ ಸಹಾಯಧನದ ಮೊತ್ತ ರೂ.50 ಸಾವಿರದ ಚೆಕ್ಕನ್ನು ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕ ಮುರಳೀಕೃಷ್ಣ ಕೆ.ಎನ್. ಹಸ್ತಾಂತರಿಸಿದರು. ಈ ಸಂದರ್ಭ ಸಂಸ್ಥೆಯ ಉಪ ಪ್ರಧಾನ ವ್ಯವಸ್ಥಾಪಕ ಗೋವಿಂದ ಭಟ್, ಶಾಖೆಯ ಪ್ರಬಂಧಕ ಅಮರೇಶ್ ಪಿ. ಉಪಸ್ಥಿತರಿದ್ದರು.

ಏ. 5ರಂದು ಹಾಕಿ ಬೇಸಿಗೆ ಶಿಬಿರ ಉದ್ಘಾಟಿಸಲು ಒಲಂಪಿಯನ್ ವಾಸುದೇವನ್ ಭಾಸ್ಕರನ್ ಕೊಡಗಿಗೆ

ನಾಪೋಕ್ಲು: ಮಾಸ್ಕೋ ಒಲಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ನಾಯಕ ವಾಸುದೇವನ್ ಭಾಸ್ಕರನ್ ಬಾಳೆಲೆಯಲ್ಲಿ ಆಯೋಜಿಸಿರುವ ಉಚಿತ ಹಾಕಿ ಬೇಸಿಗೆ ಶಿಬಿರವನ್ನು ಉದ್ಘಾಟಿಸಲು ಏ. 5ರಂದು ಕೊಡಗಿಗೆ ಭೇಟಿ ನೀಡಲಿದ್ದಾರೆ.

ಒಲಂಪಿಯನ್ ಬಾಲೆಯಡ ಕೆ. ಸುಬ್ರಮಣಿ ಆಯೋಜಿಸಿರುವ 2ನೇ ಎರಡನೇ ವರ್ಷದ ಉಚಿತ ಹಾಕಿ ಬೇಸಿಗೆ ಶಿಬಿರವನ್ನು ಉದ್ಘಾಟನೆ ಮಾಡಲು ಆಗಮಿಸುತ್ತಿರುವ ವಾಸುದೇವನ್ ಭಾಸ್ಕರನ್ 287 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿ 1980 ರ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ನಾಯಕನಾಗಿ ಮುನ್ನಡೆಸಿ ಚಿನ್ನದ ಪದಕ ಗೆದ್ದದ್ದು. ಅವರು 1976ರ ಒಲಿಂಪಿಕ್ಸ್ ಮತ್ತು 1978ರ ವಿಶ್ವಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಅಲ್ಲದೆ, 1978ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಂಚಿನ ಪದಕ ಮತ್ತು 1979 ರ ಪೂರ್ವ-ಒಲಿಂಪಿಕ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ತಂಡದ ಭಾಗವಾಗಿದ್ದರು. ಅವರಿಗೆ 1979ರಲ್ಲಿಅರ್ಜುನ ಪ್ರಶಸ್ತಿ , 1981ರಲ್ಲಿ ಪದ್ಮಶ್ರೀ ಹಾಗೂ ಇಂಡಿಯನ್ ರೈಲ್ವೆಸ್ ಬೆಸ್ಟ್ ಸ್ಪೋರ್ಟ್ಸ್ ಪರ್ಸನ್ ಪ್ರಶಸ್ತಿ ಹಾಗೂ 1983ರಲ್ಲಿ ಇಂಡಿಯನ್ ಸ್ಪೋರ್ಟ್ಸ್ ಜರ್ನಲಿಸ್ಟ್ ಪ್ರಶಸ್ತಿಗಳು ಲಭಿಸಿದೆ. ಕೊಡಗಿನ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಹಾಕಿ ಆಟಗಾರರೊಂದಿಗೆ ಆಡಿದ್ದಾರೆ. ಭಾಸ್ಕರನ್ ಅವರು ಕೊಡಗಿನ ಹಲವಾರು ಪ್ರಮುಖ ಆಟಗಾರರಿಗೆ ತರಬೇತಿ ನೀಡಿದ್ದು ಭಾರತದಲ್ಲಿ ಹಾಕಿ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿದ್ದಾರೆ.



ಭಾಸ್ಕರನ್ ಅವರು ಒಲಿಂಪಿಕ್ಸ್ ಮತ್ತು ಏಷ್ಯನ್ ಗೇಮ್ಸ್ ಸೇರಿದಂತೆ 41 ವಿವಿಧ ಕ್ರೀಡೆಗಳಲ್ಲಿ ಉನ್ನತ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಉತ್ತೇಜಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದರು.

ಮೊದಲ ಬಾರಿಗೆ 1980ರ ಮಾಸ್ಕೋ ಒಲಂಪಿಕ್ಸ್‌ನಲ್ಲಿ ಹಾಕಿಯಲ್ಲಿ ಚಿನ್ನದ ಪದಕ ಗೆದ್ದ ವಾಸುದೇವ ಭಾಸ್ಕರನ್ ಅವರಂತಹ ನುರಿತ ತರಬೇತುದಾರರನ್ನು ಕರೆತಂದು ಶಿಬಿರ ಏರ್ಪಡಿಸುತ್ತಿರುವುದು ಬಹಳ ಉತ್ತೇಜನಕಾರಿಯಾಗಿದೆ.

ಸದನದಲ್ಲಿ ವಿಧಾನಪರಿಷತ್ ಸದಸ್ಯ ಕಿಶೋರ್‌ಕುಮಾರ್ ಪುತ್ತೂರು ಆಗ್ರಹ

ಭೂ ಗಡಿ ಪ್ಲಾಟಿಂಗ್‌ಗೆ ಸರ್ಕಾರ ಕ್ರಮ ಕೈಗೊಳ್ಳಲಿ

ಪುತ್ತೂರು: ಅಕ್ರಮ-ಸಕ್ರಮದಡಿ ಮಂಜೂರಾತಿ ಜಮೀನಿನ ಅರಣ್ಯ-ಕಂದಾಯ ಭೂ ಗಡಿ ಪ್ಲಾಟಿಂಗ್ ಗೆ ಕ್ರಮ ಕೈಗೊಳ್ಳುವಂತೆ ವಿಧಾನ ಪರಿಷತ್ ಸದಸ್ಯ ಕಿಶೋರ್ ಪುತ್ತೂರು ಅವರು ಸರಕಾರವನ್ನು ಆಗ್ರಹಿಸಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಶಾಸಕರ ಚುಕ್ಕೆ ಗುರುತಿನ ಪ್ರಶ್ನೆಗೆ ಅರಣ್ಯ ಸಚಿವರ ಉತ್ತರಕ್ಕೆ ಪ್ರತಿಯಾಗಿ ಮಾತನಾಡಿದ ಶಾಸಕ ಕಿಶೋರ್, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಅರಣ್ಯ ಮತ್ತು ಕಂದಾಯ ಜಮೀನಿನ ಗಡಿಗಳು ಸ್ಪಷ್ಟವಾಗಿ ಗುರುತಿಸದೇ ಇರುವುದರಿಂದ ಸ್ಥಳೀಯ ರೈತರು ಹಾಗೂ ಗ್ರಾಮೀಣ ಜನತೆ ಅನೇಕ ವರ್ಷಗಳಿಂದ ಕಾನೂನು ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಿಶೇಷವಾಗಿ ದ.ಕ. ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಅನೇಕ ರೈತರು ಹಲವು ದಶಕಗಳಿಂದ ಕಂದಾಯ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದ ಭೂಮಿಯನ್ನು, ಸರಕಾರವು ಅಕ್ರಮ-ಸಕ್ರಮದಡಿಯಲ್ಲಿ ಶಾಸಕರ ನೇತೃತ್ವದ ಬಗರ್ ಹುಕುಂ ಸಮಿತಿಯ ಮೂಲಕ ಸದರಿ ಅರ್ಜಿದಾರ ರೈತರಿಗೆ ಹಕ್ಕುಪತ್ರ ಮೂಲಕ ಮಂಜೂರು ಮಾಡಿದ್ದರೂ ಅರಣ್ಯ ಜಮೀನಿನ ಹತ್ತಿರದಲ್ಲಿರುವ ಕೃಷಿ ಜಮೀನು ಪೋಡಿಯಾಗದ (ಪ್ಲಾಟಿಂಗ್) ಕಾರಣ ಪಹಣಿ ಪತ್ರಿಕೆಯಲ್ಲಿ ಭಾಗಶಃ ಅರಣ್ಯ ಪ್ರದೇಶವೆಂದು ತೋರಿಸಲಾಗುತ್ತಿದೆ.



ಈ ಕಾರಣದಿಂದಾಗಿ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳಲ್ಲಿ ಪ್ರಮುಖವಾಗಿ ಹಕ್ಕುಪತ್ರ ಇದ್ದರೂ ಜಮೀನಿನ ಮೇಲೆ ಸಂಪೂರ್ಣ ಹಕ್ಕು ಉಪಯೋಗಿಸಲು ಆಗದಿರುವುದು, ಕೃಷಿ ಅಭಿವೃದ್ಧಿಗೆ ಬ್ಯಾಂಕ್ ಸಾಲ, ಬೆಳೆ ವಿಮೆ, ವಿದ್ಯುತ್ ಸಂಪರ್ಕ ಸೇರಿದಂತೆ ಹಲವು ಸೌಲಭ್ಯಗಳು ಸಿಗದಿರುವುದು, ಜಮೀನು ದಾಖಲೆಗಳಲ್ಲಿ ವ್ಯತ್ಯಾಸದಿಂದ ಅನಗತ್ಯ ಕಾನೂನು ವಿವಾದಗಳು ಉಂಟಾಗುತ್ತಿದೆ. 94 ಸಿ ಹಕ್ಕುಪತ್ರ ಕೋರಿ ಅರ್ಜಿ ಸಲ್ಲಿಸಿರುವ ಆರ್ಥಿಕ ಬಡವರ್ಗದ ಫಲಾನುಭವಿಗಳಿಗೆ ಅರಣ್ಯ ಇಲಾಖೆಯ ಆಕ್ಷೇಪಣೆಯಿಂದಾಗಿ ಹಕ್ಕು ಪತ್ರ ದೊರೆಯುತ್ತಿಲ್ಲ. ಸದರಿ ಸಮಸ್ಯೆಯನ್ನು ಪರಿಹರಿಸಲು ಸರಕಾರವು ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ ಎಂದು ಅವರು ಆಗ್ರಹಿಸಿದರು.

ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಸೇರಿ ಡ್ರೋನ್, ಜಿಐಎಸ್ ತಂತ್ರಜ್ಞಾನ ಬಳಸಿ ಅರಣ್ಯ-ಕಂದಾಯ ಗಡಿಯನ್ನು ಸರ್ವೇ ನಡೆಸಬೇಕು. ಸದರಿ ಸರ್ವೆ ಕಾರ್ಯವನ್ನು ಕಾಲಮಿತಿಯೊಳಗೆ ಮುಕ್ತಾಯಗೊಳಿಸಬೇಕು. ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ರಚನೆ ಮಾಡಬೇಕು (ಪ್ರತಿ ಜಿಲ್ಲೆಯಲ್ಲಿ). ಅಕ್ರಮ-ಸಕ್ರಮ ಯೋಜನೆಯಡಿ ಕಂದಾಯ ಇಲಾಖೆ ನೀಡಿದ ಹಕ್ಕುಪತ್ರಗಳನ್ನು ಅಂತಿಮ ದಾಖಲೆ ಎಂದು ಪರಿಗಣಿಸಿ, ಅರಣ್ಯ ಇಲಾಖೆಯ ದಾಖಲೆಗಳನ್ನು ಅದಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡುವ ಕ್ರಮ ಕೈಗೊಳ್ಳಬೇಕು. ಗಡಿ ಸರ್ವೆ ಮತ್ತು ಪರಿಶೀಲನೆ ಪೂರ್ಣಗೊಳ್ಳುವವರೆಗೆ ರೈತರ ವಿರುದ್ಧ ಅರಣ್ಯ ಇಲಾಖೆ ಕೈಗೊಳ್ಳುತ್ತಿರುವ ಒತ್ತುವರಿ ತೆರವು ಅಥವಾ ಕಾನೂನು ಕ್ರಮಗಳನ್ನು ಸ್ಥಗಿತಗೊಳಿಸಬೇಕು. ಅರಣ್ಯ ಇಲಾಖೆಯ ಕಾರ್ಯ ಯೋಜನೆ ಮತ್ತು ಮೋಜಣಿ ವಿಭಾಗಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸುವ ಮೂಲಕ ಗಡಿ ಗುರುತಿಸುವ ಕೆಲಸಕ್ಕೆ ವೇಗ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಸದರಿ ಗಡಿ ಸಮಸ್ಯೆಯನ್ನು ಕೂಡಲೇ ನಿವಾರಿಸುವಂತೆ ಪ್ರತ್ಯೇಕವಾದ ಮನವಿಯನ್ನೂ ಶಾಸಕರು ಅರಣ್ಯ ಸಚಿವರಿಗೆ ನೀಡಿದರು.

ಸಚಿವರಿಗೆ ಅಭಿನಂದನೆ

ಪುತ್ತೂರು, ಕಡಬ, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಆನೆ ಹಾವಳಿ ಹೆಚ್ಚಾಗಿದ್ದು, ಆನೆ ಹಾವಳಿಯನ್ನು ತಡೆಯಲು ಆನೆ ನಿಗ್ರಹ ಪಡೆ (ಇಟಿಎಫ್) ರಚಿಸಿರುವುದಕ್ಕೆ ಜಿಲ್ಲೆಯ ರೈತರು ಮತ್ತು ಭಾರತೀಯ ಕಿಸಾನ್ ಸಂಘದ ಪರವಾಗಿ ಶಾಸಕರು ಅರಣ್ಯ ಸಚಿವರಿಗೆ ಅಭಿನಂದನೆಯನ್ನು ತಿಳಿಸಿದ್ದಾರೆ.

ಪಂಚಾಯತ್‌ರಾಜ್ ಆಯೋಗ ಸ್ಥಾಪಿಸಿ

ಪಂಚಾಯತ್‌ಗಳ ಸಮರ್ಥ ನಿರ್ವಹಣೆಗೆ ಪಂಚಾಯತ್‌ರಾಜ್ ಕುರಿತು ಶಾಸನಬದ್ಧ ರಾಜ್ಯ ಪಂಚಾಯತ್ ರಾಜ್ ಆಯೋಗ ಸ್ಥಾಪಿಸುವಂತೆ ಡಾ.ಸಿ. ನಾರಾಯಣ ಸ್ವಾಮಿ ನೇತೃತ್ವದ ರಾಜ್ಯ 5ನೇ ಹಣಕಾಸು ಆಯೋಗವು ತನ್ನ ಅಂತಿಮ ವರದಿಯಲ್ಲಿ ಶಿಫಾರಸು ಮಾಡಿದ್ದು, ಈ ಕುರಿತು ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದ್ದು ಒತ್ತಾಯಿಸಿದರು.

ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ-1993ರ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಮತ್ತು ಸ್ಥಳೀಯ ಸರ್ಕಾರಗಳೆಂದು ಕರೆಸಿಕೊಳ್ಳುವ ಪಂಚಾಯತ್‌ಗಳ ಸಮರ್ಥ ನಿರ್ವಹಣೆಗೆ ಪಂಚಾಯತ್‌ರಾಜ್ ಕುರಿತು ಶಾಸನಬದ್ಧ ರಾಜ್ಯ ಪಂಚಾಯತ್ ರಾಜ್ ಆಯೋಗ ಸ್ಥಾಪಿಸುವಂತೆ ಡಾ.ಸಿ. ನಾರಾಯಣ ಸ್ವಾಮಿ ನೇತೃತ್ವದ ರಾಜ್ಯ 5ನೇ ಹಣಕಾಸು ಆಯೋಗವು ತನ್ನ ಅಂತಿಮ ವರದಿಯಲ್ಲಿ ಶಿಫಾರಸು ಮಾಡಿದೆ. ಆದೇ ರೀತಿ ಸಂವಿಧಾನದ 74ನೇ ತಿದ್ದುಪಡಿಯ ಪರಿಣಾಮಕಾರಿ ಅನುಷ್ಠಾನದ ಕುರಿತು ನಗರ ಸ್ಥಳೀಯ ಸಂಸ್ಥೆಗಳ ಶಾಸನಬದ್ಧ ರಾಜ್ಯ ಆಯೋಗ ರಚಿಸಬಹುದು ಎಂದೂ ರಾಜ್ಯ ಸರಕಾರಕ್ಕೆ ಹಣಕಾಸು ಆಯೋಗ ತನ್ನ ವರದಿಯಲ್ಲಿ ಸಲಹೆ ನೀಡಿದೆ. ಈ ವರದಿಯಲ್ಲಿನ ಪ್ರಮುಖ ಸಲಹೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶಾಸಕರು ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸಿದರು.

ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಹಂತಗಳಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದು ಸದರಿ ಖಾಲಿ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿಗೊಳಿಸುವುದು,

ಘನತ್ಯಾಜ್ಯ ನಿರ್ವಹಣೆಯಲ್ಲಿ ಗ್ರಾ.ಪಂ. ಮಟ್ಟದ ಒಕ್ಕೂಟಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾದ ಬಳಕೆದಾರರ ಶುಲ್ಕ ಸಂಗ್ರಹ, ಮಾರುಕಟ್ಟೆ ಸಂಪರ್ಕಗಳು ಇತ್ಯಾದಿಗಳನ್ನು ಆದ್ಯತೆ ಮೇಲೆ ಪರಿಹರಿಸುವುದು, ಗ್ರಾ.ಪಂ.ಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಗಣಗಾರಿಕೆ ರಾಜಧನವನ್ನು ಸಂಬಂಧಪಟ್ಟ ಗ್ರಾ.ಪಂ.ಗಳಿಗೆ ನ್ಯಾಯಯುತವಾಗಿ ಹಂಚಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು, ಡಿಜಿಟಲ್ ವ್ಯವಸ್ಥೆಗಳನ್ನು ಸರಿಯಾಗಿ ಜಾರಿಗೊಳಿಸುವುದು ಮತ್ತು ಸೂಕ್ತ ಮೇಲ್ವಿಚಾರಣೆಯ ಮೂಲಕ ತೆರಿಗೆಗಳು ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅದಿನಿಯಮ 1993ರ ಪ್ರಕರಣ 296(ಎ)ರ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕುಂದು ಕೊರತೆ ನಿವಾರಣಾ ಪ್ರಾಧಿಕಾರಗಳನ್ನು ಸ್ಥಾಪಿಸಬೇಕು ಎಂದು ಅವರು ಆಗ್ರಹಿಸಿದರು. ಈ ಕುರಿತು ಪ್ರತಿಕ್ರಿಯಿಸಿದ ಸಭಾ ನಾಯಕರು ಸದರಿ ವರದಿಯು ಸರ್ಕಾರದ ಪರಿಶೀಲನೆಯ ಹಂತದಲ್ಲಿದ್ದು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಂಪರ್ಕ ರಸ್ತೆಯ ಅಭಿವೃದ್ಧಿ ಕಾಮಗಾರಿ: ಶಾಸಕ ವೇದವ್ಯಾಸ ಕಾಮತ್ ಭೂಮಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 50ನೇ ಅಳಪೆ ದಕ್ಷಿಣ ವಾರ್ಡಿನ ಕುಂದರ್ ಕುಟುಂಬ ದೈವಸ್ಥಾನ ಚಾವಡಿ ಸಮಿತಿ ಅಳಪೆ ಸಂಪರ್ಕ ರಸ್ತೆಯ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆಯು ಶಾಸಕ ಡಿ. ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಶಾಸಕರು, ಪಡೀಲಿನ ಕುಂದರ್ ಕುಟುಂಬದ ಈ ದೈವಸ್ಥಾನಕ್ಕೆ ಬರುವ ಪ್ರಮುಖ ರಸ್ತೆ ಬಹಳ ಕಿರಿದಾಗಿದ್ದು ಇಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಯ ಅನಿವಾರ್ಯತೆಯಿತ್ತು. ಅದರಂತೆ ಶಿಲಾನ್ಯಾಸವಾಗಿದ್ದು ಶೀಘ್ರದಲ್ಲಿ ಕಾಮಗಾರಿ ಮುಗಿಯಲಿದೆ. ಪ್ರತಿ ವರ್ಷ ಇಲ್ಲಿ ಸಂಕ್ರಮಣ ಸಹಿತ ಜಾತ್ರಾ ಮಹೋತ್ಸವ ನಡೆಯುವ ಸಂದರ್ಭದಲ್ಲಿ ಬರುವ ಭಕ್ತರ, ಪರಿಸರದ ನಾಗರಿಕರ ಅನುಕೂಲಕ್ಕಾಗಿ ಈ ವಿಶೇಷ ಕಾಮಗಾರಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಇಲ್ಲಿನ ಸ್ಥಳೀಯರು ಸಹಕಾರ ನೀಡಿದರೆ ಕಿರಿದಾದ ರಸ್ತೆಯ ಅಗಲೀಕರಣವೂ ಪೂರ್ಣಗೊಳ್ಳಲಿದೆ. ಆ ಮೂಲಕ ತುರ್ತು ಸಂದರ್ಭದ ಜೊತೆಗೆ ಯಾವುದೇ ವೇಳೆಯಲ್ಲಿ ಇಲ್ಲಿನ ನಾಗರಿಕರಿಗೆ ಉಪಯೋಗವಾಗಲಿದೆ ಎಂದರು.

> ಸಂಕ್ರಮಣ ಸಹಿತ ಜಾತ್ರಾ ಮಹೋತ್ಸವ ನಡೆಯುವ ಸಂದರ್ಭದಲ್ಲಿ ಬರುವ ಭಕ್ತರ, ಪರಿಸರದ ನಾಗರಿಕರ ಅನುಕೂಲಕ್ಕಾಗಿ ಈ ವಿಶೇಷ ಕಾಮಗಾರಿ ನಡೆಯಲಿದೆ.

ಬಿಜೆಪಿ ಮಂಗಳೂರು ದಕ್ಷಿಣ ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಪಾಲಿಕೆ ನಿಕಟಪೂರ್ವ ಸದಸ್ಯೆ ಶೋಭಾ ಪೂಜಾರಿ, ವಾರ್ಡ್ ಅಧ್ಯಕ್ಷ ಹರೀಶ್, ಪ್ರಮುಖರಾದ ಸುಕೇಶ್, ವೀರೇಂದ್ರ, ಮೀನ, ಜಯಂತ್, ಸುನಿಲ್, ಸತೀಶ್, ಸೇರಿದಂತೆ ಕುಂದರ್ ಕುಟುಂಬಸ್ಥರು ಉಪಸ್ಥಿತರಿದ್ದರು.

ಒಳಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ ಮಾ. 24: ಬೃಹತ್ ಪ್ರತಿಭಟನೆ

ಮಂಗಳೂರು: ಒಳಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ ಮಾ.24ರಂದು ಬೆಳಗ್ಗೆ10ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ.

ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮೀಜಿ ಅವರ ನೇತೃತ್ವದಲ್ಲಿ ಭೋವಿ, ಬಂಜಾರ, ಕೊರಮ, ಕೊರಚ, ಛಲವಾದಿ ಮತ್ತು ಚರ್ಮಕಾರ ಸೂಕ್ಷ್ಮ ಜಾತಿಗಳ ಜತೆಸೇರಿ ಈ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಭೋವಿ ಸಮುದಾಯದ ಮುಖಂಡ ಪವನ್‌ಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪರಿಶಿಷ್ಟ ಜಾತಿಯ ಒಳಮೀಸಲಾತಿಗೆ ಸಂಬಂಧಿಸಿ ನ್ಯಾ. ನಾಗಮೋಹನ್‌ದಾಸ್ ಆಯೋಗದ ವರದಿಯಲ್ಲಿನ ದತ್ತಾಂಶ ಪೂರ್ವಾಗ್ರಹ ಪೀಡಿತವಾಗಿದೆ. ಸೋರಿಕೆಯಾಗಿರುವ ವರದಿಯ ಅಂಶಗಳ ಅಪೂರ್ಣ, ಅವೈಜ್ಞಾನಿಕ, ಅಸ್ಪಷ್ಟ ಹಾಗೂ ನ್ಯಾಯಸಮ್ಮತವಲ್ಲದ ಶಿಫಾರಸುಗಳನ್ನು ಒಳಗೊಂಡಿದೆ. ಕಳೆದ 50 ವರ್ಷಗಳಿಂದ 101 ಸಮುದಾಯಗಳ ಸ್ಥಿತಿಗತಿಗಳ ಮಾಹಿತಿ ಪಡೆದು ಸಮೀಕ್ಷೆಯ ಸಮಗ್ರ ದತ್ತಾಂಶಗಳನ್ನು ಬಿಡುಗಡೆ ಮಾಡಬೇಕು, ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಸಮುದಾಯಗಳಿಂದ ಆಕ್ಷೇಪಣೆ ಸ್ವೀಕರಿಸಲು ಕಾಲಾವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ವರದಿಯಲ್ಲಿ ಛಲವಾದಿ, ಬಂಜಾರ, ಭೋವಿ, ಕೊರಮ, ಕೊರಚ, ಚರ್ಮಕಾರ, ಸಮಗಾರ ಸಹಿತ ಕೆಲವು ಸಮುದಾಯಗಳಿಗೆ ಅನ್ಯಾಯವಾಗಿದೆ. ಸರಕಾರ ಹೊಸ ಆಯೋಗ ರಚಿಸಿ ಅನ್ಯಾಯ ಸರಿಪಡಿಸಬೇಕು, ಎಲ್ಲ ಸಮುದಾಯದ ಮುಖಂಡರ ಸಭೆ ನಡೆಸಬೇಕು ಎಂಬ ಬೇಡಿಕೆಗೆ ಸ್ಪಂದಿಸದಿರುವ ಕಾರಣ ಪ್ರತಿಭಟನೆ ಆಯೋಜಿಸಲಾಗಿದೆ ಎಂದರು.

ಈ ಎಲ್ಲ ಸಮಸ್ಯೆಯಿಂದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಭೋವಿ ಜನಾಂಗದವರಿಗೆ ಜಾತಿ ಪ್ರಮಾಣಪತ್ರ ನೀಡುತ್ತಿಲ್ಲ ಎಂದು ಆರೋಪಿಸಿದರು.

ಶ್ರೀ ವ್ಯಾಸಮಹರ್ಷಿ ವೇದಪಾಠ ಶಾಲೆಯ ವಾರ್ಷಿಕೋತ್ಸವ ಪುರೋಹಿತರು ಆದರ್ಶಪ್ರಾಯರಾಗಬೇಕು



ಮುಲ್ಕಿ: ಪುರೋಹಿತರು ವಿದ್ಯಾ ಸಂಪನ್ನತೆಯ ಮೂಲಕ ಕಲ್ಪವೃಕ್ಷದಂತೆ ಜನರಿಗೆ ಹಿತ ವ್ಯಕ್ತಿಗಳಾಗಿ ಬೆಳೆದು ವಿದ್ಯಾದಾನದ ಮೂಲಕ ಸಮಾಜದಲ್ಲಿ ಆದರ್ಶಪ್ರಾಯರಾಗಬೇಕು ಎಂದು ಕಿನ್ನಿಗೋಳಿ ಶ್ರೀರಾಮಮಂದಿರದ ಮುಖ್ಯ ಅರ್ಚಕರಾದ ವೇದಮೂರ್ತಿ ಗಿರೀಶ್ ಭಟ್ ಹೇಳಿದರು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಶ್ರೀ ವ್ಯಾಸಮಹರ್ಷಿ ವೇದಪಾಠ ಶಾಲೆಯ ಇಪ್ಪತ್ತನೇ ವಾರ್ಷಿಕೋತ್ಸವ ಮತ್ತು ಪ್ರಮಾಣ ಪತ್ರ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವ್ಯಾಸಮಹರ್ಷಿ ವಿದ್ಯಾಪೀಠದ ಅಧ್ಯಕ್ಷ ಕುಲ್ಯಾಡಿ ನರಸಿಂಹ ಪೈ ವಹಿಸಿದ್ದರು. ಅತಿಥಿಗಳಾಗಿ ಪಾಠ ಶಾಲೆಯ ಮಹಾ ಪೋಷಕರಾದ ವಿಶ್ವನಾಥ ಎನ್. ಶೆಣೈ ಮುಂಬೈ ಮತ್ತು ಸುನಿತಾ ವಿಶ್ವನಾಥ ಶೆಣೈ, ಶಿಕ್ಷಕರಾದ ನವೀನ್ ಜನಾರ್ದನ ಭಟ್ ಮತ್ತು ನಾರಾಯಣ ಶರ್ಮ ಕಾರ್ಕಳ, ಆಡಳಿತ ಮಂಡಳಿ ಸದಸ್ಯರಾದ ಯು.ಜಯರಾಮ ಶೆಣೈ, ಎಂ.ಪಾಂಡುರಂಗ ಭಟ್, ವಿ.ಹರಿ ಕಾಮತ್ ಉಪಸ್ಥಿತರಿದ್ದರು. ಅನಂತ ಪ್ರಸಾದ್ ಭಟ್ ಸ್ವಾಗತಿಸಿದರು, ಪಾಂಡುರಂಗ ಭಟ್ ಅತಿಥಿಯನ್ನು ಪರಿಚಯಿಸಿದರು. ಪ್ರಥಮ ಭಟ್ ನಿರೂಪಿಸಿದರು. ಅನಂತ ಪ್ರಸಾದ್ ಭಟ್ ವಂದಿಸಿದರು.

ಈ ಸಂದರ್ಭ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಪ್ರಥಮ್ ಭಟ್, ಗಣೇಶ್ ಆಚಾರ್ಯ, ಶ್ರೀನಿವಾಸ್ ಭಟ್, ಅಮರನಾಥ ಭಟ್, ಪುರುಷೋತ್ತಮ ಭಟ್ ರವರಿಗೆ ಶಿಕ್ಷಣ ಪ್ರಮಾಣಪತ್ರ ವಿತರಿಸಲಾಯಿತು. ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಗುರುವಂದನೆ ನಡೆಯಿತು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಂಭವಿ ನರಸಿಂಹ ಕುಡ್ವಾ ಹಾಗೂ ಕಿನ್ನಿಗೋಳಿ ಗಣೇಶ್ ಮಲ್ಯ ಸ್ಮಾರಕ ದತ್ತಿ ಪ್ರಶಸ್ತಿಗಳನ್ನು ನೀಡಲಾಯಿತು. ಬಳಿಕ ವಿದ್ಯಾರ್ಥಿಗಳಿಂದ ಶ್ರೀಕೃಷ್ಣನ ಬಾಲಲೀಲೆಗಳನ್ನು ನಿರೂಪಿಸುವ ಬಾಲಚರಿತಂ ಸಂಸ್ಕೃತ ನಾಟಕ ನಡೆಯಿತು.

ಅತಿ ಹೆಚ್ಚು ಕೋವಿ ಹೊಂದಿರುವ ಕೊಡಗಿನಲ್ಲಿ ಬಂದೂಕು ತರಬೇತಿ

ಮಡಿಕೇರಿ: ಕೊಡಗು ಜಿಲ್ಲಾ ಪೊಲೀಸ್ ವತಿಯಿಂದ ಆಯೋಜಿಸಲಾಗಿರುವ ನಾಗರಿಕ ಬಂದೂಕು ತರಬೇತಿ ಶಿಬಿರಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕಿ ಕು.ಬಿಂದುಮಣಿ ಆರ್.ಎನ್. ಅವರು ಸೋಮವಾರ ಚಾಲನೆ ನೀಡಿದರು.

ನಗರದ 'ಮೈತ್ರಿ' ಪೊಲೀಸ್ ಸಮುದಾಯ ಭವನದಲ್ಲಿ ನಡೆದ ಪ್ರಥಮ ತಂಡದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು. ಪರವಾನಗಿ ಇದ್ದ ಮಾತ್ರಕ್ಕೆ ಎಲ್ಲಾ ಬಂದೂಕುಗಳನ್ನು ಬಳಸಲು ಅವಕಾಶವಿಲ್ಲ. ಅವರವರ ಲೈಸೆನ್ಸ್‌ನಲ್ಲಿ ನಮೂದಾಗಿರುವ ನಿಗದಿತ ಬಂದೂಕುಗಳನ್ನೇ ಬಳಸಬೇಕು. ಮತ್ತೊಬ್ಬರ ಹೆಸರಿನಲ್ಲಿರುವ ಆಯುಧವನ್ನು ಬಳಸಿದರೆ ಕಾನೂನು ಕ್ರಮಕ್ಕೆ ಒಳಗಾಗಬೇಕಾಗುತ್ತದೆ. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಅನಗತ್ಯವಾಗಿ ಬಂದೂಕು ಹಿಡಿದು ಓಡಾಡುವುದು ಕೂಡಾ ಅಪರಾಧವಾಗುತ್ತದೆ ಎಂದು ಎಚ್ಚರಿಸಿದರು.

ಕೊಡಗು ರಾಜ್ಯದಲ್ಲಿ ಅತಿ ಹೆಚ್ಚು ಬಂದೂಕು ಇರುವ ಜಿಲ್ಲೆಯಾಗಿದ್ದು, ಬಂದೂಕು ಆಕಸ್ಮಿಕವಾಗಿ ಸಿಡಿದು ಅನಾಹುತವಾದರೂ, ಉದ್ದೇಶಪೂರ್ವಕವಾಗಿ ಗುಂಡು ಹಾರಿಸಿ ದುರ್ಘಟನೆಗಳಾದರೂ ಕಾನೂನು ಕ್ರಮ ಒಂದೇ ಆಗಿರುತ್ತದೆ. ಆದುದರಿಂದ ಬಂದೂಕು ಬಳಸುವಾಗ ಪ್ರತಿಯೊಬ್ಬರೂ ಜಾಗರೂಕರಾಗಿರಬೇಕು ಮತ್ತು ಜಾಗೃತಿ ಹೊಂದಿರಬೇಕು ಎಂದು ಕಿವಿಮಾತು ಹೇಳಿದರು.



ಇಂಡಿಯನ್ ಆರ್ಮ್ಸ್ ಆಕ್ಟ್‌ನಲ್ಲಿ ಅಪರಾಧಕ್ಕೆ ಜಾಮೀನು ಸಿಗುವುದು ಕಷ್ಟ ಆದ್ದರಿಂದ ಪ್ರತಿಯೊಬ್ಬರೂ ರಕ್ಷಣೆಗೆ ಅಗತ್ಯವಿರುವ ತರಬೇತಿ ಪಡೆಯಬೇಕು. ಸಮಯ ಕಳೆಯುವುದಕ್ಕಾಗಿ ಶಿಬಿರಕ್ಕೆ ಬರಬೇಡಿ. ಸರಿಯಾಗಿ ತರಬೇತಿ ಪಡೆಯಿರಿ ಮತ್ತು ಅರ್ಥವಾಗದಿರುವುದನ್ನು ಕೇಳಿ ಕಲಿತುಕೊಳ್ಳಿ. ಸರಿಯಾಗಿ ತರಬೇತಿ ಹೊಂದಿದವರಿಗೆ ಮಾತ್ರ ಕೊನೆಯಲ್ಲಿ ಪ್ರಮಾಣಪತ್ರ ನೀಡಲಾಗುತ್ತದೆ ಎಂದು ಬಿಂದುಮಣಿ ಸಲಹೆ ಮಾಡಿದರು. ಜಿಲ್ಲಾ ಸಶಸ್ತ್ರ ಪಡೆಗಳ ಪೊಲೀಸ್ ನಿರೀಕ್ಷಕ ಹೆಚ್.ಬಿ.ಗಣೇಶ್ ಅವರು ತರಬೇತಿ ನೀಡಿದರು.

ಕಳೆದ ಎರಡು ವರ್ಷಗಳಿಂದ ಜಿಲ್ಲೆಯಲ್ಲಿ ನಾಗರಿಕ ಬಂದೂಕು ತರಬೇತಿ ನಡೆಯದ ಹಿನ್ನೆಲೆಯಲ್ಲಿ ಈ ಬಾರಿ ಎರಡು ತಂಡಗಳಲ್ಲಿ 200ಕ್ಕೂ ಅಧಿಕ ಮಂದಿಗೆ ತರಬೇತಿ ನೀಡಲಾಗುತ್ತಿದೆ.

ಕಾಟ್ಟಾಕಡದ ಎನ್‌ಡಿಎ ಅಭ್ಯರ್ಥಿ ಪಿ.ಕೆ.ಕೃಷ್ಣದಾಸ್ ರೋಡ್ ಶೋ

ತಿರುವನಂತಪುರ: ಕಾಟ್ಟಾಕಡ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಪಿ.ಕೆ.ಕೃಷ್ಣದಾಸ್ ಅವರ ಚುನಾವಣಾ ಸಮಾವೇಶವು ಮಲಯಿಂಕೀಝ್ ಜಂಕ್ಷನ್‌ನಿಂದ ನೂರಾರು ಕಾರ್ಯಕರ್ತರೊಂದಿಗೆ ನಡೆಯಿತು.

ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಉದ್ಘಾಟಿಸಿದರು. ಅಭಿವೃದ್ಧಿ ಹೊಂದಿದ ಕೇರಳಕ್ಕಾಗಿ ಕೇರಳದಲ್ಲಿ ಚುನಾವಣೆಗಳು ನಡೆಯುತ್ತಿವೆ. ಪಿ.ಕೆ.ಕೃಷ್ಣದಾಸ್ ವರ್ಷದ 365 ದಿನವೂ ಜನರಿಗಾಗಿ ಕೆಲಸ ಮಾಡುವ ನಾಯಕ ಎಂದು ರಾಜೀವ್ ಚಂದ್ರಶೇಖರ್ ಹೇಳಿದರು.

ಕಾಟ್ಟಾಕಡದ ಅಭಿವೃದ್ಧಿ ನರೇಂದ್ರ ಮೋದಿಯವರ ಭರವಸೆ ಎಂದು ಪಿ.ಕೆ.ಕೃಷ್ಣದಾಸ್ ಹೇಳಿದರು. ಜನರು ಅನುಭವಿಸುವ ರೀತಿಯಲ್ಲಿ ಅಭಿವೃದ್ಧಿಯನ್ನು ಕೈಗೊಳ್ಳಬೇಕು ಎಂದು ಅಭ್ಯರ್ಥಿ ಪಿ.ಕೆ.ಕೃಷ್ಣದಾಸ್ ತಿಳಿಸಿದರು.

ಬಿಜೆಪಿ ತಿರುವನಂತಪುರ ದಕ್ಷಿಣ ಜಿಲ್ಲಾಧ್ಯಕ್ಷ ಮುಕ್ಕಂಪಲಮೂಟ್ಟಿ ಬಿಜು ಅಧ್ಯಕ್ಷತೆ ವಹಿಸಿದ್ದರು. ಎನ್‌ಡಿಎ ಉಪಾಧ್ಯಕ್ಷ ವಿಷ್ಣುಪುರಂ ಚಂದ್ರಶೇಖರನ್, ಶಿವಸೇನೆ ರಾಜ್ಯ ಕಾರ್ಯದರ್ಶಿ ಕೃಷ್ಣನ್‌ಕುಟ್ಟಿ, ಬಿಡಿಜೆಎಸ್ ಜಿಲ್ಲಾಧ್ಯಕ್ಷ ಪರುತಿಪಲ್ಲಿ ಸುರೇಂದ್ರನ್, ಕೆಪಿಎಂಎಸ್ ತಾಲೂಕು ಕಾರ್ಯದರ್ಶಿ ಕುಮಾರ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಪಿ.ಎಸ್. ಮಾಯಾ, ಪಿ.ಸೌಮ್ಯಾ, ಬಿಜೆಪಿ ಮುಖಂಡರಾದ ತಕಳಿ ಅಪ್ಪುಕುಟ್ಟನ್, ವಿಳವೂರ್ಕಲ್ ಉಣ್ಣಿ, ಮಲಾಯಿಂಕೀಝು ರಾಧಾಕೃಷ್ಣನ್, ಕಟ್ಟಾಕಡ ಕಾರ್ತಿಕ್, ಹರಿ ಸುಧೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



> ಅಭಿವೃದ್ಧಿ ಹೊಂದಿದ ಕೇರಳಕ್ಕಾಗಿ ಕೇರಳದಲ್ಲಿ ಚುನಾವಣೆಗಳು ನಡೆಯುತ್ತಿವೆ.
>
> ಪಿ.ಕೆ.ಕೃಷ್ಣದಾಸ್‌ವರ್ಷದ 365 ದಿನವೂ ಜನರಿಗಾಗಿ ಕೆಲಸ ಮಾಡುವ ನಾಯಕ

ಅಮಾನತುಗೊಂಡ ಪೊಲೀಸ್ ಇನ್‌ಸ್ಪೆಕ್ಟರ್ ಬಂಧನಕ್ಕೆ ಆಗ್ರಹ

ಪುತ್ತೂರು: ಅನುಚಿತ ವರ್ತನೆ, ದೌರ್ಜನ್ಯ, ಮಾನವ ಹಕ್ಕುಗಳ ಉಲ್ಲಂಘನೆ ಸೇರಿದಂತೆ ವಿವಿಧ ಪ್ರಕರಣಗಳ ಕಾರಣದಿಂದಾಗಿ ಸೇವೆಯಿಂದ ಅಮಾನತುಗೊಂಡಿರುವ ಮೂಡುಬಿದರೆ ಪೊಲೀಸ್ ಇನ್‌ಸ್ಪೆಕ್ಟರ್ ಸಂದೇಶ್ ಪಿ.ಜಿ. ಅವರ ಮೇಲೆ ವೇಣೂರು ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ಕೂಡ ದಾಖಲಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ವೇಣುಗೋಪಾಲ್ ಮತ್ತು ಉಪಾಧ್ಯಕ್ಷ ರೋಷನ್ ಲೋಬೋ ಮಾತನಾಡಿ, ಪ್ರಸ್ತುತ ಸೇವೆಯಿಂದ ಅಮಾನತುಗೊಂಡಿರುವ ಸಂದೇಶ್ ಅವರನ್ನು ಭವಿಷ್ಯದಲ್ಲಿ ಅಮಾನತು ರದ್ದಾದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗೆ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಸಂದೇಶ್ ಅವರು ಈ ಹಿಂದೆ ಕಾರ್ಕಳದಲ್ಲಿ ಕರ್ತವ್ಯದಲ್ಲಿದ್ದಾಗ ಸೇವೆಯಿಂದ ಅಮಾನತುಗೊಂಡಿದ್ದರು. ಬಜಪೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇತರರ ಮೇಲೆ ಹಲ್ಲೆ ಮಾಡಿದ ಆರೋಪವಿತ್ತು. ಬೆಳ್ತಂಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗಲೂ ಕಿರುಕುಳ ನೀಡಿದ ಆರೋಪವಿತ್ತು. ಬಜಪೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪಡುಪೆರಾರ, ಕಂದಾವರ, ಗುರುಪುರ ಮತ್ತು ಮುತ್ತೂರು ಗ್ರಾಮಸಭೆಗಳಲ್ಲಿ ಇವರ ವಿರುದ್ಧ ನಿರ್ಣಯ ಕೈಗೊಳ್ಳಲಾಗಿತ್ತು. ಹೀಗೆ ಹಲವು ಆರೋಪಗಳನ್ನು ಎದುರಿಸುತ್ತಿರುವ ಸಂದೇಶ್ ಪಿ.ಜಿ. ಅವರಿಗೆ ನೀಡಲಾಗಿದ್ದ ಮುಖ್ಯಮಂತ್ರಿ ಪ್ರಶಸ್ತಿಯನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನ್ನಿ ಪಿಂಟೋ, ಕಾರ್ಯದರ್ಶಿಗಳಾದ ಶಿವರಾಜು, ನಾಗರಾಜ್ ಉಪಸ್ಥಿತರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

23-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 460
ಚೋಲ್ ಅಡಿಕೆ	:	505 - 530
ಡಬಲ್ ಚೋಲ್	:	505 - 530
ಹೊಸ ಪಠೋರ	:	340 - 390
ಹಳೆ ಪಠೋರ	:	375 - 405
ಹೊಸ ಉಳ್ಳಿ	:	115 - 285
ಹಳೆ ಉಳ್ಳಿ	:	105 - 285
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 350
ಹೊಸ ಕರಿಗೋಟು	:	230 - 260
ಹಳೆ ಕರಿಗೋಟು	:	230 - 260
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	:	465 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	212.00
ಆರ್‌ಎಸ್‌ಎಸ್ 2	-	197.00
ಸ್ಕ್ರಾಪ್ 1	-	130.00
ಸ್ಕ್ರಾಪ್ 2	-	127.00

BEFORE THE HONOURABLE JUDGE OF FAMILY KASARAGOD
O.P No 660/2025

Between
Rajesh K ...Petitioner
And
Saraswathi ...Respondent

To
Saraswathi, W/o. Rajesh K, C/o Vinaya Kumar PC, R/at Peradka House, Goonadka Post, Sampaje Village, Sullia Taluk, D.K District-574234

Please take notice that the above case filed by the petitioner is posted for your appearance on **19.05.2026 at 11 A.M** in the above court, if you fail to appear before the Court on the said date and time, the case will be decided declaring your absence.

(By Order of the Court)
Sd/- **Sathyashankara M.**
Advocate for Petitioner
Kasaragod, 10.03.2026

ಕರ್ನಾಟಕ ಸರಕಾರ- ಧಾರ್ಮಿಕದತ್ತಿ ಇಲಾಖೆ
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು
ದೂರವಾಣಿ 7411534591, 8904905361
ಅಲ್ಪಾವಧಿ ಟೆಂಡರ್ ಪ್ರಕಟಣೆ

ಕ್ರ.ಸಂ	ವಿಷಯ	ಕ್ರ.ಸಂ.
1	ಶ್ರೀ ದೇವಳದ ಅನ್ನಪೂರ್ಣ ಅಡುಗೆಶಾಲೆಗೆ STAINLESS STEEL ಮತ್ತು RACK ಸರಬರಾಜು ಮಾಡುವ ಕುರಿತು.	10,000.00
2	ಶ್ರೀ ದೇವಳದ ಮುಖ್ಯ ಉಗ್ರಾಣಕ್ಕೆ STAINLESS STEEL PLATFORM ಸರಬರಾಜು ಮಾಡುವ ಕುರಿತು	10,000.00
3	ಶ್ರೀ ದೇವಳದ ಭ್ರಾಮರಿ ವಸತಿಗೃಹ ಕಟ್ಟಡಕ್ಕೆ ಸೋಲಾರ್ ವಾಟರ್ ಹೀಟರ್ ಟ್ಯಾಂಕ್ ಸರಬರಾಜು ಮಾಡಿ	2,500.00

ಶರ್ತಗಳು: 1) ಸಾಮಾಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು. 2) ದರದಲ್ಲಿ ಎಲ್ಲಾ ತೆರಿಗೆಗಳು ಸೇರಿರಬೇಕು. 3) ದರದಲ್ಲಿ ಸಾಗಾಟ, ಅಳವಡಿಕೆ ಇತರ ವೆಚ್ಚ ಸೇರಿರಬೇಕು. 4) ಮುಂಗಡ ಪಾವತಿ ಇರುವುದಿಲ್ಲ 5) ದಿನಾಂಕ 31.03.2026ರ ಒಳಗಾಗಿ ದರಪಟ್ಟಿ ಸಲ್ಲಿಸಬೇಕು 6) ಗುತ್ತಿಗೆದಾರರು ಜಿಎಸ್ಟಿ ನೋಂದಾವಣೆ ಹೊಂದಿರಬೇಕು. 7) ಹಿಂದೂಯೇತರರು ಭಾಗವಹಿಸುವಂತಿಲ್ಲ 8) ತೆರೆಯುವ ದಿನಾಂಕ 01.04.2026

ಸಹಿ/- ಅನುವಂಶಿಕ ಮೊಕ್ತೇಸರರು

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮಂದಾರ್ತಿ ಉಡುಪಿ ಜಿಲ್ಲೆ -576223
ದೂ :(0820) 2568333, 2568433, 2568533
Email: eomandarthitemple@yahoo.in, mandarthidurgaparameshwari.com

ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಹೆಗ್ಗುಂಜೆ ಗ್ರಾಮದ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಕಛೇರಿ, ದೇವಸ್ಥಾನ ಮತ್ತು ದಾಸೋಹಕ್ಕೆ ಬೇಕಾಗುವ ವಿದ್ಯುತ್ ಸಂಪರ್ಕಕ್ಕೆ ಸೋಲಾರ್ ಅಳವಡಿಸಲು ಅರ್ಹ ತೆರಿಗೆ ನೊಂದಾಯಿತ ಸರಬರಾಜು ಮತ್ತು ನಿರ್ವಾಹಕರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ನೀಡಲು ಕೊನೆಯ ದಿನಾಂಕ 29.03.2026ರ ಪೂರ್ವಾಹ್ನ ಗಂಟೆ 11.00ರ ವರೆಗೆ, ಸ್ವೀಕೃತಗೊಂಡ ಟೆಂಡರ್ ಗಳನ್ನು ದಿನಾಂಕ 30.03.2026ರ ಪೂರ್ವಾಹ್ನ ಗಂಟೆ:11.00ಕ್ಕೆ ತೆರೆಯಲಾಗುವುದು. ವಿವರ ಕೆಳಗಿನಂತಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

DESCRIPTION	Quantity
Supply of Solar Inverter & other Accessories (MMS Walkway, DC & AC Cable, Control Panel, Solar Meter with suitable meter chamber)	20KVA/ Lumsum

Terms/Conditions
1. String Inverter with BIS certified, Minimum 5 years warranty.

ಸಹಿ/-ಕಾರ್ಯನಿರ್ವಹಣಾಧಿಕಾರಿ

ಮಾನ್ಯ ಜೆ.ಎಮ್.ಎಫ್.ಸಿ 4ನೇ ನ್ಯಾಯಾಲಯ, ಮಂಗಳೂರು ದ.ಕ
ಎಮ್.ಸಿ.ನಂಬ್ರ 256/2026

ಇವರ ಮಧ್ಯೆ,
ದೀಪಾ ಪಿ.ಎಚ್. ...ಅರ್ಜಿದಾರರು
ಮಾನ್ಯ ಉಪ ತಹಶೀಲ್ದಾರರು ಜನನ ಮತ್ತು ಮರಣ ನೋಂದಾಣಿದಾರರು
ಉಳ್ಳಾಲ ತಾಲೂಕು, ಉಳ್ಳಾಲ, ದ.ಕ ಜಿಲ್ಲೆ ...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಈಮೇಲಿನಪ್ರಕರಣದಲ್ಲಿಎದುರುದಾರರಕಾರ್ಯ ವ್ಯಾಪ್ತಿಗೊಳಪಟ್ಟ ಮಂಗಳೂರು ತಾಲೂಕು ಪ್ರಸ್ತುತ ಉಳ್ಳಾಲ ತಾಲೂಕು, ಕೋಟೆಕಾರು ಗ್ರಾಮ, ಕನ್ನಡ ಪಾಲು ಮನೆ ಎಂಬ ಮನೆಯಲ್ಲಿ ವಾಸವಾಗಿದ್ದ ಅರ್ಜಿದಾರರ ಅಜ್ಜಿ ದಿ। ಸೀತಾ ಕೋಂ ದೂಮಣ್ಣ ರೈ ಎಂಬವರು ದಿನಾಂಕ 02.03.1960ರಂದು ಮೃತಪಟ್ಟಿದ್ದು, ಎದುರುದಾರರ ಮರಣವಹಿಯಲ್ಲಿ ತಡನೋಂದಾಣಿ ಮಾಡುವರೇ ವಿಳಂಬ ವಿನಾಯಿತಿ ಕೋರಿ ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ ಜನನ ಮರಣ ನೋಂದಾಣಿ ಕಾಯ್ದೆ 13 (3) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಈ ವಿಷಯಗಳ ಬಗ್ಗೆ ಯಾರಿಗಾದರೂ ಆಕ್ಷೇಪಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ 21-4-2026 ದಿನಾಂಕರಂದು ಪೂರ್ವಾಹ್ನ 11-00 ಗಂಟೆಗೆ ವೈಯಕ್ತಿಕವಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 16ನೇ ಮಾರ್ಚ್ 2026ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಮುಖ್ಯ ಲಿಪಿಕಾಧಿಕಾರಿ
ಜೆ.ಎಮ್.ಎಫ್.ಸಿ 4ನೇ ನ್ಯಾಯಾಲಯ ಮಂಗಳೂರು
ಸಹಿ/-(ಶರತ್ ಕುಮಾರ್ ಬಿ)
ಅರ್ಜಿದಾರರ ಪರವಾಗಿ ವಕೀಲರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಲೋ.ಇ, ಉಡುಪಿ ವಿಭಾಗ – ಉಡುಪಿ – 576101.
ದೂರವಾಣಿ & ಫ್ಯಾಕ್ಸ್: (0820) 2531802
ನಂ : ಪಿಡಬ್ಲ್ಯೂಡಿ:ಯುಡಿಎನ್: ಎನ್‌ಐಟಿ: 55:2025–26: ಎಇ–2 ದಿ: 23.03.2026

ಅಲ್ಪಾವಧಿ ಸರ್ವೀಸ್ ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಅನುಮೋದನೆಯಾದ ಕುಂದಾಪುರ ತಾಲೂಕು ತೀರ್ಥಹಳ್ಳಿ–ಕುಂದಾಪುರ ರಾಜ್ಯ ಹೆದ್ದಾರಿಯಲ್ಲಿಯ ಕಿ.ಮೀ.75.68ರಲ್ಲಿ (ಕಂಡ್ಲೂರು)ಯ ಸೇತುವೆ ಕಾಮಗಾರಿಗೆ ವಿಸ್ತೃತ ಅಂದಾಜು ಪಟ್ಟಿಯನ್ನು ತಯಾರಿಸಲು ರೂ. 46.00 ಲಕ್ಷದ (ಜಿ.ಎಸ್.ಟಿ ಹೊರತುಪಡಿಸಿ) DPR ಉಪಕಾಮಗಾರಿಗೆ Registered Empanelled Consultant for DPR under KPWD ರವರಿಂದ 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಇ/ಸನಿಉ/ಕೆಎಸ್‌ಎಂಸಿಎ/809/25–26 ದಿ: 23.03.2026
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
KARNATAKA RURAL INFRASTUCTURE DEVELOPMENT LTD.
(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040
ಸಂ: ಕಾಪಾಅ–4/ಕೆಆರ್‌ಐಡಿಎಲ್/ಟೆಂಡರ್/2025–26/1287 ದಿನಾಂಕ:23.03.2026

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್, BBMP ವಿಭಾಗ–4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ–ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (KRIDL/ 2025-26/RD/WORK_INDENT 43, 45 and 46) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು ಆಗಿರುತ್ತದೆ. ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	23.03.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	30.03.2026, 17:30
ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	02.04.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	13.04.2026, 15:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.04.2026, 15:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	22.04.2026, 15:30

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in.** ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/– ಕಾರ್ಯಪಾಲಕ ಅಭಿಯಂತರರು–4, ಕೆ.ಆರ್.ಐ.ಡಿ.ಎಲ್, ಬೆಂಗಳೂರು
ಡಿಐಪಿಆರ್/ಸಿಪಿ/6400/ಸಿಸಿಎಲ್/2025–26

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ,
ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು.
ಸಂ:ಕಾ.ಇಂ.(ವಿ)/ಲೋ.ಇ./ವಿದ್ಯುತ್/2025–26/3032 ದಿನಾಂಕ:23.03.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-3 STD ಷರತ್ತಿಗೊಳಪಟ್ಟಂತೆ ಕೆ.ಪಿ.ಪಿ.ಪಿ. ಮೂಲಕ ಅಲ್ಪಾವಧಿ ಎರಡನೇ ಕರೆಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

Sl. No.	WORK INDENTS	Work Value (Rs.in Lakhs)
1	PWD/2025-26/EL/WORK_INDENT29344 Call-2 (Others)	59.31
2	PWD/2025-26/EL/WORK_INDENT29169 Call-2 (Others)	63.28

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್: **https:// kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ:**23.03.2026** ರಿಂದ **30.03.2026, 16.00** ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **30.03.2026** ರಂದೆ **16.00** ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.
ವಾಸಾಸಂಇ/ಉನಿ–ಸಿ.ಪಿ/6392/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮಂದಾರ್ತಿ ಉಡುಪಿ ಜಿಲ್ಲೆ -576223
ದೂ :(0820) 2568333, 2568433, 2568533
Email: eomandarthitemple@yahoo.in, mandarthidurgaparameshwari.com
ದಿನಾಂಕ : 20.03.2026.

ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಕಛೇರಿ, ದೇವಸ್ಥಾನ ಮತ್ತು ದಾಸೋಹಕ್ಕೆ ಬೇಕಾಗುವ ವಿದ್ಯುತ್ ಸಂಪರ್ಕಕ್ಕೆ ಸೋಲಾರ್ ಅಳವಡಿಸಲು ಅರ್ಹ ತೆರಿಗೆ ನೊಂದಾಯಿತ ಸರಬರಾಜು ಮತ್ತು ನಿರ್ವಾಹಕರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಗಳನ್ನು ನೀಡಲು ಕೊನೆಯ ದಿನಾಂಕ 06.04.2026 ರ ಪೂರ್ವಾಹ್ನ ಗಂಟೆ 11.00ರ ವರೆಗೆ, ಸ್ವೀಕೃತಗೊಂಡ ಟೆಂಡರ್ ಗಳನ್ನು ದಿನಾಂಕ 07.04.2026 ರ ಪೂರ್ವಾಹ್ನ ಗಂಟೆ 11.00ಕ್ಕೆ ತೆರೆಯಲಾಗುವುದು. ವಿವರ ಕೆಳಗಿನಂತಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

Sl.No.	DESCRIPTION	Quantity
1	Supply Of Instalation & Commissioning of Solar Rooftop System on the roof top of our temple office building including Cable and proper cable routing	Lumsum

Terms/Conditions
1. Company Authorized/Certifioed Installer should execute work
2. Should Offer Minimum 1 Year Maintenance (AMC)
3. Should Offer Remopte Monotoring to track the generartion daily/ monthly/yearly

ಸಹಿ/-ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಎಂಎಆರ್‌ಸಿ/2025–26/6712 ದಿನಾಂಕ: 12–03–2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರಿಂದ ಸಿ.ಇ.ಪಿ.ಎಂ.ಐ.ಜಡ್ (ಕೆ.ಎಂ.ಇ.ಆರ್.ಸಿ.) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **https:kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಸದರಿ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ – **PWD/2025-26/SE1109, PWD/2025-26/SE1117, PWD/2025-26/SE1118, PWD/2025-26/SE1111, PWD/2025-26/SE1112, PWD/2025-26/SE1113, PWD/2025-26/SE1119, PWD/2025-26/SE1114, PWD/2025-26/SE1120, PWD/2025-26/SE1121, PWD/2025-26/SE1122, PWD/2025-26/SE1123, PWD/2025-26/SE1124, PWD/2025-26/SE1125, PWD/2025-26/SE1126, PWD/2025-26/SE1127, PWD/2025-26/SE1128, PWD/2025-26/SE0821**

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08392 266123) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ದಾಖಲೆಗಳನ್ನು ಇ–ಪ್ರೋಕೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ: **ದಿನಾಂಕ: 20–03–2026 ರಿಂದ 01–04–2026 ರ 16.00 ಗಂಟೆವರೆಗೆ.** ಆ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ: **24–03–2026 ರಂದು 11.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಇ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **30–03–2026 ರಂದು 16.00 ಗಂಟೆಯ ವರೆಗೆ.** ಈ)ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **01–04–2026 ರಂದು 16.00 ಗಂಟೆಯ ವರೆಗೆ.** ಉ)ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **02–04–2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.** ಊ)ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1174/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯತ್, ಬ್ರಹ್ಮಾವರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಶಿಶು ಅಭಿವೃದ್ಧಿ ಯೋಜನೆ, ಬ್ರಹ್ಮಾವರ
E-mail: cdpobrm@ymail.com ದೂ. :0820–2562244
ಸಂ.ಶಿ.ಅಯೋ.ಬ್ರ/ಬಾ.ಮೂ.ನೇ/ಟೆಂಡರ್/2025–26/496 ದಿನಾಂಕ :21–03–2026

ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ ಬ್ರಹ್ಮಾವರ ಇಲ್ಲಿ 2026–27ನೇ ಸಾಲಿಗೆ ಏಜೆನ್ಸಿಗಳ ಮೂಲಕ ಬಾಹ್ಯ ಮೂಲ ಗ್ರೂಪ್ ಡಿ ಸಿಬ್ಬಂದಿ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್‌ಗಳನ್ನು ಕರೆಯಲಾಗಿದೆ.

1) **ಸೇವೆಗಳ ಪೂರೈಕೆ** : ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ ಬ್ರಹ್ಮಾವರ ಇಲ್ಲಿಗೆ 1. ಗ್ರೂಪ್ (ಡಿ) ಸಿಬ್ಬಂದಿಗಳ ಸಂಖ್ಯೆ– 1. 2) **ಟೆಂಡರದ ಸ್ವೀಕರಿಸುವವರು** : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸ್ತ್ರೀ ಶಕ್ತಿ ಭವನ, ಹಂದಾಡಿ ಪಂಚಾಯತ್ ಹತ್ತಿರ, ಗಾಂಧಿ ಮೈದಾನ ಬ್ರಹ್ಮಾವರ 3) **ಇ.ಎಂ.ಡಿ ಮೊತ್ತ** : ರೂ. 7000/-(ರೂಪಾಯಿ ಏಳು ಸಾವಿರ ಮಾತ್ರ) ಟೆಂಡರ್ ಅರ್ಜಿಯೊಂದಿಗೆ ರೂ.7000.00ಗಳ ಯಾವುದಾದರೊಂದು ರಾಷ್ಟ್ರೀಕೃತ ಬ್ಯಾಂಕಿನ ಡಿಡಿಯನ್ನು ಪಡೆದು ಲಗತ್ತಿಸತಕ್ಕದ್ದು. 4) **ಭರ್ತಿ ಮಾಡಿದ ಟೆಂಡರ್ ನಮೂನೆ ಸ್ವೀಕರಿಸಲು ಕೊನೆಯ ದಿನಾಂಕ** : ದಿನಾಂಕ:30–03–2026ರ ಸಮಯ ಸಂಜೆ 5 ರೊಳಗೆ. 5) **ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ ಹಾಗೂ ಸ್ಥಳ** : ದಿನಾಂಕ:01–04–2026ರ ಅಪರಾಹ್ನ 2 ಗಂಟೆ ತಾಲೂಕು, ಪಂಚಾಯತ್ ಕಛೇರಿ ಬ್ರಹ್ಮಾವರ

ಹೆಚ್ಚಿನ ವಿವರಗಳಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಬ್ರಹ್ಮಾವರ ವೇಳೆಯಲ್ಲಿ ಸಂಪರ್ಕಿಸಬಹುದು

ಸಹಿ/-ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬ್ರಹ್ಮಾವರ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/8841 ದಿನಾಂಕ: 20/03/2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 26–03–2026 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 27–03–2026 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 30–03–2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 01–04–2026 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-2133/KSMCA/2025-26

ಕರ್ನಾಟಕ ಸರ್ಕಾರ · ದಕ್ಷಿಣ ಕನ್ನಡ DAKSHINA KANNADA
ಪ್ರವಾಸೋದ್ಯಮ ಇಲಾಖೆ
ಉಪನಿರ್ದೇಶಕರ ಕಚೇರಿ, ಕೊಠಡಿ ಸಂಖ್ಯೆ:205, 2ನೇ ಮಹಡಿ "ಪ್ರಜಾಸೌಧ", ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರ, ಪಡೀಲು, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ–575007
email: adtourismmangalore@gmail.com ದೂರವಾಣಿ: 0824–2453926
ಸಂಖ್ಯೆ:ಪ್ರಇ/ಉನಿಕ/ದಕಜಿ/ಮಂಹೊಸೌ/22/Vol-2/2022–23 ದಿನಾಂಕ: 21.03.2026

ಇ – ಟೆಂಡರ್ ಪ್ರಕಟಣೆ

ವಿಷಯ: 2026–27 ನೇ ಸಾಲಿನಲ್ಲಿ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಗಳೂರು ಕಛೇರಿಗೆ 01 ಡಾಟ ಎಂಟ್ರಿ ಆಪರೇಟರ್ ಹಾಗೂ 01 ಗ್ರೂಪ್ 'ಡಿ' ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು ಇಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರ್ ಆಹ್ವಾನಿಸುವ ಬಗ್ಗೆ.

ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಗಳೂರು ಕಛೇರಿಗೆ 2026–27ನೇ ಸಾಲಿನ ಎಪ್ರಿಲ್–2026 ರ ಮಾಹೆಯಿಂದ ಮಾರ್ಚ್–2027 ರ ಮಾಹೆಯವರೆಗೆ ಓರ್ವ ಡಾಟ ಎಂಟ್ರಿ ಆಪರೇಟರ್ ಹಾಗೂ ಮೇ–2026 ರ ಮಾಹೆಯಿಂದ ಎಪ್ರಿಲ್–2027 ರ ಮಾಹೆಯವರೆಗೆ ಓರ್ವ ಗ್ರೂಪ್ 'ಡಿ' ಸಿಬ್ಬಂದಿಗಳ ಸೇವೆ ಆವಶ್ಯವಿದ್ದು ಖಾಯಂ ಸಿಬ್ಬಂದಿಗಳ ನೇಮಕವಾಗುವವರೆಗೆ ಬಾಹ್ಯ ಮೂಲದ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಇಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	29.03.2026 ಸಾಯಂಕಾಲ 5.00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	30.03.2026 ಸಾಯಂಕಾಲ 05.30 ಗಂಟೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	ಯಶಸ್ವಿ ಬಿಡ್ಡುದಾರರಿಗೆ ತಿಳಿಸಲಾಗುವುದು

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಗಳೂರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

(ಕಛೇರಿ ದೂರವಾಣಿ ಸಂಖ್ಯೆ : 0824–2453926)

ಸಹಿ/–
ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.
DIPR/DK/MPL/1791/25-26

ಸಹಾಯಕ ನಿರ್ದೇಶಕರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ
ಗದಗ ರಸ್ತೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ
ದೂರವಾಣಿ :**08539-230121** email :adysskoppal@gmail.com
ಸಂಖ್ಯೆ: ಸನಿ/ಯುಸಕ್ರೀಇ/ಕ್ರೀಉಊಪೂ/ಕೊ/ಸಿಆರ್–48(ಎ)/2025–26/1008 ದಿನಾಂಕ: 23.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಗದಗ ರಸ್ತೆ, ಕೊಪ್ಪಳ ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆಳಕಾಣಿಸಿದ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಹಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕೆಪಿಪಿಪಿ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರ್ ಆಹ್ವಾನಿಸಿದೆ.

ಟೆಂಡರ್‌ನ ವಿವರ : (1) ಕ್ರೀಡಾ ವಸತಿ ಶಾಲೆ/ನಿಲಯ, ಕೊಪ್ಪಳ ಕೊಪ್ಪಳ ಜಿಲ್ಲೆ. ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : **ರೂ.58,50,000=00** ಇ.ಎಂ.ಡಿ ಮೊತ್ತ (ರೂಗಳಲ್ಲಿ) : **ರೂ.1,17,000/–** (2) ಟೆಂಡರ್ ಆಹ್ವಾನಿಸುವ ದಿನಾಂಕ : **24.03.2026 ಸಮಯ: 12.00 ಅಪರಾಹ್ನ** (3) ಟೆಂಡರ್ ಸಲ್ಲಿಸುವ ಅಂತಿಮ **ದಿನಾಂಕ : 07.04.2026 ಸಮಯ: 4.00 ಸಾಯಂಕಾಲ** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 09.04.2026 ಸಮಯ: 4.00 ಸಾಯಂಕಾಲ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತದ ನಂತರ ತಿಳಿಸಲಾಗುವುದು.

ಕ್ರ ಸಂ	ವಿವರಗಳು	ಕ್ರೀಡಾಪಟುಗಳ ಸಂಖ್ಯೆ (ಅಂದಾಜು)	ಒಬ್ಬ ಕ್ರೀಡಾಪಟುವಿಗೆ ದಿನ ಒಂದಕ್ಕೆ ನಿಗಧಿಪಡಿಸಿದ ಗರಿಷ್ಟ ಮೊತ್ತ (ರೂಗಳಲ್ಲಿ)	ವಾರ್ಷಿಕ ಅಂದಾಜು 325 ದಿನಗಳಿಗೆ ಆಹಾರ ಪೂರೈಕೆಗೆ ತಗಲುವ ಒಟ್ಟು ವೆಚ್ಚ (ರೂಗಳಲ್ಲಿ)
1	5ನೇ ತರಗತಿಯಿಂದ 10ನೇ ತರಗತಿವರೆಗಿನ ಕ್ರೀಡಾಪಟುಗಳು	80	225/–	58,50,000=00
	ಒಟ್ಟು	80		58,50,000=00

ಆಸಕ್ತ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಮೇಲ್ಕಂಡ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಸಹಾಯಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೊಪ್ಪಳ ಜಿಲ್ಲೆ.
ವಾ.ಸಾ.ಇ/ಕೊಪ್ಪಳ/765/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರಕಾರ
ಸುಳ್ಯ ನಗರ ಪಂಚಾಯತ್ ಕಾರ್ಯಾಲಯ
ಸುಳ್ಯ–574 239. ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ. ದೂ: 08257–230354, 230414
ಇ–ಮೇಲ್: co.sullia@gmail.com ವೆಬ್‌ಸೈಟ್: www.sulliatown.mrc.gov.in
ನಂ:ಸುಪಪಂ/ಜೆ.ಇ/ವಾ.ವಿ/ಟೆ.ಪ್ರ/19 /2025–26 ದಿನಾಂಕ : 12.03.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕಾರ್ಯಾಲಯ ಸುಳ್ಯ ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ 2000 ರ ಪ್ರಕಾರ ಇ- ಪೋರ್ಟಲ್ ಮುಖಾಂತರ ಸುಳ್ಯ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಡೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿಗೆ ಇಂಡೆಂಟ್ ಸಂಖ್ಯೆ: 1) DMA/2025-26/SE7315 ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ

ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **26.03.2026** ಅಪರಾಹ್ನ **5.00** ಗಂಟೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ಪರಿಶೀಲಿಸಿಕೊಂಡು ಟೆಂಡರ್ ಸಲ್ಲಿಸಲು ಕೋರಲಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ವೆಬೆಸೈಟ್ www.sulliatown.mrc.gov.in ನಿಂದ ಪಡೆದುಕೊಳ್ಳಬಹುದು.

ಸಹಿ/–	ಸಹಿ/–
ಶ್ರೀಮತಿ ಮಂಜುಳಾ ಎಂ	ಶ್ರೀ ಹೆಚ್ ಆರ್ ಬಸವರಾಜು
ಆಡಳಿತಾಧಿಕಾರಿ	ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ್, ಸುಳ್ಯ	ಪಟ್ಟಣ ಪಂಚಾಯತ್, ಸುಳ್ಯ

DIPR/DK/MPL/1793/25-26

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ–562159
Phone: 080-27274108/27276074, **E-Mail:** ka.ramanagara.dudc@gmail.com
ಸಂ.: ರಾಜಿನಕೋ/ಎಂಯುಎನ್(1)/3rd Party Inspection/ಸಿಆರ್/42/2025–26 ದಿನಾಂಕ: 18.03.2026

ಟೆಂಡರ್ ಅಧಿಸೂಚನೆ

ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆ–ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಪುರಸಭೆ–ಬಿಡದಿ, ಮಾಗಡಿ ಮತ್ತು ಪ.ಪಂ–ಹಾರೋಹಳ್ಳಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ಅನುದಾನಗಳಡಿ ಕೈಗೊಳ್ಳುವ ಅಭಿವೃದ್ಧಿ/ನಿರ್ವಹಣಾ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ 3ನೇ ವ್ಯಕ್ತಿ ತಪಾಸಣೆ ಸಮಲೋಚಕರ ಏಜೆನ್ಸಿ ನೇಮಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆ ಅವಧಿ
1	ಇಂಡೆಂಟ್ ಸಂಖ್ಯೆ DMA/2025-26 SE7493	86.04	1.29	One year from the date of award

ಆಸಕ್ತಿಯುಳ್ಳ ಬಿಡ್‌ದಾರರು ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ನ್ನು ಹಾಗೂ ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸುವುದು.

1) ಪೂರ್ವಭಾವಿ ಸಭೆ (Pre-bid) **ದಿನಾಂಕ: 24.03.2026 ರಂದು ಮಧ್ಯಾಹ್ನ 3:00 ಗಂಟೆಗೆ.** 2) ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 07.04.2026 ರಂದು ಸಂಜೆ 05.00 ಗಂಟೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 09.04.2026 ರಂದು ಸಂಜೆ 5:30 ಗಂಟೆಗೆ.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಚೇರಿಯ ಇ–ಮೇಲ್ ಮೂಲಕ ಪಡೆಯಬಹುದು. **ಸೂಚನೆ:–1)** ಬಿಡ್‌ದಾರರು ಆರ್ಥಿಕ ಬಿಡ್‌ನಲ್ಲಿ ನಕರಾತ್ಮಕ/ಅನಿಯಮಿತ ದರವನ್ನು ನಮೂದಿಸಿದ್ದಲ್ಲಿ ಬಿಡ್‌ನ್ನು ತಿರಸ್ಕರಿಸಲಾಗುವುದು.

ಸಹಿ/– **ಯೋಜನಾ ನಿರ್ದೇಶಕರು**
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
DIPR/BSD/715/SA/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-46) ಡ್ರಾ ಮಾರ್ಚ್ 23ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BN 179785 (PATHANAMTHITTA)
Consolation Prize Rs.5,000/-
BO 179785 BP 179785 BR 179785 BS 179785
BT 179785 BU 179785 BV 179785 BW 179785
BX 179785 BY 179785 BZ 179785
2nd Prize Rs.30,00,000/- [30 Lakhs]
BZ 694428 (NEYYATTINKARA)
3rd Prize Rs.5,00,000/- [5 Lakhs]
BN 518882 (KAYAMKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0035 0162 0469 1619 1687 2207 2358 2723 4342 4346 4671 4792 4887 7207 7593 7957 8833 9022 9442
5th Prize Rs.2,000/-
1039 1639 1659 2611 3227 6280
6th Prize Rs.1,000/-
0685 1167 1352 1496 1801 2237 2464 3416 3777 3996 4909 4922 5066 5675 6135 6602 6842 7114 7239 7310 7417 7594 7831 8029 8081
7th Prize Rs.500/-
0119 0182 0201 0215 0336 0641 0731 1232 1474 1718 1773 1983 2057 2209 2218 2273 2297 2370 2432 2677 2929 3579 3611 3845 4159 4235 4403 4616 4863 4917 4957 4998 5400 5476 5490 5555 5719 5810 6076 6235 6382 6406 6413 6590 6635 6775 6830 6897 7000 7061 7098 7121 7140 7290 7450 7512 7636 7784 7825 8207 8349 8357 8620 8714 8765 8949 9000 9006 9176 9206 9218 9250 9252 9518 9665 9834
8th Prize Rs.200/-
0123 0145 0150 0302 0405 0422 0532 0533 0688 0924 1210 1295 1411 1711 1776 1803 1809 1813 1849 1935 1954 1963 2248 2532 2586 2615 2698 2756 2843 2878 3073 3180 3364 3402 3404 3474 3583 3674 3732 3772 3776 3833 4011 4123 4205 4228 4255 4260 4312 4455 4639 4707 4749 4907 4958 5002 5059 5204 5216 5217 5221 5235 5250 5267 5379 5437 5468 5500 5831 5949 5962 6127 6203 6735 6810 6905 6960 7164 7229 7245 7424 7491 7527 7530 7557 7753 7958 8002 8263 8544 8705 9382 9705 9916
9th Prize Rs.100/-
0008 0046 0095 0126 0213 0281 0301 0358 0426 0663 0682 0804 0831 0865 0950 1118 1150 1193 1195 1211 1475 1615 1625 1656 1784 1800 1819 1907 2008 2050 2324 2339 2341 2398 2400 2424 2450 2618 2673 2818 2877 3046 3052 3070 3114 3131 3179 3223 3419 3431 3485 3542 3571 3709 3715 3740 3874 3985 4062 4200 4242 4311 4404 4450 4575 4599 4649 4653 4770 4772 4775 4902 4903 4905 5046 5121 5331 5967 6107 6179 6263 6316 6336 6398 6434 6639 6662 6696 6714 6717 6763 6771 6813 6889 6952 7056 7177 7261 7321 7323 7451 7459 7478 7519 7588 7595 7608 7643 7924 7976 8027 8079 8103 8131 8158 8159 8247 8262 8341 8387 8434 8506 8518 8617 8623 8743 8786 8861 8997 9024 9038 9146 9314 9317 9341 9357 9372 9526 9736 9753 9757 9800 9881 9955

ಇರಾನ್‌ನಿಂದ ಹಾರ್ಮುಜ್ ಜಲಸಂಧಿ ದಾಟುವ ಹಡಗುಗಳಿಂದ 2 ಮಿಲಿಯನ್ ಡಾಲರ್ ಸುಂಕ ವಸೂಲಿ!

ಇಂಧನ ಮಾರುಕಟ್ಟೆಯಲ್ಲಿ ತಲ್ಲಣ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾರಿಗೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ.

ಹೊಸ ಕಡಲ ನಿಯಮ, ಸಾರ್ವಭೌಮ ಆಡಳಿತ: ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಸಮಿತಿಯ ಸದಸ್ಯರಾದ ಅಲಾದ್ದೀನ್ ಬೊರೌಜೆರ್ಡಿ, ದಶಕಗಳ ನಂತರ ಜಲಸಂಧಿಯಲ್ಲಿ ಹೊಸ 'ಸಾರ್ವಭೌಮ ಆಡಳಿತ' ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ. ನಡೆಯುತ್ತಿರುವ ಯುದ್ಧದ ವೆಚ್ಚಗಳನ್ನು ಸರಿದೂಗಿಸಲು ಮತ್ತು ಜಲಸಂಧಿಯ ಮೇಲಿನ ತನ್ನ ಭೌಗೋಳಿಕ ಅಧಿಕಾರ ಪ್ರದರ್ಶಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇರಾನ್‌ನ ಶಕ್ತಿಯನ್ನು ಜಗತ್ತಿಗೆ ತೋರಿಸಲು ಇದು ಅನಿವಾರ್ಯ ಎಂದಿದ್ದಾರೆ.

ಜಲಸಂಧಿಯ ಕಾರ್ಯಾಚರಣೆ ಹೇಗಿದೆ?: ಇರಾನ್ ವಿದೇಶಾಂಗ ಸಚಿವ ಸೆಯ್ಯದ್ ಅಬ್ಬಾಸ್ ಅರಾಘ್ಚಿ, ಸಾಮಾಜಿಕ ಜಾಲತಾಣಗಳಲ್ಲಿ ಸ್ಪಷ್ಟನೆ ನೀಡಿ, ಹಾರ್ಮುಜ್ ಜಲಸಂಧಿಯನ್ನು ಅಧಿಕೃತವಾಗಿ ಮುಚ್ಚಲಾಗಿಲ್ಲ ಎಂದು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ವಿಮಾ ಕಂಪನಿಗಳು ಯುದ್ಧದ ಭೀತಿಯಿಂದಾಗಿ ಹಡಗುಗಳಿಗೆ ವಿಮೆ ನೀಡಲು ಹಿಂದೇಟು ಹಾಕುತ್ತಿರುವುದರಿಂದ ಸಂಚಾರ ತಗ್ಗಿದೆಯೇ ಹೊರತು ಇರಾನ್‌ನಿಂದಲ್ಲ ಎಂದು ಅವರು ವಾದಿಸಿದ್ದಾರೆ. ಆದರೆ ಅಮೆರಿಕ, ಇರಾನ್‌ನ ಇಂಧನ ಅಥವಾ ಪರಮಾಣು ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ತಕ್ಷಣವೇ ಸಂಪೂರ್ಣವಾಗಿ ಮುಚ್ಚಲಾಗುವುದು ಎಂದು ಟೆಹ್ರಾನ್ ಎಚ್ಚರಿಕೆ ನೀಡಿದೆ.

ಜಾಗತಿಕ ಇಂಧನ ಬಿಕ್ಕಟ್ಟು, ಭಾರತದ ಮೇಲಿನ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ಕಚ್ಚಾ ತೈಲ ಪೂರೈಕೆಯ ಶೇ.20 ರಷ್ಟು ಭಾಗವನ್ನು ನಿರ್ವಹಿಸುವ ಅತ್ಯಂತ ನಿರ್ಣಾಯಕ ಮಾರ್ಗ. ಪ್ರಸ್ತುತ ಸಂಘರ್ಷದಿಂದಾಗಿ ಜಾಗತಿಕ ತೈಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ವಿಶೇಷವಾಗಿ ಇರಾನ್‌ನ ದಾಳಿಯಿಂದಾಗಿ ಕತಾರ್‌ನ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ರಫ್ತು ಸಾಮರ್ಥ್ಯದ ಶೇ.17 ರಷ್ಟು ಹಾನಿಯಾಗಿದೆ ಎಂದು ವರದಿಯಾಗಿದೆ.

ಕತಾರ್ ಮೇಲಿನ ಅವಲಂಬನೆ: ಭಾರತ ತನ್ನ ಅನಿಲ ಅಗತ್ಯದ ಸುಮಾರು ಶೇ.47ರಷ್ಟು ಪಾಲನ್ನು ಕತಾರ್ ನಿಂದಲೇ ಆಮದು ಮಾಡಿಕೊಳ್ಳುತ್ತದೆ. ಈ ಮಾರ್ಗದಲ್ಲಿನ ಅಡೆತಡೆಗಳು ಭಾರತದ ರಸಗೊಬ್ಬರ ಉತ್ಪಾದನೆ ಮತ್ತು ಕೈಗಾರಿಕಾ ಇಂಧನ ಪೂರೈಕೆಯ ಮೇಲೆ ನೇರ ಪರಿಣಾಮ ಬೀರುತ್ತಿವೆ. ಈಗಾಗಲೇ ದೇಶದ ಹಲವು ಯೂರಿಯಾ ಸ್ಥಾವರಗಳು ಅನಿಲ ಕೊರತೆಯಿಂದಾಗಿ ಅರ್ಧ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇರಾನ್ ನಿಲುವೇನು?: ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಯುದ್ಧ ಆರಂಭವಾಯಿತು. ಅಂದಿನಿಂದ ಇರಾನ್ ಪ್ರತಿರೋಧ ತೋರುತ್ತಿದ್ದು, ಜಾಗತಿಕ ಪೂರೈಕೆ ಸರಪಳಿಯ ಮೇಲೆ ತನ್ನ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿದೆ. ಮುಕ್ತ ನೌಕಾಯಾನಕ್ಕೆ ಮುಕ್ತ ವ್ಯಾಪಾರದ ಗೌರವ ಸಿಗಬೇಕು ಎಂಬುದು ಇರಾನ್‌ನ ನಿಲುವಾಗಿದೆ.



ಮಿಲಿಟರಿ ಕಾರ್ಯಾಚರಣೆ, ಸಾವು-ನೋವು

ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು ಐದು ದಿನಗಳ ಕಾಲ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ.ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಗೆ ವಿರಾಮ ನೀಡಲಾಗಿದ್ದರೂ, ಇಸ್ರೇಲ್ ಟೆಹ್ರಾನ್‌ನ ಮೂಲಸೌಕರ್ಯ ಗುರಿಗಳ ಮೇಲೆ ವ್ಯಾಪಕ ದಾಳಿ ಮುಂದುವರಿಸಿದೆ. ಅದೇ ವೇಳೆ, ಇರಾನ್ ನಡೆಸಿದ ದಾಳಿಯನ್ನು ತಡೆಯಲು ತನ್ನ ವಾಯು ರಕ್ಷಣಾ ವ್ಯವಸ್ಥೆ ಪ್ರಯತ್ನಿಸುತ್ತಿದೆ ಎಂದು ಯುನೈಟೆಡ್ ಅರಬ್ ಎಮಿರೇಟ್ಸ್ ವರದಿ ಮಾಡಿದೆ. ಫೆಬ್ರವರಿ 28 ರಂದು ಸಂಘರ್ಷ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,500 ಮತ್ತು ಲೆಬನಾನ್‌ನಲ್ಲಿ 1,000 ಕ್ಕೂ ಹೆಚ್ಚು ಜನರು ಸೇರಿದಂತೆ ಒಟ್ಟು 2,000 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 13 ಅಮೆರಿಕನ್ ಸೈನಿಕರು ಸಹ ಪ್ರಾಣ ಕಳೆದುಕೊಂಡಿದ್ದಾರೆ.

ಜಾಗತಿಕ ಆರ್ಥಿಕ ಪರಿಣಾಮ

ಜಾಗತಿಕ ತೈಲ ಸಾರಿಗೆಯ ಶೇ. 20 ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯ ದಿಗ್ಬಂಧನದಿಂದಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ. 55 ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ ಸುಮಾರು 113 ಡಾಲರ್ ತಲುಪಿದೆ. ಇದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಗೆ ಕಾರಣವಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಕೊರತೆಯಿಂದಾಗಿ ದಕ್ಷಿಣ ಕೊರಿಯಾದ ಎಲ್‌ಜಿ ಕೆಮ್ ನಂತಹ ಪ್ರಮುಖ ಕಂಪನಿಗಳು ಕೈಗಾರಿಕಾ ಘಟಕಗಳನ್ನು ಮುಚ್ಚಿವೆ.

ನ್ಯಾಟೋ ನಿಲುವು

ಇಂಧನ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಅಮೆರಿಕ ನೇತೃತ್ವದ ಕಡಲ ಒಕ್ಕೂಟವನ್ನು ಸೇರಿಕೊಂಡಿದೆ ಮತ್ತು ಹಾರ್ಮುಜ್ ಜಲಸಂಧಿಯ ಬಳಿ ನೌಕಾಪಡೆಗಳನ್ನು ನಿಯೋಜಿಸಿದೆ. ಇದರೊಂದಿಗೆ, ಗುಪ್ತಚರ ಮಾಹಿತಿ ಮತ್ತು ಗಸ್ತಿನಲ್ಲಿ ಅಮೆರಿಕದೊಂದಿಗೆ ಸಮನ್ವಯ ಸಾಧಿಸಲು ನ್ಯಾಟೋ ಸಮ್ಮತಿಸಿದೆ.

ಭಾರತೀಯ ಎಲ್‌ಪಿಜಿ ಟ್ಯಾಂಕರ್‌ಗಳ ಸಂಚಾರ



ಹೊಸದಿಲ್ಲಿ: ಶಿಪ್ ಟ್ರ್ಯಾಕಿಂಗ್ ದತ್ತಾಂಶಗಳ ಪ್ರಕಾರ, 'ಪೈನ್ ಗ್ಯಾಸ್' ಮತ್ತು 'ಜಗ್ ವಸಂತ್' ಎಂಬ ಎರಡು ಭಾರತೀಯ ಧ್ವಜದ ಎಲ್‌ಪಿಜಿ ಟ್ಯಾಂಕರ್‌ಗಳು ಸೋಮವಾರ ಹಾರ್ಮುಜ್ ಜಲಸಂಧಿಯ ಮೂಲಕ ತಮ್ಮ ಪ್ರಯಾಣ ಆರಂಭಿಸಿವೆ.

ಸಂಚಾರ ವಿವರ: ಇರಾನ್ ಅಧಿಕಾರಿಗಳಿಂದ ಗುರುತು ಪರಿಶೀಲನೆಯನ್ನು ಸುಗಮಗೊಳಿಸಲು ಈ ಹಡಗುಗಳು ಇರಾನ್‌ನ ಲಾರಾಕ್ ಮತ್ತು ಖೇಶ್ಮ್ ದ್ವೀಪಗಳ ಬಳಿ ಸಂಚರಿಸುತ್ತಿರುವುದು ಕಂಡುಬಂದಿದೆ. ಪ್ರಾದೇಶಿಕ ಸಂಘರ್ಷದ ಕಾರಣ ಪರ್ಷಿಯನ್ ಕೊಲ್ಲಿಯಲ್ಲಿ ಸಿಲುಕಿಕೊಂಡಿದ್ದ 22 ಭಾರತೀಯ ಧ್ವಜದ ಹಡಗುಗಳಲ್ಲಿ ಇವೂ ಸೇರಿವೆ. ಈ ಹಿಂದೆ 'ಎಂಟಿ ಶಿವಾಲಿಕ್' ಮತ್ತು 'ಎಂಟಿ ನಂದಾದೇವಿ' ಹಡಗುಗಳು ಗುಜರಾತ್ ಬಂದರುಗಳಿಗೆ ಯಶಸ್ವಿಯಾಗಿ ಆಗಮಿಸಿ ಸುಮಾರು 92,712 ಟನ್ ಇಂಧನ ತಲುಪಿಸಿದ್ದವು. ಅಲ್ಲದೆ, ಮಾರ್ಚ್ 18 ರಂದು 'ಜಗ್ ಲಾಡ್ಕಿ' ತೈಲ ಟ್ಯಾಂಕರ್ 80,886 ಟನ್ ಕಚ್ಚಾ ತೈಲದೊಂದಿಗೆ ಮುದ್ರಾ ಬಂದರು ತಲುಪಿತ್ತು.

ಉಳಿದಿರುವ ಹಡಗುಗಳು : ಪ್ರಸ್ತುತ 24 ಭಾರತೀಯ ಹಡಗುಗಳು ಯುದ್ಧ ವಲಯದಲ್ಲಿ ಉಳಿದುಕೊಂಡಿವೆ. ಇವುಗಳಲ್ಲಿ 22 ಹಡಗುಗಳು ಜಲಸಂಧಿಯ ಪಶ್ಚಿಮ ಭಾಗದಲ್ಲಿದ್ದು, 611 ನಾವಿಕರನ್ನು ಹೊಂದಿವೆ. ಉಳಿದ ಹಡಗುಗಳಲ್ಲಿ ಕಚ್ಚಾ ತೈಲ ಟ್ಯಾಂಕರ್‌ಗಳು, ಎಲ್‌ಎನ್‌ಜಿ ವಾಹಕಗಳು ಮತ್ತು ಕಂಟೇನರ್ ಹಡಗುಗಳು ಸೇರಿವೆ. ಒಟ್ಟಾರೆಯಾಗಿ ಸುಮಾರು 500 ಜಾಗತಿಕ ಟ್ಯಾಂಕರ್‌ಗಳು ಪ್ರಸ್ತುತ ಪರ್ಷಿಯನ್ ಕೊಲ್ಲಿಯೊಳಗೆ ಸಿಲುಕಿಕೊಂಡಿವೆ. ಭಾರತ ತನ್ನ ಶೇ.85–95 ರಷ್ಟು ಎಲ್‌ಪಿಜಿ ಮತ್ತು ಶೇ.30 ರಷ್ಟು ನೈಸರ್ಗಿಕ ಅನಿಲ ಆಮದಿಗಾಗಿ ಈ ಜಲಸಂಧಿಯನ್ನೇ ಅವಲಂಬಿಸಿದೆ. ಕಚ್ಚಾ ತೈಲದ ವ್ಯತ್ಯಯವನ್ನು ಇತರ ಮೂಲ ಗಳಿಂದ ಭಾಗಶಃ ಸರಿದೂಗಿಸಲಾಗಿದ್ದರೂ, ಕೈಗಾರಿಕಾ ಮತ್ತು ವಾಣಿಜ್ಯ ಬಳಕೆದಾರರಿಗೆ ಅನಿಲ ಪೂರೈಕೆ ಕಡಿತಗೊಂಡಿದೆ.

ಕಾಶ್ಮೀರದಿಂದ ಚಿನ್ನ, ಬೆಳ್ಳಿ ಆಭರಣ ರವಾನೆ

ಕಾಶ್ಮೀರ : ಸಮರಸಂತ್ರಸ್ತ ಇರಾನ್‌ನ ಜನರಿಗೆ ಕಾಶ್ಮೀರದಿಂದ ಹಣ ಮಾತ್ರವಲ್ಲ ಚಿನ್ನ, ಬೆಳ್ಳಿ ಆಭರಣಗಳು, ಜಾನುವಾರುಗಳು, ಸಾಂಪ್ರದಾಯಿಕ ತಾಮ್ರದ ವಸ್ತುಗಳ ಸಹಿತ ನೆರವಿನ ಮಹಾಪೂರ ಹರಿಯತೊಡಗಿದೆ. ಕಾಶ್ಮೀರದ ಬದ್ಗಾಮ್ ಹಾಗೂ ಬಾರಾಮುಲ್ಲಾ ಜಿಲ್ಲೆಗಳ ಜನರು ಪಶ್ಚಿಮ ಏಷ್ಯಾ ಸಂಘರ್ಷದಿಂದ ಸಂತ್ರಸ್ತ ಇರಾನಿಯರಿಗೆ ಈ ರೀತಿ ನೆರವಿನ ಹಸ್ತ ಚಾಚಿದ್ದಾರೆ. ಭಾರತದ ಕಾಶ್ಮೀರವಾಸಿಗಳ ದಯಾಳುತನವನ್ನು ನಾವು ಯಾವತ್ತೂ ಮರೆಯೆವು ಎಂದು ಟೆಹ್ರಾನ್ ಕೃತಜ್ಞತೆ ವ್ಯಕ್ತಪಡಿಸಿದೆ. ಈದುಲ್ ಫಿತರ್ ಹಬ್ಬಾಚರಣೆ ಸಂದರ್ಭ , ಶಿಯಾ ಬಾಹುಳ್ಯದ ಬದ್ಗಾಮ್,



ಬಾರಾಮುಲ್ಲಾ ಜಿಲ್ಲೆಗಳ ಸ್ವಯಂಸೇವಕರ ತಂಡವೊಂದು, ಮಿಲಿಟರಿ ದಾಳಿಗಳಿಂದ ಸಂತ್ರಸ್ತ ಇರಾನ್‌ನ ಜನತೆಗೆ ನೆರವಾಗುವನ್ವಯ ಮನೆ ಮನೆ ಭೇಟಿ ನೀಡಿದೆ. ಜನರು ಕೂಡ ಹಣ ಮಾತ್ರವಲ್ಲ, ಚಿನ್ನ-ಬೆಳ್ಳಿ ಆಭರಣಗಳು, ಗೋವುಗಳು ಮತ್ತು ಸಾಂಪ್ರದಾಯಿಕ ತಾಮ್ರದ ವಸ್ತುಗಳನ್ನೂ ಸಂತ್ರಸ್ತರ ನಿಧಿಗೆ ದಾನ ಮಾಡಿದ್ದಾರೆ. ಇರಾನ್ ನ್ನು ಮತ್ತೆ ಕಟ್ಟುವುದಕ್ಕಾಗಿ ಹಣ, ಬಂಗಾರಗಳ ಕೊಡುಗೆಯಾಗಿ ನೀಡಿರುವ ಭಾರತೀಯರ ಮಾನವೀಯತೆ, ದಯಾಪರತೆಗೆ ಭಾರತದಲ್ಲಿನ ಇರಾನ್ ರಾಯಭಾರಿ ಸಾಮಾಜಿಕ ಜಾಲತಾಣದಲ್ಲಿ ಫೋಟೋ ಸಹಿತ ಕೃತಜ್ಞತೆ ಸಲ್ಲಿಸಿದ್ದಾರೆ.

ಗಂಡನ ನೆನಪಿನ ಸ್ಮರಣಿಕೆ ದಾನ

ಪಿಟಿಐ ಮೂಲಗಳ ಪ್ರಕಾರ ಮನೆ ಮನೆ ಭೇಟಿ ಅಭಿಯಾನದಲ್ಲಿ ಉಭಯ ಜಿಲ್ಲೆಗಳ ಹೆಂಗಸರು, ಗಂಡಸರು ,ಮಕ್ಕಳು ಪಾಲ್ಗೊಂಡಿದ್ದರು. ಈ ಸಂದರ್ಭ ಹಲವು ಮಹಿಳೆಯರು ತಮ್ಮ ಬಂಗಾರದೊಡವೆಗಳನ್ನೇ ಸ್ವಯಂಸೇವಕರ ದಾನ ಸಂಗ್ರಹ ಡಬ್ಬಿಗಳಿಗೆ ಸುರಿದಿದ್ದಾರೆ. ಕಾಶ್ಮೀರಿ ವಿಧವೆಯೋರ್ವರು ತಮ್ಮ ಗತ ಪತಿಯ ನೆನಪಿಗಾಗಿ 28ವರ್ಷಗಳಿಂದ ಜೋಪಾನ ಕಾಯ್ದುಕೊಂಡು ಬಂದಿದ್ದ ಬಂಗಾರದ ಸ್ಮರಣಿಕೆಯನ್ನೂ ಸಂತ್ರಸ್ತ ಇರಾನಿಯರಿಗೆ ದಾನ ಮಾಡಿದ್ದಾರೆ. ಪ್ರತಿಯಾಗಿ, ಗೌರವಾನ್ವಿತ ಸೋದರಿಯ ಕಣ್ಣೀರು ಮತ್ತು ಪರಿಶುದ್ಧ ಭಾವನೆಗಳು ಇರಾನ್‌ನ ಜನತೆ ಪಾಲಿಗೆ ಮಹಾನ್ ನೆಮ್ಮದಿಯ ಸೆಲೆಯಾಗಲಿದೆ ಮತ್ತು ಯಾವತ್ತೂ ಅವಿಸ್ಮರಣೀಯವಾಗಿರುವುದು ಎಂದು ರಾಯಭಾರಿಯ ಪೋಸ್ಟ್‌ನಲ್ಲಿ ಬಣ್ಣಿಸಲಾಗಿದೆ. ಕೆಲವು ಜನರು ತಮ್ಮ ಜಾನುವಾರುಗಳನ್ನು ಕೊಡುಗೆಯಾಗಿ ನೀಡಿದರೆ, ಮಕ್ಕಳು ತಮ್ಮ ಉಳಿತಾಯಗಳು ಮತ್ತು ಈದ್ ಹಣವನ್ನೂ ದಾನ ಮಾಡಿದ್ದಾರೆ. ಬದ್ಗಾಮ್ ಶಾಸಕ ಮುಂತಝಿರ್ ಮೆಹ್ದಿ ತಮ್ಮ ಒಂದು ತಿಂಗಳ ವೇತನವನ್ನು ಪರಿಹಾರ ಪ್ರಯತ್ನಗಳಿಗೆ ದಾನ ನೀಡಿದ್ದಾರೆ. ಇಸ್ರೇಲ್ ಮತ್ತದರ ಬೆಂಬಲಿಗ ರಾಷ್ಟ್ರಗಳು ಇರಾನ್ ವಿರುದ್ಧ ಸಾರಿರುವ ಅಕ್ರಮ ಸಮರದಿಂದ ಅಪಾರ ಹಾನಿ ಸಂಭವಿಸಿದೆ. ಇಂತಹ ಸಂಕಷ್ಟ ಸನ್ನಿವೇಶದಲ್ಲಿ ನಾಗರಿಕ ಜಗತ್ತು ಇರಾನ್‌ನ ಸಂತ್ರಸ್ತ ಜನರಿಗೆ ನೆರವಾಗಬೇಕು, ಇದಷ್ಟೆ ಸಾಧ್ಯ ಎಂದು ಶ್ರೀನಗರದ ರೈನವಾರಿ ಪ್ರದೇಶದ ನಿವಾಸಿ ಐಜಾಝ್ ಅಹಮದ್ ಹೇಳುತ್ತಾರೆ.

ಇರಾನ್ ಮಾಧ್ಯಮಗಳಿಂದ ತೀವ್ರ ವ್ಯಂಗ್ಯ

ಟೆಹ್ರಾನ್: ಇರಾನ್‌ನ ವಿದ್ಯುತ್ ಜಾಲದ ಮೇಲೆ ದಾಳಿ ನಡೆಸುವ ನಿರ್ಧಾರವನ್ನು ಅಮಾನತುಗೊಳಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮವನ್ನು ಅಮೆರಿಕದ ಹಿಂಜರಿಕೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮಗಳು ಕರೆದು ವ್ಯಂಗವಾಡಿದೆ.

ಇದು ರಾಷ್ಟ್ರೀಯ ಪ್ರತಿರೋಧಕ್ಕೆ ಸಂದ ಜಯ ಎಂದು ವ್ಯಾಖ್ಯಾನಿಸಿವೆ.

ಮಿಲಿಟರಿ ಪ್ರತಿರೋಧದ ಪ್ರತಿಪಾದನೆ: ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದನ್ನು ಐದು ದಿನಗಳ ಕಾಲ ಮುಂದೂಡುವುದಾಗಿ ಅಮೆರಿಕ ಘೋಷಿಸಿರುವುದನ್ನು ಟೆಹ್ರಾನ್‌ನ ಮಾಧ್ಯಮಗಳು ಅಪಹಾಸ್ಯ ಮಾಡಿವೆ. ಪ್ರೆಸ್ ಟಿವಿ ಮತ್ತು ಐಆರ್‌ಐಬಿ ವರದಿಗಳ ಪ್ರಕಾರ, ಈ ಮುಂದೂಡುವಿಕೆ ರಾಜತಾಂತ್ರಿಕ ಸೌಜನ್ಯದಿಂದ ಬಂದಿದ್ದಲ್ಲ, ಬದಲಿಗೆ ಇರಾನ್‌ನ ಪ್ರಬಲ ಮಿಲಿಟರಿ ಎಚ್ಚರಿಕೆಯಿಂದಾಗಿ ಅಮೆರಿಕ ಅನಿವಾರ್ಯವಾಗಿ ಈ ನಿರ್ಧಾರ ತೆಗೆದುಕೊಂಡಿದೆ.

ಮಾತುಕತೆ ನಡೆಯುತ್ತಿಲ್ಲ! : ಅಮೆರಿಕದೊಂದಿಗೆ ಯಾವುದೇ ನೇರ ಅಥವಾ ಪರೋಕ್ಷ ಮಾತುಕತೆಗಳು ನಡೆಯುತ್ತಿಲ್ಲ ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ರಂಪ್ ಅವರ ಐದು ದಿನಗಳ ಗಡುವು ಕೇವಲ ದಾಳಿಯ ಮುಂದುವರಿದ ಯೋಜನೆಯ ಭಾಗವಾಗಿದ್ದು, ಇರಾನ್ ಪೂರ್ಣ ಪ್ರಮಾಣದ ರಕ್ಷಣಾತ್ಮಕ ಪ್ರತಿಕ್ರಿಯೆಗೆ ಸಿದ್ಧವಾಗಿದೆ ಎಂದು ಅವರು ಎಚ್ಚರಿಸಿದ್ದಾರೆ.

ಮಾಧ್ಯಮ- ರಾಜಕೀಯ ಪ್ರತಿಕ್ರಿಯೆಗಳು : ಮೆಹ್ರ್ ನ್ಯೂಸ್ ಮತ್ತು ಟೆಹ್ರಾನ್ ಟೈಮ್ಸ್ ಸೇರಿದಂತೆ ವಿವಿಧ ಸಂಸ್ಥೆಗಳು ಅಮೆರಿಕದ ಈ ತಂತ್ರವನ್ನು ಬೊಗಳೆ ಮತ್ತು ರಾಜತಾಂತ್ರಿಕತೆಯ ಹೆಸರಿನಲ್ಲಿ ಮಾಡುತ್ತಿರುವ ಹಿಂಜರಿಕೆ ಎಂದು ಕರೆದಿವೆ. ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಿತಿಯ ವಕ್ತಾರ ಇಬ್ರಾಹಿಂ ರೆಜಾಯಿ, ಈ ವಿರಾಮವನ್ನು ಅಮೆರಿಕಕ್ಕೆ ಉಂಟಾದ ಸೋಲು ಎಂದು ಬಣ್ಣಿಸಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಬಗ್ಗೆ ಇರಾನ್ ನೀಡಿದ್ದ ಎಚ್ಚರಿಕೆ ಮತ್ತು ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ಸಂಭಾವ್ಯ ದಾಳಿಯ ಭೀತಿಯಿಂದಾಗಿ ಟ್ರಂಪ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಇರಾನ್ ಮಾಧ್ಯಮಗಳು ಅಭಿಪ್ರಾಯಪಟ್ಟಿವೆ.

ಕಾರ್ಯತಂತ್ರ: ಇಂಧನ ಪೂರೈಕೆ ಜಾಲ ಇಂದಿಗೂ ಯುದ್ಧದ ಭಾಗವಾಗಿ ಉಳಿದಿದೆ ಮತ್ತು ಅಮೆರಿಕದ ಯಾವುದೇ ದಾಳಿಗೆ ತಕ್ಕ ಪ್ರತಿಕ್ರಿಯೆ ನೀಡಲಾಗುವುದು, ಎಂದು ಇರಾನ್ ಮಾಧ್ಯಮಗಳು ಹೇಳಿವೆ. ಅಮೆರಿಕ ಆಡಳಿತ ಉಲ್ಲೇಖಿಸಿದ ಯಾವುದೇ ಫಲಪ್ರದ ಸಂಭಾಷಣೆಗಳ ಬಗ್ಗೆ ಇರಾನ್ ಮೂಲಗಳು ವ್ಯಂಗ್ಯವಾಡಿವೆ.

ಕಿರುಸುದ್ದಿ

ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ

ಹೊಸದಿಲ್ಲಿ: ಇಲ್ಲಿನ ಶ್ರೀ ಕೃಷ್ಣ ಜನ್ಮಭೂಮಿ ದೇವಾಲಯದ ಪ್ರಸಾದವನ್ನು ರಾಮನವಮಿಗಾಗಿ ಅಯೋಧ್ಯೆ ರಾಮ ಮಂದಿರಕ್ಕೆ ಕಳುಹಿಸಲಾಗಿದೆ. ಶ್ರೀ ಕೃಷ್ಣ ಜನ್ಮಭೂಮಿ ಸೇವಾ ಸಂಸ್ಥೆಯ ಕಾರ್ಯದರ್ಶಿ ಕಪಿಲ್ ಶರ್ಮಾ ಮಾತನಾಡಿ, ದೇವಾಲಯ ಸಂಕೀರ್ಣದಿಂದ 440 ಕೆಜಿ ಕೊತ್ತಂಬರಿ, 10 ಕೆಜಿ. ಲಡ್ಡು, ಬಟ್ಟೆ, ಹಣ್ಣು ಮತ್ತು ಇತರ ವಸ್ತುಗಳನ್ನು ರವಾನಿಸಲಾಗಿದೆ.

10,000 ಎಸಿ ಇ-ಬಸ್ ನಿಯೋಜನೆಗೆ ನಿರ್ಧಾರ

ಹೊಸದಿಲ್ಲಿ: ಪಿಎಂ-ಇ-ಬಸ್ ಸೇವಾ ಯೋಜನೆಯಲ್ಲಿ 2027ರ ಅಂತ್ಯದ ವೇಳೆಗೆ 26 ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳ 116 ನಗರಗಳಿಗೆ 10,000 ಹವಾನಿಯಂತ್ರಿತ ಇ-ಬಸ್ ಗಳನ್ನು ಒದಗಿಸಲಾಗುವುದು. ಬಳಿಕ ಇನ್ನೂ 35,000 ಇ-ಬಸ್‌ಗಳನ್ನು ಒದಗಿಸಲು ಹೊಸ ಯೋಜನೆ ಪ್ರಾರಂಭಿಸಲಾಗುವುದು ಎಂದು ಸರ್ಕಾರ ಸೋಮವಾರ ರಾಜ್ಯಸಭೆಗೆ ತಿಳಿಸಿದೆ.

ಹಳದಿ ಲೋಹ, ಬೆಳ್ಳಿ ಬೆಲೆಯಲ್ಲಿ ಭಾರೀ ಕುಸಿತ

ಹೊಸದಿಲ್ಲಿ: ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಜಾಗತಿಕ ಅಸ್ಥಿರತೆಯ ನಡುವೆ ಹೂಡಿಕೆದಾರರು ಲಾಭಾಂಶ ವಸೂಲಿಗೆ ಮುಂದಾದ ಕಾರಣ ಕೆಲವೇ ಗಂಟೆಗಳಲ್ಲಿ ಮಾರುಕಟ್ಟೆ ಮೌಲ್ಯದಲ್ಲಿ ಸುಮಾರು 2 ಟ್ರಿಲಿಯನ್ ಡಾಲರ್ ನಷ್ಟವಾಗಿದೆ.

ಮಾರುಕಟ್ಟೆ ಕುಸಿತದ ವಿವರ: ಎಂಸಿಎಕ್ಸ್ ಮಾರುಕಟ್ಟೆಯಲ್ಲಿ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29 ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತವನ್ನು ದಾಖಲಿಸಿದಂತಾಗಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.



ಆರ್ಥಿಕ ಕಾರಣಗಳು: ಅಮೆರಿಕನ್ ಡಾಲರ್ ಬಲವರ್ಧನೆ ಮತ್ತು ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 110 ಡಾಲರ್ ದಾಟಿರುವುದು ಈ ಮಾರುಕಟ್ಟೆ ಏರಿಳಿತಕ್ಕೆ ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಸಾಮಾನ್ಯವಾಗಿ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳು ಚಿನ್ನದಂತಹ ಸುರಕ್ಷಿತ ಹೂಡಿಕೆಗಳಿಗೆ ಬೆಂಬಲ ನೀಡುತ್ತವೆ, ಆದರೆ ಡಾಲರ್ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಬಾಂಡ್‌ಗಳಿಕೆ ಮಾರುಕಟ್ಟೆಯನ್ನು ನಿಯಂತ್ರಿಸಿವೆ. ವಿಶ್ಲೇಷಕರು ಪ್ರಸ್ತುತ ಪರಿಸ್ಥಿತಿಯನ್ನು ಕುಸಿತಕ್ಕಿಂತ ಮಾರುಕಟ್ಟೆಯ 'ತಿದ್ದುಪಡಿ ಹಂತ'ಎಂದು ಬಣ್ಣಿಸಿದ್ದಾರೆ.

ಜೆಪಿಸಿಗೆ ಕಾರ್ಪೊರೇಟ್ ಕಾನೂನು ತಿದ್ದುಪಡಿ ಬಿಲ್

ಹೊಸದಿಲ್ಲಿ: ಲೋಕಸಭೆ ಸೋಮವಾರ ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆ, 2026 ಅನ್ನು ವಿವರವಾದ ವಿಶ್ಲೇಷಣೆ ಮತ್ತು ಶಿಫಾರಸುಗಳಿಗಾಗಿ ಉಭಯ ಸದನಗಳ ಸದಸ್ಯರನ್ನೊಳಗೊಂಡ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆಯ ಮೇರೆಗೆ ಸ್ಪೀಕರ್ ಓಂ ಬಿರ್ಲಾ ಈ ಪ್ರಸ್ತಾವನೆಯನ್ನು ಧ್ವನಿ ಮತಕ್ಕೆ ಹಾಕಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆ ಪಕ್ಷಗಳ ವಿರೋಧ ಪಕ್ಷದ ಸದಸ್ಯರು ಈ ಮಸೂದೆಯನ್ನು ವಿರೋಧಿಸಿದ್ದರು. ಕಂಪನಿಗಳು ತಮ್ಮ ಲಾಭದ ಶೇ. 2ರಷ್ಟು ಹಣವನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಗೆ (ಸಿಎಸ್‌ಆರ್) ಪಾವತಿಸಬೇಕೆಂಬ ಕಡ್ಡಾಯ ನಿಯಮವನ್ನು ಈ ಮಸೂದೆ ಸಡಿಲಗೊಳಿಸುತ್ತದೆ ಎಂದು ಅವರು ಆರೋಪಿಸಿದ್ದರು. ಆದರೆ ಈ ಆರೋಪಗಳನ್ನು ನಿರಾಕರಿಸಿದ ಸಚಿವರು, ತಿದ್ದುಪಡಿಗಳು ಕೇವಲ ನಿವ್ವಳ ಲಾಭದ ಮಾನದಂಡಗಳಿಗೆ ಸಂಬಂಧಿಸಿವೆಯೇ ಹೊರತು ಸಂಪೂರ್ಣ ಸಿಎಸ್‌ಆರ್ ನಿಯಮಕ್ಕಲ್ಲ ಎಂದು ಸ್ಪಷ್ಟಪಡಿಸಿದರು. ಈ ಮಸೂದೆ, 'ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ) ಕಾಯ್ದೆ, 2008' ಮತ್ತು ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶ ಹೊಂದಿದೆ. ಸಣ್ಣ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ವ್ಯವಹಾರವನ್ನು ಇನ್ನಷ್ಟು ಸುಲಭಗೊಳಿಸುವುದು ಹಾಗೂ ಸಣ್ಣಪುಟ್ಟ ಕಾರ್ಪೊರೇಟ್ ಅಪರಾಧಗಳನ್ನು ದಂಡನೆಯಿಂದ ಮುಕ್ತಗೊಳಿಸುವುದು ಇದರ ಮುಖ್ಯ ಗುರಿಯಾಗಿದೆ.

ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ: ಜೈಶಂಕರ್

ಹೊಸದಿಲ್ಲಿ: ರಷ್ಯಾದೊಂದಿಗಿನ ತನ್ನ ಪಾಲುದಾರಿಕೆಯನ್ನು ಗಾಢವಾಗಿಸುವ ಭಾರತದ ಬದ್ಧತೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಪುನರುಚ್ಚರಿಸಿದರು. ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ ನಡುವೆ ಎರಡೂ ದೇಶಗಳ ನಡುವಿನ ಸಹಕಾರವು ವಿಸ್ತರಿಸುತ್ತಿದೆ ಎಂದು ಹೇಳಿದರು. ಭಾರತ ಮತ್ತು ರಷ್ಯಾ ಹೊಸ ದ್ವಿಪಾಕ್ಷಿಕ ಕಾರ್ಯಸೂಚಿಯತ್ತ ಎಂಬ ಶೀರ್ಷಿಕೆಯ ಸಮಾವೇಶವನ್ನು ಉದ್ದೇಶಿಸಿ ವರ್ಚುವಲ್ ಭಾಷಣದಲ್ಲಿ ಮಾತನಾಡಿದ ಅವರು, ವಿದೇಶಾಂಗ ವ್ಯವಹಾರಗಳ ಸಚಿವರು ಪ್ರಮುಖ ಅಂತಾರಾಷ್ಟ್ರೀಯ ಗುಂಪುಗಳಲ್ಲಿ ಬಲವಾದ ಸಹಯೋಗದ ಮಹತ್ವವನ್ನು ಹೇಳಿದರು. ಭಾರತ ಮತ್ತು ರಷ್ಯಾ ನಿಯಮಿತವಾಗಿ ಉನ್ನತ ಮಟ್ಟದ ಸಂವಹನ ಮತ್ತು ಹಂಚಿಕೆಯ ಕಾರ್ಯತಂತ್ರದ ಹಿತಾಸಕ್ತಿಗಳ ಮೂಲಕ ನಿಕಟವಾಗಿ ತೊಡಗಿಸಿಕೊಂಡಿವೆ ಎಂದು ಹೇಳಿದರು.

ಬ್ರಿಕ್ಸ್‌ನಲ್ಲಿ ನಾಯಕತ್ವದ ಪಾತ್ರವನ್ನು ವಹಿಸುತ್ತಿರುವುದರಿಂದ ಭಾರತವು ರಷ್ಯಾದೊಂದಿಗೆ ಹೆಚ್ಚು ನಿಕಟವಾಗಿ ಕೆಲಸ ಮಾಡಲು ಉತ್ಸುಕವಾಗಿದೆ ಎಂದು ಜೈಶಂಕರ್ ಹೇಳಿದರು. ವಿಕಸನಗೊಳ್ಳುತ್ತಿರುವ ಬಹುಧ್ರುವೀಯ ವ್ಯವಸ್ಥೆಯು ಬ್ರಿಕ್ಸ್, ಎಸ್‌ಸಿಒ, ಜಿ20 ಮತ್ತು ಯುಎನ್ ಸೇರಿದಂತೆ ಹೆಚ್ಚಿನ ಸಹಕಾರದ ಅಗತ್ಯವನ್ನು ಹೊಂದಿದೆ. ಭಾರತವು ತನ್ನ ಬ್ರಿಕ್ಸ್ ಅಧ್ಯಕ್ಷತೆಯಲ್ಲಿ, ಮಾನವೀಯತೆ-ಮೊದಲ ಮತ್ತು ಜನ ಕೇಂದ್ರಿತ ವಿಧಾನದೊಂದಿಗೆ, ಹಂಚಿಕೆಯ ಸವಾಲುಗಳನ್ನು ಎದುರಿಸಿ ರಷ್ಯಾದೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದೆ ಎಂದು ಜೈಶಂಕರ್ ಹೇಳಿದರು.

ಲ್ಯಾಂಡಿಂಗ್ ವೇಳೆ ಅಪಘಾತ: ಪೈಲಟ್, ಕೋ-ಪೈಲಟ್ ಸಾವು

ನ್ಯೂಯಾರ್ಕ್: ನ್ಯೂಯಾರ್ಕ್‌ನ ಲಾಗಾರ್ಡಿಯಾ ವಿಮಾನ ನಿಲ್ದಾಣದಲ್ಲಿ ಏರ್ ಕೆನಡಾ ಪ್ರಾದೇಶಿಕ ಜೆಟ್ ವಿಮಾನ ಲ್ಯಾಂಡಿಂಗ್ ವೇಳೆ ಅಗ್ನಿಶಾಮಕ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಪೈಲಟ್ ಮತ್ತು ಕೋ-ಪೈಲಟ್ ಮೃತಪಟ್ಟಿದ್ದಾರೆ. ಮೃತಪಟ್ಟ ಇಬ್ಬರು ಸಿಬ್ಬಂದಿ ಕೆನಡಾ ಮೂಲದವರಾಗಿದ್ದಾರೆ.

ವಿಮಾನದಲ್ಲಿದ್ದ 39 ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ. ಅಗ್ನಿಶಾಮಕ ವಾಹನದಲ್ಲಿದ್ದ ಇಬ್ಬರು ಪೋರ್ಟ್ ಅಥಾರಿಟಿ ಉದ್ಯೋಗಿಗಳು ಸಹ ಗಾಯಗೊಂಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಾಂಟ್ರಿಯಲ್‌ನಿಂದ ಆಗಮಿಸಿದ ಜ್ಯಾಜ್ ಏವಿಯೇಷನ್‌ನ ಬಾಂಬಾರ್ಡಿಯರ್ ಸಿಆರ್‌ಜೆ ವಿಮಾನ, ಯುನೈಟೆಡ್ ಏರ್ ಲೈನ್ಸ್ ವಿಮಾನವೊಂದರ ತಾಂತ್ರಿಕ ಸಮಸ್ಯೆಗೆ ಸ್ಪಂದಿಸಲು ರನ್‌ವೇ ದಾಟುತ್ತಿದ್ದ ತುರ್ತು ವಾಹನಕ್ಕೆ ಡಿಕ್ಕಿ ಹೊಡೆದಿದೆ.

ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗೆ ಎನ್‌ಡಿಎ ಸ್ಥಾನ ಹಂಚಿಕೆ ಅಂತಿಮ

ಎಐಎಡಿಎಂಕೆ 178ರಲ್ಲಿ, ಬಿಜೆಪಿ 27ರಲ್ಲಿ ಸ್ಪರ್ಧೆ

ಚೆನ್ನೈ: ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆಯ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ.

ಸೀಟು ಹಂಚಿಕೆಗೆ ಸಂಬಂಧಿಸಿ ಮಿತ್ರಕೂಟದ ಮಿತ್ರಪಕ್ಷಗಳೊಳಗೆ ಹಿತವಾದ ಮಾತುಕತೆ ನಡೆಯಿತು ಮತ್ತು ಮಿತ್ರಪಕ್ಷಗಳು ಸ್ಪರ್ಧಿಸಬೇಕಾದ ಸೀಟುಗಳ ಸಂಖ್ಯೆಯನ್ನು ಅಧಿಕೃತವಾಗಿ ಅಂತಿಮಗೊಳಿಸಲಾಯಿತು. ಇತರ ಮಿತ್ರಪಕ್ಷಗಳೊಂದಿಗೆ ಮಾತುಕತೆ ನಡೆದಿದೆ. ಅವುಗಳಿಗೆ ಹಂಚಿಕೆಯಾಗುವ ಸೀಟುಗಳ ಸಂಖ್ಯೆಯನ್ನು ಶೀಘ್ರದಲ್ಲೇ ಘೋಷಿಸಲಾಗುವುದು. ಎನ್‌ಡಿಎ ಒಂದು ವಿಜಯೀ ಮಿತ್ರಕೂಟವಾಗಿದ್ದು, ಎಲ್ಲಾ ಸೀಟುಗಳನ್ನೂ ಗೆಲ್ಲಲಿದೆ ಮತ್ತು ಎಡಿಎಂಕೆ ಸರಕಾರ ರಚಿಸಲಿದೆ ಎಂದು ಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಹೇಳಿದ್ದಾರೆ.



ನಾವು ದಿಲ್ಲಿಗೆ ಹೋದರೇ ಸಿಎಂ ಸ್ಟಾಲಿನ್‌ಗ್ಯಾಕೆ ಭಯ ?: ಎಡಿಎಂಕೆಯು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದು, ಮಿತ್ರಪಕ್ಷ ನಾಯಕರನ್ನು ಕಾಣಲು ನಾವು ದಿಲ್ಲಿಗೆ ಪಯಣಿಸುವಾಗೆಲ್ಲ ಮುಖ್ಯವಾಗಿ ಸಿಎಂ ಎಂ.ಕೆ.ಸ್ಟಾಲಿನ್ ತೀರಾ ನಿಂದನಾತ್ಮಕ ಹೇಳಿಕೆಗಳನ್ನು ನೀಡುತ್ತಾರೆ. ನಾವು ದಿಲ್ಲಿಗೆ ಭೇಟಿ ಕೊಟ್ಟರೆ ಮುಖ್ಯಮಂತ್ರಿ ಸ್ಟಾಲಿನ್‌ರಿಗೆ ಯಾಕೆ ಭಯವೆಂಬುದು ಗೊತ್ತಿಲ್ಲ. ಮಿತ್ರಕೂಟದ ಪಾಲುದಾರರು ಪರಸ್ಪರ ಭೇಟಿಯಾಗುವುದು ಸಹಜ. ಹಾಗಿದ್ದರೆ ಕನಿಮೋಳಿ ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ದಿಲ್ಲಿಗೆ ಹೋದ್ದು ಯಾಕೆ ಎಂದವರು ಸುದ್ದಿಗಾರರಿಗೆ ಮರುಪ್ರಶ್ನೆ ಹಾಕಿದರು. ಮಿತ್ರಕೂಟ ಸರಕಾರ ಸಾಧ್ಯತೆ ಕುರಿತ ಪ್ರಶ್ನೆಗೆ, ಎಡಿಎಂಕೆ ತನ್ನ ಸ್ವಂತ ಬಲದಲ್ಲೇ ಸರಕಾರ ರಚಿಸುವುದು ಶತ:ಸಿದ್ಧ ಎಂದು ಉತ್ತರಿಸಿದರು.

30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟ

ತಮಿಳುಗಾ ವೆಟ್ಟರಿ ಕಳಗಂ (ಟಿವಿಕೆ) ಮುಂಬರುವ 2026ರ ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ 30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ತಮಿಳುಗಾ ವೆಟ್ರಿ ಕಳಗಂ ಪಕ್ಷವು ಏಪ್ರಿಲ್ 9ರಂದು ನಿಗದಿಯಾಗಿರುವ ಪುದುಚೇರಿ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ರಸ್ತೆ ಸ್ಥಿತಿಗತಿಗಳ ಮೇಲೆ ನಿಗಾವಹಿಸಲು ಹೊಸ ಯೋಜನೆ

ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಸುಮಾರು 40,000 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ-ಚಾಲಿತ ಡ್ಯಾಶ್ ಕ್ಯಾಮ್ ಮೇಲ್ವಿಚಾರಣಾ ವ್ಯವಸ್ಥೆ ಪರಿಚಯಿಸಲು ಸಜ್ಜಾಗಿದೆ. ಇದು ಉತ್ತಮ ರಸ್ತೆ ನಿರ್ವಹಣೆಯತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ತಂತ್ರಜ್ಞಾನ-ಚಾಲಿತ ಪ್ರಯತ್ನದ ಭಾಗವಾಗಿ ಘೋಷಿಸಲಾದ ಈ ಯೋಜನೆಯು ನಿರ್ವಹಣಾ ದಕ್ಷತೆಯನ್ನು ಸುಧಾರಿಸುವ, ಸುರಕ್ಷತಾ ಮಾನದಂಡಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಅದೇರೀತಿ ಭಾರತದಾದ್ಯಂತ ದತ್ತಾಂಶ-ಬೆಂಬಲಿತ ಸ್ವಯಂಚಾಲಿತ ಕಣ್ಗಾವಲು ಸಾಧನಗಳನ್ನು ಬಳಸಿಕೊಂಡು ರಸ್ತೆ ಪರಿಸ್ಥಿತಿಗಳ ಟ್ರ್ಯಾಕಿಂಗ್ ಅನ್ನು ಸಕ್ರಿಯಗೊಳಿಸುವ ಗುರಿ ಹೊಂದಿದೆ.



ಎಐ ಡ್ಯಾಶ್‌ಕ್ಯಾಮ್ ಮಾನಿಟರಿಂಗ್ ಸಿಸ್ಟಮ್ ಎಂದರೇನು?: ಡ್ಯಾಶ್‌ಕ್ಯಾಮ್ ಅನಾಲಿಟಿಕ್ಸ್ ಸರ್ವೀಸಸ್ (ಡಿಎಎಸ್) ಎಂದು ಕರೆಯಲಾಗುವ ಈ ಹೊಸ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ (ಎಐ) ಮತ್ತು ಯಂತ್ರ ಕಲಿಕೆ (ಎಂಎಲ್) ಗಳನ್ನು ಬಳಸಿಕೊಂಡು ಹೆದ್ದಾರಿ ಪರಿಸ್ಥಿತಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಯೋಜನೆ ಅನ್ವಯದಲ್ಲಿ, ಮಾರ್ಗ ಗಸ್ತು ವಾಹನಗಳಲ್ಲಿ (ಆರ್‌ಪಿವಿಗಳು) ಹೆಚ್ಚಿನ ರೆಸಲ್ಯೂಶನ್ ಡ್ಯಾಶ್‌ಬೋರ್ಡ್ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಇದು ಹೆದ್ದಾರಿಯ ಉದ್ದಕ್ಕೂ ನಿಯಮಿತ ಸಮೀಕ್ಷೆಗಳನ್ನು ನಡೆಸಲಿದೆ.

ಕ್ಯಾಮೆರಾದಲ್ಲಿ ದತ್ತಾಂಶ ಸೆರೆ: ಈ ಕ್ಯಾಮೆರಾಗಳು ನಿರಂತರವಾದ ವಿಡಿಯೋ ಮತ್ತು ಚಿತ್ರ ದತ್ತಾಂಶವನ್ನು ಸೆರೆಹಿಡಿಯುತ್ತವೆ. ನಂತರ ಅದನ್ನು ಕೃತಕ ಬುದ್ಧಿಮತ್ತೆ-ಚಾಲಿತ ಮಾದರಿಗಳ ಮೂಲಕ ಅದನ್ನು ಸಂಗ್ರಹಿಸಿಕೊಳ್ಳಲಾಗುತ್ತದೆ. ಈ ವ್ಯವಸ್ಥೆಯನ್ನು 30ಕ್ಕೂ ಹೆಚ್ಚು ರೀತಿಯ ರಸ್ತೆ ದೋಷಗಳು ಮತ್ತು ವೈಪರೀತ್ಯಗಳನ್ನು ಸ್ವಯಂಚಾಲಿತವಾಗಿ ಗುರುತಿಸಲು ವಿನ್ಯಾಸಗೊಳಿಸಲಾಗಿದೆ. ಇದು ಸ್ವಯಂಚಾಲಿತ ತಪಾಸಣೆ ಮಾಡುವ ಅಗತ್ಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಸಮಸ್ಯೆಯನ್ನು ವೇಗವಾಗಿ ಪತ್ತೆಹಚ್ಚಲು ಅನುವು ಮಾಡಿಕೊಡುತ್ತದೆ.

ಕೃತಕ ಬುದ್ಧಿಮತ್ತೆ-ಚಾಲಿತ ವ್ಯವಸ್ಥೆಯು ಪ್ರಾಥಮಿಕವಾಗಿ ಗುಂಡಿಗಳು, ಬಿರುಕುಗಳು ಮತ್ತು ಮೇಲ್ಮೈ ಉದುರುವಿಕೆ ಸೇರಿದಂತೆ ಪಾದಚಾರಿ ಪರಿಸ್ಥಿತಿಗಳ ಮೇಲೆ ಕೇಂದ್ರೀಕರಿಸುತ್ತದೆ. ಇದಲ್ಲದೆ, ಇದು ಲೇನ್ ಗುರುತುಗಳು, ಕ್ರ್ಯಾಶ್ ಅಡೆತಡೆಗಳು, ಬೀದಿ ದೀಪಗಳು ಮತ್ತು ಸಂಕೇತಗಳಂತಹ ರಸ್ತೆ ಮೂಲಸೌಕರ್ಯಗಳನ್ನು ಮೇಲ್ವಿಚಾರಣೆ ಮಾಡುತ್ತದೆ.

ಕಿರುಸುದ್ದಿ

ಹೆಬ್ರಿ ಅಮೃತ ಭಾರತಿ ವಿದ್ಯಾಲಯದ 4 ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಆಯ್ಕೆ



• **ಹೆಬ್ರಿ:** ಪಿಆರ್‌ಎನ್ ಅಮೃತಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು 2025–26ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ನಾಲ್ಕು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಕೇಂದ್ರ ಸರ್ಕಾರ ಮತ್ತು ಕೇಂದ್ರೀಯ ಸಂಸ್ಕೃ ತ ವಿಶ್ವವಿದ್ಯಾಲಯ ಜನಕಪುರಿ ನವದೆಹಲಿ ಇವರು ಸಂಸ್ಕೃ ತ ಭಾಷಾ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ನೀಡುವ ಕಲಿಕಾ ಪ್ರೋತ್ಸಾಹ ವಿದ್ಯಾರ್ಥಿ ವೇತನವನ್ನು ಹೆಬ್ರಿ ಅಮೃತಭಾರತಿ ವಿದ್ಯಾಲಯದ ಪ್ರೌಢಶಾಲೆಯ ಸಂಸ್ಕೃ ತ ವಿದ್ಯಾರ್ಥಿಗಳಾದ 10ನೇ ತರಗತಿಯ ವೈಭವ್ ವಾರಿಕ್, ಸಮೀಕ್ಷಾ ಆರ್ ಮತ್ತು 9ನೇ ತರಗತಿಯ ಪ್ರಥಮ್ ಎನ್ ರಾವ್, ಆತ್ರೇಯ ನಾಯಕ್ ಪಡೆಯಲು ಅರ್ಹರಾಗಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ವಿದ್ಯಾರ್ಥಿ ವೇತನಕ್ಕೆ ಸಹಕರಿಸಿದ ಸಂಸ್ಥೆಯ ಸಂಸ್ಕೃ ತ ಶಿಕ್ಷಕ ವಿದ್ವಾನ್ ವೇದವ್ಯಾಸ ತಂತ್ರಿ ಮಡಾಮಕ್ಕಿ ಅವರನ್ನು ಸಂಸ್ಥೆಯ ಅಧ್ಯಕ್ಷ ಶೈಲೇಶ್ ಕಿಣಿ ಮತ್ತು ಸಂಸ್ಥೆಯ ಮುಖ್ಯಶಿಕ್ಷಕಿ ಅಪರ್ಣಾ ಆಚಾರ್ ಅಭಿನಂದಿಸಿದ್ದಾರೆ.

ಹೊಂಡಕ್ಕೆ ಮಗುಚಿ ಬಿದ್ದ ಲಾರಿ: ಇಬ್ಬರಿಗೆ ಗಾಯ

• **ಕಾಸರಗೋಡು:** ಪೆರಿಯ ಮೂನಾಂಕಡವ್ ಎಂಬಲ್ಲಿ ಲಾರಿಯೊಂದು ಹೊಂಡಕ್ಕೆ ಮಗುಚಿ ಬಿದ್ದು ಇಬ್ಬರು ಗಂಭೀರ ಗಾಯಗೊಂಡ ಘಟನೆ ಸೋಮವಾರ ಬೆಳಗ್ಗೆ ಸಂಭವಿಸಿದೆ. ಪೆರಿಯ ಭಾಗದಿಂದ ಕುಂಡಂಗುಳಿ ಭಾಗಕ್ಕೆ ತೆರಳುತ್ತಿದ್ದ ತಮಿಳುನಾಡು ನೋಂದಾಯಿತ ಲಾರಿ ಬೆಳಗ್ಗೆ 8.45ರ ವೇಳೆ ಅಪಘಾತಕ್ಕೀಡಾಗಿದೆ. ಅಪಘಾತದಲ್ಲಿ ಗಾಯಗೊಂಡ ಇಬ್ಬರನ್ನು ಕೂಡಲೇ ಕಾಞಂಗಾಡಿನ ಆಸ್ಪತ್ರೆಗೆ ಸಾಗಿಸಲಾಗಿದೆ.

ನಿಧನ ಸುದ್ದಿ

ಕೇಶವ

ಮಂಗಳೂರು: ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ನಿವೃತ್ತ ಅಧೀನ ಸಿಬ್ಬಂದಿ ಕೇಶವ (65), ಅಲ್ಪ ಕಾಲದ ಅನಾರೋಗ್ಯದಿಂದ ಮಾ. 22ರಂದು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ನಿಧನರಾದರು. ಬ್ಯಾಂಕಿನ ಸುಬ್ರಹ್ಮಣ್ಯ, ಮಂಗಳೂರಿನ ಹಂಪನಕಟ್ಟೆ ಶಾಖೆಗಳಲ್ಲಿ ಸುಮಾರು 35 ವರ್ಷ ಸೇವೆ ಸಲ್ಲಿಸಿ, 5 ವರ್ಷಗಳ ಹಿಂದೆ ನಿವೃತ್ತರಾಗಿ ತನ್ನೂರು ಸುಬ್ರಹ್ಮಣ್ಯದಲ್ಲೇ ನೆಲೆಸಿದ್ದರು. ಹಳ್ಳಿಯ ಮಲೆಕುಡಿಯ ಜನಾಂಗದ ಹಿರಿಯ ಸದಸ್ಯರಾದ ಕೇಶವರು, ಸ್ವಪ್ರಯತ್ನದಿಂದ, ಬ್ಯಾಂಕಿಗೆ ಸೇರಿ, ಸೌಮ್ಯ ಸ್ವಭಾವದ ಕೆಲಸಗಾರರಾಗಿ, ಜನಾನುರಾಗಿಯಾಗಿದ್ದರು. ಮೃತರು ಪತ್ನಿ, ಪುತ್ರನನ್ನು ಅಗಲಿದ್ದಾರೆ.



ಕಾರ್ಕಡ ಗಿರಿಜಾ ಉಡುಪ

ಕೋಟ: ವಿಶ್ವ ವಿಖ್ಯಾತ ಸಾಲಿಗ್ರಾಮ ಮಕ್ಕಳ ಮೇಳದ ಸಂಸ್ಥಾಪಕರಲ್ಲಿ ಓರ್ವರಾದ ರಾಷ್ಟ್ರ ಪ್ರಶಸ್ತಿ ಪುರಸ್ಕೃ ತ ಶಿಕ್ಷಕ ಕಾರ್ಕಡ ದಿ. ಶ್ರೀನಿವಾಸ ಉಡುಪರ ಪತ್ನಿ ಗಿರಿಜಾ ಉಡುಪ (90) ಇವರು ಮಾ. 21 ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.




ಪುಷ್ಪಾಕುಮಾರಿ

ಮುಳ್ಳೇರಿಯ: ಬೆಳ್ಳೂರು ಅಡ್ವಳ ಕಾನ ನಿವಾಸಿ ಅಡ್ವಳಬೀಡು ಪುಷ್ಪಾಕುಮಾರಿ (45) ಭಾನುವಾರ ನಿಧನ ಹೊಂದಿದರು. ಅವರು ಅಸೌಖ್ಯ ತಗುಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ ಪತಿ ಮಧುಸೂದನ ಬಲ್ಲಾಳ್ ಈ ಹಿಂದೆಯೇ ನಿಧನ ಹೊಂದಿದ್ದಾರೆ. ಮೃತರು ತಂದೆ ಕಜಮುಂಡ ಬಾಲಕೃಷ್ಣ ಬಲ್ಲಾಳ್, ತಾಯಿ ಸುಶೀಲಮ್ಮ, ಮಕ್ಕಳಾದ ನಿಶಾಂತ್, ನಿತೇಶ್ ಅವರನ್ನು ಅಗಲಿದ್ದಾರೆ.

ಗುರುತು ಪತ್ತೆಗೆ ಮನವಿ

ಮಂಗಳೂರು: ನಗರದ ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯ ಶವಾಗಾರದಲ್ಲಿ ಬಾಬು (62) ಎಂಬವರ ಮೃತದೇಹವನ್ನು ಇರಿಸಲಾಗಿದೆ. ಮೃತದೇಹದ ಗುರುತು ಪತ್ತೆಯಾದಲ್ಲಿ ಗುರುತು ಚೀಟಿಯನ್ನು ಕಚೇರಿಗೆ ಸಲ್ಲಿಸಿ 7 ದಿನಗಳೊಳಗೆ ಮೃತದೇಹವನ್ನು ಪಡೆಯಬೇಕೆಂದು ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಒರಿಸ್ಸಾದ ಪುರೀ ಕ್ಷೇತ್ರದಲ್ಲಿ ಸನಾತನ ಧರ್ಮ ವಿಹಾರ್ ಪ್ರದೇಶದಲ್ಲಿ ಅಂತಾರಾಷ್ಟ್ರೀಯ ಸಂಸ್ಕೃ ತ ಪ್ರಚಾರದ ಸಂಸ್ಥೆಯಾದ ಲೋಕಭಾಷಾ ಪ್ರಚಾರ ಸಮಿತಿ ವತಿಯಿಂದ ನಿರ್ಮಾಣಗೊಳ್ಳಲಿರುವ ಸಂಸ್ಕೃ ತ ಭವನ ಹಾಗೂ ಬ್ರಾಹ್ಮಣ ಭವನ ಭೂಮಿ ಪೂಜೆಯನ್ನು ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥಶ್ರೀಪಾದರು ನೆರವೇರಿಸಿ ಅನುಗ್ರಹಿಸಿದರು. ಈ ಕಾರ್ಯಕ್ರಮವನ್ನು ಲೋಕಭಾಷಾ ಪ್ರಚಾರ ಸಮಿತಿಯ ಅಂತಾರಾಷ್ಟ್ರೀಯ ಅಧ್ಯಕ್ಷ ಹಾಗೂ ಒರಿಸ್ಸಾ ಬ್ರಾಹ್ಮಣ ಮಹಾ ಸಂಘದ ಅಧ್ಯಕ್ಷ ಡಾ. ಸದಾನಂದ ದೀಕ್ಷಿತರು ಆಯೋಜಿಸಿದ್ದರು.

ಶೀರೂರಿನಲ್ಲಿ ವೈಭವದ 72ನೇ ರಾಮೋತ್ಸವ
ಶ್ರೀಕೃಷ್ಣ ಮಠದಲ್ಲಿ ನೂತನ ದರ್ಶನ ವ್ಯವಸ್ಥೆ

• **ಉಡುಪಿ:** ಹಿರಿಯಡ್ಕ ಸಮೀಪದ ಸುವರ್ಣ ನದಿಯ ತಟದಲ್ಲಿರುವ ಶೀರೂರಿನಲ್ಲಿ ಈ ಬಾರಿ 72ನೇ ವರ್ಷದ ರಾಮನವಮಿ ಮಹೋತ್ಸವವು ಮಾರ್ಚ್ 25 ರಿಂದ 28 ರವರೆಗೆ ನಾಲ್ಕು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ ಎಂದು ಪರ್ಯಾಯ ಶ್ರೀ ಶೀರೂರು ಮಠದ ದಿವಾನರಾದ ಡಾ. ಉದಯಕುಮಾರ್ ಸರಳತ್ತಾಯ ತಿಳಿಸಿದರು.

ಶ್ರೀಮಠದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉತ್ಸವದಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು ಹಾಗೂ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರು ಆಗಮಿಸಿ ವಿಶೇಷ ಪೂಜೆಗಳನ್ನು ನೆರವೇರಿಸಲಿದ್ದಾರೆ ಎಂದು ವಿವರಿಸಿದರು. ಮಾ. 27ರಂದು ರಾತ್ರಿ ಭವ್ಯ ಮಹಾರಥೋತ್ಸವ ನಡೆಯಲಿದ್ದು, ಈ ಬಾರಿ ಉಡುಪಿ ರಥಬೀದಿಯ ಮಾದರಿಯಲ್ಲೇ ರಥವು ವೃತ್ತಾಕಾರವಾಗಿ ಸುತ್ತು ಬರಲು ಅನುಕೂಲವಾಗುವಂತೆ ಹೊಸ ರಥಬೀದಿಯನ್ನು ನಿರ್ಮಿಸಲಾಗಿದೆ. ಅಲ್ಲದೆ, 70 ವರ್ಷ ಹಳೆಯದಾದ ಶಿಥಿಲಗೊಂಡಿದ್ದ ರಥವನ್ನು ಪುನರ್ ನಿರ್ಮಾಣ ಮಾಡಲಾಗಿದೆ ಎಂದರು.

ಭಗವದ್ಗೀತೆ ಆನ್‌ಲೈನ್ ಕೋರ್ಸ್

ಇದೇ ಸಂದರ್ಭದಲ್ಲಿ ಶ್ರೀಕೃಷ್ಣ ಮಠದಲ್ಲಿ ಜಾರಿಗೆ ತರಲಾಗುತ್ತಿರುವ ಪ್ರಮುಖ ಬದಲಾವಣೆಗಳ ಕುರಿತು ಮಾಹಿತಿ ನೀಡಿದ ಅವರು, ಭಕ್ತರಿಗಾಗಿ ಭಗವದ್ಗೀತೆಯ 18 ದಿನಗಳ ಅರ್ಥ ಚಿಂತನ ಕೋರ್ಸ್ ಮಾರ್ಚ್ 23 ರಿಂದ ರಾಜಾಂಗಣದಲ್ಲಿ ಆರಂಭವಾಗಲಿದೆ ಎಂದರು.

ಬೇಸಿಗೆ ತಾಪ ತಣಿಸಲು ವ್ಯವಸ್ಥೆ

ಬೇಸಿಗೆಯ ಬಿಸಿಲಿನಿಂದ ಭಕ್ತರನ್ನು ರಕ್ಷಿಸಲು 3 ರಿಂದ 5 ಸಾಲುಗಳ ಸುಸಜ್ಜಿತ ಕ್ಯೂ ವ್ಯವಸ್ಥೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಸರತಿ ಸಾಲಿನಲ್ಲಿ ನಿಲ್ಲುವ ಭಕ್ತರಿಗೆ ಬೆಳಿಗ್ಗೆ 10 ಗಂಟೆಯಿಂದ ನಿಂಬೆಹಣ್ಣು ಮತ್ತು ಕಬ್ಬಿನ ಹಾಲು ಸೇರಿದಂತೆ ವಿವಿಧ ಪಾನೀಯಗಳನ್ನು ವಿತರಿಸಲಾಗುವುದು. ಮಠದ ಎಲ್ಲಾ ಭೋಜನ ಶಾಲೆಗಳಲ್ಲಿ ಯಾವುದೇ ತಾರತಮ್ಯವಿಲ್ಲದೆ 'ಅನ್ನಪ್ರಸಾದ' ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ದಿವಾನರು ಸ್ಪಷ್ಟಪಡಿಸಿದರು.

ಬಿ.ಸಿ.ರೋಡ್‌ನ ಸ್ಪರ್ಶ ಕಲಾಮಂದಿರದಲ್ಲಿ ಮಾ. 28ರವರೆಗೆ ವಿವಿಧ ಕಾರ್ಯಕ್ರಮಗಳು
ಮಾ.26ರಿಂದ ಕನ್ನಡ ಸಾಹಿತ್ಯ ಸಮ್ಮೇಳನ

• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ ವತಿಯಿಂದ ಮಾ. 26ರಿಂದ 28ರವರೆಗೆ ಬಂಟ್ವಾಳ ಬಿಸಿರೋಡ್‌ನ ಸ್ಪರ್ಶ ಕಲಾ ಮಂದಿರದಲ್ಲಿ 28ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ.

ಹಿರಿಯ ಪತ್ರಕರ್ತ, ಸಾಹಿತಿ ಚಿದಂಬರ ಬೈಕಂಪಾಡಿ ಸಮ್ಮೇಳನಾಧ್ಯಕ್ಷರಾಗಿದ್ದಾರೆ. ತಂತ್ರಜ್ಞಾನ, ಸಾಹಿತ್ಯ, ಸಹಬಾಳ್ವೆ ಎಂಬ ಆಶಯದಲ್ಲಿ ರಾಣಿ ಅಬ್ಬಕ್ಕ ವೇದಿಕೆ, ಪಂಜೆ ಮಂಗೇಶರಾಯ ಸಭಾಂಗಣ, ಏರ್ಯ ಲಕ್ಷ್ಮೀನಾರಾಯಣ ಆಳ್ವ ಪುಸ್ತಕ ಮಳಿಗೆ, ನಿರಂಜನ ವಸ್ತುಪ್ರದರ್ಶನ ಮಳಿಗೆಗಳಿವೆ. ಸಮ್ಮೇಳನದ ಪ್ರಧಾನ ದ್ವಾರಕ್ಕೆ ಸ್ವಾತಂತ್ರ್ಯ ಹೋರಾಟಗಾರ ಅಮ್ಮೆಂಬಳ ಬಾಳಪ್ಪ ಅವರ ಹೆಸರನ್ನಿಡಲಾಗುವುದು. 30ಕ್ಕೂ ಅಧಿಕ ಪುಸ್ತಕ ಮಳಿಗೆಗಳು, ವಸ್ತು ಸಂಗ್ರಹ ಪ್ರದರ್ಶನ, ಗುಡಿ ಕೈಗಾರಿಕೆ, ಕರಕುಶಲ, ಕೈಮಗ್ಗ, ಆಹಾರ ಸಹಿತ ವಿವಿಧ ಮಳಿಗೆಗಳು, ಪಟ್ಟಾಂಗ ಕಟ್ಟೆ, ಉತ್ತರ ಹೇಳಿ ಪುಸ್ತಕ ಗೆಲ್ಲಿ, ಗ್ರಾಮೀಣ ಪ್ರತಿಭೆಗಳ ನೃತ್ಯವಿರಲಿದೆ ಎಂದು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾ.26ರಂದು ಸಂಜೆ 4ಕ್ಕೆ ಬಿ.ಸಿ.ರೋಡ್‌ನ ಪೊಳಲಿ ದ್ವಾರದ ಬಳಿ ಕನ್ನಡ ಸಾಂಸ್ಕೃ ತಿಕ ದಿಬ್ಬಣವನ್ನು ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ. ತುಕಾರಾಮ ಪೂಜಾರಿ ಉದ್ಘಾಟಿಸುವರು. ಸಂಜೆ 6ರಿಂದ ಮೂರು ಮುತ್ತು ಕನ್ನಡ ನಾಟಕ ಪ್ರದರ್ಶನಗೊಳ್ಳಲಿದೆ. ಮಾ.27ರಂದು ಬೆಳಗ್ಗೆ 9ರಿಂದ ರಾಷ್ಟ್ರಧ್ವಜಾರೋಹಣ, ಪರಿಷತ್ ಹಾಗೂ ಸಮ್ಮೇಳನ ಧ್ವಜಾರೋಹಣ ನಡೆಯಲಿದೆ. ಬೆಳಗ್ಗೆ 9.45ಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಸಮ್ಮೇಳನ ಉದ್ಘಾಟಿಸುವರು. ಚಿದಂಬರ ಬೈಕಂಪಾಡಿ ಸಮ್ಮೇಳನಾಧ್ಯಕ್ಷತೆ ವಹಿಸುವರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಸಾಹಿತಿ ಡಾ. ಪ್ರಭಾಕರ ಶಿಶಿಲ ಭಾಗವಹಿಸುವರು. ಸ್ಮರಣ ಸಂಚಿಕೆಯನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಬಿಡುಗಡೆ ಮಾಡಲಿರುವರು. ಸಾಂಸ್ಕೃ ತಿಕ ಕಾರ್ಯಕ್ರಮವನ್ನು ಸಚಿವ ದಿನೇಶ್ ಗುಂಡೂರಾವ್, ವಸ್ತು ಪ್ರದರ್ಶನವನ್ನು ಸಂಸದ ಕ್ಯಾ. ಬ್ರಿಜೇಶ್ ಚೌಟ, ಪುಸ್ತಕ ಮಳಿಗೆಯನ್ನು ಶಾಸಕ ರಾಜೇಶ್ ನ್ಾಯಕ್ ಉದ್ಘಾಟಿಸುವರು. ಗಣ್ಯರು ಭಾಗವಹಿಸುವರು ಎಂದರು.

ಮಧ್ಯಾಹ್ನ 12ರಿಂದ ದ.ಕ. ಜಿಲ್ಲೆಯ ಭಾಷಾ ಸಾಮರಸ್ಯ ಕುರಿತು ವಿಚಾರಗೋಷ್ಠಿ ನಡೆಯಲಿದೆ. ಮಧ್ಯಾಹ್ನ 2ರಿಂದ ನೂತನ 12 ಕೃತಿಗಳನ್ನು ವಿಶ್ರಾಂತ ಕುಲಪತಿ ಹಾಗೂ ವಿದ್ವಾಂಸ ಪ್ರೊ. ಕೆ. ಚಿನ್ನಪ್ಪ ಗೌಡ ಬಿಡುಗಡೆಗೊಳಿಸುವರು. ಮಧ್ಯಾಹ್ನ 3.30ರಿಂದ ವಿಶೇಷ ಉಪನ್ಯಾಸ ಗೋಷ್ಠಿಗಳು ನಡೆಯಲಿವೆ.



> ▸ ಮಾ.26ರಂದು ಸಂಜೆ 4ಕ್ಕೆ ಕನ್ನಡ ಸಾಂಸ್ಕೃ ತಿಕ ದಿಬ್ಬಣವನ್ನು ಪ್ರೊ. ತುಕಾರಾಮ ಪೂಜಾರಿ ಉದ್ಘಾಟಿಸುವರು.
>
> ▸ ಮಧ್ಯಾಹ್ನ 12ರಿಂದ ದ.ಕ. ಜಿಲ್ಲೆಯ ಭಾಷಾ ಸಾಮರಸ್ಯ ಕುರಿತು ವಿಚಾರಗೋಷ್ಠಿ ನಡೆಯಲಿದೆ.

ಮಾ. 28ರಂದು ಬೆಳಗ್ಗೆ 8ರಿಂದ 9ರವರೆಗೆ ಡಾ.ಎಂ.ಎಸ್. ಭಟ್ ಮತ್ತು ಬಳಗದ ಶಾಸ್ತ್ರೀಯ ಸಂಗೀತ, 9 ಗಂಟೆಗೆ ಸಾಹಿತ್ಯ ಹೊಸ ತಲೆಮಾರು ವಿಚಾರಗೋಷ್ಠಿ, 11ರಿಂದ ಕನ್ನಡ ಭಾಷೆಯಲ್ಲಿ ವೈದ್ಯ ವಿಜ್ಞಾನ ಮತ್ತು ವೈದ್ಯಕೀಯ ಕಲಿಕೆ ಕುರಿತು ವಿಚಾರ ಮಂಡನೆ, ಬೆಳಗ್ಗೆ 11.30ರಿಂದ ದ.ಕ. ಜಿಲ್ಲೆಯ ರಂಗಭೂಮಿ ಮತ್ತು ಬದುಕು ಕುರಿತು ವಿಚಾರ ಮಂಡನೆ ನಡೆಯಲಿದೆ. 12.15ರಿಂದ ಕನ್ನಡ ಮಾಧ್ಯಮ ಶಾಲೆಗಳ ವಾಸ್ತವ ಹಾಗೂ ಭವಿಷ್ಯ ಕುರಿತು ವಿಚಾರ ಮಂಡನೆ, 12.45ರಿಂದ ಶ್ರೀಕೃಷ್ಣ ಭಕ್ತಿ ಎಂಬ ಗಮಕ ಪ್ರಸ್ತುತಿ, 2ರಿಂದ ಹಳೆಗನ್ನಡ ಸಾಹಿತ್ಯದ ರಸಧಾರೆ ಕುರಿತು ವಿಚಾರ ಮಂಡನೆ, ಮಧ್ಯಾಹ್ನ 2.30ರಿಂದ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ನಡೆಯಲಿದೆ. 3ಗಂಟೆಗೆ ಬಹಿರಂಗ ಅಧಿವೇಶನ ನಡೆಯಲಿದೆ. ಸಂಜೆ 4ರಿಂದ ಸಮಾರೋಪ ಸಮಾರಂಭ ನಡೆಯಲಿರುವುದು. ಸಂಜೆ 5.30ರಿಂದ ಆಳ್ವಾಸ್ ಕನ್ನಡ ಗಾನ ಗುಚ್ಛ, 6.30ರಿಂದ ನೃತ್ಯವೈಭವ ನಡೆಯಲಿದೆ. 7.30ರಿಂದ ಯಕ್ಷಗಾನ ತಾಳಮದ್ದಲೆ ನಡೆಯಲಿದೆ ಎಂದು ವಿವರಿಸಿದರು.

ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಅಬೂಬಕರ್ ಅಮ್ಮುಂಜೆ, ಕಾರ್ಯದರ್ಶಿ ದೇವಪ್ಪ ಕುಲಾಲ್, ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಶ್ವನಾಥ ಬಂಟ್ವಾಳ, ಕೋಶಾಧಿಕಾರಿ ಸುಭಾಷ್ಚಂದ್ರ ಜೈನ್, ಎಚ್. ವಿನಯ ಆಚಾರ್ಯ ಉಪಸ್ಥಿತರಿದ್ದರು.

ಕನ್ನಡ ಸಿರಿ ಪ್ರಶಸ್ತಿ ನೀಡಿ ಗೌರವ

ವಿವಿಧ ಕ್ಷೇತ್ರಗಳ ಸಾಧಕರಾದ ಡಾ. ಪಿ. ದಯಾನಂದ ಪೈ, ನಾಡೋಜ ಜಿ. ಶಂಕರ್, ಡಾ. ಕೆ. ಪ್ರಕಾಶ್ ಶೆಟ್ಟಿ ಬಂಜಾರ, ಕೆ.ಡಿ. ಶೆಟ್ಟಿ, ರವಿಶಂಕರ ಶೆಟ್ಟಿ ಬಡಾಜೆಗುತ್ತು, ಪಟ್ಲ ಸತೀಶ ಶೆಟ್ಟಿ, ಉದಯ ಸುವರ್ಣ, ವಿನೋದ್ ಶೆಣೈ, ಕಿಶೋರ್ ಅವರನ್ನು ಸಮಾರೋಪ ಸಮಾರಂಭದಲ್ಲಿ ಸನ್ಮಾನಿಸಲಾಗುವುದು. ಜಗನ್ನಾಥ ಚೌಟ ಬದಿಗುಡ್ಡೆ, ಎಸ್.ಆರ್. ಸತೀಶ್ಚಂದ್ರ, ಭುವನೇಶ್ ಪಚ್ಚಿನಡ್ಕ, ಜಗನ್ನಾಥ ಬಂಗೇರ ನಿರ್ಮಾಲ್ ಅವರಿಗೆ ಸಾಧಕ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪದ್ಮನಾಭ ಭಟ್ ಎಕ್ಕಾರು, ಕೆ.ಟಿ. ವಿಶ್ವನಾಥ, ಡಾ. ಕೆ.ಎ. ಸಿದ್ದೀಕ್ ಅಡ್ಡೂರು, ಪುರಂದರ ಭಟ್, ರವೀಶ್ ಪಡುಮಲೆ, ಇಸ್ಮಾಯಿಲ್ ಶಾಫಿ, ಸದಾನಂದ ನಾರಾವಿ, ಶಾಂತಾರಾಮ ಕುಂದರ್, ಕೆ. ರಾಜಾರಾಮ ಶರ್ಮ ಬೆಳಾಲು, ಕೇಶವ ಎ. ಕೊಯ್ಲ, ಮುರಳೀಧರ ವೈ.ಕೆ., ಅಬ್ದುಲ್ ಲತೀಫ್ ಗುರುಪುರ, ಗೋಪಾಲ ಅಂಚನ್, ದೇವಿ ಪ್ರಸಾದ್ ಬೆಳ್ತಂಗಡಿ, ಲೂವಿಸ್ ಕುಟಿನ್ಹೊ, ಶಂಕರ ಐತಾಳ ಅವರಿಗೆ ಕನ್ನಡ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಗಡಿನಾಡು ಸೇವೆಗಾಗಿ ಡಾ. ಎಸ್.ಆರ್. ನರಹರಿ, ಸಂಸ್ಥೆ–ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ಯಕ್ಷಗಾನ ಮಂಡಳಿಯನ್ನು ಗೌರವಿಸಲಾಗುವುದು ಎಂದು ಡಾ. ಎಂ.ಪಿ. ಶ್ರೀನಾಥ ತಿಳಿಸಿದರು.

ಮಾ.25: ವಿವೇಕಾನಂದ ಸೆಂಟ್ರಲ್ ಸ್ಕೂಲ್ ವಿಸ್ತರಿತ ಕಟ್ಟಡದ ಉದ್ಘಾಟನೆ



• **ಪುತ್ತೂರು:** ವಿವೇಕಾನಂದ ವಿದ್ಯಾ ವರ್ಧಕ ಸಂಘದಡಿಯಲ್ಲಿ ಪುತ್ತೂರು ನೆಹರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವೇಕಾನಂದ ಸೆಂಟ್ರಲ್ ಸ್ಕೂಲ್ ಏಳನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ವಿಸ್ತರಿತ ಕಟ್ಟಡದ ಉದ್ಘಾಟನಾ ಸಮಾರಂಭ ಮಾ.25ರಂದು ನಡೆಯಲಿದೆ.

ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷೆ ವಸಂತಿ ಕೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಿಲ್ಲಿಯ ಸಿಬಿಎಸ್‌ಇ ಮಂಡಳಿಯಲ್ಲಿ ಸಂಯೋಜನೆ ಹೊಂದಿರುವ ಸಂಸ್ಥೆಯು ಸಿಬಿಎಸ್‌ಇ ಪಠ್ಯಕ್ರಮ ಹೊಂದಿದೆ. ಪ್ರಸ್ತುತ ಶಾಲೆಯಲ್ಲಿ 600 ಕ್ಕಿಂತ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಶಾಲಾ ಕಟ್ಟಡದ 2ನೇ ಅಂತಸ್ತಿನ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಲೋಕಾರ್ಪಣೆಗೆ ಸಿದ್ಧಗೊಂಡಿದೆ ಎಂದರು.

ಮಾ.25ರಂದು ಬೆಳಗ್ಗೆ ನೂತನ ಕಟ್ಟಡದಲ್ಲಿ ಗಣಪತಿ ಹೋಮ ಸಹಿತ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಅಪರಾಹ್ನ 3 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ದಕ್ಷಿಣ ಕನ್ನಡ ಅಧ್ಯಕ್ಷ ಡಾ. ಕೆ.ಎಂ. ಶಾಂತಾರಾಮ ಶೆಟ್ಟಿ ಮುಖ್ಯ ಅತಿಥಿಗಳಾಗಿರುತ್ತಾರೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಉಪಾಧ್ಯಕ್ಷ ಸತೀಶ್ ರಾವ್ ಗೌರವ ಉಪಸ್ಥಿತರಿರಲಿದ್ದಾರೆ ಎಂದರು.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಮತ್ತು ಉತ್ತಮ ವಿದ್ಯಾಭ್ಯಾಸಕ್ಕೆ ಎಲ್ಲ ರೀತಿಯ ಅನುಕೂಲತೆಗಳನ್ನು ಸಂಸ್ಥೆ ಹೊಂದಿದೆ. ಹೆಚ್ಚುತ್ತಿರುವ ವಿದ್ಯಾರ್ಥಿಗಳ ಅನುಕೂಲತೆಗಳನ್ನು ಗಮನದಲ್ಲಿ ಇಟ್ಟುಕೊಂಡು 2ನೇ ಮಹಡಿ ನಿರ್ಮಿಸಲಾಗಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಚಾಲಕ ಭರತ್ ಪೈ, ಪ್ರಾಂಶುಪಾಲ ಸಿಂಧು ವಿ.ಜಿ., ಉಪ ಪ್ರಾಂಶುಪಾಲ ಶ್ರೀದೇವಿ ಹೆಗಡೆ ಉಪಸ್ಥಿತರಿದ್ದರು.

ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವು: ಮೂವರ ಬಂಧನ

• **ವೀರಾಜಪೇಟೆ:** ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ವೀರಾಜಪೇಟೆ ಪೊಲೀಸರು ಬಂಧಿಸಿದ್ದಾರೆ. ನಾಪೋಕ್ಲು ಎಮ್ಮೆಮಾಡು ನಿವಾಸಿ ಕೆ.ಎಂ. ಮಹಮ್ಮದ್ ಫರೀದ್ (28), ಆಸೀಫ್ (30) ಹಾಗೂ ಅಜ್ಜಿಮೊಟ್ಟೆ ಕಾಲೋನಿ ನಾಪೋಕ್ಲು ನಿವಾಸಿ ಎಂ.ಯು. ಗಣೇಶ್ ಬಂಧಿತ ಆರೋಪಿಗಳು. ಮೊಗರಗಲ್ಲಿ ನಿವಾಸಿ ಪೌರಕಾರ್ಮಿಕ ಹೆಚ್. ಎಸ್. ಸುಬ್ರಮಣಿ ಎಂಬವರ ದ್ವಿಚಕ್ರ ವಾಹನ ಮಾ. 16ರ ರಾತ್ರಿ ಕಳ್ಳತನವಾಗಿತ್ತು. ಮಾ. 17 ರಂದು ಮುಂಜಾನೆ ಮಾಲಕರ ಸಂಬಂಧಿಕರು ದೂರವಾಣಿ ಕರೆ ಮಾಡಿ ದ್ವಿಚಕ್ರ ವಾಹನ ಕಳ್ಳತನವಾಗಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಮಾ. 18 ರಂದು ವೀರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಠಾಣಾಧಿಕಾರಿ ಪ್ರಮೋದ್ ಮತ್ತು ಅಪರಾಧ ಪತ್ತೆ ವಿಭಾಗದ ಪಿ.ಎಸ್.ಐ. ಕಾವೇರಪ್ಪ ಟಿ.ಎಂ. ಮತ್ತು ಅಪರಾಧ ಪತ್ತೆ ಕರ್ತವ್ಯನಿರತ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಶಾರದಾ ವಿದ್ಯಾಲಯದಲ್ಲಿ ಬೇಸಿಗೆ ಶಿಬಿರ
ಮಕ್ಕಳ ಪ್ರತಿಭಾ ವಿಕಾಸಕ್ಕೆ ಶಿಬಿರ ನೆರವು



• **ಮಂಗಳೂರು:** ನಗರದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಡೆಯಲಿರುವ 2025–26ನೇ ಶೈಕ್ಷಣಿಕ ವರ್ಷದ ಬೇಸಿಗೆ ಶಿಬಿರದ ಉದ್ಘಾಟನೆ ವಿದ್ಯಾಲಯದ ಧ್ಯಾನಮಂದಿರ ಸಭಾಂಗಣದಲ್ಲಿ ನೆರವೇರಿತು.

ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕರು ಶಿಬಿರ ಉದ್ಘಾಟನೆಗೈದು ಬೇಸಿಗೆ ರಜೆಯಲ್ಲಿ ವಿದ್ಯಾರ್ಥಿಗಳಿಗೆ ಸಮಯದ ಸದುಪಯೋಗಗೈಯ್ಯಲು ಈ ಶಿಬಿರ ಸಹಕಾರಿಯಾಗಿದೆ. ಮಕ್ಕಳಲ್ಲಿರುವ ಕ್ರಿಯಾಶೀಲತೆ, ಸೃಜನಾತ್ಮಕತೆಗೆ ಪ್ರೋತ್ಸಾಹ ನೀಡಿ ಅವರ ಪ್ರತಿಭಾ ವಿಕಾಸಕ್ಕೆ ನೆರವಾಗುವುದು ಈ ಶಿಬಿರದ ಉದ್ದೇಶವಾಗಿದೆ ಎಂದರು.

ಶಾರದಾ ವಿದ್ಯಾಲಯದ ಪ್ರಾಂಶುಪಾಲರುಗಳಾದ ಚಂದ್ರಿಕಾ ಭಂಡಾರಿ, ದಯಾನಂದಕಟೀಲ್ ಹಾಗೂ ವಿದ್ಯಾಲಯದ ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನುಗಳು ಉಪಸ್ಥಿತರಿದ್ದರು.

5 ದಿನಗಳ ಅವಧಿಯ ಈ ಶಿಬಿರವು ಮನರಂಜನೀಯ ಮತ್ತು ಮಾಹಿತಿ ಪ್ರಧಾನವಾಗಿದ್ದು ವಿದ್ಯಾರ್ಥಿಗಳಿಗೆ ಸ್ಕೌಟಿಂಗ್ ಮತ್ತು ಗೈಡಿಂಗ್ ತಂತ್ರಗಳಲ್ಲಿ ತರಬೇತಿ ನೀಡಲಾಗುವುದು. ಇದರಲ್ಲಿ ಹಗ್ಗದಿಂದ ಹಲವು ಬಗೆಯ ಗಂಟುಕಟ್ಟುವ ತಂತ್ರಗಳು, ಗಾಡ್ಜೆಟ್ ತಯಾರಿ, ಪಯೋನೀರಿಂಗ್, ಹೈಕಿಂಗ್, ಕರಕುಶಲ ಕಲೆ, ತ್ಯಾಜ್ಯದಿಂದ ಉಪಯೋಗಿ ವಸ್ತುಗಳ ತಯಾರಿ, ಮಿಮಿಕ್ರಿ, ಮಾದಕದ್ರವ್ಯ ಮತ್ತು ಅಪರಾಧತಡೆ ಜಾಗೃತಿ ಕಾರ್ಯಕ್ರಮಗಳು, ಬೆಂಕಿ ಇಲ್ಲದೆ ಅಡುಗೆ ತಯಾರಿ, ಗಿಡ ನೆಡುವ ಕಾರ್ಯಕ್ರಮ ಹಾಗೂ ಪ್ರಾಥಮಿಕ ಚಿಕಿತ್ಸೆಯನ್ನು ಈ ಶಿಬಿರವು ಒಳಗೊಂಡಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಈ ಶಿಬಿರವು ನೆರವಾಗಲಿದೆ.

> ▸ 5 ದಿನಗಳ ಅವಧಿಯ ಈ ಶಿಬಿರವು ಮನರಂಜನೀಯ ಮತ್ತು ಮಾಹಿತಿ ಪ್ರಧಾನವಾಗಿದ್ದು ವಿದ್ಯಾರ್ಥಿಗಳಿಗೆ ಸ್ಕೌಟಿಂಗ್ ಮತ್ತು ಗೈಡಿಂಗ್ ತಂತ್ರಗಳಲ್ಲಿ ತರಬೇತಿ ನೀಡಲಾಗುವುದು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ | ಉದ್ಘಾಟನಾ ಸಮಾರಂಭದ ಪ್ರಯುಕ್ತ ಕೊಡುಗೆ
ಮಾ.25ರಂದು 34ನೇ ಶಾಖೆಯ ಉದ್ಘಾಟನೆ

• **ಮಂಗಳೂರು:** ನಗರದ ಪಡೀಲ್‌ನಲ್ಲಿ ಸ್ವಂತ ಆಡಳಿತ ಕಟ್ಟಡವನ್ನು ಹೊಂದಿರುವ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಾದ್ಯಂತ 33 ಶಾಖೆಗಳನ್ನು ಹೊಂದಿದ್ದು, ಇದೀಗ ನೂತನ 34ನೇ ಬೋಳಾರ ಶಾಖೆ ಯುನಿಕ್ ಸ್ಟ್ರೀಕ್ ಕಾಂಪ್ಲೆಕ್ಸ್, ಭಗಿನಿ ಸಮಾಜದ ಬಳಿ, ಜೆಪ್ಪು ಮಾರ್ಕೆಟ್, ಬೋಳಾರ, ಮಂಗಳೂರು, ಇಲ್ಲಿ ಮಾರ್ಚ್ 25 ರಂದು ಪೂರ್ವಾಹ್ನ 11.00 ಗಂಟೆಗೆ ಸಾರ್ವಜನಿಕ ಸೇವೆಗಾಗಿ ಲೋಕಾರ್ಪಣೆಗೊಳ್ಳಲಿದೆ.

ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ 'ಸಹಕಾರ ರತ್ನ' ಚಿತ್ತರಂಜನ್ ಬೋಳಾರ್ ವಹಿಸಲಿದ್ದಾರೆ. ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ನೂತನ ಶಾಖೆಯನ್ನು ಉದ್ಘಾಟಿಸಲಿದ್ದಾರೆ. ಸಮಾಜ ಸೇವಕಿ ತಾರಾ ಹೇಮಚಂದ್ರ ದೀಪ ಪ್ರಜ್ವಲನೆ ಮಾಡಲಿದ್ದಾರೆ. ಅಂಬಾ ಮಹೇಶ್ವರಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಸೀತಾರಾಮ್ ಎ. ಭದ್ರತಾಕೋಶ ಉದ್ಘಾಟನೆ ಮಾಡಲಿದ್ದಾರೆ. ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ. ಪ್ರಸಾದ್ ರೆಡ್ಡಿ ಗಣಕೀಕೃತ ಬ್ಯಾಂಕಿಂಗ್‌ಗೆ ಚಾಲನೆ ನೀಡಲಿದ್ದಾರೆ. ಮಂಗಳೂರು ಮಾಜಿ ಮಹಾಪೌರ ಪ್ರೇಮಾನಂದ ಶೆಟ್ಟಿ ನಿರಖು ಠೇವಣಿ ಪತ್ರ ಬಿಡುಗಡೆ ಮಾಡಲಿದ್ದಾರೆ. ಮಂಗಳೂರು ಕೋ–ಆಪರೇಟಿವ್ ಬಿಲ್ಡಿಂಗ್ ಸೊಸೈಟಿಯ ಅಧ್ಯಕ್ಷ ರಂಜನ್ ಮಿಜಾರ್ ಮೈಕ್ರೋ ಸಾಲ ಯೋಜನೆಗೆ ಚಾಲನೆ ನೀಡಲಿದ್ದಾರೆ. ಮಂಗಳಾದೇವಿ ಸೇವಾ ಸಮಿತಿಯ ಗೌರವಾಧ್ಯಕ್ಷ ಅಶೋಕ್ ಕುಮಾರ್ ಇ–ಮುದ್ರಾಂಕ ಸೇವೆಗೆ ಚಾಲನೆ ನೀಡಲಿದ್ದಾರೆ. ದ.ಕ ಜಿಲ್ಲಾ ಅಮೆಚೂರು ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ದಿಲ್‌ರಾಜ್ ಆಳ್ವ ಭವಿಷ್ಯ ಸುರಕ್ಷಾ ಯೋಜನೆಗೆ ಚಾಲನೆ ನೀಡಲಿದ್ದಾರೆ. ಬಿಲ್ಲವ ಸಂಘ ಮಂಗಳಾದೇವಿಯ ಅಧ್ಯಕ್ಷ ರಾಜರತ್ನ ಸನಿಲ್ ಉಳಿತಾಯ ಖಾತೆಗೆ ಚಾಲನೆ ನೀಡಲಿದ್ದಾರೆ. ದ.ಕ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕ ರಮೇಶ್ ಎಚ್.ಎನ್. ಆವರ್ತನ ಠೇವಣಿಗೆ ಚಾಲನೆ ನೀಡಲಿದ್ದಾರೆ. ಮಾಜಿ ಕಾರ್ಪೊರೇಟರ್ ಭಾನುಮತಿ ಪಿಗ್ಮಿ ಖಾತೆಗೆ ಚಾಲನೆ ನೀಡಲಿದ್ದಾರೆ. ಬೋಳಾರದ ಉದ್ಯಮಿ ರಮಾನಂದ ಪೂಜಾರಿ ಹಾಗೂ ಕಟ್ಟಡದ ಮಾಲಿಕ ಜೆನೆಟ್ ಮೆಲ್ವಿನ್ ಡಿಸೋಜ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ನೂತನ ಶಾಖೆಯ ಉದ್ಘಾಟನಾ ಸಮಾರಂಭದ ಪ್ರಯುಕ್ತ 100 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 8.50, 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50, ನೀಡಲಾಗುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು. ನಮ್ಮ ಎಲ್ಲಾ ಶಾಖೆಗಳಲ್ಲಿ ಇ–ಮುದ್ರಾಂಕ, ನೆಫ್ಟ್, ಆರ್‌ಟಿಜಿಎಸ್ ಸೇವೆಯು ವ್ಯವಹಾರದ ಸಮಯದಲ್ಲಿ ಲಭ್ಯವಿದ್ದು, ಅದೇ ರೀತಿ ವಿಮಾ ಪಾಲಿಸಿಗಳಾದ ಎಲ್‌ಐಸಿ, ಕೇರ್, ಇಫ್ಕೋಟೋಕಿಯ, ಜನರಲ್ ಇನ್ಸುರೆನ್ಸ್ ಕಂಪೆನಿ ಮುಂತಾದ ಕಂಪೆನಿಗಳ ವಿಮಾ ಸೌಲಭ್ಯಗಳು ಲಭ್ಯವಿರುತ್ತದೆ. ಸಹಕಾರಿ ಸಂಘದ ಸದಸ್ಯರಿಗೆ ಯಶಸ್ವಿನಿ ಆರೋಗ್ಯ ವಿಮೆಯ ನೋಂದಣಿಯ ಪ್ರಯೋಜನ ಸಂಘದ ಎಲ್ಲಾ ಶಾಖೆಗಳಲ್ಲಿ ಲಭ್ಯವಿದ್ದು, ಇದರ ಪ್ರಯೋಜನ ಪಡೆಯಬೇಕೆಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಲಾಲ ತರುವಾಡು ಮನೆಗೆ ಭೇಟಿ, ಪ್ರಾರ್ಥನೆ ಸಲ್ಲಿಕೆ
ಶಾಸಕರಿಗೆ ಜನತೆಯ ಸಂಕಷ್ಟ ನಿವಾರಿಸುವ ಯಾವುದೇ ಆಸಕ್ತಿಯಿಲ್ಲ: ಸುರೇಂದ್ರನ್ ಟೀಕೆ



• **ಕುಂಬಳೆ:** ಮಂಜೇಶ್ವರದಲ್ಲಿ ಶಾಸಕರಾಗಿ ಆರಿಸಿ ಬರುವವರಿಗೆ ಜನತೆಯ ಸಂಕಷ್ಟಗಳನ್ನು ನಿವಾರಿಸಬೇಕೆನ್ನುವ ಆಸಕ್ತಿಯಿಲ್ಲ. ಇಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುವ ಕಾರಣದಿಂದಾಗಿ ಬಿಜೆಪಿಗೆ ಸೋಲಾಗುತ್ತಿದೆ ಮತ್ತು ಅಭಿವೃದ್ಧಿ ಕುಂಠಿತಗೊಂಡಿದೆ. ಇದು ಬದಲಾಗಬೇಕಾಗದರೆ ಅಭಿವೃದ್ಧಿಗಾಗಿ ಬಿಜೆಪಿಗೆ ಮತಗಳನ್ನು ನೀಡಬೇಕೆಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ವಿನಂತಿಸಿದ್ದಾರೆ. ಭಾನುವಾರ ಮುಕಾರಿಕಂಡ ಬಳಿಯ ಕುಲಾಲ್ ನಗರದ ಕುಲಾಲ ತರುವಾಡು ಮನೆಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಅವರು ಮಾತನಾಡಿದರು. ನೇತಾರರಾದ ಸುನಿಲ್ ಅನಂತಪುರ, ರಾಮಪ್ಪ ಮಂಜೇಶ್ವರ, ಸ್ವಾಗತ್ ಸೀತಾಂಗೋಳಿ, ರಾಮಚಂದ್ರ ಕುಲಾಲ್ ಅನೋಡಿಪಳ್ಳ, ಹರಿಣಿ, ಶಶಿಕಲಾ, ಶ್ರೀಪತಿ ಭಟ್ ಮೊದಲಾದವರಿದ್ದರು.

ಕಿರುಸುದ್ದಿ

ವಯಸ್ಸು 60 ಆದ್ರೇಲೂ ಆಡ್ತಾರಂತೆ ಧೋನಿ!

• **ಚೆನ್ನೈ:** ವಯಸ್ಸು 60 ಆದ್ರೇಲೂ ಐಪಿಎಲ್‌ನಲ್ಲಿ ಧೋನಿ ಆಡ್ತಾರಂತೆ! ಹೌದು, ಐಪಿಎಲ್ ಪೂರ್ವಭಾವಿಯಾಗಿ ನಡೆದ ಸಿಎಸ್‌ಕೆ ರಾರ್ ಕಾರ್ಯಕ್ರಮದಲ್ಲಿ ನಟ ಶಿವಕಾರ್ತಿಕೇಯನ್, ನೀವು ಐಪಿಎಲ್‌ನಿಂದ ನಿವೃತ್ತಿ ಪಡೆಯುವಂತೆ ಕಾಣಿಸುತ್ತಿಲ್ಲ. ವಯಸ್ಸು 60 ದಾಟಿದ ಮೇಲೂ ಸಿಎಸ್‌ಕೆ ಪರ ಆಡುತ್ತೀರಾ? ಎಂದು ಪ್ರಶ್ನಿಸಿದ್ದರು. ಇದಕ್ಕೆ ಧೋನಿ ನಗುತ್ತಲೇ, ತುಂಬಾ ಕಷ್ಟ ಎಂದಿದ್ದಾರೆ. ನಿಮ್ಮ ಫಿಟ್ನೆಸ್ ನೋಡಿದರೆ ಹಾಗೆ ಅನಿಸುತ್ತಿಲ್ಲ ಎಂದು ಶಿವಕಾರ್ತಿಕೇಯನ್ ಹೇಳಿದ್ದು, ಖಂಡಿತಾ ಪ್ರಯತ್ನಿಸುತ್ತೇನೆ ಎಂದು ಧೋನಿ ಪ್ರತಿಕ್ರಿಯೆ ನೀಡಿದ್ದಾರೆ. ಧೋನಿ ಉತ್ತರ ಕೇಳುತ್ತಿದ್ದಂತೆ ಇಡೀ ಚೆಪಾಕ್ ಮೈದಾನದಲ್ಲಿ ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಮಯಾಮಿ ಓಪನ್: ಹೊರಬಿದ್ದ ಅಲ್ಕರಾಜ್

• **ಮಯಾಮಿ:** ವಿಶ್ವದ ಅಗ್ರ ಶ್ರೇಯಾಂಕದ ಟೆನಿಸಿಗ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮಯಾಮಿ ಓಪನ್ 2026ರ ಮೂರನೇ ಸುತ್ತಿನಲ್ಲೇ ಹೊರಬಿದ್ದು ದೊಡ್ಡ ಆಘಾತಕ್ಕೊಳಗಾಗಿದ್ದಾರೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸೆಬಾಸ್ಟಿಯನ್ ಕೋರ್ಡ ವಿರುದ್ಧ 3–6, 7–5, 4–6 ಸೆಟ್‌ಗಳ ಅಂತರದಿಂದ ಸೋಲುಂಡು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಕಳೆದ ವಾರ ನಡೆದಿದ್ದ ಇಂಡಿಯನ್ ವೆಲ್ಸ್ ಸೆಮಿಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರ ವಿರುದ್ಧ ಸೋಲುಂಡು ಹೊರಬಿದ್ದಿದ್ದರು.

ಜಿಮ್ನಾಸ್ಟ್ ಹರ್ಷಿತ್‌ಗೆ ಸ್ವರ್ಣ

• **ಹೊಸದಿಲ್ಲಿ:** ಜರ್ಮನಿಯ ಸ್ಟಟ್‌ಗಾರ್ಟ್‌ನಲ್ಲಿ ನಡೆದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಜಿಮ್ನಾಸ್ಟಿಕ್ ಸ್ಪರ್ಧೆ ಡಿಟಿಬಿ ಪೋಕಲ್ 2026ರಲ್ಲಿ ಭಾರತೀಯ ಜಿಮ್ನಾಸ್ಟ್ ಹರ್ಷಿತ್ ದಾಮೋದರನ್ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ಜೂನಿಯರ್ ವಿಶ್ವಕಪ್ ಪುರುಷರ ವೋಲ್ಟ್ ವಿಭಾಗದಲ್ಲಿ ಒಟ್ಟು 13.666 ಅಂಕಗಳನ್ನು ಸಂಪಾದಿಸುವ ಮೂಲಕ ಸ್ವರ್ಣ ಪದಕಕ್ಕೆ ಮುತ್ತಿಟ್ಟಿದ್ದಾರೆ. ಬಲಿಷ್ಠ ಅಂತಾರಾಷ್ಟ್ರೀಯ ಸ್ಪರ್ಧಿಗಳ ನಡುವೆ ನಿಖರ, ಶಕ್ತಿ ಮತ್ತು ಸಮತೋಲನದಿಂದ ಕೂಡಿದ ಪ್ರದರ್ಶನ ನೀಡಿ ಗಮನಸೆಳೆದ ಹರ್ಷಿತ್ ಭಾರತೀಯ ಜಿಮ್ನಾಸ್ಟಿಕ್ ಇತಿಹಾಸದಲ್ಲಿ ಮಹತ್ವದ ಸಾಧನೆಗೈದಿದ್ದಾರೆ. ಹರ್ಷಿತ್ ಸಾಧನೆಯಿಂದ ಭಾರತೀಯ ಜಿಮ್ನಾಸ್ಟಿಕ್ ವಿಭಾಗ ಮುನ್ನೆಲೆಗೆ ಬಂದಿದೆ.

ಕ್ಯಾಂಡಿಡೇಟ್ಸ್ ಕಪ್‌ನಿಂದ ಹೊರಗುಳಿದ ಹಂಪಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ವೈಯಕ್ತಿಕ ಸುರಕ್ಷತೆಯ ಕಾರಣಗಳನ್ನು ನೀಡಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿ ಅವರು ಸೈಪ್ರಸ್‌ನಲ್ಲಿ ನಡೆಯಲಿರುವ 2026ರ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರಕಟಣೆ ಮೂಲಕ ತಮ್ಮ ನಿರ್ಧಾರವನ್ನು ಹಂಪಿ ತಿಳಿಸಿದರು.

ವಿದೇಶಿ ಕ್ರಿಕೆಟಿಗರಿಗೆ ಪಾಕ್ ಉಗ್ರ ಸಂಘಟನೆ ಬೆದರಿಕೆ

• **ಇಸ್ಲಾಮಾಬಾದ್:** ಪಿಎಸ್‌ಎಲ್ 2026ರ ಆವೃತ್ತಿಯಲ್ಲಿ ಪಾಲ್ಗೊಂಡರೆ ಪಂದ್ಯಾವಳಿಗೆ ಅಡ್ಡಿಪಡಿಸುವುದಾಗಿ ವಿದೇಶಿ ಆಟಗಾರರಿಗೆ ಪಾಕಿಸ್ತಾನದ ಉಗ್ರ ಸಂಘಟನೆಯೊಂದು ಬೆದರಿಕೆಯೊಡ್ಡಿದೆ. ಆಸ್ಟ್ರೇಲಿಯಾದ ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್ ಹಾಗೂ ನ್ಯೂಜಿಲೆಂಡ್ ಆಟಗಾರ ಡೇರಿಲ್ ಮಿಚೆಲ್ ಅವರಿಗೆ ಉಗ್ರ ಸಂಘಟನೆ ಜಮಾತ್–ಉಲ್–ಅಹ್ರಾರ್ ಟೂರ್ನಿಯಲ್ಲಿ ಪಾಲ್ಗೊಳ್ಳದಂತೆ ಬೆದರಿಕೆಯೊಡ್ಡಿದೆ. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಪಾಕ್ ತೈಲ, ಅನಿಲ ಕೊರತೆ ಸಹಿತ ಆರ್ಥಿಕ ಸಂಕಷ್ಟ ಎದುರಿಸುತ್ತಿರುವಾಗ ಮನರಂಜನೆಗಿದು ಸೂಕ್ತವಾದ ಸಮಯವಲ್ಲ ಎಂದು ಜಮಾತುಲ್ ಪ್ರಕಟಣೆ ಹೊರಡಿಸಿದೆ. ಬೆದರಿಕೆಯ ಬೆನ್ನಲ್ಲೇ ಸ್ಮಿತ್ ಲಾಹೋರ್ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದಾರೆ.

ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಭರ್ಜರಿ ತಯಾರಿ | ಮೊದಲ ಅಭ್ಯಾಸ ಪಂದ್ಯದಲ್ಲಿ ಒಟ್ಟು 450+ ರನ್

ಅಭ್ಯಾಸ ಪಂದ್ಯದಲ್ಲಿ ಆರ್‌ಸಿಬಿ ರನ್ ಮಳೆ



• **ಬೆಂಗಳೂರು:** ಐಪಿಎಲ್ 19ನೇ ಆವೃತ್ತಿ ಆರಂಭವಾಗಲು ಇನ್ನು ನಾಲ್ಕು ದಿನಗಳಷ್ಟೇ ಉಳಿದಿದ್ದು, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡ ಭರ್ಜರಿ ತಯಾರಿ ನಡೆಸುತ್ತಿದೆ. ಇದರ ಭಾಗವಾಗಿ ನಡೆದ ಮೊದಲ ಅಭ್ಯಾಸ ಪಂದ್ಯದಲ್ಲಿ ಬ್ಯಾಟರ್‌ಗಳು ರನ್ ಮಳೆಯನ್ನೇ ಸುರಿಸಿದ್ದಾರೆ.

ಅಭ್ಯಾಸ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಉತ್ತಮ ಲಯದಲ್ಲಿ ಕಾಣಿಸಿಕೊಂಡಿದ್ದು, ಇತರ ಎಲ್ಲಾ ಬ್ಯಾಟರ್‌ಗಳು ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಗಮನಸೆಳೆದಿದ್ದಾರೆ. ಈ ಆವೃತ್ತಿಯ ಹರಾಜಿನಲ್ಲಿ ರೂ. 7 ಕೋಟಿಗೆ ಖರೀದಿಸಲ್ಪಟ್ಟ ವೆಂಕಟೇಶ್ ಅಯ್ಯರ್ ನೇತೃತ್ವದ ಟೀಮ್ ವೆಂಕಿ ಮತ್ತು ಆಲ್‌ರೌಂಡರ್ ಕೃಣಾಲ್ ಪಾಂಡ್ಯ ನಾಯಕತ್ವದ ಟೀಮ್ ಕೃಣಾಲ್ ತಂಡಗಳು ಎದುರಾದವು.

ಮೊದಲು ಬ್ಯಾಟ್ ಮಾಡಿದ ಟೀಮ್ ವೆಂಕಿ ಪರ, ಜಿತೇಶ್ ಶರ್ಮಾ 37 ಎಸೆತ ಗಳಲ್ಲಿ ಸ್ಫೋಟಕ 81 ರನ್ ಚಚ್ಚಿದರೆ, ವಿರಾಟ್ ಕೊಹ್ಲಿ 12 ಎಸೆತ ಗಳನ್ನು ಎದುರಿಸಿ 29 ರನ್ ಬಾರಿಸಿದರು. ಇವರನ್ನು ಹೊರತುಪಡಿಸಿದರೆ, ಟಿಮ್ ಡೇವಿಡ್ 14 ಎಸೆತಗಳಿಂದ 36 ರನ್ ಹೊಡೆದರು. ನಾಯಕ ವೆಂಕಟೇಶ್ 16 ಎಸೆತಗಳಿಂದ 36 ರನ್ ಹೊಡೆದರು. ಇವರ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದ ಟೀಮ್ ವೆಂಕಿ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 234 ರನ್ ಪೇರಿಸಿತು.

235 ರನ್ ಸವಾಲನ್ನು ಬೆನ್ನತ್ತಿದ ಟೀಮ್ ಕೃಣಾಲ್ ಪರ, ಆರ್‌ಸಿಬಿ ಹನ್ನೊಂದರ ಬಳಗ ಸೇರಬೇಕೆಂಬ ಗುರಿ ಹೊಂದಿರುವ ಕರ್ನಾಟಕ ನಾಯಕ ದೇವದತ್ ಪಡಿಕ್ಕಲ್ 33 ಎಸೆತಗಳಿಂದ 63 ರನ್ ಚಚ್ಚಿದರು. ನಾಯಕ ಕೃಣಾಲ್ 33 ಎಸೆತಗಳಿಂದ 58 ರನ್ ಕೊಡುಗೆ ನೀಡಿದರು. ಆದರೆ ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ತಮ್ಮ ವಿಸ್ಫೋಟಕ ಬ್ಯಾಟಿಂಗ್‌ನಿಂದ ಗಮನಸೆಳೆದರು. ಕೇವಲ 25 ಎಸೆತಗಳಿಂದ 74 ರನ್ ಚಚ್ಚಿ ಬಿಸಾಕುವ ಮೂಲಕ ಪಾಟಿದಾರ್ ಟೀಮ್ ಕೃಣಾಲ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.





ಒಟ್ಟಿನಲ್ಲಿ ಉದ್ಘಾಟನಾ ಪಂದ್ಯವನ್ನಾಡಲು ತುದಿಗಾಲಿನಲ್ಲಿ ಅಭ್ಯಾಸ ನಡೆಸುತ್ತಿರುವ ಆರ್‌ಸಿಬಿ ಬ್ಯಾಟರ್‌ಗಳೆಲ್ಲರೂ ಸ್ಫೋಟಕ ಲಯದಲ್ಲಿ ಕಾಣಿಸಿಕೊಂಡಿದ್ದಾರೆ. ಮಾ.28ರಂದು ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ 2026 ಉದ್ಘಾಟನಾ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಆರ್‌ಸಿಬಿ ಎದುರಿಸಲಿದೆ.

ನೆಟ್ಸ್ ಹೊರಬಂದು ಆಡುವುದು ಮುಖ್ಯ: ಜಿತೇಶ್‌ನಂತಹ ಬ್ಯಾಟರ್‌ಗಳು 35 ಎಸೆತಗಳನ್ನು ಎದುರಿಸಿ 80ಕ್ಕಿಂತ ಅಧಿಕ ರನ್ ಗಳಿಸುವುದು ಮತ್ತು ರಜತ್ ಅವರ ಸುಂದರ ಹೊಡೆತಗಳನ್ನು ನೋಡಲು ಖುಷಿ ಸಿಗುತ್ತದೆ. ನಿಜಕ್ಕೂ ಫಲಪ್ರದ ಅಭ್ಯಾಸ ನಡೆಸಿದ್ದೇವೆ. ಇಂತಹಾ ಸ್ಪರ್ಧಾತ್ಮಕವಾದ ಪರಿಸ್ಥಿತಿಯಲ್ಲಿ ನೆಟ್ಸ್‌ನಿಂದ ಹೊರಬಂದು ಅಭ್ಯಾಸ ನಡೆಸುವುದು ಬಹಳ ಮುಖ್ಯ ಎಂದು ಆರ್‌ಸಿಬಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಹೇಳಿದ್ದಾರೆ.

ಯುವ ಬೌಲರ್ಸ್ ಬಗ್ಗೆ ಫ್ಲವರ್ ಮೆಚ್ಚುಗೆ: ಯುಪಿ ಟಿ20 ಲೀಗ್‌ನಲ್ಲಿ ಲಖನೌ ಪರ ಆಡಿದ್ದ ಅಭಿನಂದನ್ ಸಿಂಗ್‌ರನ್ನು 2026ರ ಹರಾಜಿನಲ್ಲಿ ಆರ್‌ಸಿಬಿ ಖರೀದಿಸಿತ್ತು. ಅಭಿನಂದನ್ ರಂತಹ ಯುವ ಬೌಲರ್‌ಗಳ ಕುರಿತು ಕೋಚ್ ಫ್ಲವರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಲವು ಯುವ ಆಟಗಾರರು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಅಭಿನಂದನ್, ರಸಿಕ್ ದರ್ ಉತ್ತಮ ಬೌಲಿಂಗ್ ನಡೆಸಿದ್ದಾರೆ. ಎಡಗೈ ಸ್ಪಿನ್ನರ್ ವಿಕ್ಕಿ ಓಸ್ವಾಲ್ ಸಹ ತಮ್ಮ ಕೌಶಲ ಪ್ರದರ್ಶಿಸಿದ್ದಾರೆ ಎಂದು ಫ್ಲವರ್ ಹೇಳಿದ್ದಾರೆ.



ವಿರಾಟ್ ಕೊಹ್ಲಿ ಇರಾದೆ ಮೆಚ್ಚಿದ ಕೃಣಾಲ್ ಪಾಂಡ್ಯ

ವಿರಾಟ್ ಕೊಹ್ಲಿ ಕ್ರೀಸ್‌ಗಿಳಿದು ಸ್ಫೋಟಕ ಇರಾದೆಯಿಂದ ಬ್ಯಾಟ್ ಬೀಸಿದ್ದನ್ನು ಹೊಗಳಿದ ಕೃಣಾಲ್ ಪಾಂಡ್ಯ, ಜಿತೇಶ್ ಅವರ ಸ್ಫೋಟಕ ಬ್ಯಾಟಿಂಗ್‌ಗೂ ಮೆಚ್ಚುಗೆ ವ್ಯಕ್ತಪಡಿಸಿದರು. ಜಿತೇಶ್ ಚೆನ್ನಾಗಿ ಆಡಿದ್ದಾರೆ. ಅವರ ಇನ್ನಿಂಗ್ಸ್‌ನಲ್ಲಿ ಕೆಲವು ಉತ್ತಮ ಹೊಡೆತಗಳಿದ್ದವು. ಡೇವಿಡ್, ವೆಂಕಿ ಸಹ ಚೆನ್ನಾಗಿ ಆಡಿದ್ದಾರೆ. ಕೊಹ್ಲಿ ದೊಡ್ಡ ಇನ್ನಿಂಗ್ಸ್ ಆಡದಿದ್ದರೂ ಸ್ಫೋಟಕ ಬ್ಯಾಟಿಂಗ್ ನಡೆಸುವ ಇರಾದೆಯೊಂದಿಗೆ ಕ್ರೀಸ್‌ಗಿಳಿದಿದ್ದರು. ಇಂದು ವಿರಾಟ್ ಅವರ ಆಟ ಅತ್ಯುತ್ತಮವಾಗಿತ್ತು, ಉತ್ತಮ ಲಯದಲ್ಲಿದ್ದಾರೆ. ಇದು ಆರ್‌ಸಿಬಿಗೆ ಶುಭ ಸೂಚನೆ ಎಂದು ಕೃಣಾಲ್ ಹೇಳಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಟೀಮ್ ವೆಂಕಿ: 234/7 (20)
ಜಿತೇಶ್ 81(37), ಡೇವಿಡ್ 36(14), ವೆಂಕಟೇಶ್ 30(16), ಕೊಹ್ಲಿ 29(12)
ಟೀಮ್ ಕೃಣಾಲ್: 247 (20)
ಪಡಿಕ್ಕಲ್ 63(33), ಕೃಣಾಲ್ 58(33), ಪಾಟಿದಾರ್ 74(25).
ಫಲಿತಾಂಶ: ಟೀಮ್ ಕೃಣಾಲ್‌ಗೆ ಜಯ
(ಒಟ್ಟು 40 ಓವರ್‌ಗಳಲ್ಲಿ 481 ರನ್)

ಫೈನಲ್‌ನಲ್ಲಿ ಉಕ್ರೇನ್ ಆಟಗಾರ್ತಿ ವಿರುದ್ಧ ಗೆಲುವು

ಪೋಲಿಶ್ ಓಪನ್ ಗೆದ್ದ ಉನ್ನತಿ

• **ಹೊಸದಿಲ್ಲಿ:** ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಉನ್ನತಿ ಹುಡ್ಡಾ ತಮ್ಮ ಅತ್ಯುತ್ತಮ ಲಯದಲ್ಲಿ ಆಟ ಮುಂದುವರಿಸಿದ್ದು, 20,000 ಡಾಲರ್ ಮೌಲ್ಯದ ಪೋಲಿಶ್ ಓಪನ್ ಪ್ರಶಸ್ತಿಯನ್ನು ಇದೇ ಮೊದಲ ಬಾರಿಗೆ ಗೆದ್ದುಕೊಂಡಿದ್ದಾರೆ.

ಭಾನುವಾರ ತಡರಾತ್ರಿ ನಡೆದ ಮೂರು ಸೆಟ್‌ಗಳ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ದ್ವಿತೀಯ ಶ್ರೇಯಾಂಕದ ಉಕ್ರೇನ್ ಆಟಗಾರ್ತಿ ಪೋಲಿನಾ ಬುಹ್ರೋವಾರನ್ನು ಮಣಿಸುವ ಮೂಲಕ ಉನ್ನತಿ ಪ್ರಶಸ್ತಿ ಗೆದ್ದಿದ್ದಾರೆ. 47 ನಿಮಿಷಗಳ ಕಾಲ ನಡೆದ ಫೈನಲ್‌ನಲ್ಲಿ 10–21, 21–15, 21–8 ಸೆಟ್‌ಗಳ ಅಂತರದಿಂದ ಉನ್ನತಿ ಗೆಲುವು ಸಾಧಿಸಿದರು.

28ನೇ ಶ್ರೇಯಾಂಕಿತೆ ಉನ್ನತಿ ಮೊದಲ ಸೆಟ್ ಅನ್ನು 10–21 ಅಂಕಗಳ ಅಂತರದಿಂದ ಕಳೆದುಕೊಂಡಿದ್ದರು. ಆದರೆ ಮೊದಲ ಸೆಟ್ ಸೋತ ಬಳಿಕ ಮಾನಸಿಕ ದೃಢತೆಯನ್ನು ಪ್ರದರ್ಶಿಸಿದ ಹುಡ್ಡಾ, ಮುಂದಿನ ಎರಡು ಸೆಟ್‌ಗಳಲ್ಲಿ ಪ್ರಾಬಲ್ಯ ಮೆರೆದು ಮಹಿಳಾ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿದ್ದಾರೆ.

ಎರಡನೇ ಅಂತಾರಾಷ್ಟ್ರೀಯ ಪ್ರಶಸ್ತಿ: ಇದು ಉನ್ನತಿ ವೃತ್ತಿಜೀವನದ ಎರಡನೇ ಅಂತಾರಾಷ್ಟ್ರೀಯ ಚಾಲೆಂಜ್ ಪ್ರಶಸ್ತಿಯಾಗಿದೆ. ತಮ್ಮ 14ನೇ ವಯಸ್ಸಿನಲ್ಲೇ ಸೂಪರ್ 100 ಬಿಡಬ್ಲ್ಯುಎಫ್ ವರ್ಲ್ಡ್ ಟೂರ್ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ಭಾರತೀಯ ಬ್ಯಾಡ್ಮಿಂಟನ್ ಪ್ಲೇಯರ್ ಎಂಬ ದಾಖಲೆ ಬರೆದಿದ್ದರು. ಅದಕ್ಕೂ ಮುನ್ನ ಅವರು 2022ರ ಒಡಿಶಾ ಓಪನ್ ಪ್ರಶಸ್ತಿ ಗೆದ್ದಿದ್ದರು.



ಮೈದಾನದ ಪ್ರವೇಶ, ನಿರ್ಗಮನ ದ್ವಾರ ಅಗಲಗೊಳಿಸಿದ ಕೆಎಸ್‌ಸಿಎ

ಭದ್ರತೆ, ಮೂಲಸೌಕರ್ಯ ಪರಿಶೀಲನೆ

• **ಬೆಂಗಳೂರು:** ಐಪಿಎಲ್ 2026ರ ಉದ್ಘಾಟನಾ ಪಂದ್ಯಕ್ಕೆ ಮುನ್ನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಭದ್ರತೆ ಮತ್ತು ಮೂಲಸೌಕರ್ಯ ಸುಧಾರಣೆಗಳನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪೊಲೀಸ್ ಸಿಬ್ಬಂದಿ ವರ್ಗ ಸೋಮವಾರ ಪರಿಶೀಲನೆ ನಡೆಸಿದರು. ಕ್ರೀಡಾಂಗಣದ ಪ್ರವೇಶ ದ್ವಾರಗಳ ಅಗಲಗೊಳಿಸುವ ಕಾರ್ಯ ಇದರಲ್ಲಿ ಪ್ರಮುಖ ಮೂಲಸೌಕರ್ಯ ಸುಧಾರಣೆಯಾಗಿದೆ. ಮಾ.28ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ತವರಿನ ತಂಡ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಮುಖಾಮುಖಿ ಆಗಲಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಮೈದಾನದಲ್ಲಿ ಸಂಭವಿಸಿದ್ದ ಕಾಲ್ತುಳಿತ ದುರಂತದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಬಲಿಯಾಗಿದ್ದರು. ಈ ದುರಂತದ ಬಳಿಕ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯ ಇದಾಗಿದ್ದು, ಭಾರೀ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಸುರಕ್ಷತಾ ವ್ಯವಸ್ಥೆಗಳು

- ಜನದಟ್ಟಣೆ ನಿಯಂತ್ರಣ ಯೋಜನೆಗಳು, ನಿಯೋಜನೆ ಕಾರ್ಯತಂತ್ರಗಳು, ಕಣ್ಗಾವಲು ವ್ಯವಸ್ಥೆಗಳು ಮತ್ತು ತುರ್ತು ಪ್ರತಿಕ್ರಿಯೆಗೆ ಪೂರ್ವಸಿದ್ಧತೆ.



ಮೂಲಸೌಕರ್ಯ ಸುಧಾರಣೆಗಳು

- ಕಾಲ್ತುಳಿತದಂತಹ ಪ್ರಸಂಗಗಳನ್ನು ತಡೆಗಟ್ಟುವ ಉದ್ದೇಶದಿಂದ ಕ್ರೀಡಾಂಗಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಅಗಲಗೊಳಿಸಲಾಗಿದೆ.
- ಸುಧಾರಿತ ಕ್ಯೂ (ಸರತಿ) ನಿರ್ವಹಣಾ ವ್ಯವಸ್ಥೆ ಅಳವಡಿಸಲಾಗುವುದು.
- ಬ್ಯಾರಿಕೇಡ್ ಮತ್ತು ಸೈನೇಜ್‌ಗಳನ್ನು ವಿಸ್ತರಿಸಲಾಗಿವೆ.

ಯಾವುದೇ ರೀತಿಯ ಸಣ್ಣಪುಟ್ಟ ಸಮಸ್ಯೆಗಳಾಗಲಿ ಅಹಿತಕರ ಘಟನೆಗಳಾಗಲಿ ನಡೆಯದ ರೀತಿಯಲ್ಲಿ ಮಾ.28ರಂದು ಐಪಿಎಲ್ 2026ರ ಉದ್ಘಾಟನಾ ಪಂದ್ಯ ನಡೆಸಿಕೊಡುವುದೇ ಕೆಎಸ್‌ಸಿಎ ಮುಂದಿರುವ ಪ್ರಮುಖ ಸವಾಲಾಗಿದೆ.

ಕೆ.ಸಿ.ವ್ಯಾಲಿಯಿಂದ ಅಂತರ್ಜಲ ವೃದ್ಧಿ: ಕೃಷ್ಣಬೈರೇಗೌಡ

• **ಬೆಂಗಳೂರು:** ಕೆ.ಸಿ.ವ್ಯಾಲಿ ಯೋಜನೆಯು ಕೇವಲ ನೀರಿನ ಮೂಲವಾಗಿರದೆ, ಕೋಲಾರ ಮತ್ತು ಸುತ್ತಮುತ್ತಲ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಹೊರಹೊಮ್ಮಿದೆ. ಈ ಯೋಜನೆಯಿಂದ ಕೋಲಾರ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಅಂತರ್ಜಲ ವೃದ್ಧಿಸಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರೊಂದಿಗೆ ನಡೆದ ಮಹತ್ವದ ಸಭೆಯಲ್ಲಿ ತಿಳಿದು ಬಂದಿದೆ. ಈ ಮಾಡೆಲ್ ಅನ್ನು ಇಡೀ ದೇಶವೇ ಅನುಸರಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಿಸಿದ್ದಾರೆ.

ಸಭೆಯಲ್ಲಿ ಐಐಎಸ್‌ಸಿ ಅಧಿಕಾರಿಗಳು ಮಂಡಿಸಿದ ವರದಿಯ ಪ್ರಕಾರ, ಹಿಂದೆ 1800 ಅಡಿ ಕೊರೆದರೂ ಸಿಗದ ನೀರು, ಪ್ರಸ್ತುತ 50 ರಿಂದ 100 ಅಡಿ ಆಳದಲ್ಲೇ ಲಭ್ಯವಾಗುತ್ತಿದೆ. ಅಂತರ್ಜಲ ಮರುಪೂರಣದಿಂದಾಗಿ ಬತ್ತಿಹೋಗಿದ್ದ ಬಾವಿಗಳು ಮತ್ತೆ ತುಂಬಿ ತುಳುಕುತ್ತಿವೆ. ಐದು ಹಂತದಲ್ಲಿ ನೈಸರ್ಗಿಕವಾಗಿ ಶುದ್ಧೀಕರಣಗೊಳ್ಳುತ್ತಿರುವ ಈ ನೀರು ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಿದ್ದು, ಕೃಷಿ ಉತ್ಪಾದನೆಯಲ್ಲೂ ಗಣನೀಯ ಏರಿಕೆ ಕಂಡಿದೆ ಎಂದು ಸಚಿವ ತಿಳಿಸಿದ್ದಾರೆ.



ಲೋಹದ ಅಂಶ ಪತ್ತೆಯಾಗಿಲ್ಲ: 2019ರಿಂದ ಸತತ ಆರು ವರ್ಷಗಳ ಕಾಲ ನಡೆಸಿದ ಸಂಶೋಧನೆಯಲ್ಲಿ ನೀರಿನಲ್ಲಾಗಲಿ ಅಥವಾ ಅಂತರ್ಜಲದಲ್ಲಾಗಲಿ ಯಾವುದೇ ಅಪಾಯಕಾರಿ ಲೋಹದ ಅಂಶಗಳು ಪತ್ತೆಯಾಗಿಲ್ಲ.ಮೂರು ಬಾರಿ ಮನೆ–ಮನೆಗೆ ತೆರಳಿ ನಡೆಸಿದ ಸಮೀಕ್ಷೆಯಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನೀರಿನಿಂದಾಗಿ ಕಿಡ್ನಿ ಕಲ್ಲು ಸಮಸ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ.

ಪರಿಸರ ಸಮತೋಲನ: ಕೆರೆಗಳ ವ್ಯಾಪ್ತಿಯಲ್ಲಿ ಹಕ್ಕಿಗಳ ಸಂಕುಲ ಹೆಚ್ಚಿದ್ದು, ಜಲಚರಗಳು ಸಂಪೂರ್ಣ ಆರೋಗ್ಯವಾಗಿವೆ. ಜಾನುವಾರುಗಳಲ್ಲಿ ಹಾಲು ಉತ್ಪಾದನೆ ಹೆಚ್ಚಿದೆ.ಮಣ್ಣಿನಲ್ಲಿ ನೈಟ್ರೋಜನ್ ಅಂಶ ಹೆಚ್ಚಿದೆ ಎಂಬ ಆರೋಪಗಳು ಸುಳ್ಳೆಂದು ಸಾಬೀತಾಗಿದೆ. ಮೆಂತ್ಯೆ, ಸೌತೆಕಾಯಿ, ಟಮೆಟೋ ಸೇರಿದಂತೆ ವಿವಿಧ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಧಿಕಾರಿಗಳ ಬೇಜವಾಬ್ದಾರಿಗೆ ಕೃಷ್ಣ ಬೈರೇಗೌಡ ಗರಂ: ಒಂದೆಡೆ ಕೆ.ಸಿ. ವ್ಯಾಲಿ ಯೋಜನೆಯಿಂದ ಕೆರೆಗಳು ಶುದ್ಧವಾಗುತ್ತಿದ್ದರೆ, ಮತ್ತೊಂದೆಡೆ ನಗರಸಭೆಗಳ ಬೇಜವಾಬ್ದಾರಿಯಿಂದ ಊರಿನ ಕೊಳಚೆ ನೀರು ನೇರವಾಗಿ ಕೆರೆಗೆ ಸೇರುತ್ತಿರುವುದಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಶುದ್ಧೀ ಕರಿಸಿದ ನೀರನ್ನು ಹರಿಸುವ ಬೃಹತ್ ಯೋಜನೆಯ ಹೆಸರಿಗೆ ಸ್ಥಳೀಯ ಕೊಳಚೆ ನೀರಿನಿಂದ ಮಸಿ ಬಳಿಯಲಾಗುತ್ತಿದೆ. ನಗರಸಭೆ ಅಧಿಕಾರಿಗಳ ಈ ತಪ್ಪನ್ನು ಸಹಿಸಲು ಸಾಧ್ಯವಿಲ್ಲ ಎಂದು ಸಚಿವರು ಎಚ್ಚರಿಸಿದ್ದಾರೆ.

ಇಂಪ್ಯಾಕ್ಟ್ ಪ್ಲೇಯರ್ ನಿಯಮ ಇಷ್ಟವಿಲ್ಲ

• **ಹೊಸದಿಲ್ಲಿ:** ಐಪಿಎಲ್ 2026ರ ಆವೃತ್ತಿಗೆ ದಿಲ್ಲಿ ಕ್ಯಾಪಿಟಲ್ಸ್ (ಡಿಸಿ) ನಾಯಕರಾಗಿ ಬಡ್ತಿ ಪಡೆದಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಸೋಮವಾರ ಐಪಿಎಲ್‌ನ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸುವ ಮೂಲಕ ಗಮನಸೆಳೆದರು. ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸಿದ ಅಕ್ಷರ್, ನನಗೆ ಈ ನಿಯಮ ಇಷ್ಟವಿಲ್ಲ ಎಂಬ ಸರಳ ಪ್ರತಿಕ್ರಿಯೆ ನೀಡಿದ್ದಾರೆ. ನಾನು ಸ್ವತಃ ಒಬ್ಬ ಆಲ್‌ರೌಂಡರ್ ಆಗಿರುವುದರಿಂದ ನನಗೆ ಈ ನಿಯಮ ಇಷ್ಟವಾಗಿಲ್ಲ. ಹಿಂದೆ ನಾವು ಬ್ಯಾಟಿಂಗ್ ಮತ್ತು ಬೌಲಿಂಗ್ ಗೋಸ್ಕರ ಆಲ್‌ರೌಂಡರ್‌ಗಳನ್ನು ತಂಡಕ್ಕೆ ಆಯ್ಕೆ ಮಾಡುತ್ತಿದ್ದೆವು. ಆದರೆ ಟೀಮ್ ಮ್ಯಾನೇಜ್‌ಮೆಂಟ್ ಬ್ಯಾಟರ್ ಅಥವಾ ಬೌಲರ್ ಅನ್ನು ಇಂಪ್ಯಾಕ್ಟ್ ಆಟಗಾರನಾಗಿ ಕಳುಹಿಸುವುದರಿಂದ ಆಲ್‌ರೌಂಡರ್ ಪಾತ್ರ ಕಡೆಗಣಿಸಲ್ಪಡುತ್ತದೆ. ನಿಯಮಗಳನ್ನು ನಾವು ಪಾಲಿಸಬೇಕಾಗಿದೆ. ಆದರೆ ವೈಯಕ್ತಿಕವಾಗಿ ನನಗಿದು ಇಷ್ಟವಿಲ್ಲ ಎಂದು ನಾಯಕ ಅಕ್ಷರ್ ಅಭಿಪ್ರಾಯಿಸಿದ್ದಾರೆ.



ಈ ಹಿಂದೆ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರೂ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ವಿರುದ್ಧ ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಈ ನಿಯಮದ ಪ್ರಕಾರ, ತಂಡಗಳು ಪಂದ್ಯದ ಯಾವುದೇ ಸಂದರ್ಭ ಹನ್ನೊಂದರ ಬಳಗದಲ್ಲಿರುವ ಒಬ್ಬ ಆಟಗಾರನನ್ನು, ಐವರು ಬದಲಿ ಆಟಗಾರರ ಪಟ್ಟಿಯಲ್ಲಿರುವ ಒಬ್ಬರೊಂದಿಗೆ ಬದಲಾಯಿಸಬಹುದು. ಈ ನಿಯಮವನ್ನು 2023ರಲ್ಲಿ ಐಪಿಎಲ್‌ನಲ್ಲಿ ಪರಿಚಯಿಸಲಾಗಿದ್ದು, ಸದ್ಯ 2027ರವರೆಗೆ ಇರಲಿದೆ.

ಉಪಚುನಾವಣೆ ಗೆಲ್ಲುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ

ಕಮಲ ಅರಳುವುದು ಖಚಿತ: ವಿಜಯೇಂದ್ರ

• **ಬಾಗಲಕೋಟೆ:** ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರಲ್ಲಿ ಆಕ್ರೋಶ ಹೆಚ್ಚಾಗಿದ್ದು, ಬಿಜೆಪಿ ಪಕ್ಷದ ಅಭಿವೃದ್ಧಿ ಪರ ರಾಜಕಾರಣ, ಸಂಘಟಿತ ಶಕ್ತಿ, ಕಾರ್ಯಕರ್ತರ ಉತ್ಸಾಹ ಹಾಗೂ ಮತದಾರರ ಆಶೀರ್ವಾದದಿಂದ ಈ ಬಾರಿ ಬಾಗಲಕೋಟೆಯಲ್ಲಿ ಕಮಲ ಅರಳಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಸಿದ ಬಳಿಕ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಡವರ, ದಲಿತರ, ಯುವಕರ ವಿರೋಧಿ ಸರ್ಕಾರ ರಾಜ್ಯದಲ್ಲಿದ್ದು, ಮುಂದಿನ ದಿನಗಳಲ್ಲಿ ಈ ಸರ್ಕಾರವನ್ನು ಕಿತ್ತು ಹಾಕಲು ರಾಜ್ಯದ ಜನ ಸಂಕಲ್ಪ ಮಾಡಿದ್ದಾರೆ. ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ಮೂಲಕ ಕಾಂಗ್ರೆಸ್ ಧೂಳಿಪಟ ಆಗಲಿದೆ ಎಂದರು.ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ಸಂಪೂರ್ಣ ಸಜ್ಜಾಗಿದ್ದು, ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ವಿಜಯದ ದೃಢಸಂಕಲ್ಪ ಕೈಗೊಳ್ಳಲಾಗಿದೆ. ಈ ಉಪಚುನಾವಣೆಯ ಫಲಿತಾಂಶ ರಾಜ್ಯದ ಮುಂದಿನ ರಾಜಕೀಯ ದಿಕ್ಕನ್ನು ನಿರ್ಧರಿಸುವಲ್ಲಿ ಪ್ರಮುಖವಾಗಲಿದೆ ಎಂದರು.




ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 25 ಸಾವಿರ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದ ಅವರು, ನಿಗಮದ ದುಡ್ಡು ಹೊಡೆದಿದ್ದು ಹಣದ ಮೂಟೆಯನ್ನು ಹಿಡಿದುಕೊಂಡು ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದವರು ಬರಲಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹವಿದ್ದು ಪ್ರಜ್ಞಾವಂತ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿಯವರು ಜಿಲ್ಲೆಗೆ ಸಾವಿರಾರು ಕೋಟಿ ಅನುದಾನ ನೀಡಿದ್ದಾರೆ. ರಾಜಕೀಯ ಮರುಜನ್ಮ ನೀಡಿದ ಜಿಲ್ಲೆಗೆ ಸಿದ್ಧರಾಮಯ್ಯನವರು ಎಷ್ಟು ಅನುದಾನ ನೀಡಿದ್ದಾರೆಂದು ಬಹಿರಂಗಪಡಿಸಲಿ. ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ ಎಂದರು. ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ಚರಂತಿಮಠರದ್ದು ನಾಮಪತ್ರ ಮೆರವಣಿಗೆ ಅಲ್ಲ, ವಿಜಯೋತ್ಸವದ ಮೆರವಣಿಗೆ. ಬಾಗಲಕೋಟೆಯಲ್ಲಿ ಬಿಜೆಪಿ ಶಕ್ತಿ ಏನು ಎಂಬುದನ್ನು ಕಾರ್ಯಕರ್ತರು ತೋರಿಸಿದ್ದಾರೆ ಎಂದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5932

ಎಡದಿಂದ ಬಲಕ್ಕೆ
1.ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4.ತಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (4)
12.ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15.ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾಸದರೆಡೆಗೆ ನುಗ್ಗಿ ಬಂದವರ ವೇಗ (3)
17.ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1.ಆಸ್ತಿಯಲ್ಲಿ ಭಾಗಸ್ಥನೀತ (4)
2.ತಾರೀಖಿನ್ನು ಹೀಗೂ ಹೇಳುತ್ತೇವೆ (3)
3.ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5.ಇದು ನಾಡಿನ ಒಂದು ಭಾಗ (4)
7.ಜನರ ಕಷ್ಟ–ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9.ಅನುಚಿತವಾದ ಜಂಭವಿದು (5)
10.ರಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11.ಮನದಲ್ಲುಂಟಾಗುವ ಭಾವನೆ–ವಿಚಾರ (4)
13.ಬರದ ನಡುವೆ ಕಾಳಗವಡಗಿದೆ (3)
14.ಇಚ್ಛೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3.ಅಲ್ಲಮಪ್ರಭು
5.ಕೇಳುಗ 6.ಚರ್ವಿತ
7.ಹವಳ 9.ತಂಗುದಾಣ
11.ಪರಂತಪಾ 14.ಗಣಕ
16.ಅಪಾರ 17.ಜವಾರಿ
18.ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ :
1.ತೊಡೆಚಲ್ಲಣ 2.ಸಂಕೇತ
3.ಅಗಣಿತ 4.ಮಣಿಹ
8.ವರ್ಜಿತ 10.ದಾರುಣ
12.ಪಾತರಗಿತ್ತಿ
13.ಜಗಜಟ್ಟಿ 15.ಕರುಳು
16.ಅರಿಕೆ

ಕಿರುಸುದ್ದಿ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಹಾಜರಾತಿ

ಮಂಗಳೂರು: ಜಿಲ್ಲೆಯಲ್ಲಿ ಸೋಮವಾರ ನಡೆದ ಎಸ್‌ಎಸ್‌ಎಲ್‌ಸಿ ವಿಜ್ಞಾನ ಪರೀಕ್ಷೆಗೆ 28500 ವಿದ್ಯಾರ್ಥಿಗಳು ಹಾಜರಾಗಿದ್ದು, 229 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

ಡಿಸಿ ಕಚೇರಿಯಲ್ಲಿ ಇಂದಿನಿಂದ ಖಾದಿ ಬಟ್ಟೆ ಮಾರಾಟ

ಮಂಗಳೂರು: ಸರ್ಕಾರಿ ನೌಕರರು ತಿಂಗಳ ಮೊದಲನೇ ಶನಿವಾರದಂದು ಖಾದಿ ಬಟ್ಟೆ ಧರಿಸುವ ಸುತ್ತೋಲೆಯನ್ನು ಹೊರಡಿಸಿರುವುದರಿಂದ, ದ.ಕ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ/ಎಲ್ಲಾ ಸರ್ಕಾರ ನೌಕರರಿಗೆ ಅನುಕೂಲವಾಗುವಂತೆ ಪಡೀಲ್ ಜಿಲ್ಲಾಡಳಿತ ಕೇಂದ್ರ ಪ್ರಜಾಸೌಧದ 2 ನೇ ಮಹಡಿ (ಕೊಠಡಿ ಸಂಖ್ಯೆ 212) ಯಲ್ಲಿ ಮಾರ್ಚ್ 24 ರಿಂದ 26 ರವರೆಗೆ ಖಾದಿ ಬಟ್ಟೆ ಮಾರಾಟ ಮಾಡಲು ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆ. ಆದ್ದರಿಂದ ಇದರ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ಅಧಿಕಾರಿಗಳು ಹಾಗೂ ನೌಕರರು ಪಡೆದುಕೊಳ್ಳಬೇಕೆಂದು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರಿನಲ್ಲಿ ಸಾಗಿಸುತ್ತಿದ್ದ 1200 ಲೀಟರ್ ಸ್ಪಿರಿಟ್ ವಶ: ಇಬ್ಬರ ಸೆರೆ

ಕಾಸರಗೋಡು: ನೀಲೇಶ್ವರದಲ್ಲಿ ಪೊಲೀಸರು ನಡೆಸಿದ ಕಾರ್ಯಚರಣೆಯಲ್ಲಿ ಬಾರೀ ಪ್ರಮಾಣದ ಸ್ಪಿರಿಟ್ ವಶಪಡಿಸಿಕೊಂಡಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಇನ್ನೋವಾ ಕಾರಿನಲ್ಲಿ ಸಾಗಿಸುತ್ತಿದ್ದ 1200 ಲೀಟರ್ ಸ್ಪಿರಿಟ್ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ತೃಶೂರು ಎಡಕಳಿಯೂರ್ ಪುನ್ನಯೂರ್ ಸೌತ್‌ನ ಅರಕ್ ಪರಂಬಿಲ್ ಹೌಸ್‌ನ ಎ.ಎಚ್.ಆಸ್ಲಿಫ್ (40), ಮಂಜೇಶ್ವರ ಕುಂಜತ್ತೂರು ಕ್ಷೇತ್ರ ಸಮೀಪದ ಭೂಮಿಕಾನಿಲಯದ ಎ.ಆರ್.ಗಿರೀಶ್ (39) ಬಂಧಿತರು. ಎಸ್‌ಐ ಜಿ.ವಿಷ್ಣು ಅವರ ನೇತೃತ್ವದಲ್ಲಿ ಸೋಮವಾರ ಮುಂಜಾನೆ ನೀಲೇಶ್ವರ ಮಾರ್ಕೆಟ್ ಜಂಕ್ಷನ್‌ನ ಸಮೀಪದ ಕೊಟಪ್ಪುರಂ ರೋಸ್ ಜಂಕ್ಷನ್‌ನಲ್ಲಿ ನಡೆಸಿದ ಕಾರ್ಯಾಚರಣೆ ವೇಳೆ ಸ್ಪಿರಿಟ್ ಪತ್ತೆಹಚ್ಚಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಭರತ್ ರೆಡ್ಡಿಯವರ ನಿರ್ದೇಶ ಪ್ರಕಾರ ಪೊಲೀಸರು ಕಾರ್ಯಚರಣೆ ನಡೆಸಿದ್ದಾರೆ.

ಮದ್ಯದ ಅಮಲಿನಲ್ಲಿ ಕಾರು ಚಲಾಯಿಸಿ ಬೈಕ್‌ಗೆ ಡಿಕ್ಕಿ: ವ್ಯಕ್ತಿ ಮೃತ್ಯು

ಕಾಸರಗೋಡು: ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟ ದಾರುಣ ಘಟನೆ ಚಿತ್ತಾರಿಯಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ. ಮಲಪ್ಪುರಂ ಒಳುಕ್ಕೂರು ಪಲಿತ್ತಲ ಎಂಬಲ್ಲಿನ ಶಂಕರನ್ ಎಂಬವರ ಪುತ್ರ ಪಿ.ಅಖಿಲೇಶ್ (38) ಮೃತಪಟ್ಟವರು. ಘಟನೆಗೆ ಸಂಬಂಧಿಸಿ ಕಾರು ಚಾಲಕ ಕಾಞಂಗಾಡು ಅಲಾಮಿಪಳ್ಳಿ ನಿವಾಸಿ ಎಚ್.ಉಲ್ಲಾಸ್ ಎಂಬಾತನನ್ನು ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಭಾನುವಾರ ರಾತ್ರಿ 11.30ರ ವೇಳೆ ಕಾಸರಗೋಡು ಭಾಗದಿಂದ ಅಮಿತ ವೇಗದಲ್ಲಿ ಬಂದ ಕಾರು ಅಖಿಲೇಶ್ ಚಲಾಯಿಸುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಗಂಭೀರ ಗಾಯಗೊಂಡ ಅಖಿಲೇಶ್‌ರನ್ನು ಸ್ಥಳೀಯರು ಕೂಡಲೇ ಆಸ್ಪತ್ರೆಗೆ ತಲುಪಿಸಿದರೂ ಪ್ರಯೋಜನವಾಗಲಿಲ್ಲ. ಹೊಸದುರ್ಗ ಎಸ್‌ಐ ಸಿ.ಜಿ.ಸಾಮ್‌ಸನ್ ನೇತೃತ್ವದ ತಂಡ ಉಲ್ಲಾಸ್‌ನಲ್ಲಿ ಕಸ್ಟಡಿಗೆ ತೆಗೆದು ಕಾಞಂಗಾಡಿನ ಜಿಲ್ಲಾಸ್ಪತ್ರೆಗೆ ತಲುಪಿಸಿ ತಪಾಸಣೆಗೊಳಪಡಿಸಿದಾಗ ಮದ್ಯದಮಲಿನಲ್ಲಿದ್ದನೆಂದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಉಲ್ಲಾಸ್‌ನ ವಿರುದ್ಧ ನರಹತ್ಯಾ ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ.

ಗಾಂಜಾ ಪ್ರಕರಣ 10 ವರ್ಷಗಳಿಂದ ತಲೆಮರೆಸಿ ಕೊಂಡಿದ್ದ ಆರೋಪಿ ಸೆರೆ

ಸುಳ್ಯ: ಗಾಂಜಾ ಮಾರಾಟ ಪ್ರಕರಣದಲ್ಲಿ 10 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಸುಳ್ಯ ಪೊಲೀಸರು ಉತ್ತರ ಪ್ರದೇಶದಲ್ಲಿ ಬಂಧಿಸಿ ನ್ಯಾಯಾಲಕ್ಕೆ ಹಾಜರು ಪಡಿಸಿದ್ದಾರೆ.



2016ರಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು 10 ವರ್ಷಗಳಿಂದ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದು ಈ ಹಿನ್ನಲೆಯಲ್ಲಿ ಆರೋಪಿತನಾದ ಉತ್ತರ ಪ್ರದೇಶ ನಿವಾಸಿ ನಸೀಮ್ ಎಂಬಾತನನ್ನು ಸುಳ್ಯ ಠಾಣಾ ಸಿಬ್ಬಂದಿಗಳಾದ ರಮೇಶ್ ಎಲ್., ರಾಜು ನಾಯ್ಕ ಡಿ. ಹಾಗೂ ವಿಖ್ಯಾತ ಜೆ. ಗೌಡ ತಂಡವು ಉತ್ತರ ಪ್ರದೇಶ ರಾಜ್ಯದ ಖಾಜಿಪುರ ಎಂಬಲ್ಲಿ ಆರೋಪಿತನನ್ನು ಬಂಧಿಸಿ ಸುಳ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಪಂಪವೆಲ್-ಎಕ್ಕೂರು | ಮಂಗಳೂರು ರೈಲು ನಿಲ್ದಾಣ | ವೀರಾಜಪೇಟೆಯ ಪೆರುಂಬಾಡಿ

ಖಾಕಿ ಬಲೆಗೆ ಬಿತ್ತು ರಾಶಿ ರಾಶಿ ಡ್ರಗ್ಸ್!

ಮಾದಕ ದ್ರವ್ಯ ಮಾರಾಟ: ಮೂವರ ಬಂಧನ

ಮಂಗಳೂರು: ನಗರದಲ್ಲಿ ನಿಷೇಧಿತ ಮಾದಕವಸ್ತು ಎಂಡಿಎಂಎಯನ್ನು ಮಾರಾಟ ಮಾಡುತ್ತಿದ್ದ ಮೂರು ಮಂದಿ ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ತೊಕ್ಕೊಟ್ಟು ಚೆಂಬುಗುಡ್ಡೆ ನಿವಾಸಿಗಳಾದ ಹೈದರ್ ಅಲಿಯಾಸ್ ಹೈದರ್ ಆಲಿ (53), ಮೊಹಮ್ಮದ್ ಸಜಾದ್ (29) ಮತ್ತು ಉಡುಪಿ ಜಿಲ್ಲೆ ಕಾಪು ತಾಲೂಕಿನ ಶಿರ್ವ ಮೂಲದ ಪ್ರಸ್ತುತ ಪಂಪ್ ವೆಲ್ ಉಜ್ಜೋಡಿಯಲ್ಲಿ ವಾಸವಾಗಿರುವ ಜೈಸನ್ ಮೆನೇಜಸ್ (26) ಬಂಧಿತರು.

ಈ ಆರೋಪಿಗಳು ಪಂಪವೆಲ್-ಎಕ್ಕೂರು ಪರಿಸರದಲ್ಲಿ ಮಾದಕ ವಸ್ತುವನ್ನು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಪಡೆದ ಪೊಲೀಸರು ದಾಳಿ ನಡೆಸಿದ್ದರು. ಆರೋಪಿಗಳಿಂದ 2.50 ಲಕ್ಷ ರೂ. ಮೌಲ್ಯದ 26 ಗ್ರಾಂ ನಿಷೇಧಿತ ಮಾದಕ ವಸ್ತು ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಮಾತ್ರವಲ್ಲದೆ 37 ಸಾವಿರ ರೂ. ನಗದು, ಮೊಬೈಲ್ ಫೋನ್-5, ತೂಕ ಮಾಪನ ಯಂತ್ರ, ಆಟೋ ರಿಕ್ಷಾ ಸಹಿತ 4.37 ಲಕ್ಷ ರೂ. ಮೌಲ್ಯದ ಸೊತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆರೋಪಿಗಳ ವಿರುದ್ಧ ಕಂಕನಾಡಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

ಹೈದರ್ ವಿರುದ್ಧ ಹಲವು ಪ್ರಕರಣ

ಆರೋಪಿ ಹೈದರ್ ಅಲಿಯಾಸ್ ಹೈದರ್ ಆಲಿ ಮೇಲೆ ಹಲವು ಪ್ರಕರಣಗಳು ದಾಖಲಾಗಿವೆ. ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ, 2024ರಲ್ಲಿ ಮಾದಕವಸ್ತು ಮಾರಾಟ ಮಾಡಿದ



ಪ್ರಕರಣ, ಮಹಿಳೆಯೊಬ್ಬರಿಗೆ ಹಲ್ಲೆ ಮಾಡಿದ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಸೇವನೆ: ಓರ್ವ ಸೆರೆ

ಮಾದಕ ದ್ರವ್ಯ ಸೇವನೆ ಮಾಡಿ ತೂರಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂದರು ಠಾಣಾ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕುದ್ರೋಳಿ ಜಂಕ್ಷನ್ ಜಿ.ಟಿ.ರೋಡ್ ನಿವಾಸಿ ಹಸನ್ ಝುಮೀಲ್ (49) ಎಂಬಾತ ನಗರದ ಕುದ್ರೋಳಿ ಬಳಿ ಗಾಂಜಾ ಸೇವಿಸಿ ತೂರಾಡುತ್ತಿದ್ದು, ಇದನ್ನು ಗಮನಿಸಿದ ಗಸ್ತು ಕರ್ತವ್ಯದಲ್ಲಿದ್ದ ಪೊಲೀಸರು, ಆತನನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮಾದಕ ವಸ್ತು ಸೇವನೆ ಗೊತ್ತಾಗಿದೆ.ಆರೋಪಿ ಕೂಡ ತಾನು ಗಾಂಜಾ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಆರೋಪಿ ವಿರುದ್ಧ ಎನ್ ಡಿಪಿ ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ರೈಲಿನಲ್ಲಿ ಸಾಗಾಟವಾಗುತ್ತಿದ್ದ 5 ಲಕ್ಷ ಮೌಲ್ಯದ ಗಾಂಜಾ ವಶ

ಮಂಗಳೂರು: ರೈಲಿನಲ್ಲಿ ಅಕ್ರಮವಾಗಿ ಸಾಗಾಟವಾಗುತ್ತಿದ್ದ 5 ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಎಂಜಿಆರ್ ಚೆನ್ನೈಸೆಂಟ್ರಲ್- ಮಂಗಳೂರು ಸೆಂಟ್ರಲ್ ರೈಲಿನಲ್ಲಿ 5,06,450 ರೂ.ಮೌಲ್ಯದ 10 ಕೆ.ಜಿ. 129 ಗ್ರಾಂ ಒಣ ಗಾಂಜಾ ಸೋಮವಾರ ಬೆಳಗ್ಗೆ ಪತ್ತೆಯಾಗಿದೆ. ಪೂರ್ವಾಹ್ನ 11.56ರ ಹೊತ್ತಿಗೆ ನಿಲ್ದಾಣದ ಒಂದನೇ ಫ್ಲಾಟ್ ಫಾರಂಗೆ ಆಗಮಿಸಿದ ರೈಲಿನ ಜನರಲ್ ಬೋಗಿಯಲ್ಲಿ ವಾರಸುದಾರರು ಇಲ್ಲದ ಬಾಕ್ಸ್‌ನಲ್ಲಿ ಈ ಗಾಂಜಾ ಪತ್ತೆಯಾಗಿದೆ. ಆರ್‌ಪಿಎಫ್‌ನ ಅಧಿಕಾರಿ



ಮನೋಜ್ ಕುಮಾರ್ ಅವರು ತಂಡದೊಂದಿಗೆ ಪರಿಶೀಲನೆ ನಡೆಸಿ ವಶಪಡಿಸಿಕೊಂಡಿದ್ದು, ಬಳಿಕ ಮಂಗಳೂರು ಅಬಕಾರಿ ದಳಕ್ಕೆ ಹಸ್ತಾಂತರಿಸಿದ್ದಾರೆ.

ಕೇರಳ ರಾಜ್ಯಕ್ಕೆ ಗಾಂಜಾ ಸಾಗಿಸುತ್ತಿದ್ದ ಇಬ್ಬರ ಬಂಧನ

ಮಡಿಕೇರಿ: ಅಕ್ರಮವಾಗಿ ಕೇರಳ ರಾಜ್ಯಕ್ಕೆ ಗಾಂಜಾ ಸಾಗಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ವೀರಾಜಪೇಟೆ ನಗರ ಪೊಲೀಸರು ಬಂಧಿಸಿದ್ದಾರೆ.

ಮೈಸೂರುಜಿಲ್ಲೆಯಹುಣಸೂರು ತಾಲೂಕಿನ ಹಣಗೋಡು ಹಿಟ್ಟೂರು ನಿವಾಸಿ ಮಧು ಮಾದೇವ (53) ಮತ್ತು ಕೊಳವಿಗೆ ಗ್ರಾಮದ ನಿವಾಸಿ ಶಶಿಕುಮಾರ್(24) ಬಂಧಿತ ಆರೋಪಿಗಳು.

ಬಂಧಿತ ಆರೋಪಿ ಮಧು ಮಾದೇವ ತಾನು ಹೊಂದಿರುವ ಮಾರುತಿ ಕಾರಿನಲ್ಲಿ ಗೋಣಿಕೊಪ್ಪ ಪೆರುಂಬಾಡಿ ಮಾರ್ಗವಾಗಿ ಕೇರಳ ರಾಜ್ಯಕ್ಕೆ ಗಾಂಜಾ ಮಾರಾಟ ಮಾಡಲು ಯತ್ನಿಸಿದ್ದ. ಶಶಿಕುಮಾರ್ ಎಂಬಾತನನ್ನು ಈ ಕೃತ್ಯಕ್ಕೆ ಬಳಸಿಕೊಂಡಿದ್ದ.

ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೆರುಂಬಾಡಿ ಗೇಟ್ ಬಳಿ -ಕಾರನ್ನು ತಪಾಸಣೆ ಮಾಡುವ ವೇಳೆ ವಾಹನದಲ್ಲಿ ಸುಮಾರು 250 ಗ್ರಾಂ ಗಾಂಜಾ ಪತ್ತೆಯಾಗಿದ್ದು, ಪೊಲೀಸರು ಮಧು ಮತ್ತು ಶಶಿಕುಮಾರ್‌ನನ್ನು ಗಾಂಜಾ ಸಹಿತ ವಶಕ್ಕೆ ಪಡೆದಿದ್ದಾರೆ.

> ಕಾರನ್ನು ತಪಾಸಣೆ ಮಾಡುವ ವೇಳೆ ವಾಹನದಲ್ಲಿ ಸುಮಾರು 250 ಗ್ರಾಂ ಗಾಂಜಾ ಪತ್ತೆ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ನಿರ್ದೇಶನದ ಮೇರೆಗೆ ವೀರಾಜಪೇಟೆ ಡಿವೈಎಸ್ಪಿ ಮಹೇಶ್ ಕುಮಾರ್ ಎಸ್. ಮಾರ್ಗದರ್ಶನದಲ್ಲಿ ವೃತ್ತ ನೀರಿಕ್ಷಕ ಅನೂಪ್ ಮಾದಪ್ಪ ಪಿ., ಠಾಣಾಧಿಕಾರಿ ಪ್ರಮೋದ್ ಮತ್ತು ಅಪರಾಧ ಪತ್ತೆ ವಿಭಾಗ ಪಿ.ಎಸ್ .ಐ. ಕಾವೇರಪ್ಪ ಟಿ.ಎಂ. ಹಾಗೂ ಅಪರಾಧ ಪತ್ತೆ ಕರ್ತವ್ಯ ನಿರತ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕ್ಷಯಮುಕ್ತ ಚಟುವಟಿಕೆಗಳಿಗಾಗಿ ಬೆಳ್ಳೂರು ಗ್ರಾ.ಪಂ.ಗೆ ಚಿನ್ನದ ಪದಕ

ಕಾಸರಗೋಡು: 2023ರಿಂದ ಜಾರಿಗೊಳಿಸಲಾದ ಕ್ಷಯರೋಗ ಮುಕ್ತ ಸಮರ್ಥ ಕಾರ್ಯಚಟುವಟಿಕೆಗಳಿಗಾಗಿ ಬೆಳ್ಳೂರು ಗ್ರಾಮ ಪಂಚಾಯತ್‌ಗೆ ಚಿನ್ನದ ಪದಕ ಲಭಿಸಿದೆ. ವಿಶ್ವ ಕ್ಷಯರೋಗ ದಿನಾಚರಣೆಯ ಅಂಗವಾಗಿ ಮಾ.24ರಂದು ಕಾಸರಗೋಡುಕಲೆಕ್ಟರೇಟ್‌ನಲ್ಲಿಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

2023ರಲ್ಲಿ ಬೆಳ್ಳೂರಿನಲ್ಲಿ ಸೂರ್ಯೋದಯ ಎಂಬ ಹೆಸರಿನಲ್ಲಿ ಕ್ಷಯಮುಕ್ತಭಾರತ್ ಎಂಬಯೋಜನೆಯನ್ನು ಆರಂಭಿಸಲಾಗಿತ್ತು. ಇದರ ಅಂಗವಾಗಿ ಸಮರ್ಪಕ ಆರೋಗ್ಯ ತಂಡವನ್ನು ರೂಪಿಸಿ ತರಬೇತಿ ನೀಡಲಾಗಿತ್ತು. ಈ ತಂಡದವರು ಹಾಗೂ ಆರೋಗ್ಯ ಕಾರ್ಯಕರ್ತರು



ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರತೀ ಮನೆಗೆ ತೆರಳಿ ಕ್ಷಯರೋಗ ತಪಾಸಣೆಗಾಗಿ ಕಾರ್ಯಚಟುವಟಿಕೆ ನಡೆಸಿದ್ದರು.

ಕಾಸರಗೋಡು ಜಿಲ್ಲೆಯಲ್ಲಿ ಕ್ಷಯಮುಕ್ತ ಕಾರ್ಯಯೋಜನೆಯನ್ನು ಆರಂಭಿಸಿದ ಪಂಚಾಯತ್‌ಗಳ ಪೈಕಿ ಬೆಳ್ಳೂರು ಗ್ರಾಮ ಪಂಚಾಯತ್ ಪ್ರಥಮ ಸ್ಥಾನದಲ್ಲಿದೆ. ಇದರ ಆಧಾರದಲ್ಲಿ ಬೆಳ್ಳೂರು ಪಂಚಾಯತ್ ಗೆ 2023ರಲ್ಲಿ ಕಂಚಿನ ಪದಕ, 2024ರಲ್ಲಿ ಬೆಳ್ಳಿಯ ಪದಕ ಹಾಗೂ 2025ರಲ್ಲಿ ಚಿನ್ನದ ಪದಕ ದೊರಕುವಂತಾಯಿತು.

> ಕುಟುಂಬ ಸದಸ್ಯರಿಗೆ ಉಚಿತ ತಪಾಸಣಾ ಸೌಲಭ್ಯ, ಔಷಧಿ ಇತ್ಯಾದಿಗಳನ್ನು ಒದಗಿಸಲಾಗಿದೆ.

ಯೋಜನೆಯ ಅಂಗವಾಗಿ ರೋಗಿಗಳಿಗೆ ಪೋಷಕಾಂಶಗಳ ಕಿಟ್ ವಿತರಣೆ, ರೋಗಿಗಳು, ಕುಟುಂಬ ಸದಸ್ಯರಿಗೆ ಉಚಿತ ತಪಾಸಣಾ ಸೌಲಭ್ಯ, ಔಷಧಿ ಇತ್ಯಾದಿಗಳನ್ನು ಒದಗಿಸಲಾಗಿದೆ. ಈ ಯೋಜನೆಯು ಕ್ಷಯ ರೋಗ ಸಂಪೂರ್ಣವಾಗಿ ಮುಕ್ತವಾಗುವ ತನಕ ಮುಂದುವರಿಯಲಿದೆ ಎಂದು ಬೆಳ್ಳೂರು ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಬೆಳ್ಳೂರು ಕುಟುಂಬ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರಿಗೆ ಬರಲಿದೆ ಮತ್ತೊಂದು ಹಡಗು

ಮಂಗಳೂರು: ಮಧ್ಯಪ್ರಾಚ್ಯ ದೇಶಗಳ ಯುದ್ಧ ಇನ್ನೂ ಶಮನವಾಗುವ ಲಕ್ಷಣಗಳು ಕಾಣುತ್ತಿಲ್ಲ. ಈ ನಡುವೆ ನವಮಂಗಳೂರು ಬಂದರಿಗೆ ಸರಕು ಹೊತ್ತ ಹಡುಗಗಳ ಆಗಮನವಾಗುತ್ತಿದೆ.

ಈಗಾಗಲೇ ಒಂದು ಕಚ್ಚಾತೈಲ, ಇನ್ನೊಂದು ಎಲ್‌ಪಿಜಿ ಸರಕು ಹಡಗು ಮಂಗಳೂರಿಗೆ ಆಗಮಿಸಿದೆ. ಮಾ.25ರಂದು ಇನ್ನೊಂದು ಎಲ್‌ಪಿಜಿ ಹಡಗು ಆಗಮಿಸುವ ನಿರೀಕ್ಷೆ ಇದೆ.

'ಅಪೋಲೊ ಓಷನ್' ಹೆಸರಿನ ಈ ಸರಕು ನೌಕೆ ಕತಾರ್‌ನಿಂದ ಗುಜರಾತ್ ಕಡೆಗೆ ಆಗಮಿಸಿದ್ದು, ಅಲ್ಲಿಂದ ಮಂಗಳೂರಿಗೆ ಬರಲಿದೆ.

ಮತ್ತೆರಡು ಕಚ್ಚಾತೈಲ ಹಡಗು

ಶೀಘ್ರದಲ್ಲೇ ಮತ್ತೆರಡು ಕಚ್ಚಾತೈಲ ಹೊತ್ತ ಹಡಗುಗಳು ಮಂಗಳೂರಿಗೆ ಆಗಮಿಸಲಿದ್ದು, ಅವು ತಲುಪುವ ದಿನಾಂಕ ಇನ್ನಷ್ಟೇ ಗೊತ್ತಾಗಬೇಕಿದೆ ಎಂದು ಎನ್‌ಎಂಪಿಎ ಅಧಿಕಾರಿಗಳು ತಿಳಿಸಿದ್ದಾರೆ. ಶನಿವಾರ ಆಗಮಿಸಿದ್ದ ಕಚ್ಚಾತೈಲ ಹಡಗು 'ಅಕ್ವಾಟೈಟಾನ್'ನಿಂದ ಕಚ್ಚಾತೈಲ ಅನ್‌ಲೋಡ್ ಮಾಡುವ ಕಾರ್ಯ ಸೋಮವಾರ ಬೆಳಗ್ಗೆ ಪೂರ್ಣಗೊಂಡಿದೆ. ಅನ್‌ಲೋಡಿಂಗ್ ವೇಗ ಗಂಟೆಗೆ 3900 ಮೆಟ್ರಿಕ್ ಟನ್ ಆಗಿದ್ದು, ಒಟ್ಟು 96,099 ಮೆಟ್ರಿಕ್ ಟನ್ ಅನ್‌ಲೋಡ್ ಮಾಡಲು 24 ಗಂಟೆಗೂ ಅಧಿಕ ಅವಧಿ ತಗುಲಿತ್ತು.

ಈ ನಡುವೆ ಭಾನುವಾರ ಆಗಮಿಸಿದ್ದ ಫಿಕ್ಸಿಸ್ ಪಯನೀರ್ ಹೆಸರಿನ ಎಲ್‌ಪಿಜಿ ಹಡಗಿನಿಂದ 16 ಸಾವಿರ ಮೆಟ್ರಿಕ್ ಟನ್‌ನಷ್ಟು ಅಡುಗೆ ಅನಿಲವನ್ನು ಅಂದೇ ಏಜಿಸ್ ಕಂಪೆನಿಗೆ ಅನ್‌ಲೋಡ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಲಿಯಪರಂಬ ಬೀಚ್‌ನಲ್ಲಿ ಮತದಾರರಿಗೆ ಜಾಗೃತಿ ಅಭಿಯಾನ

ಕಾಸರಗೋಡು: ಏಪ್ರಿಲ್ ತಿಂಗಳಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ 100ರಷ್ಟು ಮತದಾನ ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಸ್ವೀಪ್ ಆಶ್ರಯದಲ್ಲಿ ವಲಿಯಪರಂಬ ಬೀಚ್‌ನಲ್ಲಿ ಮತದಾರರು ಮತ್ತು ಮಕ್ಕಳ ಸಭೆಯನ್ನು ಹಾಗೂ ಜಾಗೃತಿ ಅಭಿಯಾನವನ್ನು ನಡೆಸಲಾಯಿತು.

ಚುನಾವಣಾ ಸಾರ್ವಜನಿಕ ವೀಕ್ಷಕ ವಿಜಯ್ ಬಾಲಕೃಷ್ಣ ವಾಘ್ಮಾರೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಮತದ ಮಹತ್ವದ ಬಗ್ಗೆ ಮಾತನಾಡಿದರು. ಮಕ್ಕಳು ಮತ್ತು ವಯಸ್ಕರು ಉತ್ಸಾಹದಿಂದ ಭಾಗವಹಿಸಿದ ಗಾಳಿಪಟ ಹಾರಿಸುವಿಕೆ ಹಾಗೂ ಜುಂಬಾ ನೃತ್ಯವು ವಲಿಯಪರಂಬ ಬೀಚ್ ಪ್ರದೇಶವನ್ನು ಮತದಾರರ ಜಾಗೃತಿ ವೇದಿಕೆಯನ್ನಾಗಿ ಪರಿವರ್ತಿಸಿತು.

ಚುನಾವಣಾ ಸಾರ್ವಜನಿಕ ವೀಕ್ಷಕ ಧ್ಯಾನೇಶ್ವರ ಕೊಂಡಿಬಾಹು ಕಿಲಾರಿ ಮುಖ್ಯ ಅತಿಥಿಯಾಗಿದ್ದರು. ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಅಧ್ಯಕ್ಷತೆ ವಹಿಸಿದ್ದರು. ಕಾಞಂಗಾಡು ಆರ್‌ಡಿಒ ಮನೋಜ್ ಕುಮಾರ್, ತಹಶೀಲ್ದಾರ್ ಪ್ರೇಮಾನಂದ್, ಅನಿಲ್ ಫಿಲಿಪ್, ಅಜಿತ್, ಜಾಬ್ ಕೆಫೆ ವ್ಯವಸ್ಥಾಪಕ ರಾಜೇಶ್, ದಿವ್ಯಾ, ಕೆ.ಪಿ.ಕವಿತಾ ಮುಂತಾದವರು ಮಾತನಾಡಿದರು.





ಚಿತ್ರಕಾರ ಪ್ರಮೋದ್ ಯಡವಳ ನೇತೃತ್ವದಲ್ಲಿ ಬಾಲಸಭಾ ಮತ್ತು ಕುಟುಂಬಶ್ರೀ ಕಾರ್ಯಕರ್ತರ ಮಕ್ಕಳು ವಿವಿಧ ಗಾಳಿಪಟಗಳನ್ನು ತಯಾರಿಸಿದರು. ಮತದಾನದ ಮಹತ್ವವನ್ನು ವಿವರಿಸುವ ಘೋಷಣೆಗಳನ್ನು ಹೊಂದಿರುವ ಗಾಳಿಪಟಗಳು ವಲಿಯಪರಂಬದ ಆಕಾಶದಲ್ಲಿ ವರ್ಣರಂಜಿತ ದೃಶ್ಯಗಳನ್ನು ಸೃಷ್ಟಿಸಿದವು. ನಂತರ ನಡೆದ ಜುಂಬಾ ನೃತ್ಯ ಕಾರ್ಯಕ್ರಮವು ಹೊಸ ಚೈತನ್ಯವನ್ನು ನೀಡಿತು.

ಕುಟುಂಬಶ್ರೀ ಸಿಡಿಎಸ್ ಅಧ್ಯಕ್ಷೆ ಟಿ.ಪಿ.ರೇಷ್ಮಾ ಸ್ವಾಗತಿಸಿ, ಬ್ಲಾಕ್ ಸಂಯೋಜಕ ಎ.ಜ್ಯೋತಿಷ್ ವಂದಿಸಿದರು. ವಿಧಾನಸಭಾ ಚುನಾವಣೆಯನ್ನು ಉತ್ಸವವನ್ನಾಗಿ ಪರಿವರ್ತಿಸಲು ಹಾಗೂ ಮತದಾರರನ್ನು ಪ್ರೋತ್ಸಾಹಿಸಲು ಈ ಕಾರ್ಯಕ್ರಮವು ವಿಶೇಷ ಹೆಗ್ಗಳಿಕೆಗೆ ಪಾತ್ರವಾಯಿತು.

ಕಾರ್ಯಾಚರಣೆಗೆ ಸಾಥ್ ನೀಡಿದ ಅಭಿಮನ್ಯು, ಮಹೇಂದ್ರ, ರಂಜನ್, ಭೀಮಾ, ಸುಗ್ರೀವ, ಹರ್ಷ

ಪೀಕಲಾಟ ನೀಡುತ್ತಿದ್ದ ಕಾಡಾನೆ ಕೊನೆಗೂ ಸೆರೆ

ಮಡಿಕೇರಿ: ವೀರಾಜಪೇಟೆ ತಾಲೂಕಿನ ಚೆಂಬೆಬೆಳ್ಳೂರು ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಕಾಡಾನೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಅಭಿಮನ್ಯು, ಮಹೇಂದ್ರ, ರಂಜನ್, ಭೀಮಾ, ಸುಗ್ರೀವ ಹಾಗೂ ಹರ್ಷನ ಸಹಕಾರದಿಂದ ಸತತ ಐದು ಗಂಟೆಗಳ ಕಾರ್ಯಾಚರಣೆಯ ಬಳಿಕ ಕಾಡಾನೆಯನ್ನು ಸೆರೆಹಿಡಿಯಲಾಯಿತು.

ಚೆಂಬೆಬೆಳ್ಳೂರು ಗ್ರಾಮದ ಕಾಫಿ ತೋಟವೊಂದರ ಸಮೀಪ ಕಂಡು ಬಂದ ಕಾಡಾನೆಗೆ ವನ್ಯಜೀವಿ ವೈದ್ಯಾಧಿಕಾರಿ ಡಾ.ರಮೇಶ್ ಹಾಗೂ ಕುಶಾಲನಗರ ಉಪ ಅರಣ್ಯಾಧಿಕಾರಿ ಶಾರ್ಪ್ ಶೂಟರ್ ಕನ್ನಂಡ ರಂಜನ್ ಅವರು ಬಂದೂಕಿನ ಮೂಲಕ ಅರವಳಿಕೆ ನೀಡಿದರು.

ಸೆರೆಯಾದ ಕಾಡಾನೆಯನ್ನು ಸಾಕಾನೆಗಳ ಸಹಕಾರದಿಂದ ಮತ್ತಿಗೋಡು ಆನೆ ಶಿಬಿರಕ್ಕೆ ಸ್ಥಳಾಂತರಿಸಲಾಯಿತು.





ಈ ಕಾಡಾನೆಯು ಚೆಂಬೆಬೆಳ್ಳೂರು, ದೇವಣಗೇರಿ, ಬೆಳ್ಳರಿಮಾಡು, ಕುಕ್ಲೂರು, ಪೊದಕೋಟೆ, ಐಮಂಗಲ, ಮೈತಾಡಿ, ಕದನೂರು, ಬಿಳುಗುಂದ, ಹಾಲುಗುಂದ ಹಾಗೂ ಅಮ್ಮತಿ ಸುತ್ತಮುತ್ತಲ ಗ್ರಾಮಗಳ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ದಾಂಧಲೆನಡೆಸಿ ಕೃಷಿ ಫಸಲು ನಷ್ಟಕ್ಕೆ ಕಾರಣವಾಗಿತ್ತು ಮತ್ತು ಸ್ಥಳೀಯರ ಮೇಲೆ ದಾಳಿಗೂ ಯತ್ನಿಸಿತ್ತು.

ಗ್ರಾಮಸ್ಥರ ಒತ್ತಾಯದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಕಾಡಾನೆ ಸೆರೆಗೆ ಸೂಚನೆ ನೀಡಿದ್ದರು.

ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಾಲ್ ವೃಷ್ಣಿ ಹಾಗೂ ವೀರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಯಿತು.

ಮಡಿಕೇರಿ ಡಿಸಿಎಫ್ ರಮೇಶ್, ಎಸಿಎಫ್ ಗೋಪಾಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ವೀರಾಜಪೇಟೆ ವಲಯ ಅರಣ್ಯ ಅಧಿಕಾರಿ ಶಿವರಾಮ್, ತಿತಿಮತಿ ವಲಯ ಅರಣ್ಯ ಅಧಿಕಾರಿ ಗಂಗಾಧರ್, ಡಾ.ಚೆಟ್ಟಿಯಪ್ಪ, ಅರಣ್ಯ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ನೂರಕ್ಕೂ ಅಧಿಕ ಮಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35⁰ 25⁰ | ಉಡುಪಿ 32⁰ 26⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 24, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2

ಬಂಟ್ವಾಳ ಅಗ್ನಿಶಾಮಕ ಠಾಣೆಗೆ ಬೇಕಿದೆ ಮತ್ತಷ್ಟು ಸಿಬ್ಬಂದಿಗಳು


ಪುಟ 5

ಸ್ಟ್ರಾಂಗ್ ರೂಮ್‌ಗಳಿಗೆ ಇಲೆಕ್ಟ್ರಾನಿಕ್ ಮತಯಂತ್ರಗಳ ವಿತರಣೆ

ತಾಳಿಪಡ್ಪು ಮೈದಾನದಿಂದ ಪಿಲಿಕುಂಜೆ ತನಕ ಚೆಂಡೆ ವಾದ್ಯಮೇಳಗಳ ಜೊತೆಗೆ ರೋಡ್ ಶೋ!



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಸೋಮವಾರ ಬೆಳಗ್ಗೆ ತಮ್ಮ ನಾಮಪತ್ರ ಸಲ್ಲಿಸಿದರು. ಇದಕ್ಕೂ ಮೊದಲು ತಾಳಿಪಡ್ಪು ಮೈದಾನದಿಂದ ಚೆಂಡೆ ವಾದ್ಯಮೇಳಗಳೊಂದಿಗೆ ತೆರೆದ ವಾಹನದಲ್ಲಿ ರೋಡ್ ಶೋ ಮೂಲಕ ಹೊರಟ ಬೃಹತ್ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಪಿಲಿಕುಂಜೆಯಲ್ಲಿ ಸಮಾಪ್ತಿಗೊಂಡಿತು.

ಅಡಿಕೆ ತೋಟಕ್ಕೆ ಬಂದ ಕಾಳಿಂಗ 'ಹುಟ್ಟೂರಿಗೆ'!



ಬೆಳ್ತಂಗಡಿ: ಅಡಿಕೆ ತೋಟದಲ್ಲಿದ್ದ ಬೃಹತ್ ಗಾತ್ರದ ಕಾಳಿಂಗ ಸರ್ಪವನ್ನು ಸುರಕ್ಷಿತವಾಗಿ ಸೆರೆ ಹಿಡಿದು, ಸಂರಕ್ಷಣೆ ಮಾಡಿ, ಕಾಡಿಗೆ ಬಿಟ್ಟ ಘಟನೆ ಇಲ್ಲಿನ ಅಳದಂಗಡಿಯಲ್ಲಿ ನಡೆದಿದೆ.

ಪಿಲ್ಯ ಸನಿಹದ ನಾವರ ಗ್ರಾಮದ ರಾಜಪಾದೆ ವೀರೇಂದ್ರ ಜೈನ್ ಎಂಬುವರ ತೋಟದಲ್ಲಿದ್ದ ಸುಮಾರು 13 ಅಡಿ ಉದ್ದದ ಬೃಹತ್ ಗಾತ್ರದ ಕಾಳಿಂಗ ಸರ್ಪ ಪತ್ತೆಯಾಗಿತ್ತು. ಇದನ್ನು ಗಮನಿಸಿದ ಮನೆಯವರು ತಕ್ಷಣ ಲಾಯಿಲದ ಉರಗ ಸಂರಕ್ಷಕ ಸ್ನೇಕ್ ಅಶೋಕ್ ಕುಮಾರ್ ಅವರಿಗೆ ಮಾಹಿತಿ ನೀಡಿದರು.

ತಕ್ಷಣ ಆಗಮಿಸಿದ ಸ್ನೇಕ್ ಅಶೋಕ್ ಕುಮಾರ್ ಸಾಹಸದಿಂದ ಕಾಳಿಂಗ ಸರ್ಪವನ್ನು ಸೆರೆ ಹಿಡಿದು, ಸಂರಕ್ಷಿಸಿ, ಸುರಕ್ಷಿತವಾಗಿ ಕಾಡಿಗೆ ಬಿಟ್ಟಿದ್ದಾರೆ.

ಚಾಲಕರ ಬೆವರಿಳಿಸುತ್ತಿದೆ 'ಕಲ್ಸಂಕದ ಸಿಗ್ನಲ್'
ಅವಸ್ಥೆ ಇಲ್ಲಿ ವ್ಯವಸ್ಥೆ!
ಕೇವಲ ಹೆಸರಿಗೆ ಸೀಮಿತವೇ ಫ್ರೀ ಲೆಫ್ಟ್?

ಉಡುಪಿ: ನಗರದ ಪ್ರಮುಖ ಜಂಕ್ಷನ್ ಎಂದು ಗುರುತಿಸಿಕೊಂಡ ಕಲ್ಸಂಕದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸುವ ದೃಷ್ಟಿಯಿಂದ ಅಳವಡಿಸಲಾದ ಸಿಗ್ನಲ್ ವ್ಯವಸ್ಥೆ ಈಗ ವಾಸ್ತವದಲ್ಲಿ ಇಲ್ಲಿ ಸಂಚಾರ ದಟ್ಟಣೆ ಉಲ್ಬಣಗೊಳ್ಳಲು ಕಾರಣವಾಗುತ್ತಿದೆ.

ಉಡುಪಿ-ಮಣಿಪಾಲ, ಕೃಷ್ಣಮಠ ಮತ್ತು ಗುಂಡಿಬೈಲು ರಸ್ತೆಗಳನ್ನು ಸಂಪರ್ಕಿಸುವ ಈ ಕೇಂದ್ರದಲ್ಲಿ 'ಫ್ರೀ ಲೆಫ್ಟ್' ವ್ಯವಸ್ಥೆ ಇದ್ದರೂ, ಅವೈಜ್ಞಾನಿಕ ಅನುಷ್ಠಾನದಿಂದ ಈಗ ವಾಹನ ಸವಾರರು ಪ್ರತೀ ಬಾರಿ 100 ಸೆಕೆಂಡ್‌ಗಳ ಕಾಲ ಇಲ್ಲಿ ಸಿಗ್ನಲ್‌ನಲ್ಲಿ ಕಾಯುವಂತಾಗಿದೆ.



ಸಂಗಮ ವಿಶೇಷ

ಫ್ರೀಲೆಫ್ಟ್ ಹೆಸರಿಗಷ್ಟೇ ಸೀಮಿತ!

ಗುಂಡಿಬೈಲು ಮತ್ತು ಕೃಷ್ಣಮಠದ ಕಡೆಗೆ ಸಂಚರಿಸುವ ವಾಹನಗಳಿಗೆ ಸುಗಮ ದಾರಿಯಾಗಲೆಂದು ಇಲ್ಲಿ ಫ್ರೀ ಲೆಫ್ಟ್ ನೀಡಲಾಗಿದೆ. ಆದರೆ, ಇಲ್ಲಿನ ಪರಿಸ್ಥಿತಿ ಮಾತ್ರ ಬೇರೆ. ಇಲ್ಲಿ ರಸ್ತೆಬದಿಯ ಟ್ರಾಫಿಕ್ ಸಿಗ್ನಲ್ ಕೆಂಪು ಬಣ್ಣಕ್ಕೆ ತಿರುಗಿದ ತಕ್ಷಣ ಖಾಸಗಿ ಬಸ್‌ಗಳು, ದ್ವಿಚಕ್ರ ವಾಹನಗಳು ಸೇರಿದಂತೆ ಎಲ್ಲಾ ವಾಹನ ಗಳು ಫ್ರೀ ಲೆಫ್ಟ್ ಹಾದಿಯನ್ನೇ ಅಡ್ಡಗಟ್ಟಿ ನಿಲ್ಲುತ್ತಿವೆ. ಇದರಿಂದಾಗಿ ಎಡಕ್ಕೆ ತಿರುಗಬೇಕಾದ ವಾಹನಗಳೂ ಸಿಗ್ನಲ್ ಮುಗಿಯುವವರೆಗೆ ಕಾಯಲೇಬೇಕಾದ ಅನಿವಾರ್ಯತೆ ಈಗ ದಿನನಿತ್ಯವೂ ಇಲ್ಲಿ ಎದುರಾಗಿದೆ.

ಫ್ರೀ ಲೆಫ್ಟ್ ಯಾಕೆ?!

ಫ್ರೀ ಲೆಫ್ಟ್ ಇರುವುದು ಸಂಚಾರ ಸುಗಮಗೊಳಿಸಲೋ ಅಥವಾ ವಾಹನಗಳನ್ನು ಸಾಲುಗಟ್ಟಿ ನಿಲ್ಲಿಸಲೋ? ಎಂದು ಈಗ ಇಲ್ಲಿನ ಸಾರ್ವಜನಿಕರು ಪ್ರಶ್ನಿಸುವಂತಾಗಿದೆ.

ಸಿಂಡಿಕೇಟ್ ಸರ್ಕಲ್ ಬಳಿಯೂ ಇದೇ ವ್ಯಥೆ

ಇದೇ ಪರಿಸ್ಥಿತಿ ಮಣಿಪಾಲದ ಸಿಂಡಿಕೇಟ್ ಸರ್ಕಲ್ ಬಳಿಯೂ ಇದೆ. ಇಲ್ಲಿ ಡಾ. ವಿ.ಎಸ್. ಆಚಾರ್ಯ ರಸ್ತೆಗೆ ತೆರಳುವ ಫ್ರೀ ಲೆಫ್ ಹಾದಿ ಸವಾರರು ಆಕ್ರಮಿಸಿಕೊಳ್ಳುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಅಂಬಾಗಿಲು, ಬಲಾಯಿಪಾದೆ ಜಂಕ್ಷನ್‌ಗಳಲ್ಲೂ ಸಿಗ್ನಲ್ ಅಳವಡಿಸಲು ಸಿದ್ಧತೆ ನಡೆದಿದೆ. ಆದರೆ, ಕಲ್ಸಂಕ, ಮಣಿಪಾಲದ ಮಾದರಿ ಇಲ್ಲೂ ಅವ್ಯವಸ್ಥೆ ಮುಂದುವರಿದರೆ, ಸಿಗ್ನಲ್‌ಗಳು ಸಂಚಾರ ದಟ್ಟಣೆ ನಿವಾರಿಸುವ ಬದಲು ಸಮಸ್ಯೆ ಮತ್ತಷ್ಟು ಜಟಿಲಗೊಳಿಸಲಿವೆ ಎಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಪ್ಲಾಸ್ಟಿಕ್ ಚೀಲಗಳಲ್ಲಿ ನಿಗೂಢ ಬಂಡಲ್
ರಸ್ತೆ ಬದಿ ಆಸ್ಪತ್ರೆ ತ್ಯಾಜ್ಯ: ಪಂಚಾಯತ್ 'ಗರಂ'!!
ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಎಚ್ಚರಿಕೆ



ಕುಂಬಳೆ: ಇತಿಹಾಸ ಪ್ರಸಿದ್ಧ ಅನಂತಪುರ ದೇವಸ್ಥಾನದ ಬಳಿ ರಸ್ತೆ ಪಕ್ಕದಲ್ಲಿ ಆಸ್ಪತ್ರೆ ತ್ಯಾಜ್ಯ ಸುರಿಯುತ್ತಿರುವುದು ಕಂಡುಬಂದಿದ್ದು, ಈ ಘಟನೆ ಈ ಪ್ರದೇಶದಲ್ಲಿ ಭಾರೀ ಆಕ್ರೋಶ, ಪ್ರತಿಭಟನೆಗೆ ಕಾರಣವಾಗಿದೆ.

ಪವಿತ್ರ ಸ್ಥಳದಲ್ಲಿ ಆಸ್ಪತ್ರೆಯ ತ್ಯಾಜ್ಯ

ಪಯ್ಯನ್ನೂರಿನಲ್ಲಿರುವ ಬಿಕೆಎಂ ಆಸ್ಪತ್ರೆ ತ್ಯಾಜ್ಯವನ್ನು ಇಲ್ಲಿನ ಪವಿತ್ರ ಸ್ಥಳದ ಬಳಿಯಲ್ಲಿ ಸುರಿಯಲಾಗಿದೆ. ಜನರ ಆರೋಗ್ಯಕ್ಕೆ ಅಪಾಯ ಉಂಟು ಮಾಡುವ, ಇಲ್ಲಿನ ಪರಿಸರ ಮಾಲಿನ್ಯ ಉಂಟು ಮಾಡುವ ಈ ಬೆಳವಣಿಗೆಯ ಬಗ್ಗೆ ಪುತ್ತಿಗೆ ಪಂಚಾಯತ್ ಅಧಿಕಾರಿಗಳು ಕಠಿಣ ಕ್ರಮ ಕೈಗೊಂಡಿದ್ದಾರೆ. »» ಪುಟ 6

ಕಠಿಣ ಕ್ರಮ

ಸಾರ್ವಜನಿಕ ಮತ್ತು ಪವಿತ್ರ ಸ್ಥಳಗಳ ಬಳಿ ಆಸ್ಪತ್ರೆ ತ್ಯಾಜ್ಯವನ್ನು ಸುರಿಯುವುದನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ತ್ಯಾಜ್ಯ ಸುರಿದವರಿಂದ ದಂಡ ಸಂಗ್ರಹಿಸಲು ಸೂಚನೆಗಳನ್ನು ನೀಡಲಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಬಲವಾದ ಮೇಲ್ವಿಚಾರಣೆಯನ್ನು ಜಾರಿಗೆ ತರಲಾಗುವುದು.

● ಇ.ಕೆ. ಮುಹಮ್ಮದ್ ಕುಂಞ, ಪಂಚಾಯತ್ ಉಪಾಧ್ಯಕ್ಷರು.

ಸುತ್ತ ಮುತ್ತ

ಕಾರ್ಕಳದಲ್ಲಿ ವರುಣನ ಆರ್ಭಟ: ಗುಡುಗು ಸಹಿತ ಭಾರೀ ಮಳೆಗೆ ಜನ ಹೈರಾಣ

ಉಡುಪಿ: ತಾಲೂಕಿನಾದ್ಯಂತ ಸೋಮವಾರ ಸಂಜೆ ದಿಢೀರ್ ಗುಡುಗು ಸಹಿತ ಭಾರೀ ಮಳೆ ಸುರಿದಿದ್ದು ಕಳೆದ ಕೆಲವು ದಿನಗಳಿಂದ ಸುಡುತ್ತಿದ್ದ ಬಿಸಿಲಿನ ಬೇಗೆಯಿಂದ ಕಂಗಾಲಾಗಿದ್ದ ಜನರಿಗೆ ತಂಪು ನೀಡಿದೆ. ಮಳೆಯ ಜೊತೆಗೆ ಗುಡುಗು ಮತ್ತು ಮಿಂಚಿನ ಆರ್ಭಟವೂ ಕಂಡುಬಂದಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿತ್ತು.

ಭಾರೀ ಗುಡುಗು ಮತ್ತು ಮಿಂಚಿನ ಕಾರಣದಿಂದಾಗಿ ತಾಲೂಕಿನ ಅಜೆಕಾರು, ಮುನಿಯಾಲು ಮತ್ತು ಬಜಗೋಳಿ ಸೇರಿದಂತೆ ಹಲವು ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಂಪರ್ಕದಲ್ಲಿ ಭಾರೀ ವ್ಯತ್ಯಯ ಉಂಟಾಗಿತ್ತು. ದಿಢೀರ್ ಮಳೆಯಿಂದಾಗಿ ಪಟ್ಟಣದ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಸ್ವಲ್ಪ ಮಟ್ಟಿನ ಅಡ್ಡಿಯುಂಟಾಗಿತ್ತು. ಒಣಗಲು ಹಾಕಿದ್ದ ಅಡಿಕೆ ಹಾಗೂ ಇತರೆ ಕೃಷಿ ಉತ್ಪನ್ನಗಳಿಗೆ ತೊಂದರೆಯಾಗಿತ್ತು. ಕಳೆದ ಕೆಲವು ದಿನಗಳಿಂದ ವಿಪರೀತ ಎಂಬಂತೆ ಏರಿಕೆಯಾಗಿದ್ದ ವಾತಾವರಣದ ತಾಪಕ್ಕೆ ಸೋಮವಾರ ಸುರಿದ ಮಳೆ ತುಸು ತಂಪೆರೆದು ಜನತೆಗೆ ನೆಮ್ಮದಿ ನೀಡಿತು.

ಕರಾವಳಿ ಭಾಗದಲ್ಲಿ ಮುಂದಿನ ಮೂರು ದಿನ ಮಳೆಯ ಸಾಧ್ಯತೆ

ಮಂಗಳೂರು/ಉಡುಪಿ: ದಕ್ಷಿಣ ಕನ್ನಡ, ಉಡುಪಿ ಸಹಿತ ಕರಾವಳಿ ಭಾಗದಲ್ಲಿ ಮುಂದಿನ ಮೂರು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯಂತೆ, ಕಾರ್ಕಳ ಹಾಗೂ ಉಡುಪಿ ಜಿಲ್ಲೆಯಾದ್ಯಂತ ಮುಂದಿನ ಮೂರು ದಿನಗಳ ಕಾಲ (ಮಾ.24, 25, 26) ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಮಳೆಯ ಸಂದರ್ಭದಲ್ಲಿ ಗಾಳಿಯ ವೇಗ ಹೆಚ್ಚಿರಲಿದೆ.

ಗ್ಯಾಸ್ ಸ್ಟೌ ಜಾಗಕ್ಕೆ ಈಗ ಸೌದೆ ಒಲೆಯ ಎಂಟ್ರಿ!
ಹಾರಂಗಿ ಪ್ರವಾಸಿಗರಿಗೆ 'ಪಾರಂಪರಿಕ ಶೈಲಿ ಅಡುಗೆ' ಸವಿಯುವ ಭಾಗ್ಯ

ಕುಶಾಲನಗರ: ಕಳೆದ ಒಂದು ವಾರದಿಂದ ಕಾಡುತ್ತಿರುವ ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್‌ನ ಕೊರತೆಯಿಂದಾಗಿ ಕೊಡಿಗೆ – ಕೂಡುಮಂಗಳೂರು ಮುಖ್ಯ ರಸ್ತೆ ಹಲವು ಹೋಟೆಲ್ ಬಂದ್ ಆಗಿವೆ.

ತಿರುಮಲದಲ್ಲಿ ಒಲೆ ಅಡುಗೆ

ಈ ನಡುವೆ ಇಲ್ಲಿನ ಕೊಡಿಗೆ ಶ್ರೀ ಉದ್ಭವ ಸುಬ್ರಹ್ಮಣ್ಯಸ್ವಾಮಿ ದೇವಾಲಯ ತೆರಳುವ ಮುಖ್ಯ ರಸ್ತೆ ಮುಂಭಾಗದ 'ತಿರುಮಲ' ಹೊಟೇಲ್‌ನ ಮಾಲಕ ಗೋವಿಂದ್, ನೂತನ ಸೌದೆ ಒಲೆ ನಿರ್ಮಿಸಿ ಅಡುಗೆ ತಯಾರಿಸುತ್ತಿರುವುದು ಕಂಡುಬಂದಿದೆ.

ಸಂಕಷ್ಟದಲ್ಲಿದ್ದಾರೆ ಪ್ರವಾಸಿಗರು

ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಾದ ಹಾರಂಗಿ ಮತ್ತು ಕಾವೇರಿ ನಿಸರ್ಗಧಾಮದ ವೀಕ್ಷಣೆಗೆ ಬರುವ ಪ್ರವಾಸಿಗರು ಹೆಚ್ಚಾಗಿ ಕೊಡಿಗೆ –ಕೂಡುಮಂಗಳೂರು ಮುಖ್ಯ ರಸ್ತೆಯಲ್ಲಿರುವ ಹೊಟೇಲ್‌ಗಳಲ್ಲಿ ತಿಂಡಿ, ಊಟ ಸವಿಯುತ್ತಿದ್ದರು. ಇದೀಗ ಅಡುಗೆ ಅನಿಲದ ಪೂರೈಕೆಯಲ್ಲಿ ಆಗಿರುವ ಕೊರತೆಯಿಂದ ಬಹುತೇಕ ಹೊಟೇಲ್‌ಗಳು ಮುಚ್ಚಿದ ಪರಿಣಾಮ ಪ್ರವಾಸಿಗರು ಪರದಾಡುವ ಪ್ರಸಂಗ ಎದುರಾಗಿದೆ.



ಪಾರಂಪರಿಕ ಶೈಲಿ ಒಲೆ ಅಡುಗೆ

ಈ ನಡುವೆ 'ತಿರುಮಲ' ಹೊಟೇಲ್‌ನಲ್ಲಿ ಒಲೆ ಅಡುಗೆ ಮೂಲಕ ಗ್ರಾಹಕರಿಗೆ ಆಹಾರ ಪೂರೈಸಲಾಗುತ್ತಿದ್ದು, ಇದು ಹಿಂದಿನ ಪಾರಂಪರಿಕ ಶೈಲಿಯ ಒಲೆ ಅಡುಗೆಯನ್ನು ಸವಿಯುವ ಅವಕಾಶವನ್ನು ಪ್ರವಾಸಿಗರಿಗೆ ಒದಗಿಸಿದೆ!

ಹೋಟೆಲ್‌ಗಳಿಗೆ ಬಂದ್ ಆಗುವ ಭೀತಿ

ಮಡಿಕೇರಿ, ಕುಶಾಲನಗರ ಸೇರಿದಂತೆ ಹಲವೆಡೆ ಹೋಟೆಲ್‌ಗಳಲ್ಲಿ ಸೀಮಿತ ಖಾದ್ಯ ತಯಾರಿಸಲು ನಿರ್ಧರಿಸಲಾಗಿದೆ. ಸಿಲಿಂಡರ್ ನಿಗದಿತ ಸಂಖ್ಯೆಯಲ್ಲಿ ಪೂರೈಕೆಯಾಗದೇ ಹೋದಲ್ಲಿ ಶೇ.30ರಷ್ಟು ಹೋಟೇಲ್ ವ್ಯಾಪಾರ ಸ್ಥಗಿತಗೊಳಿಸುವ ಅನಿವಾರ್ಯತೆ ಇದೆ ಎಂದು ಕೊಡಗು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕಾರ್ಯಪ್ಪ ತಿಳಿಸಿದ್ದಾರೆ.

ಮರ್ದಾಳ ಬ್ರಾಂತಿಕಟ್ಟೆ ಬಳಿ ಕಾರು ಪಲ್ಟಿ: ಮೂವರಿಗೆ ಗಂಭೀರ ಗಾಯ
ಸುಬ್ರಹ್ಮಣ್ಯ ಕಡೆಗೆ ತೆರಳುತ್ತಿದ್ದ ವೇಳೆ ಅವಘಡ

ಕಡಬ: ಧರ್ಮಸ್ಥಳ–ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿ ಮರ್ದಾಳ ಬ್ರಾಂತಿಕಟ್ಟೆ ಐತೂರು ಪಂಚಾಯತ್ ಕಚೇರಿ ಬಳಿಯಲ್ಲಿ ರಸ್ತೆ ಅಪಘಾತ ಸಂಭವಿಸಿ ಮೂವರು ಗಂಭೀರ ಗಾಯಗೊಂಡ ಘಟನೆ ಸೋಮವಾರ ಸಂಜೆ ಸಂಭವಿಸಿದೆ.

ಮಂಜುನಾಥ (40), ಪ್ರಮೋದ್ (17) ಮತ್ತು ತುಳಸಿ (60) ಗಂಭೀರ ಗಾಯಗೊಂಡಿದ್ದು ಪ್ರಿಯಾ (40), ಏತಲ (39), ಚಾಲಕ ಪ್ರೇಮಣ್ಣ (38), ಧನಲಕ್ಷ್ಮಿ (35), ಸಂಜನಾ (25) ಹಾಗೂ ಸಮರ್ಥ (38) ಅವರಿಗೆ ಘಟನೆಯಲ್ಲಿ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳು ಶಿವಮೊಗ್ಗ ಜಿಲ್ಲೆಯ ಸಾಗರ ಮೂಲದವರು ಎನ್ನಲಾಗಿದೆ. ಧರ್ಮಸ್ಥಳದಿಂದ ಕುಕ್ಕೆ ಸುಬ್ರಹ್ಮಣ್ಯ ಕಡೆಗೆ ತೆರಳುತ್ತಿದ್ದ ಇಕೊ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ಚರಂಡಿಗೆ ಪಲ್ಟಿಯಾಗಿದೆ. ಕಾರಿನಲ್ಲಿ ಒಂಬತ್ತು ಮಂದಿ ಪ್ರಯಾಣಿಸುತ್ತಿದ್ದರು. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ಮೂರನೇ ವಾರಕ್ಕೆ ಕಾಲಿಟ್ಟ ಎಲ್‌ಪಿಜಿ ಪೂರೈಕೆ ವ್ಯತ್ಯಯ | ಕುಂದಾಪುರ ಭಾಗದಲ್ಲೂ ಆಹಾರೋದ್ಯಮ ಕಂಗಾಲು
ಹೊಟೇಲ್‌ಗಳಿಗೆ ಕಾರ್ಮಿಕ, ಗ್ರಾಹಕರನ್ನು ವಾಪಸ್ ಗಳಿಸುವುದೇ ಚಿಂತೆ!

ಕುಂದಾಪುರ: ಎಲ್‌ಪಿಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯ ಈಗ ಕರಾವಳಿ ಭಾಗದಲ್ಲಿ ಹೊಟೇಲ್ ಉದ್ಯಮಕ್ಕೆ ಭಾರೀ ಹೊಡೆತ ನೀಡಿದೆ. ಸಿಲಿಂಡರ್ ಪೂರೈಕೆಯಲ್ಲಿನ ಅಡಚಣೆ ಬರೋಬ್ಬರಿ ಮೂರನೇ ವಾರ ತಲುಪಿದ್ದು, ಪರಿಣಾಮ ಇದೀಗ ಎಲ್ಲೆಡೆ ಕ್ಯಾಂಟೀನ್, ಸಣ್ಣ ಪುಟ್ಟ ಹೊಟೇಲ್ ಒಂದೊಂದಾಗಿ ಬಾಗಿಲು ಹಾಕುತ್ತಿವೆ.

ಸೌದೆ ಒಲೆಯಲ್ಲಿ ತಿಂಡಿ ತಯಾರಿ

ಹೊಟೇಲ್‌ಗಳನ್ನು ಮುಚ್ಚುದಕ್ಕಿಂತ ಹೆಚ್ಚಾಗಿ ಕಾರ್ಮಿಕರು, ಗ್ರಾಹಕರನ್ನು ಮತ್ತೆ ಉದ್ಯಮಕ್ಕೆ ವಾಪಸ್ ಕರೆತರುವುದು ಮಾಲಿಕರಿಗೆ ಈಗ ದೊಡ್ಡ ಚಿಂತೆಯಾಗಿದೆ. ಕೊಲ್ಲೂರು ಸಹಿತ ಉಡುಪಿ ಜಿಲ್ಲೆಯ ಹಲವು ಪ್ರಸಿದ್ಧ ಯಾತ್ರಾ ಪರಿಸರ ದಲ್ಲಿ ಹೊಟೇಲ್, ಕ್ಯಾಂಟೀನ್ ಮುಚ್ಚುವ ಹಂತ ತಲುಪಿವೆ. ಪ್ರಸಿದ್ಧ ಹೊಟೇಲ್‌ಗಳಲ್ಲಿ ಸೌದೆ ಒಲೆಯಲ್ಲಿ ತಿಂಡಿ ತಯಾರಿಸಿ ಗ್ರಾಹಕರಿಗೆ ಒದಗಿಸುವ ಸಂದರ್ಭ ಎದುರಾಗಿದೆ.



ಸಂಗಮ ವಿಶೇಷ

ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೂ ಸಂಕಷ್ಟ

ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಮೀನು ಮತ್ತು ಮಾಂಸದ ಖಾದ್ಯ ಲಭ್ಯವಿಲ್ಲ, ಬಿರಿಯಾನಿ ಮೊದಲಾದ ಖಾದ್ಯ ಲಭಿಸುತ್ತಿದೆ. ಗೂಡಂಗಡಿ, ಆಮ್ಲೆಟ್, ಮಿರ್ಚಿ, ಬೋಂಡಾ, ಪಾನಿಪುರಿ, ಗೋಬಿ ಮಂಚೂರಿ ಖಾದ್ಯ ತಯಾರಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. »» ಪುಟ 6

ಬಾಗಿಲೆಳೆದುಕೊಳ್ಳುತ್ತಿವೆ 'ಚೈನೀಸ್' ಫಾಸ್ಟ್ ಫುಡ್‌ಗಳು

ಎಲ್‌ಪಿಜಿ ಸಿಲಿಂಡರ್ ಪೂರೈಕೆ ಅಭಾವದಿಂದಾಗಿ ನಗರಗಳಲ್ಲಿ ಸಂಜೆ ವೇಳೆ ಕಾರ್ಯಾಚರಿಸುತ್ತಿದ್ದ ಬಹುತೇಕ ಚೈನೀಸ್ ಫಾಸ್ ಫುಡ್ (ಮೊಬೈಲ್ ಕ್ಯಾಂಟೀನ್) ಮುಚ್ಚಿವೆ. ಇದು ವರ್ತಕರಿಗೆ ಮಾತ್ರವಲ್ಲದೆ ಅಗ್ಗದಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ವಲಸೆ ಕಾರ್ಮಿಕರಿಗೆ ಹೊಡೆತ ನೀಡಿದೆ.

ಮುಚ್ಚುವುದು ಅನಿವಾರ್ಯ

ವಾಣಿಜ್ಯ ಗ್ಯಾಸ್ ಸಿಲಿಂಡರ್ ಪೂರೈಕೆಯಿಲ್ಲದೆ ಮೂರು ವಾರ ಕಳೆದಿದೆ. ಹೊಟೇಲ್‌ಗಳಲ್ಲಿ ಸೌದೆ ಒಲೆ ಮೂಲಕ ಎಲ್ಲ ಬಗೆಯ ತಿಂಡಿ ತಯಾರಿಸುವುದು ಸಾಧ್ಯವಿಲ್ಲ, ಹೊಟೇಲ್ ಕೆಲಸದವರು ಕೂಡಾ ನಿಲ್ಲುವುದಿಲ್ಲ, ಗ್ಯಾಸ್ ಸಿಲಿಂಡರ್ ಅಭಾವ ಪರಿಸ್ಥಿತಿ ಹೀಗೆ ಮುಂದುವರಿದರೆ ಹೊಟೇಲ್ ಮುಚ್ಚುವುದು ಅನಿವಾರ್ಯ

● ಸುರೇಂದ್ರ, ಹೊಟೇಲ್ ಉದ್ಯಮಿ, ಕುಂದಾಪುರ

ಸಮಸ್ಯೆ ವ್ಯವಹಾರಕ್ಕೆ ಹೊಡೆತ ನೀಡಲಿದೆ

ನಿರ್ದಿಷ್ಟ ಆಹಾರ ಖಾದ್ಯಗಳನ್ನು ಕೆಲ ದಿನಗಳಿಂದ ಸೌದೆ ಒಲೆಯಲ್ಲಿ ತಯಾರಿಸಲಾಗುತ್ತಿದೆ. ಅನಿಲ ಸಮಸ್ಯೆ ಹೀಗೆಯೇ ಮುಂದುವರಿದರೆ ವ್ಯವಹಾರಕ್ಕೆ ಹೊಡೆತ ಬೀಳಲಿದೆ. ಹೊಟೇಲ್ ಮುಚ್ಚುವುದು ದೊಡ್ಡ ವಿಚಾರವಲ್ಲ, ಇದರಿಂದ ಕೆಲಸಗಾರರನ್ನು ಮತ್ತೆ ತರುವುದು ಕಷ್ಟ, ಗ್ರಾಹಕರು ದೂರವಾಗುತ್ತಾರೆ.

● ಜನಾರ್ದನ ಪೂಜಾರಿ, ಹೊಟೇಲ್ ಮಾಲೀಕರು, ಗಂಗೊಳ್ಳಿ

ಸುತ್ತ ಮುತ್ತ

ಮಾ.25ಕ್ಕೆ ಬಂಟ್ವಾಳದಲ್ಲಿ ಶ್ರೀರಾಮ ನವಮಿ ಉತ್ಸವ

ಬಂಟ್ವಾಳ: ಇಲ್ಲಿನ ಬೈಪಾಸ್ ನಲ್ಲಿರುವ ರಾಮನಗರ ಶ್ರೀ ರಾಮ ಭಜನಾ ಮಂದಿರದಲ್ಲಿ ಶ್ರೀ ರಾಮ ನವಮಿ ಉತ್ಸವದ ನೂರು ವರುಷದ ಸಂಭ್ರಮದ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮಾ.25ಕ್ಕೆ ಸಂಜೆ 6.15ರಿಂದ ಶ್ರೀ ಕಟೀಲು ಮೇಳದವರಿಂದ ಯಕ್ಷಗಾನ ಬಯಲಾಟ ಶ್ರೀ ದೇವಿ ಮಹಾತ್ಮೆ ನಡೆಯಲಿದೆ. ಮಾ. 26ರ ಸೂರ್ಯೋದಯದಿಂದ ಮಾ.27ಕ್ಕೆ ಸೂರ್ಯೋದಯದವರೆಗೆ ಶ್ರೀ ರಾಮನವಮಿಯ ಏಕಹ ಭಜನಾ ಸಂಕೀರ್ತನೆ ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಉಡುಪಿ ಪೇಜಾವರ ಅಧೋಕ್ಷಜ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು ಭಜನಾ ಮಂದಿರಕ್ಕೆ ಚಿತ್ತೈಸಿ ಆಶೀರ್ವಚನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏ.3, 4: ಕಡಬದಲ್ಲಿ ಏಕಾಹ ಭಜನಾ ಮಹೋತ್ಸವ

ಕಡಬ: ಕಡಬದ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ ಏಕಾಹ ಭಜನಾ ಮಹೋತ್ಸವ ಸಮಿತಿಯ ವತಿಯಿಂದ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಹಾಗೂ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಸಹಕಾರದೊಂದಿಗೆ 65ನೇ ವರ್ಷದ ಏಕಾಹ ಭಜನಾ ಮಹೋತ್ಸವವು ಏ.3 ಹಾಗೂ 4ರಂದು ನೆರವೇರಲಿದೆ. 3ರಂದು ಬೆಳಗ್ಗೆ ಗಂಟೆ 6.26ಕ್ಕೆ ದೀಪಾರಾಧನೆ ನಡೆದು ಭಜನೆ ಪ್ರಾರಂಭವಾಗಲಿದೆ. ಬಳಿಕ ಗಣಪತಿ ಹೋಮ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ ದುರ್ಗಾಪೂಜೆ, ಅನ್ನ ಸಂತರ್ಪಣೆ, 'ಕಡಬ ಬೆಡಿ' (ಸಿಡಿಮದ್ದು) ಪ್ರದರ್ಶನ ನಡೆಯಲಿದೆ. ರಾತ್ರಿ ಗಂಟೆ 8.30ರಿಂದ ಶ್ರೀಕಂಠ ಸ್ವಾಮಿ ಮತ್ತು ಶ್ರೀ ಮಹಾಗಣಪತಿ ದೇವಳಕ್ಕೆ ಭಜನಾ ಮೆರವಣಿಗೆ, ಶ್ರೀ ಶ್ರೀಕಂಠ ಸ್ವಾಮಿ ಮತ್ತು ಶ್ರೀ ಮಹಾಗಣಪತಿ ದೇವಳದಿಂದ ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಯವರನ್ನು ಉಲ್ಪೆ ಮೆರವಣಿಗೆಯಲ್ಲಿ ಕೀಲು ಕುದುರೆ ಹಾಗೂ ಚೆಂಡೆ ಮೇಳದೊಂದಿಗೆ ವಿಜೃಂಭಣೆಯಿಂದ ಬರಮಾಡಿಕೊಳ್ಳುವುದು, ಬಳಿಕ ಶ್ರೀ ದೇವರಿಗೆ ಉಲ್ಪೆ ಸಮರ್ಪಣೆ ನಡೆದು ಶ್ರೀಗಳಿಂದ ಆಶೀರ್ವಚನ ನಡೆಯಲಿದೆ. ಅನಂತರ ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ. 4ರಂದು ಬೆಳಗ್ಗೆ ಸೂರ್ಯೋದಯಕ್ಕೆ ಭಜನಾ ಮಂಗಲ ನಡೆದು, ನವಕ ಶುದ್ಧಿ ಕಲಶ ನಡೆಯಲಿದೆ ಎಂದು ಏಕಾಹ ಭಜನಾ ಮಹೋತ್ಸವ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಾ. 27ರಂದು ಭಜನಾ ಮಂಗಲೋತ್ಸವ

ಮುಲ್ಕಿ: ಅಂಗರಗುಡ್ಡೆ ರಾಮನಗರ ಶ್ರೀ ರಾಮ ಭಜನಾ ಮಂಡಳಿಯ 39 ನೇ ವರ್ಷದ ಭಜನಾ ಮಂಗಲೋತ್ಸವ ಹಾಗೂ ಶ್ರೀ ರಾಮ ನವಮಿ ಕಾರ್ಯಕ್ರಮ ನಡೆಯಲಿದೆ. ಮಾ.27ಕ್ಕೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮಾ.27 ಶುಕ್ರವಾರ ಬೆಳಿಗ್ಗೆ ಗಂಟೆ 6ರಿಂದ ಮಧ್ಯಾಹ್ನ ಗಂಟೆ 12.30ರವರೆಗೆ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ,ಮಧ್ಯಾಹ್ನ 12.30ಕ್ಕೆ ರಾಮ ನವಮಿ ಪರ್ವಕಾಲದಲ್ಲಿ ಮಹಾಪೂಜೆ, ಮಧ್ಯಾಹ್ನ ಗಂಟೆ 1ರಿಂದ ಮಹಾ ಅನ್ನಸಂತರ್ಪಣೆ, ಅಂಗರಗುಡ್ಡೆ ಶ್ರೀ ರಾಮ ಕುಣಿತ ಭಜನಾ ತಂಡದಿಂದ 1.30ರಿಂದ ಕುಣಿತ ಭಜನೆ ಸಂಜೆ ಗಂಟೆ 5ಕ್ಕೆ ಮಹಾ ಮಂಗಲೋತ್ಸವ,ರಾತ್ರಿ ಗಂಟೆ 8.00ರಿಂದ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 7 ಗಂಟೆಗೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಲ್ಕಿ-ಮೂಡಬಿದ್ರೆ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ , ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ಕಿನ್ನಿಗೋಳಿ ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ ಕಿನ್ನಿಗೋಳಿ ವೀರಮಾರುತಿ ವ್ಯಾಯಾಮ ಶಾಲೆಯ ಅಧ್ಯಕ್ಷ ಈಶ್ವರ ಕಟೀಲು, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ ದ.ಕ .ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕಸ್ತೂರಿ ಪಂಜ, ಮಾಜಿ ತಾ. ಪಂ. ಸದಸ್ಯ ದಿವಾಕರ ಕರ್ಕೇರಾ,ಉದ್ಯಮಿಗಳಾದ ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ಓಂಕಾರ ಶೆಟ್ಟಿ ಬರ್ಕೆ ಪುನರೂರು,ಅಂಗರಗುಡ್ಡೆ ಹಿಂದೂ ರುದ್ರಭೂಮಿ ಸಮಿತಿ ಅಧ್ಯಕ್ಷ ಕೃಷ್ಣ ಶೆಟ್ಟಿಗಾರ್ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಗೋಪಾಲಕೃಷ್ಣ ಪುನರೂರು, ಶ್ರೀ ರಾಮ ಭಜನಾ ಮಂಡಳಿ ಮುಂಬೈ ಸಮಿತಿಯ ಉಪಾಧ್ಯಕ್ಷ ಗಣೇಶ್ ಶೆಟ್ಟಿಗಾರ್, ಅಂಗರಗುಡ್ಡೆ ರಾಮನಗರ ರಾಮ ಭಜನಾ ಮಂಡಳಿ ಸಂಪತ್ ಕುಮಾರ್, ಪಜನಾ ಮಂದಿರದ ಅರ್ಚಕ ಪುರುಷೋತ್ತಮದಾಸ್ ಮಹಿಳಾ ಮಂಡಳಿ ಅಧ್ಯಕ್ಷೆ ಅನಿತ ಶೆಟ್ಟಿ ಉಪಸ್ಥಿತರಿರುವರು ಎಂದು ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮುಂಬೈ ಸಮಿತಿಯ ಶ್ರೀ ರಾಮ ಭಜನಾ ಮಂಡಳಿ ಪ್ರಕಟಣೆ ತಿಳಿಸಿದೆ.



ಸಸಿಹಿತ್ಲು ಶ್ರೀ ಸಾರಂತಾಯ ಗರೋಡಿ ಉಳ್ಳಾಯ ದೈವಸ್ಥಾನದ ಕಾಲಾವಧಿ ನೇಮದಲ್ಲಿ ಸೋಮವಾರ ಒಡ್ಯಂತಾಯ ದೈವದ ನೇಮ ನಡೆಯಿತು. ಈ ಸಂದರ್ಭ ದೈವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

ಹೆಚ್ಚುತ್ತಿದೆ ಅಲ್ಲಲ್ಲಿ ಅವಘಡಗಳು | ಪ್ರಸ್ತಕ ವರ್ಷ 2 ತಿಂಗಳಲ್ಲಿ 100ಕ್ಕೂ ಅಧಿಕ ಕರೆಗಳ ಸ್ವೀಕಾರ

ಬಂಟ್ವಾಳ ಅಗ್ನಿಶಾಮಕ ಠಾಣೆಗೆ ಬೇಕಿದೆ ಮತ್ತಷ್ಟು ಸಿಬ್ಬಂದಿಗಳು

ದಿಗಂತ ವಿಶೇಷ





ಬಂಟ್ವಾಳ: ಕರಾವಳಿ ಜಿಲ್ಲೆಯಲ್ಲಿ ಬೇಸಿಗೆಯ ಸುಡು ಬಿಸಿಲು ಹೆಚ್ಚಾಗತೊಡಗಿದೆ. ಮಾರ್ಚ್ ತಿಂಗಳಲ್ಲಿ ಬಿಸಿಲ ಉರಿ ವಿಪರೀತವಾಗಿರಲಿದೆ ಎಂದು ಹವಾಮಾನ ಇಲಾಖೆ ಈಗಾಗಲೇ ಎಚ್ಚರಿಕೆ ನೀಡಿದ್ದು, ಈ ನಡುವೆ ಅಲ್ಲಲ್ಲಿ ಬೆಂಕಿ ಆಕಸ್ಮಿಕ, ಕಾಡ್ಗಿಚ್ಚು ಘಟನೆಗಳ ಸುದ್ದಿಯು ಕೇಳುತ್ತಲೇ ಇದೆ. ಇಂತಹ ಅವಘಡಗಳ ಸಂದರ್ಭದಲ್ಲಿ ಜನ ತಟ್ಟನೆ ಕರೆ ಮಾಡುವುದು ಅಗ್ನಿಶಾಮಕ ಠಾಣೆಗಳಿಗೆ.

ಸಿಬ್ಬಂದಿಗಳ ಕೊರತೆ

ಜಿಲ್ಲೆಯಲ್ಲಿ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿರುವ ಬಂಟ್ವಾಳದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣವಾಗಿದ್ದರೂ ಹಲವು ಸವಾಲು ಗಳನ್ನು ಎದುರಿಸುವ ಮೂಲಕ ಅಗ್ನಿ ಅವಘಡ ಸಂದರ್ಭ ತೀವ್ರ ತೊಂದರೆಗಳು ಎದುರಾಗುತ್ತಿದೆ. ಬಂಟ್ವಾಳ ಅಗ್ನಿಶಾಮಕ ಠಾಣೆಯಲ್ಲಿ ಕೇವಲ ಒಂದೇ ಒಂದು ಫೈರ್ ಇಂಜಿನ್ ವಾಹನ ಇದ್ದು, ಸಿಬ್ಬಂದಿಗಳ ಕೊರತೆಯನ್ನು ಕೂಡ ಎದುರಿಸುತ್ತಿದೆ. 5 ಚಾಲಕ ಹುದ್ದೆಗಳು ಖಾಲಿ ಇದ್ದು, ಸದ್ಯ ಒಬ್ಬರೇ ಚಾಲಕರಿದ್ದಾರೆ. 4 ಫೈರ್ ಮೆನ್ ಹುದ್ದೆಗಳು ಖಾಲಿ ಇದೆ. ಇಲ್ಲಿ 7 ಮಂದಿ ಫೈರ್ ಮೆನ್‌ಗಳು, 4 ಲೀಡಿಂಗ್ ಫೈರ್ ಮೆನ್‌ಗಳು, ಓರ್ವ ಆಫೀಸರ್, ಓರ್ವ ಚಾಲಕ ಮಾತ್ರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಸಕ್ತ ವರ್ಷ ಬೇಸಿಗೆ ಆರಂಭವಾಗಿ ಕೇವಲ ಎರಡು ತಿಂಗಳು ಪೂರೈಸುವಷ್ಟರಲ್ಲಿ ಈಗಾಗಲೇ 100 ಕರೆಗಳನ್ನು ಇಲ್ಲಿನ ಅಗ್ನಿಶಾಮಕ ಠಾಣಾ ಸಿಬ್ಬಂದಿಗಳು ಸ್ವೀಕರಿಸಿದೆ ಎಂದು ಇಲ್ಲಿನ ಅಧಿಕಾರಿ ತಿಳಿಸಿದ್ದಾರೆ. ಬಂಟ್ವಾಳ ಅಗ್ನಿಶಾಮಕ ಠಾಣೆಯ ವಾಹನ ಕೊರತೆ, ಸಿಬ್ಬಂದಿಗಳ ಹುದ್ದೆ ಖಾಲಿಯಿಂದಾಗಿ ತುರ್ತು ಸಂದರ್ಭಗಳಲ್ಲಿ ಪರದಾಟ ನಡೆಸಬೇಕಾದ ಪರಿಸ್ಥಿತಿ ಇದೆ. ಒಂದೇ ಒಂದು ವಾಹನ ಇರುವುದರಿಂದ ಒಂದಕ್ಕಿಂತ ಹೆಚ್ಚು ಕಡೆ ಅನಾಹುತಗಳು ಏಕ ಕಾಲದಲ್ಲಿ ಸಂಭವಿಸಿದರೆ ತುರ್ತು ಸ್ಪಂದನೆಗೆ ಅನಾನುಕೂಲವಾಗುವ ಸನ್ನಿವೇಶ ಉಂಟಾಗುತ್ತದೆ. ಠಾಣೆಗೆ ತುರ್ತಾಗಿ ಹೆಚ್ಚುವರಿ ವಾಹನದ ವ್ಯವಸ್ಥೆ ತಕ್ಷಣ ಆಗಬೇಕಾಗಿದೆ. ಒಂದು ಕರೆ ಸ್ವೀಕರಿಸಿ ಅಲ್ಲಿನ ಸರ್ವಿಸ್ ಮುಗಿಸಿ ವಾಪಾಸ್ ಬರಲಿ ಕನಿಷ್ಠ ನಾಲ್ಕೈದು ಗಂಟೆಗಳ ಸಮಯಾವಕಾಶ ಬೇಕಾಗುತ್ತದೆ. ಇಂತಹ ಸಂದರ್ಭ ಹೆಚ್ಚುವರಿ ಅನಾಹುತಗಳ ಕರೆ ಬಂದರೆ ಸ್ಪಂದಿಸುವುದೇ ಕಷ್ಟ ಸಾಧ್ಯ ಎಂಬಂತಾಗಿದೆ. ಬೇಸಿಗೆಯ ಸುಡು ಬಿಸಿಲಿಗೆ ಬೆಂಕಿ ಅವಘಡ, ಕಾಡ್ಗಿಚ್ಚಿನ ನಿಬಿಡತೆಯಾದರೆ ಮಳೆಗಾಲದಲ್ಲಿ ಪ್ರಕೃತಿ ವಿಕೋಪದಂತಹ ಘಟನೆಗಳು, ಪ್ರವಾಹಗಳ ತುರ್ತು ಇದಲ್ಲದೆ ಎಲ್ಲಾ ಸಮಯಗಳಲ್ಲೂ ನದಿ, ಕೆರೆ, ಬಾವಿಯಲ್ಲಾಗುವ ಅವಘಡಗಳೂ ಸಂಭವಿಸುತ್ತಲೇ ಇರುತ್ತದೆ. ಇಂತಹ ಸಂದರ್ಭಗಳಲ್ಲೂ ಅಗ್ನಿಶಾಮಕ ಸಿಬ್ಬಂದಿಗಳು ಸ್ಥಳಕ್ಕೆ ರಕ್ಷಣಾ ಕಾರ್ಯಕ್ಕೆ ಕಡ್ಡಾಯವಾಗಿ ತೆರಳಲೇ ಬೇಕಾಗುತ್ತದೆ. ತುರ್ತು ಸಂದರ್ಭದಲ್ಲಿ ಮಂಗಳೂರು, ಮೂಡಬಿದ್ರೆ, ಬೆಳ್ತಂಗಡಿ, ಪುತ್ತೂರು ಅಗ್ನಿಶಾಮಕ ಠಾಣೆಗಳ ವಾಹನಗಳನ್ನೂ ಇಲ್ಲಿಗೆ ಹೆಚ್ಚುವರಿಯಾಗಿ ಕರೆಸಿರುವ ಪ್ರಸಂಗಗಳು ಇದೆ.

ತುರ್ತು ಸಂದರ್ಭ ಠಾಣೆಯಲ್ಲಿ ವಾಹನ, ಸಿಬ್ಬಂದಿಗಳೇ ಇಲ್ಲದಿರುವಾಗ ಕರೆಗಳನ್ನು ಸ್ವೀಕರಿ ಸುವುದು ಕೂಡಾ ಇಲ್ಲಿನ ಅಧಿಕಾರಿ ಸಿಬ್ಬಂದಿಗಳಿಗೆ ಸವಾಲಾಗಿ ಪರಿಣಮಿಸುತ್ತಿದೆ. ಕರೆ ಸ್ವೀಕರಿಸದಿದ್ದಲ್ಲಿ ಬೇಜವಾಬ್ದಾರಿತನದ ಪಟ್ಟ ಒಂದು ಕಡೆಯಾದರೆ, ಕರೆ ಸ್ವೀಕರಿಸಿದರೆ ಸ್ಪಂದಿಸಲಾಗದ ಅಡಕತ್ತರಿಯ ಪರಿಸ್ಥಿತಿ ಬಂಟ್ವಾಳ ಅಗ್ನಿಶಾಮಕ ಠಾಣಾ ಅಧಿಕಾರಿ-ಸಿಬ್ಬಂದಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವುದಂತೂ ಸತ್ಯ.

ಅಗ್ನಿಶಾಮಕ ಠಾಣೆಯನ್ನು ಮತ್ತಷ್ಟು ಬಲಪಡಿಸಿ

ಬಂಟ್ವಾಳ ಅಗ್ನಿಶಾಮಕ ಠಾಣೆಗೆ ಹೆಚ್ಚುವರಿ ವಾಹನ ಸಹಿತ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸುವ ನಿಟ್ಟಿನಲ್ಲಿ ಸರಕಾರ ಮನಸ್ಸು ಮಾಡಿದರೆ ಅವಘಡ ಸಂದರ್ಭ ಉಂಟಾಗುವ ಹಾನಿಯನ್ನು ಸಾಕಷ್ಟು ಪ್ರಮಾಣದಲ್ಲಿ ತಪ್ಪಿಸಬಹುದು. ಅವಘಡ ಸಂದರ್ಭ ಉಂಟಾಗುವ ಹೆಚ್ಚಿನ ಅನಾಹುತಗಳಿಗೆ ಅಗ್ನಿ ಶಾಮಕ ಅಧಿಕಾರಿ, ಸಿಬ್ಬಂದಿಗಳ ಮೇಲೆ ಗೂಬೆ ಕೂರಿಸುವುದಕ್ಕಿಂತ ಜನಪ್ರತಿನಿಧಿಗಳು ಸರಕಾರದ ಮಟ್ಟದಲ್ಲಿ ಈ ಬಗ್ಗೆ ಗಮನ ಸೆಳೆದು ಇಲ್ಲಿನ ಅಗ್ನಿಶಾಮಕ ಠಾಣೆಯನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.

ತಾಲೂಕಿನ ಗುಡ್ಡ ಪ್ರದೇಶದಲ್ಲಿ ಕಾರ್ಯಾಚರಣೆಯ ಸವಾಲು

ಬಂಟ್ವಾಳ ಅಗ್ನಿಶಾಮಕ ಠಾಣೆಯ ವ್ಯಾಪ್ತಿಯೂ ವಿಶಾಲವಾಗಿದ್ದು, ವಿಟ್ಲ, ವಾಮದಪದವು, ಸಿದ್ದಕಟ್ಟೆ, ಪೂಂಜಾಲಕಟ್ಟೆ, ಕಾರಿಂಜ, ವಿಟ್ಲ, ಕನ್ಯಾನ, ಫರಂಗಿಪೇಟೆ ಸಹಿತ ಹಲವು ಗ್ರಾಮೀಣ ಭಾಗಗಳನ್ನು ಒಳಗೊಂಡಿರುವುದಲ್ಲದೆ ಕಳಂಜಿಮಲೆ, ಕಾರಿಂಜಗಳಂತಹ ಗುಡ್ಡ ಪ್ರದೇಶಗಳೂ ಒಳಪಡುವುದರಿಂದ ಗುಡ್ಡ ಪ್ರದೇಶಗಳಲ್ಲಿ ಪದೇ ಪದೇ ಸಂಭವಿಸುವ ಕಾಡ್ಗಿಚ್ಚಿನ ಸಂದರ್ಭಗಳಲ್ಲಿ ಸ್ಥಳಕ್ಕೆ ತಲುಪಲು ಸಾಕಷ್ಟು ಸಮಯಾವಕಾಶಗಳೂ ಬೇಕಾಗುತ್ತದೆ.

ಕೊಕ್ಕೋ ಬೆಳೆ ಬಗ್ಗೆ ವಿಚಾರ ಸಂಕಿರಣದಲ್ಲಿ ಡಾ.ಎಂ.ಕೆ. ರಾಜೇಶ್ ಸಲಹೆ

ಸಮರ್ಪಕ ಕೃಷಿಯಿಂದ ಉತ್ತಮ ಆದಾಯ ಸಾಧ್ಯ



ಸುಳ್ಯ: ಇತರೆ ಕೃಷಿ ಬೆಳೆಯೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಯಲಾಗುವ ಕೊಕ್ಕೋ ಬೆಳೆಯನ್ನು ಸಮರ್ಪಕ ರೀತಿಯಲ್ಲಿ ಬೆಳೆ ಯುವುದರಿಂದ ಉತ್ತಮ ಆದಾಯ ಗಳಿಕೆ ಸಾಧ್ಯವಿದೆ. ಕೇಂದ್ರ ಬಜೆಟ್‌ನಲ್ಲೂ ಕೊಕ್ಕೋ ಬೆಳೆಗೆ ಪ್ರೋತ್ಸಾಹ ನೀಡುವ ಬಗ್ಗೆ ಉಲ್ಲೇಖಿಸಿರುವುದು ಕೃಷಿಕರಿಗೆ ಬಲ ನೀಡಿದೆ ಎಂದು ವಿಟ್ಲ ಐಸಿಎಆರ್- ಸಿಪಿಸಿಆರ್‌ಐ ಪ್ರಾದೇಶಿಕ ಸಂಸ್ಥೆಯ ಮುಖ್ಯಸ್ಥ ಡಾ.ಎಂ.ಕೆ. ರಾಜೇಶ್ ಹೇಳಿದರು.

ಸೋಮವಾರ ಸುಳ್ಯ ಸಿಎ ಬ್ಯಾಂಕ್ ದಿ.ಎ.ಎಸ್. ವಿಜಯ ಕುಮಾರ್ ಸಭಾ ಭವನದಲ್ಲಿ ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸುಳ್ಯ, ಕೃಷಿ ಸಮಾಜ ಸುಳ್ಯ, ಐಸಿಎಆರ್-ಸಿಪಿಸಿಆರ್‌ಐ, ನಬಾರ್ಡ್, ಬ್ರೌನ್ ಗೋಲ್ಡ್ ಕೊಕ್ಕೋ ಪ್ರೊಡ್ಯೂಸರ್ ಕಂಪೆನಿ ಸಂಯುಕ್ತ ಆಶ್ರಯದಲ್ಲಿ ನಡೆದ ಕೊಕ್ಕೋ ಬೆಳೆಯ ಸಮರ್ಪಕ ನಿರ್ವಹಣೆ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ವಿಟ್ಲ ಐಸಿಎಆರ್-ಸಿಪಿಸಿಆರ್‌ಐ ಪ್ರಧಾನ ವಿಜ್ಞಾನಿ ಡಾ. ಎಲ್ಬೆನ್ ಅಪ್ಸರಾ, ಕೊಕ್ಕೋ ಬೇಡಿಕೆ ಹೆಚ್ಚಿದ್ದು ಆದರೆ ನಮ್ಮಲ್ಲಿ ಬೇಡಿಕೆಯಷ್ಟು ಉತ್ಪಾದನೆ ಇಲ್ಲ, ಆದ್ದರಿಂದ ಕೊಕ್ಕೋದಿಂದ ಇನ್ನಷ್ಟು ಆದಾಯ ಗಳಿಕೆ ಸಾಧ್ಯವಿದೆ. ಉತ್ತಮ ಗುಣಮಟ್ಟದ, ಆರೋಗ್ಯಕರ ಕೊಕ್ಕೋ ಬೆಳೆಯುವುದು ನಮ್ಮ ಆದ್ಯತೆಯಾಗಬೇಕು. ಆತ್ಮನಿರ್ಭರ ಭಾರತ್ ಕೊಕ್ಕೋದಿಂದಲೂ ಸಾಧ್ಯವಿದೆ ಎಂದರು. ಕೊಕ್ಕೋ ಬೆಳೆಯುವ ಕುರಿತು ಅವರು ಕಾರ್ಯಾಗಾರ ನಡೆಸಿಕೊಟ್ಟರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿ ವಿಟ್ಲ ಐಸಿಆರ್-ಸಿಪಿಸಿಆರ್‌ಐ ವಿಜ್ಞಾನಿ ಡಾ. ಭವಿಷ್ಯ ಮಾತನಾಡಿ, ಸುಸ್ಥಿರ ಕೃಷಿ ಮೂಲಕ ಹೆಚ್ಚುವರಿ ಇಳುವರಿ ಪಡೆಯಬಹುದು. ಅಡಿಕೆ ಬೆಳೆಯೊಂದಿಗೆ ಕೊಕ್ಕೋ ಬೆಳೆಯುವುದರಿಂದ ಅಡಿಕೆಗೆ ಬೇಕಾಗುವ ಮಣ್ಣಿನ ಪೋಷಕಾಂಶ ಕೊಕ್ಕೋದಿಂದ ಲಭಿಸುತ್ತದೆ. ಕೊಕ್ಕೋ ಬೆಳೆಯುವ ಮಣ್ಣಿನ ಪರೀಕ್ಷೆ ಮಾಡಿಕೊಂಡು ಅದರಂತೆ ಅದಕ್ಕೆ ಬೇಕಾಗುವ ಪೋಷಕಾಂಶಯುಕ್ತ ಗೊಬ್ಬರ ಹಾಕಿದಲ್ಲಿ ಉತ್ತಮ ಇಳುವರಿ ಸಾಧ್ಯವಿದೆ. ಕೊಕ್ಕೋಗೆ ಬಾಧಿಸುವ ರೋಗಗಳ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು ಎಂದರು.

ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿಕ್ರಮ್ ಎ.ವಿ., ಸುಳ್ಯ ಕೃಷಿ ಸಮಾಜ ಅಧ್ಯಕ್ಷ ಕುಸುಮಾಧರ ಎ.ಟಿ., ಬ್ರೌನ್‌ಗೋಲ್ಡ್ ಕೋಕೋ ಪ್ರೊಡ್ಯೂಸರ್ ಕಂಪೆನಿ ಅಧ್ಯಕ್ಷ ಕೆ.ಜೆ. ವರ್ಗೀಸ್, ಕಾರ್ಯನಿರ್ವಾಹಕ ನಿರ್ದೇಶಕ ಟೋಮ್ ಜಾರ್ಜ್, ಸಂಘದ ಮಾಜಿ ಅಧ್ಯಕ್ಷ ಹರೀಶ್ ಬೂಡುಪನ್ನೆ ಮತ್ತಿತರರು ಇದ್ದರು. ವಿಜ್ಞಾನಿಗಳಾದ ಡಾ. ಭವಿಷ್ಯ ಸ್ವಾಗತಿಸಿ, ಡಾ. ಅನೆಸ್ ಕೆ.ಎಂ. ವಂದಿಸಿದರು.

ತಳಿಗಳ ಅಭಿವೃದ್ಧಿ

ಸಿಪಿಸಿಆರ್‌ಐ ಸಂಸ್ಥೆ ಉತ್ತಮ ಇಳುವರಿ ನೀಡುವ ಕೊಕ್ಕೋ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದು, ಕೃಷಿಕರಿಗೆ ಸದಾ ಮಾರ್ಗದರ್ಶನ ನೀಡಲಾಗುತ್ತಿದೆ.

● ಡಾ.ಎಂ.ಕೆ. ರಾಜೇಶ್

ಏ.2ರವರೆಗೆ ನಡೆಯಲಿದೆ ವಿವಿಧ ಧಾರ್ಮಿಕ ಕಾರ್ಯಕ್ರಮ

ನಾಳೆಯಿಂದ ಶರವೂರಿನಲ್ಲಿ ಬ್ರಹ್ಮಕಲಶ ಗೌಜಿ

ಆಲಂಕಾರು: ಕಡಬ ತಾಲೂಕು ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ನವೀಕರಣ ಪುನಃ ಪ್ರತಿಷ್ಠಾಬಂಧ ಬ್ರಹ್ಮಕಲಶೋತ್ಸವ, ನೂತನ ಏಕಶಿಲಾ ಧ್ವಜ ಪ್ರತಿಷ್ಠೆ ನೂತನ ಬ್ರಹ್ಮರಥ ಹಾಗೂ ಪುಷ್ಪರಥ ಸಮರ್ಪಣೆ ಕಾರ್ಯವು ಮಾ.25ರಿಂದ ಆರಂಭಗೊಂಡು ಏ.2ರವರೆಗೆ ಶ್ರೀ ಕ್ಷೇತ್ರದಲ್ಲಿ ನಡೆಯಲಿದೆ.

ಮಾ.25ಕ್ಕೆ ಬೆಳಗ್ಗೆ ಕ್ಷೇತ್ರಕ್ಕೆ ತಂತ್ರಿಗಳ ಆಗಮನ ಸಾಮೂಹಿಕ ಪ್ರಾರ್ಥನೆ ನಡೆದು ಗಣಹೋಮ ಹಾಗೂ ತೋರಣ, ಉಗ್ರಾಣ ಮುಹೂರ್ತ ನಡೆದು ಹಸಿರುವಾಣಿ ಸಮರ್ಪಣೆ. ಮಾ.26ಕ್ಕೆ ಉಷಾ ಪೂಜೆ, ಭದ್ರಕಾಳಿ ಗುಡಿಯಲ್ಲಿ ಶಾಂತಿಹೋಮ, ಸಂಜೆ ದುರ್ಗಾಪೂಜೆ, ಅಂಕುರ ಪೂಜೆ, ವಾಸ್ತು ಪೂಜೆ, ವಾಸ್ತು ಬಲಿ ಭದ್ರಕಾಳಿ ಅಮ್ಮನವರಲ್ಲಿ ಕಲಶಪೂರಣ. ಮಾ.27ಕ್ಕೆ ಮೃತ್ಯುಂಜಯ ಹೋಮ, ಗಂಗಾದೇವಿ ಪ್ರತಿಷ್ಠೆ ಕಲಶಾಭಿಷೇಕ, ಶಾಮತಿಹೋಮ ಭದ್ರಕಾಳಿ ಗುಡಿಯಲ್ಲಿ ಕಲಶಾಭಿಷೇಕ. ಮಾ28ಕ್ಕೆ ಬೆಳಗ್ಗೆ ಉಷಾಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ತತ್ವಹೋಮ ಸಂಜೆ ಕುಂಡ ಶುದ್ಧಿ, ದುರ್ಗಾಪೂಜೆ, ಕಲಶಪೂರಣ, ರಾತ್ರಿ ಆಶ್ಲೇಷಾ ಬಲಿ, ಮೊಗೇರ್ಕಳ ಗುಡಿಯಲ್ಲಿ ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ಮಾ.29ರಂದು ಬೆಳಗ್ಗೆ ಉಷಾ ಪೂಜೆ, ಅಂಕುರ ಪೂಜೆ, ದುರ್ಗೆ, ಗಣಪತಿ ಲಕ್ಷ್ಮೀನಾರಾಯಣ ದೇವರುಗಳ ಬಿಂಬಶುದ್ಧಿ ನಡೆಯಲಿದೆ.

ಮಾ.30ಕ್ಕೆ ಬೆಳಗ್ಗೆ ಅಷ್ಟೋತ್ತರ ಶತನಾಳಿಕೇರ ಗಣಪತಿ ಹೋಮ, ಪ್ರಸಾದ ಪ್ರತಿಷ್ಠೆ ನಪುಂಸಕ ಶಿಲಾಪ್ರತಿಷ್ಠೆ ಗರ್ಭ ಗೃಹಾನಯನ. ಬೆಳಗ್ಗೆ 9.07ರಿಂದ 11.07ರ ಸಮಯ ದುರ್ಗಾಪರಮೇಶ್ವರೀ ದೇವರ ಪುನಃ ಪ್ರತಿಷ್ಠೆ ಅಷ್ಟಬಂಧ ಕ್ರಿಯೆ, ಕುಂಭೇಶ, ನಿದ್ರಾಕುಂಭ, ಜೀವಕಲಶ ಅಭಿಷೇಕ, ಪ್ರಸನ್ನ ಪೂಜೆ. 11.07ರಿಂದ 1.08ರ ಸಮಯ ಗಣಪತಿ, ಲಕ್ಷ್ಮೀನಾರಾಯಣ ದೇವರುಗಳ ಪುನಃ ಪ್ರತಿಷ್ಠೆ ಕಲಶಾಭಿಷೇಕ ಪ್ರಸನ್ನ ಪೂಜೆ. ಸಂಜೆ ಭದ್ರದೀಪ ಪ್ರತಿಷ್ಠೆ ಗರ್ಭಗೃಹ ಕವಾಟ ಬಂಧನ, ಅಂಕುರ ಪೂಜೆ, ಸೋಪಾನ ಪೂಜೆ, ಮಹಾಬಲಿಪೀಠ, ಶುದ್ಧಿ, ಅಧಿ ವಾಸ ನಡೆಯಲಿದೆ. ಮಾ.31ರಂದು ಬೆಳಗ್ಗೆ ಬಲಿಶಿಲಾ ಪ್ರತಿಷ್ಠೆಗಳು, ಸಪ್ತಮಾತೃಕಾಪೀಠ ಪ್ರತಿಷ್ಠೆ ನಿರ್ಮಾಲ್ಯಧಾರಿ ಪ್ರತಿಷ್ಠೆ ಮಹಾಬಲಿಪೀಠ ಪ್ರತಿಷ್ಠೆ ಚಂಡಿಕಾಯಾಗ, ಮಂಟಪ ಶುದ್ಧಿ, ಶಯ್ಯಾ ಪೂಜೆ, ಸಂಜೆ ಧ್ವಜಾಧಿವಾಸ, ವಾಹನ ಬಿಂಬಾಧಿವಾಸ, ಅಧಿವಾಸಹೋಮ, ಚಾಮುಂಡಿ ಪೀಠ ಶುದ್ಧಿ ನಡೆಯಲಿದೆ.

ಏ.1ಕ್ಕೆ ಅಂಕುರ ಪೂಜೆ, ಸೋಪಾನಪೂಜೆ, ದ್ವಾರ ಪ್ರಾಯಶ್ಚಿತ್ತ ಹೋಮ, ಶಾಂತಿ ಹೋಮ, ತತ್ವಹೋಮ, ತತ್ವಕಲಶ ಪ್ರತಿಷ್ಠೆ ಮಂಟಪ ಸಂಸ್ಕಾರ, ಬೆಳಿಗ್ಗೆ ಧ್ವಜಪ್ರತಿಷ್ಠೆ ಶ್ರೀ ಚಾಮುಂಡಿ ದೈವದ ಪ್ರತಿಷ್ಠೆ ಕಲಶಾಭಿಷೇಕ, ಪುಷ್ಪರಥಕ್ಕೆ ಕಲಶಾಭಿಷೇಕ ನಡೆಯಲಿದೆ. ಸಂಜೆ ಬ್ರಹ್ಮಕಲಶ ಪೂರಣ ದ್ರವ್ಯನ್ಯಾಸ ಸಹಸ್ರ ಪರಿಕಲಶಪೂರಣ, ಅಧಿವಾಸ ಹೋಮ, ಕಲಶಾಭಿವಾಸ, ಸೋಪಾನ ಪೂಜೆ ನಡೆಯಲಿದೆ.

ಏ.2ಕ್ಕೆ ಬೆಳಗ್ಗೆ 4.30ಕ್ಕೆ ಶ್ರೀ ದೇವರ ಗರ್ಭಗೃಹದ ಕವಾಟ ಉದ್ಘಾಟನೆ, ನಿರ್ಮಾಲ್ಯ ದರ್ಶನ, ತೈಲಾಭಿಷೇಕ, ಪ್ರಾಯಶ್ಚಿತ್ತ ಶಾಂತಿಹೋಮ ಕಲಶಾಭಿಷೇಕ ತತ್ವಕಲಶಾಭಿಷೇಕ ನಡೆಯಲಿದೆ. ಬೆಳಗ್ಗೆ 9ರಿಂದ ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ, ಪ್ರಸನ್ನ ಪೂಜೆ, ಅವಸ್ರುತೋಕ್ಷಾ ಬಲಿ, ದೇವರಿಗೆ ಮಹಾಪೂಜೆ, ಪಲ್ಲಪೂಜೆ, ಸಂಜೆ ಭೂತಬಲಿ ಉತ್ಸವ ಪುಷ್ಪರಥೋತ್ಸ್ವ, ವಸಂತಕಟ್ಟ ಪೂಜೆ, ನೂತನ ಬ್ರಹ್ಮರಥಕ್ಕೆ ಶುದ್ಧಿ ರಥಾಧಿವಾಸ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ತಿಳಿಸಿದ್ದಾರೆ. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ. ಹೇಮಂತ ರೈ ಮನವಳಿಕೆಗುತ್ತು, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್ ನಗ್ರಿ, ಬ್ರಹ್ಮಕಲಸೋತ್ಸವ ಸಮಿತಿಯ ಗೌರವಾಧ್ಯಕ್ಷ ಡಾ. ಕೂಳೂರು ಕನ್ಯಾನ ಸದಾಶಿವ ಶೆಟ್ಟಿ, ಪವಿತ್ರಪಾಣಿ ಎನ್., ಹರೀಶ್ ಆಚಾರ್ಯ ನಗ್ರಿಗುತ್ತು ಉಪಸ್ಥಿತರಿದ್ದರು.

ಶ್ರೀ ರಾಘವೇಂದ್ರ ಯುವಕ ಮಂಡಲದ 23ನೇ ವಾರ್ಷಿಕೋತ್ಸವ



ಮಂಗಳೂರು: ರಾಘವೇಂದ್ರ ಯುವಕ ಮಂಡಲ ಮಿತ್ತಕೊಳಪಿಲ-ಮೂಡುಪೆರಾರ ಇದರ 23ನೇ ವರ್ಷದ ವಾರ್ಷಿಕೋತ್ಸವವು ಮಾರ್ಚ್ 21ರಂದು ಮಿತ್ತಕೊಳಪಿಲ ಶ್ರೀ ರಾಘವೇಂದ್ರ ಭಜನಾ ಮಂದಿರದ ವಠಾರದಲ್ಲಿ ನಡೆಯಿತು. ವಾರ್ಷಿಕೋತ್ಸವದ ಅಂಗವಾಗಿ ಪೆರ್ಡೂರು ಮೇಳದವರಿಂದ 'ನಾಗವಲ್ಲಿ' ಎಂಬ ಯಕ್ಷಗಾನ ಬಯಲಾಟದ ಪ್ರದರ್ಶನ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಅನಂತಪದ್ಮನಾಭ ಯಕ್ಷಗಾನ ಮಂಡಳಿ ಪೆರ್ಡೂರು ಮೇಳದ ಪ್ರಧಾನ ಭಾಗವತರಾದ ರಾಘವೇಂದ್ರ ಆಚಾರ್ಯ ಜನ್ಸಾಲೆಯವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಶ್ರೀಕ್ಷೇತ್ರ ಪೆರಾರದ ಬಲವಾಂಡಿ ದೈವದ ಮುಕ್ಕಾಲ್ದಿ ಬಾಲಕೃಷ್ಣಶೆಟ್ಟಿ ಅಳಿಕೆಗುತ್ತು, ಶ್ರೀ ರಾಘವೇಂದ್ರ ಭಜನಾ ಮಂದಿರದ ಅಧ್ಯಕ್ಷ ನಾರಾಯಣ ಗೌಡ ಮಿತ್ತಕೊಳಪಿಲ, ಸಂಘದ ಅಧ್ಯಕ್ಷರಾದ ಚಂದ್ರಹಾಸ ಪೂಜಾರಿ ಬೋರುಗುಡ್ಡೆ ದುರ್ಗಾಪ್ರಸಾದ್ ಶೆಟ್ಟಿ ಕೊಳಪಿಲ, ನವೀನ್ ಆಳ್ವ ಕತ್ತಲ್ಸಾರ್, ಶಿವಚರಣ್ ಶೆಟ್ಟಿ ಮುಂಡಬೆಟ್ಟುಗುತ್ತು, ದಿನೇಶ್ ಪೂಜಾರಿ ಹಿತ್ತಿಲು, ನವೀನ್ ಕುಮಾರ್ ಪೆರಾರ, ಹರೀಶ್ ಕೊಡೆತ್ತೂರು ಮೊದಲಾದವರು ಉಪಸ್ಥಿತರಿದ್ದರು.

ಬಜತ್ತೂರು: ಮುದ್ಯ ಪಾರಂತಿ ದೇವಸ್ಥಾನ ಬ್ರಹ್ಮಕಲಶೋತ್ಸವ: ಚಪ್ಪರ ಮುಹೂರ್ತ



ಉಪ್ಪಿನಂಗಡಿ: ಬಜತ್ತೂರು ಗ್ರಾಮದ ಮುದ್ಯ ಪಾರಂತಿ ಶ್ರೀ ಪಾರ್ವತಿ ಪಂಚಲಿಂಗೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಏ.7ರಿಂದ 12ರ ತನಕ ನಡೆಯಲಿದ್ದು, ಆ ಪ್ರಯುಕ್ತ ಚಪ್ಪರ ಮುಹೂರ್ತ ನಡೆಯಿತು.

ಪ್ರಗತಿಪರ ಕೃಷಿಕ ಬಾಲಚಂದ್ರನ್ ಪಂದ್ರಾಜೆ ಅವರು ಚಪ್ಪರ ಮುಹೂರ್ತ ನೆರವೇರಿಸಿದರು. ದೇವಸ್ಥಾನದ ಪ್ರಧಾನ ಅರ್ಚಕ ಕೃಷ್ಣಪ್ರಸಾದ್ ಉಡುಪ ಎಂ. ಪೂಜಾ ವಿಧಿ ವಿಧಾನ ನೆರವೇರಿಸಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವೇಣುಗೋಪಾಲ ನಾಯಕ್ ಕುಳ್ಳಾಜೆ, ಉಪಾಧ್ಯಕ್ಷ ಸಂತೋಷ್‌ಕುಮಾರ್ ಜೈನ್ ಬಾರಿಕೆ, ದಾಮೋದರ ಗೌಡ ಶೇಡಿ ಗುತ್ತು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿಚಂದ್ರ ಗೌಡ ಮುದ್ಯ, ಸಂಚಾಲಕ ಗೋಪಾಲ ಗೌಡ ವಳಾಲು ದಡ್ಡು, ಪ್ರಧಾನ ಕಾರ್ಯದರ್ಶಿ ನಾರಾಯಣ ಪೂಜಾರಿ ನೀರಕಟ್ಟೆ, ಶರತ್ ಗೌಡ ಮುದ್ಯ, ಭವ್ಯ ಬಾಲಕೃಷ್ಣ ಶೆಟ್ಟಿ ಪಂಜಳ, ಕೋಶಾಧಿ ಕಾರಿ ಸೋಮಸುಂದರ ಕೊಡಿಪಾನ, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತಿ ಜಯಂತ ಬಿ. ಅತಿಕರಮಜಲು, ಜೊತೆ ಕಾರ್ಯದರ್ಶಿ ಬೇಬಿ ಗೋಪಾಲ ಬಾರಿಕೆ, ಚಪ್ಪರ ಸಮಿತಿ ಸಂಚಾಲಕ ರುಕ್ಮಯ ಗೌಡ ಪುಯಿಲ, ಹೊರೆಕಾಣಿಕೆ ಸಮಿತಿ ಸಂಚಾಲಕ ವಸಂತ ಪಿಜಕ್ಕಳ, ಪ್ರಮುಖರಾದ ಸದಾನಂದ ಕೋಡಿ, ತೇಜಸ್ ಕೆದು, ಶಶಿಧರ ಮುದ್ಯ, ಅಶೋಕ ಟಪಾಲುಕೊಟ್ಟಿಗೆ, ಅವಿನಾಶ್ ಉಪಾತಿಪಾಲು, ಸುಜಾತ ಕೆಂಜಾಳ, ತಿಮ್ಮಪ್ಪ ಉಪಾತಿಪಾಲು ಮತ್ತಿರರಿದ್ದರು. ಉಮೇಶ ಓಡ್ರಪಾಲು ವಂದಿಸಿದರು.

ಕೊಂಡ್ಯಾಡಿ: ಮೃತಪಟ್ಟ ಬಾಲಕನ ಮನೆಗೆ ಶಾಸಕರ ಭೇಟಿ



ಕಡಬ: ತಲೆನೋವಿಗೆಂದು ಮನೆಯಲ್ಲಿದ್ದ ಔಷಧಿ ಸೇವಿಸಿ ಅಸ್ವಸ್ಥಗೊಂಡು ಮೃತಪಟ್ಟ ಬಾಲಕ ರಾಮಕುಂಜ ಗ್ರಾಮದ ಕೊಂಡ್ಯಾಡಿ ನಿವಾಸಿ ಆಟೋ ಚಾಲಕ ಸಂಜೀವ ಪೂಜಾರಿಯವರ ಪುತ್ರ ಚಿರಾಗ್ ಅವರ ಮನೆಗೆ ಶಾಸಕಿ ಭಾಗೀರಥಿ ಮುರುಳ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಕಿಶೋರ್ ಬೊಟ್ಯಾಡಿ ಭೇಟಿ ನೀಡಿ ಮನೆಯವರಿಗೆ ಸಾಂತ್ವನ ಹೇಳಿದ್ದಾರೆ.

ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಚಿರಾಗ್ ಬುಧವಾರ ಸಂಜೆ ತಲೆ ನೋವಿಗೆಂದು ಮನೆಯಲ್ಲಿದ್ದ ಔಷಧ ಸೇವಿಸಿ ಅಸ್ವಸ್ಥಗೊಂಡು ಬಳಿಕ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದ. ವಿಷಯ ತಿಳಿದ ಶಾಸಕಿ ಹಾಗೂ ವಿಧಾನ ಪರಿಷತ್ ಸದಸ್ಯರು ಸಂಜೀವ ಪೂಜಾರಿಯವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ.

ಶಾಸಕರೊಂದಿಗೆ ಬಿಜೆಪಿ ಮುಖಂಡರಾದ ಪ್ರದೀಪ್ ರೈ ಮನವಳಿಕೆ, ರವಿಪ್ರಸಾದ್ ಶೆಟ್ಟಿ ನೆಲ್ಯಾಡಿ, ಲಕ್ಷ್ಮೀನಾರಾಯಣ ರಾವ್, ಪ್ರಶಾಂತ್ ಆರ್.ಕೆ. ಮತ್ತಿತರರಿದ್ದರು. ಅದಕ್ಕೂ ಮುನ್ನ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಕೆ. ಸೇಸಪ್ಪ ರೈ, ಪ್ರೌಢ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್., ಪ್ರಾಥಮಿಕ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಲೋಹಿತಾ ಸಹಿತ ಮತ್ತಿತರರು ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ.

ಡಾಮರೀಕರಣದಿಂದ ಕಂಗೊಳಿಸುತ್ತಿದೆ ಇರುವೈಲು ಸಮೀಪದ ದಂಬೆದಕೊಡಿ ರಸ್ತೆ | ಈಡೇರಿತು ಬಹುಕಾಲದ ಬೇಡಿಕೆ

ಅಪಘಾತ ಸ್ಥಳವಾಗಿ ಪರಿವರ್ತನೆಯಾಗಿದ್ದ ರಸ್ತೆಗೆ ಈಗ ಅಭಿವೃದ್ಧಿ ಭಾಗ್ಯ!



ಕೈಕಂಬ: ಮೂಡಬಿದ್ರಿಯಿಂದ ಇರುವೈಲು ಮೂಲಕ ಕುಪ್ಪೆಪದವು ಪೇಟೆಯನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿಯಲ್ಲಿ ಇರುವೈಲು ಸಮೀಪದ ದಂಬೆದಕೊಡಿ ಎಂಬಲ್ಲಿ ಅಪಾಯಕಾರಿ ಇಳಿಜಾರಿನಿಂದ ಕೂಡಿದ ತಿರುವಿಗೆ ಕೊನೆಗೂ ಮುಕ್ತಿ ಸಿಕ್ಕಿದೆ.

ಅಪಘಾತ ಸ್ಥಳವಾಗಿ ಪರಿವರ್ತನೆಯಾಗಿದ್ದ ಈ ತಿರುವನ್ನು ನೇರಗೊಳಿಸಿ ಎಂಬ ಸ್ಥಳೀಯರ ಬಹುಕಾಲದ ಬೇಡಿಕೆ ಇದೀಗ ಈಡೇರಿದೆ. ಇಲ್ಲಿರುವ ದೊಡ್ಡದಾದ ಪರಂಬೊಕು ತೋಡಿಗೆ ಹಿಂದೆ ಇಲ್ಲಿ ಇದ್ದ ಕಿರು ಸೇತುವೆಯ ಬದಲಿಗೆ 2016ರಲ್ಲಿ ಹೊಸ ಸೇತುವೆ ನಿರ್ಮಾಣದ ವೇಳೆ ಅಲ್ಪ ಪ್ರಮಾಣದಲ್ಲಿ ಸೇತುವೆಯನ್ನು ಎತ್ತರಿಸಲಾಗಿತ್ತಾದರೂ ಅಗತ್ಯ ವಿದ್ದಷ್ಟು ಎತ್ತರಿಸದೆ ಇದ್ದ ಪರಿಣಾಮ ಇಲ್ಲಿ ವಾಹನಗಳು ಕಣಿವೆಯಂತಹ ಜಾಗಕ್ಕೆ ಇಳಿದು ಮೇಲೆ ಹತ್ತಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸೇತುವೆಯ ಎರಡೂ ಭಾಗದಲ್ಲಿ ರಸ್ತೆಯೂ ಅಗಲ ಕಿರಿದಾಗಿದ್ದ ಕಾರಣ ಇಲ್ಲಿ ಹಲವಾರು ಘನ ವಾಹನಗಳು ರಸ್ತೆಯಿಂದ ಜಾರಿ ಪಕ್ಕದ ತೋಡಿಗೂ, ಇನ್ನೊಂದು ಪಾರ್ಶ್ವದಲ್ಲಿರುವ ಖಾಸಗಿ ಜಾಗಕ್ಕೆ ಉರುಳಿ ಬೀಳುವುದು ಸಾಮಾನ್ಯವಾಗಿತ್ತು.

2022ರ ನ.25ಕ್ಕೆ ಅಂದಿನ ಡಿಸಿ ರವಿಕುಮಾರ್ ಎಂ.ಆರ್ ಇರುವೈಲು ದೇವಸ್ಥಾನದ ಸಭಾಂಗಣದಲ್ಲಿ ನಡೆಸಿದ್ದ ಗ್ರಾಮ ವಾಸ್ತವ್ಯದ ಸಂಧರ್ಭ ಗ್ರಾಮಸ್ಥರು ನೀಡಿದ ಮನವಿ ಮತ್ತು ಗ್ರಾಮಸ್ಥರ ಆಗ್ರಹಕ್ಕೆ ಮಣಿದು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ, ಶೀಘ್ರ ಸಮಸ್ಯೆ ಪರಿಹರಿಸುವ ಭರವಸೆ ನೀಡಿದ್ದರು. ಆದರೆ ಜಿಲ್ಲಾಧಿಕಾರಿಗಳು ಭರವಸೆ ನೀಡಿ 2ವರ್ಷಗಳಾದ ಬಳಿಕವೂ ಸಮಸ್ಯೆ ಪರಿಹಾರವಾಗಿರಲಿಲ್ಲ, ಇದೀಗ ಮೂಲ್ಕಿ-ಮೂಡಬಿದ್ರಿ ಶಾಸಕ ಉಮಾನಾಥ ಕೋಟ್ಯಾನ್ ಅವರ ಒಂದು ಕೋಟಿ ರೂಪಾಯಿ ಅನುದಾನದಲ್ಲಿ ದಂಬೆಕೊಡಿಯಲ್ಲಿ ಸೇತುವೆಯ ಎರಡೂ ಭಾಗದಲ್ಲಿ ಎತ್ತರವಾಗಿದ್ದ ರಸ್ತೆಯನ್ನು ತಗ್ಗುಗೊಳಿಸಿ, ಅಗಲೀಕರಣಗೊಳಿಸಿ ರಸ್ತೆಯ ಅಪಾಯಕಾರಿಯಾಗಿದ್ದ ಸ್ಥಳದಲ್ಲಿ ತಡೆಗೋಡೆ ನಿರ್ಮಿಸುವ ಮೂಲಕ ವಾಹನಗಳು ಅಪಾಯರಹಿತವಾಗಿ ಸಂಚರಿಸಲು ಅನುಕೂಲ ವಾಗುವಂತೆ ಅಭಿವೃದ್ಧಿಪಡಿಸಲಾಗಿದೆ.

ಸತತ ಪರಿಶ್ರಮ

ಇರುವೈಲು ಗ್ರಾ.ಪಂ.ನ ನಿಕಟಪೂರ್ವ ಸದಸ್ಯರುಗಳು, ಸ್ಥಳೀಯ ಮುಖಂಡರುಗಳ, ಲೋಕೋಪಯೋಗಿ ಇಲಾಖೆಯ ಸತತ ಪರಿಶ್ರಮ ಮತ್ತು ಶಾಸಕ ಉಮಾನಾಥ ಕೋಟ್ಯಾನ್ ಅವರ ಇಚ್ಛಾಶಕ್ತಿಯ ಫಲವಾಗಿ ಅಪಘಾತ ಸ್ಥಳವಾಗಿದ್ದ ಇಲ್ಲಿ ವಿಶಾಲವಾದ ರಸ್ತೆ ನಿರ್ಮಾಣವಾಗುವ ಮೂಲಕ ಈ ಭಾಗದ ಜನರ ಬಹುಕಾಲದ ಬೇಡಿಕೆ ಈಡೇರಿದೆ.

ಸುತ್ತಮುತ್ತ

ಗ್ಯಾಸ್ ಕೊರತೆ ಬಗ್ಗೆ ಗೊಂದಲ ಬೇಡ: ಮಠಂದೂರು



ಪುತ್ತೂರು: ಪ್ರಸ್ತುತ ಇರಾನ್, ಅಮೇರಿಕಾ, ಇಸ್ರೇಲ್ ನಡುವಣ ಯುದ್ಧದಿಂದ ಭಾರತದಲ್ಲೂ ಇಂಧನ, ತೈಲ ಹಾಗೂ ನೈಸರ್ಗಿಕ ಅನಿಲದ ಕೊರತೆ ಉಂಟಾಗಿ ಜನರು ಒಂದಷ್ಟು ಬವಣೆ ಪಡುವ ಸಂದರ್ಭದಲ್ಲಿ ಈ ದೇಶದ ಪ್ರಧಾನಿ ನರೇಂದ್ರ ಮೋದಿ ಮತ್ತು ಇಂಧನ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಬಹಳ ವ್ಯವಸ್ಥಿತವಾಗಿ, ಜನರಿಗೆ ಯಾವುದೇ ಸಮಸ್ಯೆಯಾಗದ ರೀತಿ ಅಡುಗೆ ಅನಿಲವನ್ನು ನಿರ್ವಹಣೆ ಮಾಡುವ ಕೆಲಸ ಮಾಡಿದ್ದಾರೆ ಎಂದು ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ. ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಅಡುಗೆ ಅನಿಲದ ಕೊರತೆ ಎದುರಿಸುವ ಸಂದರ್ಭದಲ್ಲಿ ಭಾರತದ ಜನತೆ ನೆಮ್ಮದಿಯಾಗಿ ತಮ್ಮ ದಿನನಿತ್ಯದ ಅಡುಗೆ, ಇತರ ವ್ಯವಸ್ಥೆಗಳನ್ನು ಮಾಡುತ್ತಿರುವುದಕ್ಕೆ ಕಾರಣ ಈ ದೇಶದ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಂಧನ ಸಚಿವರು. ಜನರು ಅಡುಗೆ ಅನಿಲದ ಕೊರತೆಯಾಗಬಹುದು ಎಂದು ಹೆಚ್ಚುವರಿ ಅಡುಗೆ ಅನಿಲ ಸಿಲಿಂಡರ್ ತೆಗೆದುಕೊಳ್ಳುವುದು, ಕಾಳ ಸಂತೆಯಲ್ಲಿ ಮಾರಾಟವೂ ನಡೆಯುತ್ತಿದೆ. ಈ ಸನ್ನಿವೇಶದಲ್ಲಿ ಕೇಂದ್ರ ಸರಕಾರ ತುರ್ತಾಗಿ ರಷ್ಯಾ ಹಾಗೂ ಬೇರೆ ಬೇರೆ ರಾಷ್ಟ್ರಗಳಿಂದ ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲ ತರಿಸಿ ವಿಶೇಷವಾಗಿ ನವ ಮಂಗಳೂರು ಬಂದರಿಗೂ ಹಡಗಿನ ಮುಖಾಂತರ ತರಿಸಿ ಅನಿಲದ ಕೊರತೆಯನ್ನು ನೀಗಿಸುವ ಕೆಲಸ ಮಾಡುತ್ತಿದೆ. ಸಾಮಾನ್ಯ ಜನರು ಅಡುಗೆ ಅನಿಲದ ಬಗ್ಗೆ ಯಾವುದೇ ಗೊಂದಲಕ್ಕೆ ಈಡಾಗಬಾರದು. ಪ್ರತಿಯೊಬ್ಬ ವ್ಯಕ್ತಿಗೆ ಆವಶ್ಯಕತೆ ಇರುವುದನ್ನು ಪೂರೈಸುವ ಕೆಲಸವನ್ನು ಕೇಂದ್ರ ಸರಕಾರ ಮಾಡುತ್ತಿದೆ. ವಾಣಿಜ್ಯ ಉದ್ದೇಶದ ಗ್ಯಾಸ್ ಕೊರತೆಯೂ ಮುಂದಿನ ದಿನಗಳಲ್ಲಿ ಉಂಟಾಗುವುದಿಲ್ಲ, ಈಗಾಗಲೇ ಇಂಧನ ಸಚಿವರು ಈ ಕುರಿತು ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಸಂಸದರು ಕೊರತೆಯ ಬಗ್ಗೆ ಸಚಿವರ ಗಮನಕ್ಕೆ ತಂದಿದ್ದಾರೆ. ಜಿಲ್ಲೆಯ ಹೋಟೆಲ್ ಮಾಲಕರು, ಬೀದಿ ಬದಿ ವ್ಯಾಪಾರಿಗಳು ವಾಣಿಜ್ಯ ಗ್ಯಾಸ್ ಬಗ್ಗೆ ಆತಂಕಪಡುವ ಸಂದರ್ಭ ಇಲ್ಲ. ಮುಂದಿನ ದಿನಗಳಲ್ಲಿ ಯಥೇಚ್ಛವಾಗಿ ಗ್ಯಾಸ್ ಪೂರೈಸುವ ಕೆಲಸ ಇಂಧನ ಸಚಿವರ ಮುಖಾಂತರ ಆಗಲಿದೆ ಎಂದು ಸಂಜೀವ ಮಠಂದೂರು ಹೇಳಿದ್ದಾರೆ. ವಿಶೇಷವಾಗಿ ಪುತ್ತೂರು ಜಾತ್ರೆಯ ಸಂದರ್ಭದಲ್ಲೂ ಗ್ಯಾಸ್ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಕೆಲಸವನ್ನು ಬಿಜೆಪಿ ವತಿಯಿಂದ ಸಂಸದರ ಮುಖಾಂತರ ಮಾಡಲಿದ್ದೇವೆ. ಯಾರೂ ಕೂಡ ಗ್ಯಾಸ್ ಶೇಖರಣೆ ಮಾಡದೆ ದಿನನಿತ್ಯ ಆವಶ್ಯಕತೆ ಇರುವಷ್ಟೇ ಉಪಯೋಗಿಸಬೇಕು ಎಂದು ಮಠಂದೂರು ಮನವಿ ಮಾಡಿದ್ದಾರೆ.

ಗಣಿಗಾರಿಕೆಗೆ ಅನುಮತಿ ನೀಡಿದರೆ ಪ್ರತಿಭಟನೆ: ರೈತ ಸಂಘದಿಂದ ಎಚ್ಚರಿಕೆ

ಸೋಮವಾರಪೇಟೆ: ಕುಂದಳ್ಳಿ ಗ್ರಾಮ ಹಾಗೂ ಉಪಗ್ರಾಮಗಳಲ್ಲಿ ಸರ್ಕಾರ ಗಣಿಗಾರಿಕೆಗೆ ಅನುಮತಿ ನೀಡಲು ಕುತಂತ್ರ ರೂಪಿಸಿದರೆ ರೈತರ ಸಹಕಾರದಿಂದ ಉಗ್ರಪ್ರತಿಭಟನೆ ರೂಪಿಸಲಾಗುವುದು ಎಂದು ರೈತ ಸಂಘದ ತಾಲೂಕು ಘಟಕ ಎಚ್ಚರಿಸಿದೆ.

ಸೋಮವಾರಪೇಟೆ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಕೆ.ಎಂ.ದಿನೇಶ್ ಮಾತನಾಡಿ, ಉಪಗ್ರಾಮವಾದ ಕನ್ನಳ್ಳಿ ಗ್ರಾಮದಲ್ಲಿ ಅದಿರು ತೆಗೆಯುವುದಕ್ಕೆ ಆಂಧ್ರ ಮೂಲದ ಕಂಪನಿಯೊಂದು ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ಹೊರರಾಜ್ಯದ ಲ್ಯಾಬ್‌ ಕಳುಹಿಸುತ್ತಿರುವ ಮಾಹಿತಿ ಲಭ್ಯವಾಗಿದೆ. ಕುಂದಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಕೇಂದ್ರ ಸರ್ಕಾರದ ಭೂ ಸರ್ವೇಕ್ಷಣಾ ಸಮೀಕ್ಷೆ-2026 ಅನ್ನು ಕೂಡಲೇ ತಡೆಹಿಡಿಯುವಂತೆ ಗ್ರಾಮಸ್ಥರ ಸಮ್ಮುಖದಲ್ಲಿ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ ಎಂದು ಕುಂದಳ್ಳಿ ಗ್ರಾಮದಲ್ಲಿ 280 ಮನೆಗಳಿವೆ. 2018ರಲ್ಲಿ ಕೊಡಗಿನಲ್ಲಿ ಭೂಕುಸಿತ ಸಂಭವಿಸಿತ್ತು. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಹೆಸರಿನಲ್ಲಿ ಕೆಲವು ಅಧಿಕಾರಿಗಳು ಕುಂದಳ್ಳಿ- ಕನ್ನಳ್ಳಿ ಸುತ್ತಮುತ್ತ ಮಣ್ಣಿನ ಪರೀಕ್ಷೆ ಮಾಡಲು ಪ್ರಾರಂಭಿಸಿದ್ದರು. ಅಂದು ರೈತರು ಪ್ರಶ್ನೆ ಮಾಡಿದ ಸಂದರ್ಭ ಕುಂದಳ್ಳಿ ಸುತ್ತಮುತ್ತಲ ಗ್ರಾಮದಲ್ಲಿ ಭೂಕುಸಿತವಾಗಲಿದೆ. ಎಲ್ಲರೂ ಗ್ರಾಮವನ್ನು ತೊರೆಯಬೇಕಾಗುತ್ತದೆ ಎಂದು ಭಯ ಹುಟ್ಟಿಸಿದ್ದರು ಎಂದು ಹೇಳಿದರು. ಗ್ರಾಮಸ್ಥರಾದ ಕೆ.ಬಿ.ಜಗದೀಶ್ ಮಾತನಾಡಿ, ರೈತ ಕೃಷಿ ಮಾಡುವ ಗದ್ದೆಗೆ ಅಕ್ರಮ ಪ್ರವೇಶ ಮಾಡಿ, ಜೆಸಿಬಿಯಲ್ಲಿ ದೊಡ್ಡ ಗುಂಡಿಗಳನ್ನು ಮಾಡಿ ಮಣ್ಣು ಸಂಗ್ರಹಿಸಿದ್ದಾರೆ. ಅಂತಹ ಜಾಗದಲ್ಲಿ ವ್ಯವಸಾಯ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು. ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಜಿ.ಎಂ. ಹೂವಯ್ಯ, ವಲಯ ಅಧ್ಯಕ್ಷ ಬಿ.ಪಿ.ಮೊಗಪ್ಪ ಪದಾಧಿಕಾರಿ ಎಚ್.ಈ.ರಮೇಶ್ ಇದ್ದರು.

ಆರೋಗ್ಯ ಸಚಿವರಿಂದ ಉದ್ಘಾಟನೆಗೊಂಡಿದ್ದ ನೂತನ ಕಟ್ಟಡ | ಹಳೆಯ ಕಟ್ಟಡ ತೆರವಿಗೆ ಮೀನಮೇಷ

ಭೂತಬಂಗಲೆಯಂತಾಗಿದೆ ಸುಳ್ಯದ ಸುಸಜ್ಜಿತ ಶವಾಗಾರ!

■ ಮಿಥುನ್ ಕರ್ಲಪ್ಪಾಡಿ

ಸುಳ್ಯ: ಜಿಲ್ಲೆಯಲ್ಲಿ ಮಾದರಿಯಾಗಿ ಉನ್ನತ ಮಟ್ಟದ ಚಿಕಿತ್ಸೆ ಹಾಗೂ ವಿವಿಧ ವೈದ್ಯಕೀಯ ಸಲಕರಣೆ ಗೊಳೊಂದಿಗೆ ಜಿಲ್ಲಾಸ್ಪತ್ರೆ ಸಮಾನವಾಗಿ ಬೆಳೆದು ಸಾರ್ವಜನಿಕರಿಗೆ ಸೇವೆ ನೀಡುವ ಸುಳ್ಯದ ಆಸ್ಪತ್ರೆಯ ಸುಸಜ್ಜಿತ ನೂತನ ಶವಾಗಾರ ಉದ್ಘಾಟನೆಗೊಂಡಿದ್ದರೂ ಅಲ್ಲಿಗೆ ತೆರಳಲು ಸೂಕ್ತ ದಾರಿಯಿಲ್ಲದೇ ಭೂತಬಂಗಲೆಯಂತಾಗಿದೆ.

ಸುಸಜ್ಜಿತ ಶವಾಗಾರ

ಸುಳ್ಯ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಹಾಗೂ ವೈದ್ಯಕೀಯ ಹಾಗೂ ಇತರೆ ವಿಚಾರಗಳಲ್ಲಿ ಭೇಷ್ ಅನ್ನಿಸುತ್ತಿದ್ದು ಇವೆಲ್ಲವೂ ಇದ್ದು ಕೇವಲ ಒಂದು ಹಳೆಯ ಶವಾಗಾರ ಇನ್ನೂ ತೆರವುಗೊಳಿಸದೇ ಆಸ್ಪತ್ರೆಗೆಯ ನೂತನ ಶವಾಗಾರ ಇದೀಗ ಪಾಳು ಬೀಳುವಂತಾಗಿದೆ. ಸುಳ್ಯ ಆಸ್ಪತ್ರೆಯಲ್ಲಿ ವಿವಿಧ ಸೌಲಭ್ಯಗಳನ್ನು ರಾಜ್ಯ ಕುಟುಂಬ ಕಲ್ಯಾಣ ಹಾಗೂ ಆರೋಗ್ಯ ಜೊತೆಗೆ ಜಿಲ್ಲೆಯ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸ್ವತಃ ಆಗಮಿಸಿ ನೂತನ



ತಂತ್ರಜ್ಞಾನಗಳನ್ನು ಒಳಗೊಂಡು ಸುಸಜ್ಜಿತವಾದ ಶವಾಗಾರ ದಿನದ 24 ಗಂಟೆಯು ಕಾರ್ಯಾಚರಣೆ ಜೊತೆಗೆ ಸ್ಟೋರೇಜ್‌ಗಳನ್ನು ಹೊಂದಿ ಉತ್ತಮ ಗಾಳಿ ಬೆಳಕು ಸೇರಿದಂತೆ ಇತರೆ ಎಲ್ಲಾ ಸೌಲಭ್ಯ ಇರುವಂತೆ ನಿರ್ಮಿಸಿ ಲೋಕಾರ್ಪಣೆ ಗೊಳಿಸಿ ತೆರಳಿದ್ದರು.

ಕೆಡವಲು ಆದೇಶ

ಇದೀಗ ಹಳೆಯ ಶವಾಗಾರ ಕೆಡವಲು ಆದೇಶವನ್ನು ಮಾಡಲಾಗಿದ್ದು ಅದರಂತೆ ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ನವೀನ್ ಎನ್.ಎಸ್. ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಸಹಕಾರದಿಂದ ಕೆಡವಲು ಬೇಕಾಗುವ ಎಲ್ಲಾ ದಾಖಲೆಗಳನ್ನು ಸಿದ್ಧಪಡಿಸಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿದರು. ಅದರಂತೆ ಸುಳ್ಯ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ನೂತನ ಶವಗಾರಕ್ಕೆ ತೆರಳಲು ರಸ್ತೆ ನಿರ್ಮಿಸಲು ಹಳೆಯ ಶವಾಗಾರ ನೆಲಸಮ ಅನಿವಾರ್ಯ ಹಾಗೂ ಹಳೆಯದಾದ ಕಟ್ಟಡದ ಚಿತ್ರಗಳ ಸಹಿತ ಮಂಗಳೂರು ಲೋಕೋಪಯೋಗಿ ಇಲಾಖೆಗೆ 2025ರ ನ.25ರಂದು ಸಲ್ಲಿಕೆಯಾಗಿದ್ದು ಇದೀಗ ನೂತನ ಶವಗಾರ ಉದ್ಘಾಟನೆಗೊಂಡು ಹಳೆಯ ಶವಾಗಾರ ನೆಲಸಮ ಮಾಡದ ಹಿನ್ನಲೆಯಲ್ಲಿ ನೂತನ ಸುಸಜ್ಜಿತ ಶವಗಾರ ರಸ್ತೆಯಿಲ್ಲದೇ ಪಾಳು ಬಿದ್ದು ಹೋಗುವಂತಾಗಿದ್ದು ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಿದೆ.

ಅನುಮತಿಗೆ ಕಾಯುತ್ತಿದ್ದೇವೆ

ನಾವು ಸರಕಾರಿ ಆಸ್ಪತ್ರೆಯಲ್ಲಿ ಸಚಿವರ ಸಮ್ಮುಖದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಉದ್ಘಾಟನೆಗೊಂಡ ಶವಾಗಾರ ಕಾರ್ಯಾರಂಭಿಸುವ ಸಲುವಾಗಿ ಹಳೆಯ ಶವಾಗಾರ ಕೆಡವಿ ಬಳಿಕ ನೂತನ ಶವಾಗಾರಕ್ಕೆ ತೆರಳಲು ರಸ್ತೆ ಮಾಡಿದಾಗ ಸಾಧ್ಯವಾಗಲಿದ್ದು ಇಂಜಿನಿಯರಿಂಗ್ ವಿಭಾಗ ಅನುಮತಿಗೆ ಕಾಯುತ್ತಿದ್ದೇವೆ. ಕಳುಹಿಸಿ ನೀಡಿದ್ದರು ಬಂದಿಲ್ಲ.

● ನವೀನ್ ಎನ್.ಎಸ್., ತಾಲೂಕು ಆಡಳಿತ ವೈದ್ಯಾಧಿಕಾರಿ

ಕರೆಯನ್ನೇ ಸ್ವೀಕರಿಸುತ್ತಿಲ್ಲ

ಆರೋಗ್ಯ ರಕ್ಷಾ ಸಮಿತಿಯ ಸದಸ್ಯರುಗಳಾಗಿ ನಾವು ಮಂಗಳೂರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಕರೆ ಹಾಗೂ ಕಛೇರಿಗೆ ತೆರಳಿದಾಗ ನಾಳೆ... ನಾಳೆ... ಎಂಬ ಉತ್ತರ ನೀಡುತ್ತಿದ್ದು ಇದೀಗ ದೂರವಾಣಿ ಕರೆಯನ್ನೇ ಸ್ವೀಕರಿಸುತ್ತಿಲ್ಲ.

● ರಾಧಾಕೃಷ್ಣ ಪರಿವಾರಕಾನ, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ

ಪರಿಶೀಲನೆ ನಡೆಸಲಾಗಿದೆ

ಸ್ಥಳ ಭೇಟಿ ನೀಡಿ ಪರಿಶೀಲನೆ ನಡೆಸಿ ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳಿಗೆ 2025ರ ನ.25ಕ್ಕೆ ಸಲ್ಲಿಸಲಾಗಿದೆ. ಈಗಾಗಲೇ ಹಳೆಯ ಕಟ್ಟಡ ನಾದುರಸ್ತಿಯಲ್ಲಿದ್ದು ನೂತನ ಶವಗಾರಕ್ಕೆ ರಸ್ತೆ ಸಂಪರ್ಕ ಕಲ್ಪಿಸಲು ಶವಗಾರ ತೆರವು ಅನಿವಾರ್ಯ. ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಪತ್ರದ ಹಿನ್ನಲೆಯಲ್ಲಿ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಮಂಗಳವಾರ ಮಂಗಳೂರಿನಲ್ಲಿ ಸಭೆ ನಡೆಯಲಿದ್ದು, ಈ ಸಂದರ್ಭ ಗಮನಕ್ಕೆ ತರುವುದಾಗಿ ಸುಳ್ಯ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಪರಮೇಶ್ವರ ಹಾಗೂ ಗೋಪಾಲ್ ತಿಳಿಸಿದ್ದಾರೆ.


ವಿಟ್ಲ ಪ.ಪಂ.ನಲ್ಲಿ ವಾರ್ಡ್ ಸದಸ್ಯರ, ವಾಲ್ ಮ್ಯಾನ್‌ಗಳ ಸಭೆ

ವಿಟ್ಲ: ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಾಣವಾಗುವ ಕುಡಿಯುವ ನೀರಿನ ಸಮಸ್ಯೆ ಕುರಿತು ಸಭೆ ವಾರ್ಡ್ ಸದಸ್ಯರ ಹಾಗೂ ವಾಲ್ ಮ್ಯಾನ್‌ಗಳ ಸಭೆ ನಡೆಯಿತು.

ಕೊಳವೆ ಬಾವಿಗಳಲ್ಲಿ ನೀರಿನ ಕೊರತೆ ಇದ್ದು ಎರಡು ದಿನಕ್ಕೊಮ್ಮೆ ನೀರು ನೀಡಿದರೂ ಟ್ಯಾಂಕ್ ಭರ್ತಿಯಾಗಲು ಕಷ್ಟವಿದೆ. ಕೆಲವು ಭಾಗದಲ್ಲಿ ಒಂದೊಂದು ಮನೆಗೆ ಎರಡೆರಡು ಸಂಪರ್ಕವಿದ್ದು ಇದರಿಂದ ನೀರಿನ ದುರುಪಯೋಗ ಆಗುತ್ತಿದೆ. ಕೆಲವು ಭಾಗದಲ್ಲಿ ವಾಹನ ತೊಳೆಯಲು, ಕೃಷಿ ಚಟುವಟಿಕೆ ಬಳಕೆಯಾಗುತ್ತಿದೆ. ಹಾಗೆಂದು ಸಮಸ್ಯೆಗಳನ್ನು ಸದಸ್ಯರು ಹೇಳಿದ್ದೆಂಬ ಮಾಹಿತಿಯನ್ನು ಯಾವುದೇ ಕಾರಣಕ್ಕೂ ವಾರ್ಡ್‌ಗಳಲ್ಲಿ ನೀಡಬಾರದು ಎಂದು ಹೇಳಿದರು. ಮೇಗಿನಪೇಟೆಗೆ ನೀರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಬಾಡಿಗೆ ಮನೆಯಲ್ಲಿ ವಾಸವಾಗಿರುವರಿಗೆ ಮನೆ ಮಾಲೀಕರು ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಡಿಸೆಂಬರ್‌ವರೆಗೆ ಪಂಪ್ ಸಮಸ್ಯೆಯಾಗುತ್ತಿದ್ದು ನೀರಿನ ಲಭ್ಯತೆಯಿಲ್ಲದೆ ಪಂಪ್ ಆಗಾಗ ದುರಸ್ಥಿಗೆ ಬರುತ್ತಿದೆ. ಸದ್ಯ ಕೊಳವೆ ಬಾವಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು ಹೆಚ್ಚುವರಿ ಪೈಪ್ ಅಳವಡಿಸಬೇಕು. ಕೆಲವು ಕಡೆ ಪಂಪ್ ಚಾಲನೆ ಮಾಡುವವರು ಸರಿಯಾಗಿ ಗಮನಿಸದೆ ಪಂಪ್ ದುರಸ್ಥಿಗೆ ಬರುತ್ತಿದೆ ಎಂದು ಸದಸ್ಯರು ಹೇಳಿದರು.

ಮುಖ್ಯಾಧಿಕಾರಿ ಕರುಣಾಕರ ವಿ. ಮಾತನಾಡಿ, ಮಳೆಯ ಅಭಾವ ಇರುವ ಕಾರಣ ಕುಡಿಯುವ ನೀರಿನ ಸಮಸ್ಯೆಯಾಗುತ್ತಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಬರುವವರೆಗೆ ಕೊಳವೆ ಬಾವಿಗಳನ್ನು ಜೀವಂತ ಇಡಬೇಕಾಗಿದೆ. ನೀರು ಸಾಕಾಗುವುದಿಲ್ಲ ಎಂಬುದಕ್ಕೆ ಕೃಷಿ ಚಟುವಟಿಕೆಗೆ ಬಳಸುವುದು ಮುಖ್ಯ ಕಾರಣವಾಗಿದೆ. ಅಂತಹ ಪ್ರಕರಣ ಇದ್ದರೆ, ವಾಲ್ ಮ್ಯಾನ್‌ಗಳು ಗಮನಕ್ಕೆ ತರುವ ಕಾರ್ಯ ಮಾಡಿ. ನೀರು ಪೋಲು ಮಾಡುವವರನ್ನು ಹಿಡಿಯುವ ಕಾರ್ಯ ಮಾಡಲಾಗುವುದು ಎಂದರು. ಪಟ್ಟಣ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಉಪಾಧ್ಯಕ್ಷೆ ಸಂಗೀತ ಪಾಣೆಮಜಲು, ಸ್ಥಾಯಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಇದ್ದರು.

ಅಕ್ಷಯ ಕಾಲೇಜಿನಲ್ಲಿ 'ದಿ ನೆಕ್ಸ್ಟ್ ಚಾಪ್ಟರ್' ಕೆರಿಯರ್ ಮಾರ್ಗದರ್ಶನ



ಪುತ್ತೂರು: ಅಕ್ಷಯ ಕಾಲೇಜಿನ ಹಾಸ್ಪಿಟಾಲಿಟಿ ಸೈನ್ಸ್ ವಿಭಾಗದ ಕಾಯು ಸಂಘಟನೆಯು 2026ರ ಮಾರ್ಚ್ 14ಕ್ಕೆ 'ದಿ ನೆಕ್ಸ್ಟ್ ಚಾಪ್ಟರ್' ಎಂಬ ಕೆರಿಯರ್ ಆಧಾರಿತ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಭವಿಷ್ಯದ ಶಿಕ್ಷಣ ಮತ್ತು ವೃತ್ತಿ ಮಾರ್ಗಗಳ ಬಗ್ಗೆ ಜ್ಞಾನಾಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಮಾರ್ಗದರ್ಶನ ನೀಡಿತು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯ ಆಧಾರಿತ ಶಿಕ್ಷಣ, ಜಾಗತಿಕ ಒಡನಾಟ ಮತ್ತು ಅನುಕೂಲತೆಯ ಬೆಳೆಯುತ್ತಿರುವ ಮಹತ್ವವನ್ನು ಕಾರ್ಯಾಗಾರದಲ್ಲಿ ಹೇಳಲಾಯಿತು. ಸಾಂಪ್ರದಾಯಿಕ ಮಾರ್ಗಗಳನ್ನು ಮೀರಿದ ವೈವಿಧ್ಯಮಯ ವೃತ್ತಿ ಅವಕಾಶಗಳನ್ನು ಅನ್ವೇಷಿಸಿ, ನಿರಂತರ ಶಿಕ್ಷಣ ಮತ್ತು ಪ್ರಾಯೋಗಿಕ ಅನುಭವದ ಮೂಲಕ ಬಲಿಷ್ಠ ವೃತ್ತಿಪರ ಪ್ರೊಫೈಲ್‌ಗಳನ್ನು ನಿರ್ಮಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

ಅಕ್ಷಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಅಕ್ಷಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಕೋರಿದರು. ಸುನಿಲ್ ಜಾರ್ಜ್ ಅವರು ಕೀನೋಟ್ ಕಾರ್ಯಾಗಾರ ನಡೆಸಿದರು. ಉದ್ಯಮ-ಆಧಾರಿತ ಕೌಶಲ್ಯಗಳು, ಪ್ರಮಾಣಪತ್ರಗಳು ಮತ್ತು ಪ್ರಾಯೋಗಿಕ ತರಬೇತಿಯ ಅಗತ್ಯತೆಯನ್ನು ಅವರು ಒತ್ತಿ ಹೇಳಿದರು. ಯುಎಇ ಮತ್ತು ಜರ್ಮನಿ ಸೇರಿದಂತೆ ಅಂತರರಾಷ್ಟ್ರೀಯ ಮಾರ್ಕೆಟ್‌ಗಳಲ್ಲಿ ವೃತ್ತಿ ಅವಕಾಶಗಳ ಬಗ್ಗೆ ಮಾರ್ಗದರ್ಶನ ನೀಡಿದರು. ತಾಂತ್ರಿಕ ಜ್ಞಾನ ಮತ್ತು ಸರಿಯಾದ ಮನೋಭಾವವು ಜಾಗತಿಕ ಅವಕಾಶಗಳನ್ನು ಗಳಿಸುವಲ್ಲಿ ಕೀ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ವಿದೇಶದಲ್ಲಿ ಅಧಿಕ ಶಿಕ್ಷಣ ಅವಕಾಶಗಳು, ಯೋಜನೆ, ಸರಿಯಾದ ಕೋರ್ಸ್ ಆಯ್ಕೆ ಮತ್ತು ಜಾಗತಿಕ ವೃತ್ತಿ ಮಾರ್ಗಗಳ ತಯಾರಿಯ ಮಹತ್ವ ಬಗ್ಗೆ ಮೌಲ್ಯವಂತ ಜಾಗೃತಿ ನೀಡಲಾಯಿತು. ವಿದ್ಯಾರ್ಥಿಗಳು ಭಾಗವಹಿಸಿ, ಪ್ರಶ್ನೆಗಳನ್ನು ಕೇಳಿ, ಮುಂದಿನ ಅಧ್ಯಯನ ಮತ್ತು ವೃತ್ತಿ ಹಂತಗಳ ಬಗ್ಗೆ ಸ್ಪಷ್ಟತೆ ಗಳಿಸುವ ಅವಕಾಶ ನೀಡಿತು. ಹಾಸ್ಪಿಟಾಲಿಟಿ ಸೈನ್ಸ್ ವಿಭಾಗದ ಮುಖ್ಯಸ್ಥ ಅವಿನಾಶ್, ಐಕ್ಯೂಎಸಿ ಕೋಆರ್ಡಿನೇಟರ್ ರಶ್ಮಿ ಇದ್ದರು. ಲಾವಣ್ಯ ಪ್ರಾರ್ಥಿಸಿದರು. ಶ್ರೇಯಸ್ ಸ್ವಾಗತಿಸಿ, ಪ್ರತೀಕಾ ವಂದಿಸಿದರು. ಚೇತನ್ ಕಾರ್ಯಕ್ರಮ ನಿರ್ವಹಿಸಿದರು.

ಓಂಕಾರ ಫ್ರೆಂಡ್ಸ್, ಮಹಿಳಾ ಘಟಕದ ವಾರ್ಷಿಕೋತ್ಸವ: ಸಾಧಕರಿಗೆ ಸನ್ಮಾನ



ಬಂಟ್ವಾಳ: ಓಂಕಾರ ಫ್ರೆಂಡ್ಸ್ ಹಾಗೂ ಓಂಕಾರ ಮಹಿಳಾ ಘಟಕ, ಮದ್ದ ಇದರ 15ನೇ ವಾರ್ಷಿಕೋತ್ಸವವು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಓಂಕಾರ ಭಜನಾ ಮಂಡಳಿಯ ಬಾಲ ಭಜಕರಿಂದ ಭಜನಾ ಸೇವೆ, ನಂತರ ಮದ್ದ ಮಂಟಪದಲ್ಲಿ ಕಾಡಬೆಟ್ಟು ಶ್ರೀ ನಾರಾಯಣ ಶಿಬರಾಯರವರ ಪೌರೋಹಿತ್ಯದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ನೆರವೇರಿತು. ರಾತ್ರಿ ಓಂಕಾರ ಭಜನಾ ತಂಡದ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.

ಈ ಸಂದರ್ಭ ಓಂಕಾರ ಫ್ರೆಂಡ್ಸ್ ಅಧ್ಯಕ್ಷರಾದ ಬಾಲಕೃಷ್ಣ ಗೌಡ ಪಾದೆಬೆಟ್ಟು ರವರ ಅಧ್ಯಕ್ಷತೆಯಲ್ಲಿ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಕಾರಿಂಜದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರೇಂದ್ರ ಬಿ. ಅಮೀನ್ ವಗ್ಗ ಅವರು ಉದ್ಘಾಟಿಸಿ ಶುಭಹಾರೈಸಿದರು.

ಶಾಸಕ ರಾಜೇಶ್ ನ್ಯಾಕ್ ಅವರು ಸಂಘಟನೆಯ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು. ಯುವ ಉದ್ಯಮಿ ಸಂದೇಶ್ ಶೆಟ್ಟಿ ಅರೆಬೆಟ್ಟು, ಮಾಜಿ ಜಿ.ಪಂ. ಉಪಾಧ್ಯಕ್ಷ ಎಂ. ತುಂಗಪ್ಪ ಬಂಗೇರ, ಕಿಯೋನಿಕ್ಸ್ ಮಾಜಿ ಅಧ್ಯಕ್ಷರಾದ ಹರಿಕೃಷ್ಣ ಬಂಟ್ವಾಳ, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಬೇಬಿ ಕುಂದರ್, ಬಿಜೆಪಿ ಬಂಟ್ವಾಳ ಮಂಡಲ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್, ಬಿಜೆಪಿ ಬಂಟ್ವಾಳ ಮಂಡಲದ ಪ್ರ. ಕಾರ್ಯದರ್ಶಿ ಸುದರ್ಶನ್ ಬಜ, ಯುವವಾಹಿನಿ ಬಂಟ್ವಾಳ ಘಟಕ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೆಲು, ಸುರೇಶ್ ಶೆಟ್ಟಿ ಆರ್ ಕೆ ನಿವಾಸ ಮದ್ದ ದೀರಜ್ ಆಚಾರ್ಯ ಕಲ್ಲಡ್ಕ ಪಿಲಾತಬೆಟ್ಟು ಗ್ರಾ.ಪಂ.ಮಾಜಿ ಅಧ್ಯಕ್ಷೆ ಹರ್ಷಿಣಿ ಪುಷ್ಪಾನಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಿರಿಯ ಮೇಲ್ವಿಚಾರಕಿ ರೂಪಕಲ ಮದ್ದ, ಬಿಜೆಪಿ ಯುವ ಮೋರ್ಚಾ ಬಂಟ್ವಾಳ ಮಂಡಲದ ಅಧ್ಯಕ್ಷ ದಿನೇಶ್ ಶೆಟ್ಟಿ ದಂಬೆದಾರ್, ಕಾರಿಂಜ ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ಮಾಜಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಪುಳಿಮಜಲು, ಓಂಕಾರ ಮಹಿಳಾ ಘಟಕದ ಅಧ್ಯಕ್ಷೆ ವಿಜಯ ಯೋಗೀಶ್ ಪೂಜಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಾದ ಸಾಯಿ ಸುಮಾ ಮಿಥುನ್ ರಾಜ್ ನಾವಡ, ಮೇಜರ್ ಡಾ. ಸುಧಾ ಚಂದ್ರಶೇಖರ್ ಶೆಟ್ಟಿ ಪುಳಿಮಜಲು, ತಿಮ್ಮಪ್ಪ ಮದ್ದ ಧನ್ಯ ಗೌಡ ಮದ್ದ ರಾಜಮಾರ್ ಅವರನ್ನು ಸನ್ಮಾನಿಸಲಾಯಿತು. ಅರ್ಪಣಾ ಸ್ವಾಗತಿಸಿ, ಪ್ರಮೀತ್ ಪೂಜಾರಿ ವಂದಿಸಿದರು. ರಶ್ಮಿ ಸಂದೇಶ್ ರೈ, ಮೇಘಶ್ರೀ ಯಾದೇಶ್ ರೈ ನಿರೂಪಿಸಿದರು. ಕೊನೆಗೆ ಓಂಗಾರ ಕಲಾವಿದರು ಬೆದ್ರ ಇವರಿಂದ ತುಳು ನಾಟಕ ಪ್ರದರ್ಶನಗೊಂಡಿತು.

ಪಡೀಲ್: ಮಹಿಳಾ ದಿನಾಚರಣೆ, ಸನ್ಮಾನ



ಮಂಗಳೂರು: ಆದರ್ಶ ಮಹಿಳಾ ಮಂಡಲ, ಹೇಮಾವತಿ ನಗರ, ಪಡೀಲ್ ಇವರ ವತಿಯಿಂದ ಭಾನುವಾರ ಮಹಿಳಾ ಮಂಡಲದ ಕಟ್ಟಡದಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಚೇತನ ಸರೋಜಿನಿ ದೇವಾಡಿಗ ಅವರನ್ನು ಸನ್ಮಾನಿಸಲಾಯಿತು. ಬಳಿಕ ಮಹಿಳೆಯರಿಗೆ ವಿವಿಧ ಸ್ಪರ್ಧಾ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಧ್ಯಕ್ಷತೆಯನ್ನು ಮಂಡಲದ ಅಧ್ಯಕ್ಷೆ ಸಾವಿತ್ರಿ ವಹಿಸಿದರು. ಉಪಾಧ್ಯಕ್ಷೆ ಜಯಲಕ್ಷ್ಮಿ ಅವರು ಅತಿಥಿಗಳ ಪರಿಚಯವನ್ನು ಮಾಡಿದರು. ಕಾರ್ಯದರ್ಶಿ ಮೋಹಿನಿ ನಿರೂಪಿಸಿ, ಖಜಾಂಜಿ ಉಷಾ ಅವರು ಮಹಿಳೆಯರ ಬಗ್ಗೆ ಮಹಿಳೆಯರ ಸ್ಥಾನಮಾನ ಮತ್ತು ಮಹತ್ವದ ಕುರಿತು ಮಾತನಾಡಿದರು. ಜಯಲಕ್ಷ್ಮಿ ವಂದಿಸಿದರು.

ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ: ಕೇಂದ್ರ ಸರಕಾರ ಗೃಹಬಳಕೆ ಮತ್ತು ವಾಣಿಜ್ಯ ಅಡುಗೆ ಅನಿಲ ಬೆಲೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಮಡಿಕೇರಿ ನಗರ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಬೀದಿಗಿಳಿದು ಪ್ರತಿಭಟನೆ ನಡೆಸಿದರು.


ನಗರದ ಇಂದಿರಾ ಗಾಂಧಿ (ಚೌಕಿ) ವೃತ್ತದಿಂದ ಮೆರವಣಿಗೆ ಮೂಲಕ ಸಾಗಿದ ನೂರಾರು ಕಾರ್ಯಕರ್ತರು, ಗ್ಯಾಸ್ ಬೆಲೆ ಏರಿಕೆ ಮಾಡಿದ ಕೇಂದ್ರ ಸರ್ಕಾರ, ಬಿಜೆಪಿ ಆಡಳಿತ, ಪ್ರಧಾನಿ ನರೇಂದ್ರ ಮೋದಿ ಹಾಗೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮ್ ವಿರುದ್ಧ ಧಿಕ್ಕಾರ ಕೂಗಿ ಜಿಲ್ಲಾಧಿ ಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಗರ ಕಾಂಗ್ರೆಸ್ ಪ್ರಕಾಶ್ ಆಚಾರ್ಯ ಮಾತನಾಡಿ, ಗ್ಯಾಸ್ ಬೆಲೆ ಏರಿಕೆಯನ್ನು ಖಂಡಿಸಿದರು.

ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಮೂಡಾ ಅಧ್ಯಕ್ಷ ರಾಜೇಶ್ ಯಲ್ಲಪ್ಪ ಜಿಲ್ಲಾ ಕಾಂಗ್ರೆಸ್ ವಕ್ತಾರರಾದ ತೆನ್ನಿರ ಮೈನಾ ಮಾತನಾಡಿದರು. ಈ ಸಂದರ್ಭ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಶಶಿ, ಮಡಿಕೇರಿ ನಗರ ಸಭೆ ಸದಸ್ಯರಾದ ಮಂಡಿರ ಸದಾ ಮುದ್ದಪ್ಪ, ಜಿ.ಸಿ.ಜಗದೀಶ್, ಯಾಕುಬ್, ಜುಲೇಕಾಬಿ, ಮಡಿಕೇರಿ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸಂಪತ್ ರಾಜ್ ಚೇತನ್, ಸೇವಾದಳದ ಅಧ್ಯಕ್ಷ ಕಾನೆಹಿತ್ಲು ಮೊಣ್ಣಪ್ಪ ಕಾರ್ಮಿಕ ಘಟಕದ ಅಧ್ಯಕ್ಷ ದಿನೇಶ್ ಪ್ರಮುಖರಾದ ಅಂಬೇಕಲ್ ನವೀನ್, ಸುದಯ್ ನಾಣಯ್ಯ, ಖಲೀಲ್ ಬಾಷಾ, ಕೆ.ಜೆ.ಪೀಟರ್, ಜಾನ್ಸನ್ ಪಿಂಟೋ, ಮೀನಾಜ್ ಪ್ರವೀಣ್, ಆರ್.ಪಿ.ಚಂದ್ರಶೇಖರ್, ಫ್ರಾನ್ಸಿ ಪಾರ್ವತಿ, ಮಮ್ತಾಜ್ ಬೇಗಂ, ಪ್ರೇಮಾ ಕೃಷ್ಣಪ್ಪ ಪ್ರೇಮಾ ಲಿಂಗಪ್ಪ ಅರ್ಜುನ್, ಮುನೀರ್ ಮಾಚಾರ್, ಸಹ ಕಾರ್ಯದರ್ಶಿ ಜಾಕೀರ್ ಹುಸೇನ್ ಸೇರಿದಂತೆ ಪಕ್ಷದ ಮುಖಂಡರು ಭಾಗವಹಿಸಿದ್ದರು.



ರುದ್ರ ಪಠಣ ಸಮಿತಿ ಬಂಟ್ವಾಳ ವತಿಯಿಂದ ಅಮುಂಜೆ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಶ್ರೀ ರುದ್ರ ಚಮಕ ನಮಕ,ಗಣಪತಿ ಅಥರ್ವಶೀರ್ಷ, ಪುರುಷ ಸೂಕ್ತ,ಭಾಗ್ಯ ಸೂಕ್ತ, ಮಂತ್ರ ಪುಷ್ಪ ಪಠಣ ಜರಗಿತು. ಸಜೀಪ ಮಾಗಣೆತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ಎ.ರವಿ ಶಂಕರ ಮಯ್ಯ, ಅರ್ಚಕ ನರೇಂದ್ರ ಭಟ್ ,ನಾಗರಾಜ ಭಟ್ , ರಾಮಚಂದ್ರ ಮಯ್ಯ, ಕಾಂತ ರಾಮ ರಾವ್, ಕೆ.ರಾಜಾರಾಮ ಐತಾಳ, ಚಂದ್ರಮೋಹನರಾವ್ ,ವಿಶಾಲ ಹೆಗ್ಡೆ,ಮಿಥುನರಾವ್ ,ಜಯರಾಮ ಮಯ್ಯ ಮೊದಲಾದವರು ಪಾರಾಯಣದಲ್ಲಿ ಪಾಲ್ಗೊಂಡರು.



ವಿಟ್ಲ ಪಟ್ಟಣ ಪಂಚಾಯತ್‌ನ 2025-26ನೇ ಸಾಲಿನ ಅನುದಾನದಲ್ಲಿ ಸಹಾಯಧನಕ್ಕೆ ಆಯ್ಕೆಯಾದ 27 ಮಂದಿಗೆ ವೈಯಕ್ತಿಕ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಯಿತು. ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಉಪಾಧ್ಯಕ್ಷೆ ಸಂಗೀತ, ಪಾಣೆಮಜಲು ಸ್ಥಾಯಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಮುಖ್ಯಾಧಿಕಾರಿ ಕರುಣಾಕರ ವಿ. ಇದ್ದರು.

ಪುನಃ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವಕ್ಕೆ ಸಿಂಗಾರಗೊಂಡಿದೆ ಶರವೂರು ದೇವಳ ಪರಿಸರ

ಆಲಂಕಾರು: ಬರೋಬ್ಬರಿ 19 ವರ್ಷಗಳ ಬಳಿಕ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯ ನವೀಕರಣಗೊಂಡು ಪುನಃ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವವು ಮಾ25ರಿಂದ ಏ2ರವರೆಗೆ ನಡೆಯಲಿದ್ದು ಈ ಕಾರ್ಯಕ್ರಮಕ್ಕೆ ಇಡೀ ಸೀಮೆಯ ಜನತೆ ಈ ಅವಿಸ್ಮರಣೀಯ ದಿನಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಇನ್ನತೆ ಇದೀಗ ಸಂಪೂರ್ಣವಾಗಿ ಸನ್ನದ್ಧರಾಗಿದ್ದು ಪೇಟೆ ಪಟ್ಟಣಗಳು ತಳಿರು ತೋರಣಗಳಿಂದ ಶೃಂಗಾರಗೊಂಡು ರಾರಾಜಿಸುತ್ತಿದೆ.

ಆಲಂಕಾರು, ಕುಂತೂರು, ಪೆರಾಬೆ ಹಳೆನೇರಂಕಿ ಗ್ರಾಮಗಳ ಸೀಮೆಯ ದೇವಾಸ್ಥಾನವಾಗಿದ್ದು, ಈ ಭಾಗದ ಪೇಟೆಗಳು ಸಂಪೂರ್ಣ ಕೇಸರಿಮಯವಾಗಿ ಕಂಗೊಳಿಸುತ್ತಿದೆ. ಜೊತೆಗೆ ವಿದ್ಯುತ್ ದೀಪಗಳಿಂದ ಅಲಂಕೃತವಾಗದ್ದು ಬ್ರಹ್ಮಕಲಶೋತ್ಸವದ ಶೃಂಗಾರಕ್ಕೆ ಮತ್ತಷ್ಟು ಮೆರಗು ನೀಡಿದೆ. ಆಲಂಕಾರು ಪೇಟೆಯನ್ನು ಮತ್ತು ದೇವಾಲಯವನ್ನು ಕೇಂದ್ರವಾಗಿರಿಸಿಕೊಂಡು





ಕುಂತೂರು, ಆತೂರು ರಾಮಕುಂಜ, ಹಳೆನೇರಂಕಿ, ಕುದ್ಮಾರು ಮುಂತಾದ ಕಡೆಗಳನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳನ್ನು ತಳಿರು ತೋರಣ ವಿದ್ಯುತ್ ದೀಪಗಳಿಂದ ಶೃಂಗರಿಸಲಾಗಿದೆ. ಅಲ್ಲಲ್ಲಿ ಭಕ್ತಾದಿಗಳನ್ನು ಸ್ವಾಗತಿಸುವ ಸ್ವಾಗತ ಗೋಪುರಗಳನ್ನು ನಿರ್ಮಿಸಲಾಗಿದೆ. ಶುಭಕೋರುವ ಬ್ಯಾನರ್‌ಗಳನ್ನು ಅಳವಡಿಸಿ ದಾರಿ ಸೂಚಕಗಳನ್ನು ನಿರ್ಮಿಸಲಾಗಿದೆ.

ಆಲಂಕಾರು ಪೇಟೆ ಕೇಸರಿಮಯ

ಆಲಂಕಾರು ಪೇಟೆಯನ್ನು ಸಂಪೂರ್ಣವಾಗಿ ಕೇಸರಿಮಯವಾಗಿಸಲಾಗಿದೆ, ಸವಣೂರು, ಉಪ್ಪಿನಂಗಡಿ, ಪುತ್ತೂರು ಇಳಂತಿಲ ಮುಂತಾದ ಕಡೆಗಳಲ್ಲಿ ಬ್ರಹ್ಮಕಲಶೋತ್ಸವದ ಬ್ಯಾನರ್ ಅಳವಡಿಸಲಾಗಿದೆ. ಪೇಟೆಯ ಸ್ವಾಗತ ಗೋಪುರ ವಿನೂತನ ಬಣ್ಣದಿಂದ ಕಂಗೊಳಿಸುತ್ತಿದ್ದು ಇದೀಗ ವಿದ್ಯುತ್ ದೀಪದ ಅಲಂಕಾರ ಮತ್ತಷ್ಟು ಅಂದ ಗೊಳಿಸಿದೆ.

ಒಂದು ತಿಂಗಳಿನಿಂದ ಮಾಂಸಾಹಾರವಿಲ್ಲ

ಫೆ.6ರಂದು ಶ್ರೀ ಕ್ಷೇತ್ರದಲ್ಲಿ ನಡೆದ 'ಸರ್ವಮಂಗಲ ಮಾಂಗಲ್ಯೆ' ಮಂತ್ರ ಜಪ ಯಜ್ಞದ ದೀಕ್ಷೆ ಪಡೆದುಕೊಂಡ ಮನೆಯವರು ಸೇರಿದಂತೆ ಸೀಮೆಯ ಬಹುತೇಕ ಮನೆಯವರು ಶುದ್ಧ ಸಸ್ಯಾಹಾರಿ ಆಹಾರ ಸೇವಿಸುವುದರ ಮೂಲಕ ಬ್ರಹ್ಮಕಲಶೋತ್ಸವದ ಸ್ವಾಗತಕ್ಕೆ ಅಣಿಯಾಗಿದ್ದಾರೆ. ಕಳೆದ 48 ದಿನಗಳಿಂದ ಸೀಮೆಯ ಕೆಲವೊಂದು ಮನೆಯವರು ಪಥ್ಯಾಹಾರಿಗಳಾಗಿದ್ದರೆ ಕಳೆದ ಒಂದು ತಿಂಗಳಿನಿಂದ ಹಿಂದೂ ಬಾಂಧವರು ಸಂಪೂರ್ಣ ಪಥ್ಯಾಹಾರಿಗಳಾಗಿದ್ದಾರೆ. ಆಲಂಕಾರು, ಕುಂತೂರು, ಹಳೆನೇರಂಕಿ, ಪೆರಾಬೆ ಗ್ರಾಮಗಳ ಕೋಳಿ ಅಂಗಡಿಗಳ ಹಿಂದೂ ಬಾಂಧವರು ತಮ್ಮ ಅಂಗಡಿಗಳನ್ನು ಮುಚ್ಚಿ ಕೋಳಿ ವ್ಯಾಪಾರ ಸ್ಥಗಿತಗೊಳಿಸಿ ದೇವಾಲಯದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಭದ್ರತೆಗಾಗಿ ಅಲ್ಲಲ್ಲಿ ಸಿಸಿ ಕ್ಯಾಮರ, ವಾಕಿಟಾಕಿ

ಶರವೂರು ಬ್ರಹ್ಮಕಲಶೋತ್ಸವದ ಪ್ರತಿ ದಿನ 5000ಕ್ಕೂ ಅಧಿಕ ಜನ ಸೇರುವ ನಿರೀಕ್ಷೆ ಇರುವುದರಿಂದ ಭದ್ರತೆಗೆ ಬಹಳಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಅಹಿತಕರ ಘಟನೆಗಳು ನಡೆಯದಂತೆ ಮತ್ತು ಅಂತಹ ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚುವ ಹಿನ್ನೆಲೆಯಲ್ಲಿ ದೇವಾಲಯದ ವಠಾರ ಸೇರಿದಂತೆ ರಥ ಬೀದಿ, ಪಾರ್ಕಿಂಗ್ ಮುಂತಾದ ಕಡೆಗಳಲ್ಲಿ ಸಿಸಿ ಕ್ಯಾಮರ ಕಣ್ಗಾವಲನ್ನು ಇರಿಸಲಾಗಿದೆ. ಜೊತೆಗೆ ಶೀಘ್ರ ಸಂವಹನ ನಡೆಸುವ ಉದ್ದೇಶದಿಂದ ಕಾರ್ಯಕರ್ತರಿಗೆ ವಾಕಿಟಾಕಿಗಳನ್ನು ನೀಡಲಾಗಿದೆ.

ಪೇಟೆಯಲ್ಲಿ ಹೆಚ್ಚಿದ ಜನಸಂದಣಿ

ಸೀಮೆಯ ಭಕ್ತಾದಿಗಳ ಮನೆಗೆ ಬ್ರಹ್ಮಕಲಶೋತ್ಸವಕ್ಕೆ ತಮ್ಮ ನೆಂಟರಿಷ್ಟರು ಬಹಳಷ್ಟು ಜನ ಬರುತ್ತಾರೆ ಎಂಬ ನಂಬಿಕೆಯಿರುವುದರಿಂದ ಪೇಟೆಯ ಎಲ್ಲಾ ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರ ವಹಿವಾಟು ಬಿರುಸಿನಿಂದ ಸಾಗಿದೆ. ಇದರ ಪರಿಣಾಮ ಪೇಟೆಯಲ್ಲಿ ಜನಸಂದಣಿ ಹೆಚ್ಚಿದ್ದು ವಾಹನ ದಟ್ಟಣೆ ಹೆಚ್ಚಿದೆ. ಮಾ25ಕ್ಕೆ ಹೊರೆಕಾಣಿಕೆ ಪೇಟೆಯಿಂದ ಹೊರಡುವ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಸುತ್ತ ಮುತ್ತ

ಮಾ. 27: ಶ್ರೀಕ್ಷೇತ್ರ ಬಂಟಕಲ್ಲು ಪ್ರತಿಷ್ಠಾಪನಾ ವರ್ಧಂತ್ಯುತ್ಸವ



ಶಿರ್ವ: ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಪ್ರತಿಷ್ಠಾಪನಾ ವರ್ಧಂತ್ಯುತ್ಸವ – ರಥೋತ್ಸವ ಧಾರ್ಮಿಕ ಅನುಷ್ಠಾನಗಳು ಮಾ.27ಕ್ಕೆ ಜರುಗಲಿವೆ. ಪೂರ್ವಭಾವಿಯಾಗಿ ಮಾ.26ಕ್ಕೆ ಸಂಜೆ 6ರಿಂದ ವಾಸ್ತು ರಾಕ್ಷೋಘ್ನ ಹೋಮ,. ಮಾ.27ಕ್ಕೆ ಬೆಳಿಗ್ಗೆ ಪ್ರಾರ್ಥನೆ, ಮಹಾಗಣಪತಿ ಹೋಮ, ಪ್ರಧಾನ ಹೋಮ, ನವಕ ಕಲಶಾಭಿಷೇಕ, ಪರಿವಾರ ಸಾನಿಧ್ಯಗಳ ಆರಾಧನೆ, ಮಧ್ಯಾಹ್ನ ಮಹಾಪೂಜೆ, ಶ್ರೀದೇವಿಯ ಪಲ್ಲಕಿ ಉತ್ಸವ, ಅನ್ನಸಂತರ್ಪಣೆ, ಅಪರಾಹ್ನ 2ರಿಂದ ಶ್ರೀದುರ್ಗಾ ಯಕ್ಷಗಾನ ಬಳಗ ಬಂಟಕಲ್ಲು ಇವರಿಂದ ಯಕ್ಷಗಾನ ಬಯಲಾಟ 'ದ್ರೌಪದಿ ಪ್ರತಾಪ' ಸಂಜೆ 5.30ರಿಂದ ಭಜನೆ, ರಾತ್ರಿ 8ರಿಂದ ರಂಗಪೂಜೆ, ಬಲಿ, ರಥೋತ್ಸವ, ಮಾ.28ಕ್ಕೆ ಪೂರ್ವಾಹ್ನ 6.00ರಿಂದ ಏಕಾಹ ಶ್ರೀರಾಮ ಭಜನೆ ಪ್ರಾರಂಭ, ಮಾ.29ಕ್ಕೆ ಸೂರ್ಯೋದಯಕ್ಕೆ ಅವಭೃತ ಸ್ನಾನ,ಮಂಗಲೋತ್ಸವ ಜರುಗಲಿದೆ ಎಂದು ಶ್ರೀದೇವಳದ ಆಡಳಿತ ಮಂಡಳಿಯ ಪ್ರಕಟನೆ ತಿಳಿಸಿದೆ.

ದೇವಸ್ಥಾನ ವ್ಯವಸ್ಥಾಪನಾ ಸಮಿತಿ ರಚಿಸಲು ಅರ್ಜಿ ಆಹ್ವಾನ

ಮಂಗಳೂರು: ದ.ಕ ಜಿಲ್ಲೆಯ ಪ್ರವರ್ಗ 'ಸಿ' ವರ್ಗದ ಕೆಳಕಂಡ ಅಧಿಸೂಚಿತ ಸಂಸ್ಥೆಗಳಿಗೆ 9 ಜನ ಸದಸ್ಯರಿರುವ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಲುವಾಗಿ ಆಸಕ್ತ ಭಕ್ತಾದಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರವರ್ಗ 'ಸಿ' ವ್ಯವಸ್ಥಾಪನಾ ಸಮಿತಿ ಅವಧಿ ಮುಕ್ತಾಯಗೊಂಡ ದೇವಸ್ಥಾನ/ದೈವಸ್ಥಾನಗಳು ಸುರತ್ಕಲ್ ಶ್ರೀ ಮೂರ್ನಾಡು ಮಾಗಣೆ ಮಹಾಮ್ಮಾಯಿ ದೇವಸ್ಥಾನ, ಉಳ್ಳಾಲ ತಾಲೂಕು ಕೈರಂಗಳ ಗ್ರಾಮದ ಶ್ರೀ ಗೋಪಾಲಕೃಷ್ಣ ದೇವಸ್ಥಾನ, ಉಳ್ಳಾಲ ತಾಲೂಕು ನರಿಂಗಾನ ಗ್ರಾಮದ ಶ್ರೀ ಮಲರಾಯ ದೈವಸ್ಥಾನ, ಮುಲ್ಕಿ ತಾಲೂಕು ಬಳ್ಕುಂಜೆ ಗ್ರಾಮದ ಶ್ರೀ ಮಿತ್ತಗುತ್ತು ರಾಜನ್ ದೈವ ಧೂಮಾವತಿ ದೇವಿ ದೈವಸ್ಥಾನ, ಮೂಡಬಿದ್ರೆ ತಾಲೂಕಿನ ಧರೆಗುಡ್ಡೆ ಗ್ರಾಮದ ಶ್ರೀ ವಿನಾಯಕ ದೇವಸ್ಥಾನ, ಮೂಡಬಿದ್ರೆ ತಾಲೂಕು ಹೊಸಬೆಟ್ಟು ಶ್ರೀ ಕೊಡಮಂತ್ತಾಯ ದೈವಸ್ಥಾನ, ಕಡಬ ತಾಲೂಕು ಪಿಜಕಳ ಗ್ರಾಮದ ವಿಷ್ಣುಮೂರ್ತಿ ದೇವಸ್ಥಾನ, ಮಂಗಳೂರು ತಾಲೂಕು ಕೆಂಜಾರು ಗ್ರಾಮದ ಶ್ರೀ ಪೊರ್ಕೋಡಿ ಸೋಮನಾಥೇಶ್ವರ ದೇವಸ್ಥಾನ, ಪರಿಶಿಷ್ಟ ಜಾತಿ/ಪಂಗಡ -1, ಸಾಮಾನ್ಯ-2, 2. ಮೂಡಬಿದ್ರೆ ತಾಲೂಕು ಕಡಂದಲೆ ಗ್ರಾಮದ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ- ಸಾಮಾನ್ಯ -2 , 3. ಕಡಬ ತಾಲೂಕು ಎಡಮಂಗಲ ಗ್ರಾಮದ ಶ್ರೀ ನೂಜಿಲ ಗೋಪಾಲಕೃಷ್ಣ ದೇವಸ್ಥಾನ - ಸಾಮಾನ್ಯ-1. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಏ.16ರೊಳಗಾಗಿ 'ಪ್ರಜಾ ಸೌಧ' ಜಿಲ್ಲಾಧಿಕಾರಿ ಕಚೇರಿಯ ಮೊದಲನೇ ಮಹಡಿಯಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರ ಕಚೇರಿಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾ.24: ಮೆಸ್ಕಾಂ ಜನ ಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ಕಾಪು ಉಪವಿಭಾಗ ಕಚೇರಿಯಲ್ಲಿ ಮಾ.24ರಂದು ಸಮಯ ಬೆಳಿಗ್ಗೆ 10.30ರಿಂದ 12ರವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನುಗ್ರಾಹಕರುಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂರವಾಣಿಸಂಖ್ಯೆ: 0820-2579977 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾ.26: ಮೆಸ್ಕಾಂ ಜನ ಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ಕುಲಶೇಖರ ಉಪವಿಭಾಗ ಕಚೇರಿಯಲ್ಲಿ ಮಾ.26ರಂದು ಸಮಯ ಬೆಳಿಗ್ಗೆ 11ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ, ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿ ಸಿಕೊಳ್ಳಲು ಕೋರಲಾಗಿದೆ. ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 0824-2231132 ಎಂದು ಪ್ರಕಟಣೆ ತಿಳಿಸಿದೆ.

ಕಾನಡ್ಕ ಕುಟುಂಬದಿಂದ 12ನೇ ವರ್ಷದ ಯುಗಾದಿ ಕ್ರೀಡಾಕೂಟ | ರಾಷ್ಟ್ರೀಯ ಕ್ರೀಡಾ ಸಾಧಕರಿಗೆ ಸನ್ಮಾನ

ಕುಟುಂಬದ ಸದಸ್ಯರಿಗೆ, ಗ್ರಾಮಸ್ಥರಿಗೆ 21 ಆಟೋಟ ಸ್ಪರ್ಧೆ





ಮಡಿಕೇರಿ: ಕಾನಡ್ಕ ಕುಟುಂಬದ ವತಿಯಿಂದ 12ನೇ ವರ್ಷದ ಯುಗಾದಿ ಕ್ರೀಡಾಕೂಟ ಸಂಭ್ರಮದಿಂದ ನಡೆಯಿತು.

ಮರಗೋಡಿನ ಕಾನಡ್ಕ ಐನ್‌ಮನೆಯಲ್ಲಿ ನಡೆದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಉದ್ಯಮಿಗಳು ಹಾಗೂ ಸಮಾಜಸೇವಕ ಚೆರಿಯಮನೆ ರತ್ನಕುಮಾರ್ ಅವರು ಯುಗಾದಿ ಹಬ್ಬವು ಹಿಂದೂಗಳಿಗೆ ಹೊಸ ವರ್ಷದ ಪವಿತ್ರ ದಿನವಾಗಿದೆ. ಈ ಶುಭ ಸಂದರ್ಭದಲ್ಲಿ ದಿಟ್ಟ ಗುರಿಯನ್ನು ಹೊಂದಿ ಹೊಸ ಗುರಿಗಳ ಸಾಧನೆಗೆ ನಾವುಗಳು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಮರಗೋಡಿನ ವಿವೇಕಾನಂದ ಯುವಕ ಸಂಘದ ಮಾಜಿ ಅಧ್ಯಕ್ಷರು ಹಾಗೂ ಸಮಾಜ ಸೇವಕರಾದ ಬಡುವಂಡ್ರ ಲಕ್ಷ್ಮೀಪತಿ ಮಾತನಾಡಿದರು. ಕಾನಡ್ಕ ಕುಟುಂಬದ ಹಿರಿಯರಾದ ಉಲ್ಲಾಸ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯರಾದ ಕಾನಡ್ಕ ದೇವಯ್ಯ ಉಪಸ್ಥಿತರಿದ್ದರು. ವಿಶ್ಮ, ಪೂಜಾ, ಸಂಧ್ಯಾ ಹಾಗೂ ಲಕ್ಷಿತ ಪ್ರಾರ್ಥಿಸಿದರು, ಕಾನಡ್ಕ ಪ್ರಸಾದ್ ಸ್ವಾಗತಿಸಿ, ಕಾನಡ್ಕ ಹನೀಶ್ ನಿರೂಪಿಸಿ, ಕಾನಡ್ಕ ಚರಣ್ ವಂದಿಸಿದರು.

ಪುಟಾಣಿಗಳಿಂದ ಹಿರಿಯರವರೆಗೆ ವಿವಿಧ ವಿಭಾಗಗಳಲ್ಲಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಯಿತು. ದಂಪತಿಗಳಿಗೆ ಕೃಷ್ಣ ರುಕ್ಮಿಣಿ ಓಟ, ರಾಮ ಸೀತೆ ಓಟ, ಹನುಮಂತನ ಓಟ, ಬಾಲ್ ಬ್ಯಾಲೆನ್ಸ್ ಓಟ, ಹಗ್ಗ ಜಗ್ಗಾಟ ಹೀಗೆ ವಿವಿಧ ಬಗೆಯ 21 ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕುಟುಂಬದ ಸದಸ್ಯರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಸಮಾರೋಪ ಸಮಾರಂಭ

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಕೊಡಗು ಗೌಡ ಅಕಾಡೆಮಿಯ ಮಾಜಿ ಅಧ್ಯಕ್ಷ ತುಂತಜೆ ಗಣೇಶ್ ಅವರು ಮಾತೃಭಾಷೆಯಾಗಿರುವ ಅರೆಭಾಷೆಯನ್ನು ಪ್ರತಿಯೊಬ್ಬರು ಮಾತನಾಡಬೇಕು. ಮಕ್ಕಳಿಗೆ ಅರೆಭಾಷೆ ಆಚಾರ, ವಿಚಾರ ಮತ್ತು ಸಂಸ್ಕೃತಿಯನ್ನು ಕಲಿಸಬೇಕು. ಮನೆಯಲ್ಲಿ ಅರೆಭಾಷೆಯನ್ನೇ ಮಾತನಾಡಬೇಕು ಎಂದು ಕರೆ ನೀಡಿದರು

ಕಟ್ಟೆಮಾಡಿನ ಕಾಫಿ ಬೆಳೆಗಾರ ಹಾಗೂ ಸಮಾಜ ಸೇವಕ ತೋಟಂಬೈಲು ಪ್ರದೀಪ್ ಅವರು ಮಾತನಾಡಿ, ಈ ರೀತಿಯ ಕಾರ್ಯಕ್ರಮಗಳನ್ನು ನಡೆಸುವುದರಿಂದ ಕುಟುಂಬದಲ್ಲಿ ಸಂಭ್ರಮ ಹಾಗೂ ಒಗ್ಗಟ್ಟು ಮೂಡುತ್ತದೆ ಎಂದರು.

ಮರಗೋಡಿನ ಮಾಜಿ ಯೋಧ ಮುಕ್ಕಾಟಿರ ಗಿರೀಶ್ ಮಾತನಾಡಿ, ಮಕ್ಕಳು ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಲು ಹಿರಿಯರ ಪ್ರೋತ್ಸಾಹ ಬಹಳ ಮುಖ್ಯ. ಕ್ರೀಡೆಗಳಲ್ಲಿ ಭಾಗವಹಿಸುವಂತೆ ಪೋಷಕರು ಪ್ರೇರಣೆ ನೀಡಬೇಕು. ಈ ರೀತಿಯ ಕ್ರೀಡಾಸ್ಪರ್ಧೆಗಳನ್ನು ನಡೆಸುವುದರಿಂದ ಗ್ರಾಮೀಣ ಪ್ರತಿಭೆಗಳಿಗೆ ಉತ್ತಮ ವೇದಿಕೆ ಸಿಗುತ್ತದೆ ಎಂದು ಹೇಳಿದರು. ಮರಗೋಡಿನ ಕಾಫಿ ಕಲ್ಟ್ ಎಸ್ಟೇಟ್ ಮಾಲೀಕ ಸುರೇಶ್ ಇದ್ದರು. ಕಾನಡ್ಕ ಉಲ್ಲಾಸ್ ಅಧ್ಯಕ್ಷತೆ ವಹಿಸಿದ್ದರು. ಸ್ಪರ್ಧಾ ವಿಜೇತರಿಗೆ ಇದೇ ಸಂದರ್ಭ ಬಹುಮಾನ ವಿತರಿಸಲಾಯಿತು. ಕಾನಡ್ಕ ಹನೀಶ್ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು. 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕಾನಡ್ಕ ದನ್ವಿ ಹಾಗೂ ಹಾಕಿ ಕ್ರೀಡೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕಾನಡ್ಕ ದರ್ಶಿನಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಫ್ರೆಂಡ್ಸ್ ಗೌಡಳ್ಳಿ ಎಫ್‌ಸಿ ತಂಡಕ್ಕೆ ಮುಕ್ತ ಫುಟ್ಬಾಲ್ ಹಿಂದೂ ಕಪ್



ಸೋಮವಾರಪೇಟೆ: ಹಿಂದೂ ಗೆಳೆಯರ ಬಳಗ ಗೌಡಳ್ಳಿ-ದೊಡ್ಡಮಳ್ತೆ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ಗೌಡಳ್ಳಿ ಬಿಜಿಎಸ್ ಮೈದಾನದಲ್ಲಿ ನಡೆದ 7ನೇ ವರ್ಷದ ಮುಕ್ತ ಫುಟ್ಬಾಲ್ ಹಿಂದೂ ಕಪ್ ಅನ್ನು ಫ್ರೆಂಡ್ಸ್ ಗೌಡಳ್ಳಿ ಎಫ್‌ಸಿ ತಂಡ ಮುಗೇರಿಸಿಕೊಂಡಿತು.

ಶುಕ್ರವಾರ ಸಂಜೆ ನಡೆದ ರೋಚಕ ಫೈನಲ್ ನಲ್ಲಿ ಟೀಮ್ ಕೂಗೂರು ತಂಡ ಸಡನ್‌ಡೆತ್ ನಲ್ಲಿ ಸೋಲು ಕಂಡು ದ್ವಿತಿಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿತು. ಮೊದಲ ಸೆಮಿಫೈನಲ್ ನಲ್ಲಿ ಕೋಟೆಯೂರು ಬಸವೇಶ್ವರ ಎಫ್‌ಸಿ ತಂಡವನ್ನು ಟೀಮ್ ಕೂಗೂರು ತಂಡ ಫೆನಾಲ್ಟಿ ಸ್ಟ್ರೋಕ್‌ನಲ್ಲಿ 4-2 ಗೋಲುಗಳ ಅಂತರ ದಲ್ಲಿ ಸೋಲುಣಿಸಿ ಫೈನಲ್ ಹಂತಕ್ಕೆ ತಲುಪಿತ್ತು. 2ನೇ ಸೇಮೀಸ್‌ನಲ್ಲಿ ಗೌಡಳ್ಳಿ ಎಫ್‌ಸಿ ತಂಡ ಗೋಲ್ಡನ್ ಗೈಸ್ ತಂಡವನ್ನು ಫೆನಾಲ್ಟಿ ಸ್ಟ್ರೋಕ್‌ನಲ್ಲಿ 4-3 ಗೋಲುಗಳ ಅಂತರದಲ್ಲಿ ಸೋಲಿಸಿ ಪೈನಲ್‌ಗೇರಿತ್ತು.

ಪ್ರಥಮ ಬಹುಮಾನ 1,50,000 ರೂ.ಗಳ ನಗದು, ದ್ವಿತೀಯ ಬಹುಮಾನ ನಗದು 1,00,000 ರೂ, ನಗದು ಮತ್ತು ಆಕರ್ಷಕ ಟ್ರೋಫಿಗಳನ್ನು ವಿಜೇತ ತಂಡಗಳು ಪಡೆದುಕೊಂಡವು. ಸಮಾರೋಪ ಸಮಾರಂಭದಲ್ಲಿ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಕ್ರೀಡೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ಅದು ಶಾರೀರಿಕ ಆರೋಗ್ಯ, ಮಾನಸಿಕ ಸ್ಥೈರ್ಯ ಹೆಚ್ಚಿಸುತ್ತದೆ. ಗ್ರಾಮೀಣ ಕ್ರೀಡಾಪಟುಗಳಿಗೆ ಉತ್ತಮ ತರಬೇತಿ, ಸೌಲಭ್ಯಗಳು ಮತ್ತು ಅವಕಾಶಗಳನ್ನು ಒದಗಿಸುವುದು ನಮ್ಮ ಕರ್ತವ್ಯವಾಗಿದೆ. ಭವಿಷ್ಯದಲ್ಲಿ ಇಂತಹ ಪಂದ್ಯಾವಳಿಗಳಿಗೆ ಇನ್ನಷ್ಟು ಸಹಕಾರ ನೀಡುವ ಭರವಸೆ ನೀಡುತ್ತೇನೆ. ಗೌಡಳ್ಳಿ ಪ್ರಾಥಮಿಕ ಶಾಲಾ ಮೈದಾನದಲ್ಲಿ 9 ಎಕರೆ ಜಾಗವಿದ್ದು ಕ್ರೀಡಾವಸತಿ ಶಾಲೆ ನಿರ್ಮಾಣಕ್ಕೆ ಸ್ಥಳೀಯ ಕ್ರೀಡಾಭಿಮಾನಿಗಳ ಬೇಡಿಕೆಯಿದ್ದು, ಕ್ರೀಡಾಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯ ಒಕ್ಕಲಿಗರ ಸಂಘದ ಜಿಲ್ಲಾ ನಿರ್ದೇಶಕ ಹರಪಳ್ಳಿ ರವೀಂದ್ರ, ಗೌಡಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಬಿ. ಭರತ್‌ಕುಮಾರ್, ಗೆಳೆಯರ ಬಳಗದ ಅಧ್ಯಕ್ಷ ಕೆ.ಪಿ.ಆದರ್ಶ್, ರೈತ ಹೋರಾಟ ಸಮಿತಿ ಅಧ್ಯಕ್ಷ ಚಕ್ರವರ್ತಿ ಸುರೇಶ್ ಮತ್ತಿತರ ಗಣ್ಯರು ಇದ್ದರು. ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಪ್ರತಿಭಾನಿತ್ವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು. ಗೌಡಳ್ಳಿ ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯ ಗಣೇಶ್, ದೈಹಿಕ ಶಿಕ್ಷಣ ಶಿಕ್ಷಕ ಪ್ರವೀಣ್, ರಾಷ್ಟ್ರಮಟ್ಟದ ಜಾವಲಿನ್ ಥ್ರೊ ಕ್ರೀಡಾಪಟು ಡಿ.ಆರ್. ಆನಿಶ್ ಅವರನ್ನು ಸನ್ಮಾನಿಸಲಾಯಿತು.

ಕಾಡಬೆಟ್ಟು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ



ಬಂಟ್ವಾಳ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಹೆಗ್ಗಡೆ ಅವರ ಆಶಯದಂತೆ ಜ್ಞಾನವಿಕಾಸ ಕಾರ್ಯಕ್ರಮದಡಿ ಪ್ರತಿ ತಿಂಗಳು ಮಹಿಳೆಯರಿಗೆ ಉಚಿತ ಆರೋಗ್ಯ ಮಾಹಿತಿ ನೀಡಲಾಗುತ್ತಿದ್ದು, ಆರೋಗ್ಯ ಸಂರಕ್ಷಣೆ ಕುರಿತಾಗಿ ಎಲ್ಲರೂ ಕಾಳಜಿ ವಹಿಸುವ ಅಗತ್ಯವಿದೆ ಎಂದು ಯೋಜನೆ ಜಿಲ್ಲಾ ನಿರ್ದೇಶಕ ದಿನೇಶ್ ಡಿ. ಹೇಳಿದ್ದಾರೆ.

ತಾಲೂಕಿನ ವಗ್ಗ ಸಮೀಪದ ಕಾಡಬೆಟ್ಟು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಒಕ್ಕೂಟದ ಅಧ್ಯಕ್ಷ ಉಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಡಬೆಟ್ಟು ಒಕ್ಕೂಟ ಮತ್ತು ಮಂಗಳೂರು ಕುಂಟಿಕಾನ ಎ. ಜೆ. ಆಸ್ಪತ್ರೆ ಸಹಭಾಗಿತ್ವದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಕಾವಳ ಪಡೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಕಾಡಬೆಟ್ಟು ಚಾಲನೆ ನೀಡಿ ಶುಭ ಹಾರೈಸಿದರು.

ಕಾರಿಂಜ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರೇಂದ್ರ ಅಮೀನ್, ಬಂಟ್ವಾಳ ಯೋಜನಾಧಿಕಾರಿ ಜಯಾನಂದ, ಹಾಸನ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ಡಾ ಶ್ರೇಯಸ್, ಜನಜಾಗೃತಿ ಸದಸ್ಯ ಪ್ರವೀಣ್, ವಗ್ಗ ವಲಯ ಮೇಲ್ವಿಚಾರಕ ಸುರೇಶ್, ಜ್ಞಾನ ದೀಪ ಶಿಕ್ಷಕಿ ಹರಿಣಾಕ್ಷಿ, ಒಕ್ಕೂಟ ಮತ್ತು ಶೌರ್ಯ ಘಟಕದ ಸದಸ್ಯರು ಇದ್ದರು. ಇದೇ ವೇಳೆ 100ಕ್ಕೂ ಅಧಿಕ ಮಂದಿ ಆರೋಗ್ಯ ತಪಾಸಣೆ ಮಾಡಿಕೊಂಡರು.

ಸೇವಾ ಪ್ರತಿನಿಧಿ ರೇಖಾ ಪ್ರಾರ್ಥಿಸಿ, ಲೀಲಾವತಿ ಸ್ವಾಗತಿಸಿದರು. ಶಿಕ್ಷಕ ರಾಮಕೃಷ್ಣ ಪ್ರಭು ವಂದಿಸಿದರು. ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಸವಿತಾ ಕಾರ್ಯಕ್ರಮ ನಿರೂಪಿಸಿದರು.

ಕೆರೆಕಾಡು ಅಕ್ಷಯ ಮಹಿಳಾ ಮಂಡಳಿ: ಮಹಿಳಾ ದಿನಾಚರಣೆ



ಮುಲ್ಕಿ: ಮಹಿಳೆಯರು ಜೀವನದಲ್ಲಿ ಸಮಸ್ಯೆಗಳನ್ನು ಸಂಘಟನಾತ್ಮಕವಾಗಿ ಎದುರಿಸಬೇಕು ಎಂದು ಜ್ಞಾನರತ್ನ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್‌ನ ಉಪನ್ಯಾಸಕಿ ಸಂಧ್ಯಾ ಉಮೇಶ್ ಆಚಾರ್ಯ ಹೇಳಿದರು.

ಅವರು ಕೆರೆಕಾಡು ಅಕ್ಷಯ ಮಹಿಳಾ ಮಂಡಳಿ ವತಿಯಿಂದ ಕೆರೆಕಾಡು ಶ್ರೀ ದುರ್ಗಾಪರಮೇಶ್ವರಿ ಸಭಾ ಭವನದಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಸಭೆ, ಅಧ್ಯಕ್ಷತೆಯನ್ನು ಮಹಿಳಾ ಮಂಡಳಿಯ ಅಧ್ಯಕ್ಷೆ ಲಲಿತಾ ಭಾಸ್ಕರ್ ವಹಿಸಿದ್ದರು. ಕಿಲ್ಪಾಡಿ ಗ್ರಾ.ಪಂ. ಮಾಜಿ ಉಪಾಧ್ಯಕ್ಷೆ ದಮಯಂತಿ ಶೆಟ್ಟಿಗಾರ್, ದುರ್ಗಾಪರಮೇಶ್ವರಿ ಭಜನಾ ಮಂದಿರದ ಅಧ್ಯಕ್ಷ ಪಿ.ಆರ್. ರಾಜೇಶ್, ಉಪಾಧ್ಯಕ್ಷೆ ರತ್ನ ಶಿವಾನಂದ ಕೋಟ್ಯಾನ್, ಜಾನಕಿ ಜಯರಾಮ್, ಸುರೇಖಾ ಕರುಣಾಕರ, ಸೌಮ್ಯ ರಾಘವೇಂದ್ರ ರಾವ್, ಭಾರತಿ ಯೋಗಾನಂದ, ಗೀತಾ ರವೀಂದ್ರ, ಐಶ್ವರ್ಯ ಪವನ್, ಜ್ಞಾನೇಶ್ವರೀ ಹರ್ಷಾ, ಗುಲಾಬಿ, ಉಷಾ ಪ್ರಕಾಶ್,ಉಪಸ್ಥಿತರಿದ್ದರು. ಭವ್ಯ ಅನಂತ ಪದ್ಮನಾಭ ಸ್ವಾಗತಿಸಿದರು. ಲಲಿತಾ ಭಾಸ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಭವ್ಯಾ ಮೋಹನ್ ಧನ್ಯವಾದ ಅರ್ಪಿಸಿದರು.

ಕನ್ಯಾಡಿ: ಯಕ್ಷಗಾನ ನಾಟ್ಯ ತರಬೇತಿ ಕೇಂದ್ರದ ಮಕ್ಕಳಿಗೆ ಬ್ಯಾಗ್ ವಿತರಣೆ



ಬೆಳ್ತಂಗಡಿ: ಯಕ್ಷಭಾರತಿ ಕನ್ಯಾಡಿ ರಿ. ಸಂಸ್ಥೆಯು ಉಜಿರೆಯ ನಾಗರಾಜ ಕಾಂಪೌಂಡಿನ ಶ್ರೀ ಮಾತಾದಲ್ಲಿ ನಡೆಸುತ್ತಿರುವ ಯಕ್ಷಗಾನ ನಾಟ್ಯ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಶಾಲಾ ಬ್ಯಾಗ್ ವಿತರಿಸಲಾಯಿತು.

ಯಕ್ಷ ಭಾರತಿ ಅಧ್ಯಕ್ಷ ರಾಘವೇಂದ್ರ ಬೈಪಾಡಿತ್ತಾಯ, ಉಪಾಧ್ಯಕ್ಷ ಹರಿದಾಸ ಗಾಂಭೀರ, ನಾಟ್ಯ ಗುರುಗಳಾದ ಚಂದ್ರಶೇಖರ ಧರ್ಮಸ್ಥಳ ವೇದಿಕೆಯಲ್ಲಿ ಉಪಸ್ಥಿತರಿದ್ದು ಬ್ಯಾಗ್‌ಗಳನ್ನು ವಿತರಿಸಿ ಶುಭ ಹಾರೈಸಿದರು.

ಮಕ್ಕಳಿಂದ ಯಕ್ಷಗಾನ

ಉಜಿರೆಯ ಬ್ರಹ್ಮಕಲಕೋತ್ಸವದಲ್ಲಿ ಕಲಿಕಾ ವಿದ್ಯಾರ್ಥಿಗಳು ಪ್ರದರ್ಶಿಸಿದ ಲೀಲಾ ಮೂರ್ತಿ ಜನಾರ್ದನ ಯಕ್ಷಗಾನ ಪ್ರದರ್ಶನದ ಬಗ್ಗೆ ಅನಿಸಿಕೆ ವ್ಯಕ್ತಪಡಿಸಿದರು. ಪೋಷಕರ ಪರವಾಗಿ ಬಾಸಮೆ ನಾರಾಯಣ ಭಟ್ ಮಾತನಾಡಿ, ಮಕ್ಕಳಲ್ಲಿ ಕಲಾಸ್ತಕಿಯನ್ನು ಬಾಲ್ಯದಲ್ಲಿಯೇ ಮೂಡಿಸಬೇಕು ಎಂದರು. ಸಂಸ್ಥೆಯ ಟ್ರಸ್ಟಿಗಳಾದ ಸುರೇಶ ಕುದ್ರೆಂತ್ತಾಯ, ವಿದ್ಯಾಕುಮಾರ್ ಕಾಂಚೋಡು, ಕುಸುಮಾಕರ ಕೊತ್ತೋಡಿ, ಹರೀಶ ಕೊಳ್ತಿಗೆ, ಗುರುಪ್ರಸಾದ್ ಉಜಿರೆ, ಭವ್ಯ ಹೊಳ್ಳ, ಯಶೋಧರ ಇಂದ್ರ, ಕೌಶಿಕ್ ರಾವ್ ಮತ್ತು ಪೋಷಕರು ಉಪಸ್ಥಿತರಿದ್ದರು. ಸಂಸ್ಥೆಯ ಸಂಚಾಲಕ ಮಹೇಶ್ ಕನ್ಯಾಡಿ ಸ್ವಾಗತಿಸಿ, ಟ್ರಸ್ಟಿ ರವೀಂದ್ರ ಶೆಟ್ಟಿ ಬಳೆಂಜ ವಂದಿಸಿದರು. ಕಾರ್ಯದರ್ಶಿ ದಿವಾಕರ ಆಚಾರ್ಯ ಗೇರುಕಟ್ಟೆ ನಿರೂಪಿಸಿದರು.

ಯಕ್ಷಗಾನದ ನಾಟ್ಯ ಗುರುಗಳಿಗೆ ಸನ್ಮಾನ

ನಾಟ್ಯಗುರುಗಳಾದ ಶ್ರೀ ಧರ್ಮಸ್ಥಳ ಮೇಳದ ಕಲಾವಿದ ಚಂದ್ರಶೇಖರ ಧರ್ಮಸ್ಥಳ ಮತ್ತು ಮಧುಸೂದನ ಇವರನ್ನು ಗೌರವಿಸಲಾಯಿತು.

ಮುಲ್ಕಿಯ ಶ್ರೀ ವೆಂಕಟರಮಣ ದೇವಳದಲ್ಲಿ ಶ್ರೀದೇವರ ಧ್ವಜಾರೋಹಣ



ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಒಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ರಾಮನವಮಿಯ ವಾರ್ಷಿಕ ರಥೋತ್ಸವದ ಅಂಗವಾಗಿ ಶ್ರೀ ದೇವರ ಧ್ವಜಾರೋಹಣ ಕಾರ್ಯಕ್ರಮ ಶ್ರೀ ಸಂಸ್ಥಾನ ಶ್ರೀ ಕಾಶಿಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಶುಭಾಶೀರ್ವಾದಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ಅರ್ಚಕರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಶ್ರೀ ದೇವರ ಧ್ವಜಾರೋಹಣ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು. ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.27 ಕ್ಕೆ ಶ್ರೀ ರಾಮನವಮಿಯಂದು ವಾರ್ಷಿಕ ರಥೋತ್ಸವವು ನಡೆಯಲಿದೆ. ಮಾ.28 ಶನಿವಾರ ಬೆಳಗ್ಗೆ ಗಂಟೆ 10ಕ್ಕೆ ಕವಾಟೋದ್ಘಾಟನೆ, ಸಂಜೆ ಗಂಟೆ 3.30ಕ್ಕೆ ಅವಭೃತ ಒಕುಳಿ ಉತ್ಸವ ನಡೆಯಲಿದೆ ಎಂದು ದೇವಳದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರ ಪ್ರಗತಿ ಸಮಾನತೆಯ ಪ್ರತೀಕ: ಸವಿತಾ ಅಭಿಮತ



ಮುಲ್ಕಿ: ಹಳೆಯಂಗಡಿ ಶ್ರೀ ವಿದ್ಯಾ ವಿನಾಯಕ ಯುವಕ ಮಂಡಲ, ರಜತ ಸೇವಾ ಟ್ರಸ್ಟ್ ಮತ್ತು ಯುವತಿ ಮಂಡಲ ಹಾಗೂ ಕಿಶೋರ - ಕಿಶೋರಿ ಸಂಘದ ಜಂಟಿ ಆಶ್ರಯದಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮವು ಯುವಕ ಮಂಡಲದ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಳೆಯಂಗಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಸವಿತಾ, ವಹಿಸಿ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ಪುರುಷರಷ್ಟೇ ಸಮಾನವಾಗಿ ಪ್ರಗತಿಯ ಕಡೆ ಸಾಗುತ್ತಿರುವುದು ಸಮಾನತೆಗೆ ಅಡಿಪಾಯವಾಗಿದೆ ಎಂದರು.

ವೇದಿಕೆಯಲ್ಲಿ ಯುವಕ ಮಂಡಲದ ಅಧ್ಯಕ್ಷ ಕಿರಣ್ ರಾಜ್ , ಕಾರ್ಯದರ್ಶಿ ಯತೀಶ್ ಕೋಟ್ಯಾನ್ ಮತ್ತು ಯುವತಿ ಮಂಡಲದ ಅಧ್ಯಕ್ಷೆ ನಿರ್ಮಿತ ಉಪಸ್ಥಿತರಿದ್ದರು. ಯುವತಿ ಮಂಡಲದ ಅಧ್ಯಕ್ಷೆ ನಿರ್ಮಿತ ಸ್ವಾಗತಿಸಿದರು. ಸಂಸ್ಥೆಯ ನಿಶ್ಮಿತಾ ,ದಿವ್ಯಶ್ರೀ ರಮೇಶ್ ಕೋಟ್ಯಾನ್ ನಿರೂಪಿಸಿದರು, ನಿಶಾ ವಂದಿಸಿದರು.

ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯದಲ್ಲಿ ರತ್ನವರ್ಮ ಹೆಗ್ಗಡೆ ಸ್ಮಾರಕ ವಿ.ವಿ.ಮಟ್ಟದ ಚರ್ಚಾ ಸ್ಪರ್ಧೆ

ಚರ್ಚಾ ಸ್ಪರ್ಧೆ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಪೂರಕ: ಡಾ. ಪದ್ಮಪ್ರಸಾದ ಅಜಿಲ



ಬೆಳ್ತಂಗಡಿ: ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯದ ಸಮ್ಯಗ್ದರ್ಶನ ಸಭಾಭವನದಲ್ಲಿ ಕೀರ್ತಿಶೇಷ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಸ್ಮಾರಕ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಗೆ ಅಳದಂಗಡಿ ಅರಮನೆಯ ಡಾ. ಪದ್ಮಪ್ರಸಾದ ಅಜಿಲ ಅವರು ಚಾಲನೆ ನೀಡಿದರು.

ಬಳಿಕ ಅವರು, ಪ್ರತಿಯೊಂದು ವಿಷಯದಲ್ಲೂ ವಿರೋಧದ ವಾದ ಇದ್ದರೆ ಮಾತ್ರ ವಾಸ್ತವದ ವಿಷಯವನ್ನು ಅರಿತು ಕೊಳ್ಳಲು ಸಾಧ್ಯ. ಹಾಗೆಯೇ ಬದುಕಿನಲ್ಲಿ ಸರಿ ತಪ್ಪು ಮತ್ತು ವಿರೋಧದ ಅಂದಾಜು ಇದ್ದರೆ ಮಾತ್ರ ಸರಿ ದಾರಿಯಲ್ಲಿ ಸಾಗಲು ಅನುಕೂಲವಾಗುತ್ತದೆ. ಚರ್ಚಾ ಸ್ಪರ್ಧೆಗಳು ಸರ್ವತೋಮುಖ ಬೆಳವಣಿಗೆ ಜೊತೆಗೆ ವಿದ್ಯಾರ್ಥಿಗಳ ಬೌದ್ಧಿಕ ಅಭಿವೃದ್ಧಿಗೂ ಪೂರಕ. ಎಲ್ಲಾ ಪ್ರಯತ್ನಗಳು ನಮಗೆ ಯಶಸ್ಸು ತಂದು ಕೊಡದೆ ಇರಬಹುದು ಎಂದು ಹೇಳಿದರು.

ಡಿ. ರತ್ನವರ್ಮ ಹೆಗ್ಗಡೆಯವರು ಈ ಸಮಾಜ ಮತ್ತು ಯುವ ಪೀಳಿಗೆಯ ಮೇಲೆ ಅತ್ಯಂತ ದೂರ ದೃಷ್ಟಿತ್ವ ಹೊಂದಿದ್ದ ವ್ಯಕ್ತಿ. ಹಳ್ಳಿಯಂತಹ ಪ್ರದೇಶದಲ್ಲಿ ವಿದ್ಯಾ ದೇಗುಲವನ್ನು ಆರಂಭಿಸಲು ಅಡಿಪಾಯವನ್ನು ರೂಪಿಸಿ, ಸಾವಿರಾರು ಜನರ ಬದುಕಿಗೆ ಬೆಳಕು ನೀಡುವಂತೆ ಮಾಡಿದ್ದಾರೆ. ಅವರ ಕನಸನ್ನು ಪೂಜ್ಯ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಸಾ ಕಾರಗೊಳಿಸಿ, ದಕ್ಷತೆಯಿಂದ ಸಂಸ್ಥೆಯನ್ನು ಮುಂದುವರಿಸುತ್ತಿದ್ದಾರೆ. ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಮೂಲಕ ಮೌಲ್ಯಯುತ ಹಾಗೂ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಪಠ್ಯೇತರ ಚಟುವಟಿಕೆಗಳಿಗೂ ವಿಶೇಷ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಿದೆ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್ ಮಾತನಾಡಿ, ಮನುಷ್ಯ ಅರವತ್ತರ ಹೊಸ್ತಿಲು ತಲುಪುತ್ತಿದ್ದಂತೆ ನಿವೃತ್ತಿಯೆಡೆಗೆ ಸಾಗುತ್ತಾನೆ. ಆದರೆ ಒಂದು ವಿದ್ಯಾ ಸಂಸ್ಥೆ 60 ವರ್ಷ ಕಳೆಯುತ್ತಿದ್ದಂತೆ ಉನ್ನತ ಹಂತವನ್ನು ಏರುತ್ತದೆ. ಹಳ್ಳಿಯಂತಿದ್ದ ಉಜಿರೆ ಇಂದು ನಗರದಂತೆ ಬೆಳೆಯುವುದರ ಜೊತೆಗೆ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳೂ ವಿಸ್ತಾರವಾಗಿದೆ. ಇಲ್ಲಿನ ವಿದ್ಯಾರ್ಥಿಗಳು ರಾಜ್ಯ, ದೇಶ ಅಲ್ಲದೇ ಅಂತಾರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಿಕೊಂಡಿದ್ದಾರೆ. ಚರ್ಚೆ ಎಂಬುದು ಬಹು ಮುಖ್ಯ. ಇಂದು ವಿಧಾನ ಸೌಧ, ನ್ಯಾಯಾಲಯ ಸೇರಿದಂತೆ ಜಾಗತೀಕ ಮಟ್ಟದ ಎಲ್ಲಾ ಕ್ಷೇತ್ರಗಳಲ್ಲೂ ಚರ್ಚೆಗಳು ನಡೆಯುತ್ತವೆ. ಚರ್ಚೆಗಳು ಮತ್ತು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಹೊಸ ಅನುಭವ ಮತ್ತು ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಇಲ್ಲಿಯ ಜ್ಞಾನ ವಿದ್ಯಾರ್ಥಿ ಬದುಕಿಗೆ ಬೆಳಕಾಗಲಿ ಎಂದು ಶುಭ ಹಾರೈಸಿದರು. ಪ್ರಾಂಶುಪಾಲ ಪ್ರೊ ವಿಶ್ವನಾಥ್ ಪಿ., ಕಾರ್ಯಕ್ರಮದ ಸಂಯೋಜಕ ಡಾ. ನಾಗಣ್ಣ ಮತ್ತು ಉಪನ್ಯಾಸಕ ಪ್ರವೀಣ್ ಇದ್ದರು. ಕಾಲೇಜಿನ ಆಡಳಿತ ಕುಲಸಚಿವ ಪ್ರೊ. ಶ್ರೀಧರ್ ಎನ್. ಭಟ್, ಪರೀಕ್ಷಾಂಗ ಕುಲಸಚಿವ ಗಣೇಶ್ ನಾಯಕ್ ಸೇರಿದಂತೆ ಪ್ರಮುಖರು ಭಾಗಿಯಾಗಿದ್ದರು. ಉಪನ್ಯಾಸಕ ಡಾ. ದಿವಾಕರ ಕೊಕ್ಕಡ ನಿರೂಪಿಸಿ, ಉಪನ್ಯಾಸಕಿ ಡಾ. ಧಾನೇಶ್ವರಿ ವಂದಿಸಿದರು.

20 ಅಧಿಕ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಭಾಗಿ

ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜುಗಳ ಕನ್ನಡ ಚರ್ಚಾ ಸ್ಪರ್ಧೆಗೆ ಉಡುಪಿ, ಮಡಿಕೇರಿ , ಮಂಗಳೂರು ಸೇರಿದಂತೆ **20 ಕ್ಕೂ** ಅಧಿಕ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಥಮ ರೂ **10,000** ಹಾಗು ದ್ವಿತೀಯ ರೂ **8,000** ಹಾಗು ತೃತೀಯ ರೂ **5,000** ನಗದು ಬಹುಮಾನವನ್ನು ಆಯೋಜಿಸಲಾಗಿತ್ತು.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಮಂಗಳವಾರ 24, ಮಾರ್ಚ್ 2026

website hosadiganatha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪುಟ ಸಂಖ್ಯೆ

ಕಾಸರಗೋಡು ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

ಸ್ಟ್ರಾಂಗ್ ರೂಮ್‌ಗಳಿಗೆ ಇಲೆಕ್ಟ್ರಾನಿಕ್ ಮತಯಂತ್ರಗಳ ವಿತರಣೆ

ಕಾಸರಗೋಡು: 2026ನೇ ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ವಿತರಿಸಲಾಯಿತು. ಇದರ ಅಂಗವಾಗಿ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಚುನಾವಣಾ ಅಧಿಕಾರಿ ಎ.ಇ.ಶೆರ್ಲಿ ಮತ್ತು ಇತರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರಿಂದ ಇವಿಎಂ ಮತಯಂತ್ರಗಳನ್ನು ಸೋಮವಾರ ಸ್ವೀಕರಿಸಿದರು.



ಒಟ್ಟು 1418 ಇವಿಎಂ ಮತಯಂತ್ರಗಳನ್ನು ಜಿಲ್ಲಾ ಕಲೆಕ್ಟರೇಟ್‌ನಲ್ಲಿರುವ ಚುನಾವಣಾ ಆಯೋಗದ ಗೋದಾಮಿನಿಂದ ವಿಶೇಷವಾಗಿ ಸಿದ್ಧಪಡಿಸಲಾದ ಸ್ಟ್ರಾಂಗ್ ರೂಮ್‌ಗಳಿಗೆ ಕೊಂಡೊಯ್ಯಲಾಯಿತು. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಗೆ ಗೋದಾಮಿನ ಬಳಿ ವಿಶೇಷವಾಗಿ ಸಿದ್ಧಪಡಿಸಲಾದ ಸ್ಟಾಲ್‌ಗಳ ಉಸ್ತುವಾರಿ ಹೊಂದಿರುವ ಸಿಬ್ಬಂದಿಗಳು ಕಂಪ್ಯೂಟರ್‌ನಲ್ಲಿ ಆಯಾ ಕ್ಷೇತ್ರಗಳು ಸ್ವೀಕರಿಸಿದ ಯಂತ್ರಗಳ ಸಂಖ್ಯೆಯನ್ನು ದಾಖಲಿಸಿದರು. ಸ್ವೀಕರಿಸಿದ ಇವಿಎಂಗಳು ಪ್ರತಿ ಕ್ಷೇತ್ರಕ್ಕೆ ನಿಗದಿಪಡಿಸಿದ ಸಂಖ್ಯೆಯಂತೆಯೇ ಇವೆ ಎಂದು ನೌಕರರು ಖಚಿತಪಡಿಸಿಕೊಂಡರು.

ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕೆ ತಲಾ 263 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್ ಯಂತ್ರಗಳನ್ನು ವಿತರಿಸಲಾಯಿತು. ಕಾಸರಗೋಡು ಕ್ಷೇತ್ರಕ್ಕೆ ತಲಾ 250 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 272 ವಿವಿಪ್ಯಾಟ್ ಯಂತ್ರಗಳನ್ನು ನೀಡಲಾಯಿತು.

ಉದುಮ ಕ್ಷೇತ್ರಕ್ಕೆ ತಲಾ 270 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 293 ವಿವಿಪ್ಯಾಟ್ ಯಂತ್ರಗಳನ್ನು ಒದಗಿಸಲಾಯಿತು. ಕಾಞಂಗಾಡು ಕ್ಷೇತ್ರಕ್ಕೆತಲಾ272 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 296 ವಿವಿಪ್ಯಾಟ್ ಯಂತ್ರಗಳನ್ನು ವಿತರಿಸಲಾಯಿತು. ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಕ್ಕೆ ತಲಾ 248 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 270 ವಿವಿಪ್ಯಾಟ್ ಯಂತ್ರಗಳನ್ನು ಒದಗಿಸಲಾಯಿತು.

ವಿಶೇಷ ಪೊಲೀಸ್ ಭದ್ರತಾ ಬೆಂಗಾವಲು ಹೊಂದಿರುವ ಜಿಪಿಎಸ್ ಹೊಂದಿದ ವಾಹನದಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಕಲೆಕ್ಟರೇಟ್‌ನಿಂದ ವಿವಿಧ ಕೇಂದ್ರಗಳಿಗೆ ಕೊಂಡೊಯ್ಯಲಾಯಿತು. ಇವಿಎಂ ನಿರ್ವಹಣಾ ನೋಡಲ್ ಅಧಿಕಾರಿಯಾದ ಸ್ಥಳೀಯಾಡಳಿತ ಇಲಾಖೆಯ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ, ಚುನಾವಣಾ ವಿಭಾಗದ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಕಲೆಕ್ಟರೇಟ್ ಚುನಾವಣಾ ವಿಭಾಗದ ಕಿರಿಯ ಸೂಪರಿಂಟೆಂಡೆಂಟ್ ಎ.ರಾಜೀವನ್, ಕಲೆಕ್ಟರೇಟ್‌ನ ಚುನಾವಣಾ ವಿಭಾಗದ ನೌಕರರು ಮತ್ತು ಚುನಾವಣಾ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿಗಳು ಭಾಗವಹಿಸಿದ್ದರು.

ಮನೆ ಮತದಾನಕ್ಕೆ ಜಿಲ್ಲೆಯಲ್ಲಿ 14,715 ಅರ್ಜಿಗಳು

ಜಿಲ್ಲೆಯಲ್ಲಿ ಮನೆಯಲ್ಲೇ ಮತದಾನ ಸೇವೆಗೆ 14,715 ಅರ್ಜಿ ಬಂದಿದ್ದು, ಚುನಾವಣಾ ಅಧಿಕಾರಿಗಳು ಮತದಾರರ ಮನೆಗಳಿಗೆ ಭೇಟಿ ನೀಡಿ ಮತ ಚಲಾಯಿಸುವ ವ್ಯವಸ್ಥೆ ಕೈಗೊಳ್ಳುವರು. ದಿವ್ಯಾಂಗರು ಮತ್ತು 85 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ನೀಡಲಾಗುವುದು. ಜಿಲ್ಲೆಯಲ್ಲಿ 85 ವರ್ಷಕ್ಕಿಂತ ಮೇಲ್ಪಟ್ಟವರಿಂದ 4,263 ಅರ್ಜಿ ಮತ್ತು ದಿವ್ಯಾಂಗ ವಲಯದಿಂದ 10,452 ಅರ್ಜಿಗಳು ಬಂದಿವೆ. ಕಾಸರಗೋಡು ಕ್ಷೇತ್ರದಿಂದ 85 ವರ್ಷ ಮೇಲ್ಪಟ್ಟವರಿಂದ 482 ಅರ್ಜಿಗಳು ಮತ್ತು ದಿವ್ಯಾಂಗರಿಂದ 1,790 ಅರ್ಜಿಗಳು, ಮಂಜೇಶ್ವರ ಕ್ಷೇತ್ರದಿಂದ 85 ವರ್ಷ ಮೇಲ್ಪಟ್ಟವರಿಂದ 477 ಅರ್ಜಿ ಮತ್ತು ದಿವ್ಯಾಂಗರಿಂದ 2,488 ಅರ್ಜಿ ಸಲ್ಲಿಕೆ ಯಾಗಿವೆ. ಉದುಮ ಕ್ಷೇತ್ರದಿಂದ 85 ವರ್ಷ ಮೇಲ್ಪಟ್ಟವರಿಂದ 852 ಅರ್ಜಿ ಮತ್ತು ವಿದ್ಯಾಂಗರಿಂದ 2644 ಅರ್ಜಿ ಸಲ್ಲಿಕೆಯಾಗಿದೆ. ಕಾಞಂಗಾಡು ಕ್ಷೇತ್ರದಿಂದ, 1217 ಮಂದಿ 85 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 1863 ಮಂದಿ ದಿವ್ಯಾಂಗರು ಸೇರಿದ್ದಾರೆ. ತೃಕ್ಕರೀಪ್ಪುರ ಕ್ಷೇತ್ರದಲ್ಲಿ 1235 ಮಂದಿ 85 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 1667 ಮಂದಿ ದಿವ್ಯಾಂಗ ವಿಭಾಗದವರು ಒಳಗೊಂಡಿದ್ದಾರೆ. ಬೂತ್ ಮಟ್ಟದ ಅಧಿಕಾರಿಗಳ ಮೂಲಕ 12ಡಿ ಫಾರ್ಮ್ ವಿತರಿಸಲಾಯಿತು.

ಸುತ್ತಮುತ್ತ

ಮಾ.28ರಂದು ಕರಾಳ ಮಸೂದೆಯ ವಿರುದ್ಧ ಪ್ರತಿಭಟನಾ ಸಭೆ

ಕಾಸರಗೋಡು: ಸುಳ್ಳಿಪ್ಪಾಡಿಯ ಕನ್ನಡ ಭವನದ ನೇತೃತ್ವದಲ್ಲಿ ಕನ್ನಡ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕರಾಳ ಮಸೂದೆಯ ವಿರುದ್ಧ ಪ್ರತಿಭಟನಾ ಸಭೆ ಮಾ.28ರಂದು ಬೆಳಗ್ಗೆ 10 ಗಂಟೆಗೆ ಕನ್ನಡ ಭವನದ ಬೇವಿಂಜೆ ಶ್ರೀಧರ ಕಲ್ಲೂರಾಯ –ಸರೋಜಾದೇವಿ ಉಚಿತ ಸಾರ್ವಜನಿಕ ವಾಚನಾಲಯದಲ್ಲಿ ಜರಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಾಭಿಮಾನಿಗಳು ಸೇರಿ ಅಭಿಪ್ರಾಯ ಮಂಡಿಸಬೇಕೆಂದು ಕನ್ನಡ ಭವನ ಸ್ಥಾಪಕ ಅಧ್ಯಕ್ಷ ಡಾ.ವಾಮನ್ ರಾವ್ ಬೇಕಲ್ ಹಾಗೂ ಕಾರ್ಯದರ್ಶಿ ವಸಂತ್ ಕೆರೆಮನೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಳಿಯತ್ತಡ್ಕ ಮಂದಿರ ಸುವರ್ಣ ಮಹೋತ್ಸವ ಸಂಭ್ರಮ

ಕಾಸರಗೋಡು: ಮಧೂರು ಉಳಿಯತ್ತಡ್ಕ ಗಣೇಶ ನಗರದ ಶ್ರೀ ಶಕ್ತಿ ಭಜನಾ ಮಂದಿರವು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದು ಈ ನಿಟ್ಟಿನಲ್ಲಿ ಮಾ.24ರಿಂದ 26ರ ವರೆಗೆ ವಿವಿಧ ವಿಧಿ ವಿಧಾನಗಳು ಜರಗಲಿವೆ. ಇದೇ ವೇಳೆ ಶ್ರೀ ಶಕ್ತಿ ಭಜನಾ ಮಂದಿರದ ಪರಿಸರದಲ್ಲಿರುವ ಶ್ರೀ ಬಜ್ರಂಗಬಲಿ ವ್ಯಾಯಾಮ ಶಾಲೆಯ 46ನೇ ವಾರ್ಷಿಕ ಉತ್ಸವವು ಮಾ.24ರಂದು ಸಂಪನ್ನಗೊಳ್ಳಲಿದೆ. ವಾರ್ಷಿಕ ಉತ್ಸವದ ಸುವಾರಿ ಬೆಳಗ್ಗೆ 7 ಗಂಟೆಗೆ ದೀಪಾರಾಧನೆ, ಭಜನೆ, 10 ಗಂಟೆಗೆ ಸಾಮೂಹಿಕ ಶ್ರೀ ಶನೀಶ್ವರ ಪೂಜೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಪ್ರಸಾದ ವಿತರಣೆ, ರಾತ್ರಿ 8.30ಕ್ಕೆ ನೃತ್ಯ ವೈಭವ, ಮಾ.25ರಂದು ಶ್ರೀ ಶಕ್ತಿ ಭಜನಾ ಮಂದಿರದಲ್ಲಿ ಬೆಳಗ್ಗೆ 10 ರಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಮಹಾಪೂಜೆ, ಅನ್ನಪ್ರಸಾದ ವಿತರಣೆ, ಸಂಜೆ 6.40ಕ್ಕೆ ದೀಪಾರಾಧನೆ, ಭಜನೆ, ರಾತ್ರಿ 9ಕ್ಕೆ ಮೂಲಸ್ಥಾನದಿಂದ ಘೋಷಯಾತ್ರೆ, 10.30ಕ್ಕೆ ತಿರುವಾದಿರ, 12ಕ್ಕೆ ಸರ್ವಾಲಂಕಾರ ಪೂಜೆ ಜರಗಲಿದೆ. ಮಾ.26ರಂದು ಬೆಳಗ್ಗೆ 9ಕ್ಕೆ ಶ್ರೀ ಶಕ್ತಿ ಸನ್ನಿಧಿಯಲ್ಲಿ ಚಂಡಿಕಾಯಾಗ ಆರಂಭವಾಗಲಿದೆ. ಶ್ರೀ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಉಪಸ್ಥಿತರಿರುವರು. ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ನೇತೃತ್ವ ವಹಿಸುವರು. ಅಪರಾಹ್ನ 3 ಗಂಟೆಗೆ ಗುಳಿಗನ ಕೋಲ ನಡೆಯಲಿದೆ.

ಮತದಾನ, ಮತ ಎಣಿಕೆ ದಿನಗಳಲ್ಲಿ ಮದ್ಯ ನಿಷೇಧ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತದಾನ ಮತ್ತು ಮತ ಎಣಿಕೆಯ ದಿನಗಳಲ್ಲಿ ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿ ಸರಕಾರವು ಮದ್ಯ ನಿಷೇಧ ಜಾರಿಗೊಳಿಸಿದ್ದು, ಈ ನಿಟ್ಟಿನಲ್ಲಿ ಶುಷ್ಕ ದಿನಗಳು ಎಂದು ಘೋಷಿಸಿದೆ. ಕೇಂದ್ರ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಸಂಬಂಧಪಟ್ಟ ಇಲಾಖೆಯು ಈ ಕುರಿತು ಅಧಿಸೂಚನೆಯನ್ನು ಹೊರಡಿಸಿದೆ. ಆದೇಶದ ಪ್ರಕಾರ ಏ.9ರಂದು ಮತದಾನ ಮತ್ತು ಮೇ 4ರಂದು ಮತ ಎಣಿಕೆಯ ದಿನಗಳಲ್ಲಿ ಮದ್ಯದ ಮೇಲೆ ಸಂಪೂರ್ಣ ನಿಷೇಧವಿರುತ್ತದೆ. ಮತದಾನ ಮುಗಿಯುವ 48 ಗಂಟೆಗಳ ಮೊದಲು ಮದ್ಯ ಮಾರಾಟ ಮತ್ತು ವಿತರಣೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಯಾವುದೇ ಕ್ಷೇತ್ರದಲ್ಲಿ ಮರು ಮತದಾನ ಅಗತ್ಯವಿದ್ದರೆ, ಆ ದಿನಗಳಲ್ಲಿ ನಿರ್ಬಂಧಗಳು ಸಹ ಅನ್ವಯಿಸುತ್ತವೆ. ಈ ಕ್ರಮವು 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 135A ಅಡಿಯಲ್ಲಿದೆ. ಇದರ ಪ್ರಕಾರ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕ್ಲಬ್‌ಗಳು, ಸ್ಟಾರ್ ಹೋಟೆಲ್‌ಗಳು ಇತ್ಯಾದಿ ಸೇರಿದಂತೆ ಮದ್ಯ ಪೂರೈಸಲು ಪರವಾನಗಿ ಪಡೆದ ಯಾವುದೇ ಸಂಸ್ಥೆಯು ಈ ದಿನಗಳಲ್ಲಿ ಮದ್ಯ ಪೂರೈಸಬಾರದು ಅಥವಾ ಮಾರಾಟ ಮಾಡಬಾರದು. ಸಾರ್ವಜನಿಕ ಅಥವಾ ಖಾಸಗಿ ಸ್ಥಳಗಳಲ್ಲಿ ಮದ್ಯ ವಿತರಿಸುವುದು ಕೂಡಾ ಅಪರಾಧವಾಗಿದೆ. ಕಾಸರಗೋಡು ಜಿಲ್ಲೆಯಲ್ಲಿ ಅಕ್ರಮ ಮದ್ಯ ಸಂಗ್ರಹಣೆಯನ್ನು ತಡೆಗಟ್ಟಲು ಮತ್ತು ನೆರೆಯ ರಾಜ್ಯಗಳಿಂದ ಮದ್ಯ ಸಾಗಾಟವನ್ನು ನಿಯಂತ್ರಿಸಲು ಅಬಕಾರಿ ಇಲಾಖೆ ಮತ್ತು ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಮಾ.27: ಮಡಬೀಡು ತರವಾಡಿನಲ್ಲಿ ನೇಮ

ಮಂಜೇಶ್ವರ: ಕೊಡ್ಲಮೊಗರು ಮಡಬೀಡು ತರವಾಡು ಕುಟುಂಬದವರ ಮನೆಯಲ್ಲಿ ವರ್ಷಾವಧಿ ಶ್ರೀ ಕಡಂಗಲ್ಲಾಯ, ಶ್ರೀ ಮಂದ್ರಾಯ, ಪಂಜುರ್ಲಿ ಮತ್ತು ಗುಳಿಗ ದೈವಗಳಿಗೆ ನೇಮ ಮಾ.27ರಂದು ಜರಗಲಿದೆ. ಬೆಳಗ್ಗೆ 7ಕ್ಕೆ ದೈವಗಳಿಗೆ ತಂಬಿಲ ಸೇವೆ ನಂತರ ಭಂಡಾರ ಏರುವುದು, 10ಕ್ಕೆ ಕಡಂಗಲ್ಲಾಯ ದೈವದ ನೇಮ, ಮಧ್ಯಾಹ್ನ ಅನ್ನ ಸಂತರ್ಪಣೆ, 2 ಗಂಟೆಗೆ ಮಂದ್ರಾಯ ದೈವದ ನೇಮ, ಸಂಜೆ 6ರಿಂದ ಪಂಜುರ್ಲಿ ದೈವದ ನೇಮ, ರಾತ್ರಿ ಅನ್ನ ಸಂತರ್ಪಣೆ, 10 ಗಂಟೆಗೆ ಕಲ್ಲುರ್ಟಿ, ಪಂಜುರ್ಲಿ, ಗುಳಿಗ ದೈವಗಳ ನೇಮ ನಡೆಯಲಿದೆ.

ಮಂಜೇಶ್ವರದಲ್ಲಿ ಎಸ್‌ಡಿಪಿಐ ಕಣಕ್ಕೆ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ. ಇದರಿಂದಾಗಿ ಉಭಯ ರಂಗಗಳಲ್ಲಿ ನಡುಕ ಉಂಟಾಗಿದೆ. ಎಸ್‌ಡಿಪಿಐ ಕಾಸರಗೋಡು ಜಿಲ್ಲಾ ಸಮಿತಿ ಸದಸ್ಯ ಕೆ.ಎಂ.ಅಶ್ರಫ್ ಸ್ಪರ್ಧಾಕಣಕ್ಕೆ ಧುಮುಕಿದ್ದಾರೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಎಸ್‌ಡಿಪಿಐ ಸ್ಪರ್ಧಿಸುತ್ತಿದೆ. ಯುಡಿಎಫ್ ಅಭ್ಯರ್ಥಿಯಾಗಿ ಹಾಲಿ ಶಾಸಕ ಮುಸ್ಲಿಂಲೀಗ್‌ನ ಎ.ಕೆ.ಎಂ.ಅಶ್ರಫ್, ಎನ್‌ಡಿಎ ಅಭ್ಯರ್ಥಿಯಾಗಿ ಬಿಜೆಪಿಯ ಕೆ.ಸುರೇಂದ್ರನ್, ಎಲ್‌ಡಿಎಫ್ ಅಭ್ಯರ್ಥಿಯಾಗಿ ಸಿಪಿಎಂನ ಕೆ.ಆರ್. ಜಯಾನಂದ ಈಗಾಗಲೇ ಪ್ರಚಾರಕಾರ್ಯದಲ್ಲಿ ನಿರತರಾಗಿದ್ದಾರೆ.

ಕಾಸರಗೋಡು ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ವಿವಿಧೆಡೆ ಮತಯಾಚನೆ



ಕಾಸರಗೋಡು: ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಹಾಗೂ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಭಾನುವಾರ ವಿವಿಧ ಕಾರ್ಯಕ್ರಮಗಳು ಮತ್ತು ಕಾರ್ಯಕರ್ತರ ಸಭೆಗಳಲ್ಲಿ ಪಾಲ್ಗೊಂಡು ಮತಯಾಚಿಸಿದರು.

ಜಿಲ್ಲಾ ಸಮಿತಿಯ ಪ್ರಧಾನ ಕಚೇರಿಯಲ್ಲಿ ಬಿಜೆಪಿ ನಾಯಕರೊಂದಿಗೆ ಉಪಹಾರ ಸೇವಿಸಿದ ನಂತರ ಮೊಗ್ರಾಲ್ ಪುತ್ತೂರು ಮತ್ತು ಮಧೂರಿನಲ್ಲಿ ನಡೆದ ಕಾರ್ಯಕರ್ತರ ಸಭೆಗಳಲ್ಲಿ ಭಾಗವಹಿಸಿದ್ದರು. ಕಾಸರಗೋಡಿನ ಶಿವಶಕ್ತಿ ನಗರದಲ್ಲಿ ಏರ್ಪಡಿಸಲಾದ ಜಿಪಿಎಲ್ ಸೀಸನ್ 7 ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಲ್ಗೊಂಡ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರು ಆಟಗಾರರಿಗೆ ಶುಭಾಶಯ ಕೋರುವುದರೊಂದಿಗೆ ಕ್ರಿಕೆಟ್ ಆಟದಲ್ಲಿ ಭಾಗಿಯಾಗಿ ಸ್ಫೂರ್ತಿ ತುಂಬಿದರು.

ಎಡನೀರು ಮಠಕ್ಕೆ ಭೇಟಿ

ಕೂಡ್ಲು ಕಾಸರಗೋಡಿನ ದ್ವಾರಕಾನಗರದ ಬ್ರಹ್ಮಕುಮಾರೀಸ್ ಈಶ್ವರೀಯ ವಿದ್ಯಾಲಯದಲ್ಲಿ ಯುಗಾದಿ ಆಚರಣೆ ಮತ್ತು ಮಧ್ಯಾಹ್ನದೂಟ ನೆರವೇರಿಸಿದ ಅವರು ನಂತರ ಕಾಸರಗೋಡು ನಗರಸಭೆಯ ಕೊರಕೋಡು ವಾರ್ಡ್, ಎನ್‌ಡಿಎ ಜಿಲ್ಲಾ ಸಮಿತಿ ಕಚೇರಿ ಹಾಗೂ ಕಾಸರಗೋಡು ನಗರಸಭೆಯಲ್ಲಿ ನಡೆದ ಕಾರ್ಯಕಾರಿ ಸಭೆಗಳಲ್ಲಿ ಪಾಲ್ಗೊಂಡ ಬಳಿಕ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರನ್ನು ಭೇಟಿಯಾಗಿ ಆಶೀರ್ವಾದ ಮಂತ್ರಾಕ್ಷತೆ ಪಡೆದರು.

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಪುತ್ಥಳಿಗೆ ಸುರೇಂದ್ರನ್‌ರಿಂದ ಪುಷ್ಪಾರ್ಚನೆ



ಮಂಜೇಶ್ವರ: ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಜನ್ಮ ದಿನದ ಅಂಗವಾಗಿ ಬಿಜೆಪಿ ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಎನ್‌ಡಿಎ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಕೆ. ಸುರೇಂದ್ರನ್ ಅವರು ಗೋವಿಂದ ಪೈಗಳ ನಿವಾಸದಲ್ಲಿ ಅವರ ಪುತ್ಥಳಿಗೆ ಸೋಮವಾರ ಪುಷ್ಪಾರ್ಚನೆ ನಡೆಸಿ ನಮಿಸಿದರು.

ಕನ್ನಡದ ಪ್ರಥಮ ರಾಷ್ಟ್ರಕವಿ ಗೋವಿಂದ ಪೈಗಳ ಜನ್ಮ ನಾಡಿನಲ್ಲಿ ಕೇರಳದ ಎಡರಂಗ ಸರಕಾರವು ಮಲೆಯಾಳ ಭಾಷಾ ಮಸೂದೆಯನ್ನು ಜಾರಿಗೊಳಿಸಿ ಗಡಿನಾಡ ಕನ್ನಡಿಗರ ಸಂವಿಧಾನ ಬದ್ಧ ಹಕ್ಕುಗಳನ್ನು ಕಸಿದಿದೆ ಎಂದು ಕೆ.ಸುರೇಂದ್ರನ್ ಆಕ್ರೋಶ ವ್ಯಕ್ತಪಡಿಸಿದರು. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಮಲೆಯಾಳ ಭಾಷಾ ಮಸೂದೆ ಜಾರಿಗೊಳಿಸುವ ವಿಧಾನಸಭಾ ಅಧಿವೇಶನದಲ್ಲಿ ಭಾಗವಹಿಸದೆ ಗೈರು ಹಾಜರಾಗಿ ಕನ್ನಡ ವಿರೋಧಿ ನೀತಿ ತೋರಿದರು ಎಂದು ಅವರು ಆರೋಪಿಸಿದರು.


ನ್ಯಾಯಯುತ ಬೇಡಿಕೆಗೆ ಸ್ಪಂದನೆ

ಗಡಿನಾಡ ಕನ್ನಡಿಗರ ಹಕ್ಕು ಸಂರಕ್ಷಣೆ ನನ್ನ ಗುರಿಯಾಗಿದ್ದು ಭಾಷಾ ಅಲ್ಪಸಂಖ್ಯಾತ ಜನರ ನ್ಯಾಯಯುತ ಬೇಡಿಕೆಗಳಿಗೆ ಬಿಜೆಪಿ ಸದಾ ಸ್ಪಂದಿಸಲಿದೆ ಎಂದರು. ಮಾತ್ರವಲ್ಲದೆ ಕನ್ನಡ ಭಾಷಾ ಉಳಿಸಿ ಮತ್ತು ಬೆಳೆಸಿ ಹೋರಾಟಕ್ಕೆ ಬಿಜೆಪಿ ನಿರಂತರ ನೇತೃತ್ವ ನೀಡಲಿದೆ ಎಂದು ಕೆ.ಸುರೇಂದ್ರನ್ ಘೋಷಿಸಿದರು.

ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಮುಖಂಡರಾದ ಯಾದವ ಬಡಾಜೆ, ಎಂ.ಹರಿಶ್ಚಂದ್ರ ಮಂಜೇಶ್ವರ, ರಾಜೇಶ್ ತೂಮಿನಾಡು, ಎಸ್.ಎನ್.ಭಟ್ ಮುಂತಾದವರು ಜೊತೆಗಿದ್ದರು.

ಮಾ.30ರಿಂದ ಏ.4ರವರೆಗೆ ಬೆದ್ರಡ್ಕ ದೈವಸ್ಥಾನದಲ್ಲಿ ಜಾತ್ರೆ

ಕಾಸರಗೋಡು: ಕುಂಬಳೆ ಸೀಮೆಯ ನಾಲ್ಕು ದೈವಸ್ಥಾನಗಳಲ್ಲಿ ಒಂದಾದ ಬೆದ್ರಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಸ್ಥಾನದ ವಾರ್ಷಿಕ ಜಾತ್ರೆ ಹಾಗೂ ಬಂಡಿ ಉತ್ಸವವು ಮಾ.30 ರಿಂದ ಏಪ್ರಿಲ್ 4ರ ತನಕ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಸಾನ್ನಿಧ್ಯ ಮತ್ತು ಮಾರ್ಗದರ್ಶನದಲ್ಲಿ ವಿವಿಧ ವೈದಿಕ, ತಾಂತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.



ಕಾರ್ಯಕ್ರಮದ ಅಂಗವಾಗಿ ಮಾ.30 ರಂದು ಸಂಜೆ 4 ಗಂಟೆಗೆ ಕೋಟೆಕುಂಜ ಮಾಳ್ಯ ಮೂಲಸ್ಥಾನದಿಂದ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ಕೀರ್ವಾಳು ಆಗಮಿಸಲಿದ್ದು ರಾತ್ರಿ 7 ಗಂಟೆಗೆ ತಂತ್ರಿವರ್ಯರಿಂದ ಧ್ವಜಾರೋಹಣ ನೆರವೇರಲಿದೆ. ಬಳಿಕ ತಂಬಿಲ ಹಾಗೂ ಮಹಾಪೂಜೆ, 8ಕ್ಕೆ ಹರೀಶ್ ಅಮ್ಮಿಕ್ಕೆರೆ ಬಳಗದವರಿಂದ ಭಕ್ತಿಭಾವ ಸಂಭ್ರಮ ಕಾರ್ಯಕ್ರಮ ನಡೆಯಲಿದೆ. ಮಾ.31ರಂದು ರಾತ್ರಿ 7ಗಂಟೆಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯಿಂದ ಶ್ರೀದೇವಿ ಮಹಾತ್ಮೆ ಎಂಬ ಯಕ್ಷಗಾನ ಬಯಲಾಟ, 10ಕ್ಕೆ ಕೊಟ್ಯತ್ತಾಯನ ತಂಬಿಲ ಹಾಗೂ ಮಹಾಪೂಜೆ ಜರಗಲಿದೆ. ಏ. 1ರಂದು ಮಧ್ಯಾಹ್ನ 1ಗಂಟೆಗೆ ಶ್ರೀ ಕಿನ್ನಿಮಾಣಿ ದೈವದ ನೇಮೋತ್ಸವ, ಸಂಜೆ 6.30ಕ್ಕೆ ಅಮ್ಮ ಕಲಾವಿದರು ಕುಡ್ಲ ಇವರಿಂದ ಅಣ್ ಮಗೆ ಎಂಬ ತುಳು ಹಾಸ್ಯ ನಾಟಕ, ರಾತ್ರಿ 10 ಗಂಟೆಗೆ ಪಾಪೆ ಬಂಡಿ ಉತ್ಸವ, ಬಂಡಿ ಕಾಣಿಕೆ, ತಂಬಿಲ, ಮಹಾಪೂಜೆ ನಡೆಯಲಿದೆ.

ಏ. 2ರಂದು ಮಧ್ಯಾಹ್ನ 1ಗಂಟೆಗೆ ಶ್ರೀ ಪೂಮಾಣಿ ದೈವದ ನೇಮ, ರಾತ್ರಿ 7ಕ್ಕೆ ಶ್ರೀ ಅಯ್ಯಪ್ಪ ಮಹಿಳಾ ಸಂಘ ಬೆದ್ರಡ್ಕ ಇವರಿಂದ ಫ್ಯೂಷನ್ ಕೈ ಕೊಟ್ಟುಕ್ಕಳಿ ಸಮೂಹ ನೃತ್ಯ, 8 ಗಂಟೆಗೆ ಕಣ್ಣೂರು ಮಾಳ್ಯ ಶ್ರೀ ಬೀರ್ಣಾಳ್ವ ದೈವದ ಮೂಲಸ್ಥಾನದಿಂದ ಹಾಗೂ ಪುತ್ತೂರುಕೊಟ್ಯ ಶ್ರೀ ಧೂಮಾವತೀ ದೈವಸ್ಥಾನದಿಂದ ದೈವಗಳ ಭಂಡಾರ ಮೆರವಣಿಗೆಯೊಂದಿಗೆ ಆಗಮನ, 8.30ಕ್ಕೆ ಬಾಲಕೃಷ್ಣ ಮಾಸ್ಟರ್ ಮಂಜೇಶ್ವರ ಇವರ ಶಿಷ್ಯ ವೃಂದದವರಿಂದ ನೃತ್ಯ ಸಮನ್ವಿತಂ ಕಾರ್ಯಕ್ರಮ, 11ಕ್ಕೆ ಪಾಪೆ ಬಂಡಿ ಉತ್ಸವ, ವಿಶೇಷ ಸುಡುಮದ್ದು ಪ್ರದರ್ಶನ, ಬಂಡಿ ಕಾಣಿಕೆ ಹಾಗೂ ತಂಬಿಲ, ಮಹಾಪೂಜೆ ನೆರವೇರಲಿದೆ. ಏಪ್ರಿಲ್ 3ರಂದು ಮಧ್ಯಾಹ್ನ 12.30ಕ್ಕೆ ಶ್ರೀ ಬೀರ್ಣಾಳ್ವ ದೈವದ ನೇಮೋತ್ಸವ, ಅಪರಾಹ್ನ 3.30ಕ್ಕೆ ಶ್ರೀ ಧೂಮಾವತೀ ದೈವದ ನೇಮ, ರಾತ್ರಿ 8ಕ್ಕೆ ಉಜಿರೆಕೆರೆ ಆರಾಟು ಕಟ್ಟೆಯಲ್ಲಿ ಮಂಗಳ ಸ್ನಾನ (ಆರಾಟು), ದೈವಸ್ಥಾನದಲ್ಲಿ ತಂತ್ರಿವರ್ಯರಿಂದ ಧ್ವಜಾವರೋಹಣ, ತಂಬಿಲ, ಮಹಾ ಪೂಜೆ, ಅಯ್ಯಂಗಾಯಿ ನಡೆಯಲಿದೆ. ಏ. 4ರಂದು ಬೆಳಗ್ಗೆ 8ಕ್ಕೆ ಕೋಟೆಕುಂಜ ಮಾಳ್ಯ ಮೂಲಸ್ಥಾನಕ್ಕೆ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ಕೀರ್ವಾಳು ಮತ್ತು ಕಣ್ಣೂರು ಶ್ರೀ ಬೀರ್ಣಾಳ್ವ ದೈವದ ಮೂಲಸ್ಥಾನಕ್ಕೆ ಹಾಗೂ ಪುತ್ತೂರುಕೊಟ್ಯ ಶ್ರೀ ಧೂಮಾವತೀ ದೈವಸ್ಥಾನಗಳಿಗೆ ದೈವಗಳ ಭಂಡಾರ ಶ್ರೀ ಕ್ಷೇತ್ರದಿಂದ ಮರಳಲಿದೆ.

ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಷನ್ ಗುರುತು ಚೀಟಿ ವಿತರಣೆ



ಕಾಸರಗೋಡು: ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಷನ್ (ಎಕೆಪಿಎ) ಪೂರ್ವ ಘಟಕವು 2026–27ನೇ ಸಾಲಿನ ಗುರುತು ಚೀಟಿ ವಿತರಣೆಯನ್ನು ಆಯೋಜಿಸಲಾಗಿತ್ತು. ಘಟಕದ ಅಧ್ಯಕ್ಷ ರಾಜಶೇಖರನ್ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕಾಸರಗೋಡು ನ್ಯಾಚುರಲ್ ಕ್ಲಬ್‌ನ ಸಂಯೋಜಕ ದಿನೇಶ್ ಇನ್‌ಸೈಟ್, ನೂತನ ಸದಸ್ಯ ವಿನಾಯಕನ್ ಅವರಿಗೆ ಐಡಿ ಕಾರ್ಡ್ ವಿತರಿಸಿದರು.

ಸಮಿತಿ ಸದಸ್ಯರು ಇತರ ನೂತನ ಸದಸ್ಯರಾದ ವಿನೀತ್, ವರುಣ್‌ರಾಜ್, ಅಜಿತ್ ಮತ್ತು ಅಶ್ವತಿ ಅವರಿಗೆ ಐಡಿ ಕಾರ್ಡ್‌ಗಳನ್ನು ವಿತರಿಸಲಾಯಿತು. ರಾಜ್ಯ ಸಮಿತಿ ಸದಸ್ಯ ರಾಜೇಂದ್ರನ್, ಪ್ರಾದೇಶಿಕ ಅಧ್ಯಕ್ಷ ವಾಮನ್ ಕುಮಾರ್ ಮತ್ತು ದಿನೇಶ್ ಇನ್‌ಸೈಟ್ ಸಂಘಟನೆಯ ಕುರಿತು ಮಾತನಾಡಿದರು.

ಹೊಸ ಸದಸ್ಯರಾದ ವಿನೀತ್ ಮತ್ತು ಅಶ್ವತಿ, ಘಟಕದ ಹಿರಿಯ ಸದಸ್ಯ ಗೋವಿಂದನ್, ಪ್ರಾದೇಶಿಕ ಕೋಶಾಧಿಕಾರಿ ಅಜಿತ್ ಕುಮಾರ್, ಜಂಟಿ ಕಾರ್ಯದರ್ಶಿ ಸುರೇಶ್ ಚಂದ್ರ, ಮನೀಶ್ ಉಪಸ್ಥಿತರಿದ್ದರು. ಘಟಕ ಕೋಶಾಧಿಕಾರಿ ಶ್ರೀಕಾಂತ್ ವಂದಿಸಿದರು.



ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ವಿವಿಧ ಸ್ಥಳಗಳಿಗೆ ಭಾನುವಾರ ಚುನಾವಣಾ ವೀಕ್ಷಕರು ಭೇಟಿ ನೀಡಿ ಪರಿಶೀಲಿಸಿದರು. ಸಾಮಾನ್ಯ ವೀಕ್ಷಕ ವಿಜಯ್ ವಾಘ್ಮಾರೆ ಅವರು ಪೆರ್ಲ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿದರು. ಅಲ್ಲದೆ ಜ್ಞಾನೇಶ್ವರ್ ಕೊಂಡಿಬಾಹು ಖಿಲಾರಿ ಅವರು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಗೆ ಭೇಟಿ ನೀಡಿದರು.



ಕುರುಡಪದವು ಶ್ರೀರಾಮ್ ಫ್ರೆಂಡ್ಸ್ ಕ್ಲಬ್‌ನ ವತಿಯಿಂದ ರಕ್ತದಾನ ಶಿಬಿರವು ಕುರುಡಪದವು ಎಯುಪಿ ಶಾಲೆಯಲ್ಲಿ ಜರಗಿತು. ಪೈವಳಿಕೆ ಗ್ರಾಮ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸುಮನಾ ಜಿ. ಭಟ್ ಉದ್ಘಾಟಿಸಿದರು. ಶಂಕರನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು. ಸುಮಾರು 54 ಮಂದಿ ರಕ್ತದಾನ ಮಾಡಿದರು. ಯೋಗೀಶ್, ರಂಜಿತ್ ಇದ್ದರು.

ಕರಂದಕ್ಕಾಡು ಬೆಡಿಕಟ್ಟೆಯಲ್ಲಿ ನೃತ್ಯ ಸಂಧ್ಯಾ



ಕಾಸರಗೋಡು: ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಬೇಡಿಕಟ್ಟೆ ಸೇವಾ ಸಮಿತಿ ವತಿಯಲ್ಲಿ ಕರಂದಕ್ಕಾಡು ಬೆಡಿಕಟ್ಟೆಯಲ್ಲಿ ನೃತ್ಯ ಸಂಧ್ಯಾ ಕಾರ್ಯಕ್ರಮ ಜರಗಿತು. ಸೇವಾ ಸಮಿತಿಅಧ್ಯಕ್ಷರಾದರವೀಂದ್ರಪೂಜಾರಿ ಕರಂದಕ್ಕಾಡು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಗಜೀವನ್ ರಾವ್, ರಾಜಶೇಖರ್, ಅಭಿಜ್ಞಾ ಹರೀಶ್, ಗಿರಿಧರ್ ಸಾಲಿಯಾನ್, ರಾಮನ್, ಹರೀಶ್ ಕೆ.ಆರ್. ಅವರನ್ನು ಗೌರವಿಸಲಾಯಿತು. ಕೋಶಾಧಿಕಾರಿ ಗಣೇಶ್ ಎ., ಕೇಶವ ಹಾಗೂ ವೀರ ಹನುಮಾನ್ ಮಂದಿರದ ಅಧ್ಯಕ್ಷ ಗಣೇಶ್ ಉಪಸ್ಥಿತರಿದ್ದರು. ಹರೀಶ್ ಕೆ.ಆರ್.ಸ್ವಾಗತಿಸಿ, ಹರೀಶ್ ಕರಂದಕ್ಕಾಡ್ ವಂದಿಸಿದರು. ರಾಧಾಕೃಷ್ಣ ಸೂರ್ಲು ನಿರೂಪಿಸಿದರು.

ಕನ್ನಡ ಭವನ ಗ್ರಂಥಾಲಯದಲ್ಲಿ ಕನ್ನಡ ಪಯಸ್ವಿನಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಾ.ನಾಗಚಂದ್ರ ಮೈಸೂರು

ಗಡಿನಾಡು ಕಾಸರಗೋಡು ಕನ್ನಡಿಗರು ತೋರಿಸುವ ಪ್ರೀತ್ಯಾದರ ಅವಿಸ್ಮರಣೀಯ

ಕಾಸರಗೋಡು: ಗಡಿನಾಡು ಕಾಸರಗೋಡಿನ ಕನ್ನಡಿಗರ ಆತಿಥ್ಯ, ಪ್ರೀತ್ಯಾದರ ಮನಮುಟ್ಟುವಂತದ್ದು. ರಂಗಭೂಮಿ ನಟನಾಗಿ, ನಾಟಕ ನಿರ್ದೇಶಕ, ಸಾಹಿತಿಯಾಗಿ, ನಾಟಕ ಅಕಾಡೆಮಿ ಸದಸ್ಯನಾಗಿ ಕರ್ನಾಟಕದ ಬಹುತೇಕ ಪ್ರದೇಶಗಳಿಗೆ ತೆರಳಿದ್ದೇನೆ. ಅಲ್ಲೆಲ್ಲೂ ಅನುಭವಿಸದ ಗೌರವಪೂರಕ ಪ್ರೀತಿ ಕಾಸರಗೋಡಲ್ಲಿ ಅನುಭವ ವೇದ್ಯವಾಗಿದೆ. ಯಕ್ಷಗಾನ ಪಿತಾಮಹ ಪಾರ್ತಿಸುಬ್ಬನ, ಪ್ರಥಮ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ, ನಾಡೋಜ ಡಾ.ಕಯ್ಯಾರರ, ಇಂದಿಗೂ ಕನ್ನಡದ ಕೆಚ್ಚಿನ ಹೆಗ್ಗುರುತಾದ ಬೇಕಲ ಕೋಟೆಯಂತೆ ಇಲ್ಲಿನ ಕನ್ನಡಿಗರು ಸದಾ ಕರ್ನಾಟಕಕ್ಕೆ ಮಾದರಿ. ಇಲ್ಲಿನ ಸರಕಾರದ ಕನ್ನಡ ವಿರುದ್ಧ ನಡವಳಿಕೆ ಸದಾ ಖಂಡನೀಯ, ನಿಮ್ಮ ಕನ್ನಡ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ಕಾಸರಗೋಡು ಸುಳ್ಳಿಪ್ಪಾಡಿಯ ಡಾ.ವಾಮನ್ ರಾವ್ ಬೇಕಲ್ ಸಾರಥ್ಯದ ಕನ್ನಡ ಭವನ ಗ್ರಂಥಾಲಯದಲ್ಲಿ ಕನ್ನಡ ಪಯಸ್ವಿನಿ ಪ್ರಶಸ್ತಿ ಸ್ವೀಕರಿಸಿ ಮೈಸೂರಿನ ನಾ.ನಾಗಚಂದ್ರ ಅವರು ಮನದಾಳದ ಮಾತುಗಳನ್ನಾಡಿದರು.



ಕಾಸರಗೋಡು ಕನ್ನಡ ಭವನದ ಪ್ರಶಸ್ತಿಯಾದ ಕನ್ನಡ ಪಯಸ್ವಿನಿ ಅಚೀವ್ಮೆಂಟ್ ಅವಾರ್ಡ್ 2026 ಸ್ವೀಕರಿಸಿ ಅವರು ಮಾತನಾಡಿದರು.

ಅವರ ಶ್ರೀಮತಿ ಅನುಸೂಯ ನಾಗಚಂದ್ರ, ಮಕ್ಕಳಾದ ಅಮೋಘ ವರ್ಷ, ಅಪೇಕ್ಷಾ ನಾ.ನಾಗಚಂದ್ರ ಮೈಸೂರು ಅವರ ಜೊತೆಗಿದ್ದರು. ಅವರು ಕನ್ನಡ ಭವನ ಗ್ರಂಥಾಲಯಕ್ಕೆ ಸುಮಾರು 406 ಪುಸ್ತಕಗಳನ್ನು ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಕನ್ನಡ ಭವನ ಗೌರವಾಧ್ಯಕ್ಷ ಪ್ರದೀಪ್ ಬೇಕಲ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಭವನ ಸ್ಥಾಪಕರಾದ ಡಾ.ವಾಮನ್ ರಾವ್ ಬೇಕಲ್ ಹಾಗೂ ಸಂಧ್ಯಾರಾಣಿ ಟೀಚರ್ ನಾ. ನಾಗಚಂದ್ರ –ಅನುಸೂಯ ದಂಪತಿಗಳಿಗೆ ಶಾಲು, ಹಾರ, ಸ್ಮರಣಿಕೆಯೊಂದಿ ಕನ್ನಡ ಪಯಸ್ವಿನಿ ನೀಡಿ ಗೌರವಿಸಿದರು. ಕನ್ನಡ ಭವನ ಕಾರ್ಯದರ್ಶಿ ವಸಂತ್ ಕೆರೆಮನೆ ಕಾರ್ಯಕ್ರಮ ನಿರೂಪಿಸಿದರು. ಸಂಧ್ಯಾರಾಣಿ ಸ್ವಾಗತಿಸಿ, ಸಂಘಟನಾ ಕಾರ್ಯದರ್ಶಿ ರಾಜೇಶ್ ಕೋಟೆಕಣಿ ವಂದಿಸಿದರು.

■ ಸುಳ್ಳಿಪ್ಪಾಡಿಯ ಡಾ.ವಾಮನ್ ರಾವ್ ಬೇಕಲ್ ಸಾರಥ್ಯದ ಕನ್ನಡ ಭವನ ಗ್ರಂಥಾಲಯದಲ್ಲಿ ಕನ್ನಡ ಪಯಸ್ವಿನಿ ಪ್ರಶಸ್ತಿ ಸ್ವೀಕರಿಸಿದ ನಾ.ನಾಗಚಂದ್ರ ಮೈಸೂರು

■ ನಾಗಚಂದ್ರ ಮೈಸೂರು ಕುಟುಂಬದಿಂದ ಕನ್ನಡ ಭವನ ಗ್ರಂಥಾಲಯಕ್ಕೆ ಸುಮಾರು 406 ಪುಸ್ತಕಗಳ ಹಸ್ತಾಂತರ

ಸುತ್ತ ಮುತ್ತ

ದಿ. ಕೆ. ಸಿ.ಕುಂದರ್ ಸ್ಮರಣಾರ್ಥ ವಿದ್ಯಾರ್ಥಿಗಳ ಉಚಿತ ಬೇಸಿಗೆ ಶಿಬಿರ

ಕೋಟ: ಗೀತಾನಂದ ಫೌಂಡೇಶನ್ ಮಣೂರು ಪಡುಕೆರೆ, ಡಾ. ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ ಕೋಟ, ಉಸಿರು ಕೋಟ, ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಕೋಟತಟ್ಟು ಇವರ ಆಶ್ರಯದಲ್ಲಿ ಕರಾವಳಿ ಕಣ್ಮಣಿ ದಿ. ಕೆ. ಸಿ.ಕುಂದರ್ ಸ್ಮರಣಾರ್ಥ ನಡೆಯುವ 26ನೇ ವರ್ಷದ ವಿದ್ಯಾರ್ಥಿಗಳ ಉಚಿತ ಬೇಸಿಗೆ ಶಿಬಿರ ಏ.25ರಿಂದ ಮೇ 4ರವರೆಗೆ ನಡೆಯಲಿದೆ. 4ನೇ ತರಗತಿಯಿಂದ 9ನೇ ತರಗತಿಯ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಬಹುದು. ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ಬೇರೆ ಬೇರೆ ವಿಷಯಗಳನ್ನು ತರಬೇತಿ ನೀಡಲಾಗುವುದು. ಈ ಶಿಬಿರ ಸಂಪೂರ್ಣ ಉಚಿತವಾಗಿದೆ ಎಂದು ಕಾರ್ಯಾಧ್ಯಕ್ಷ ಆನಂದ ಸಿ ಕುಂದರ್ , ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ,ಪಿಡಿಒ ರವೀಂದ್ರ ರಾವ್, ಕಾರ್ಯದರ್ಶಿ ಸುಮತಿ ಅಂಚನ್, ಕಾರ್ಯಕ್ರಮದ ನಿರ್ದೇಶಕ ಸುಬ್ರಾಯ ಆಚಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸಾರ್ವಭೌಮ ಪ್ರಶಸ್ತಿಗೆ ಆಯ್ಕೆ

ಕುಂದಾಪುರ: ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿ ಹಾಗೂ ಕಂಡ್ಲೂರು ಗ್ರಾಮ ಪಂಚಾಯತ್‌ನಲ್ಲಿ ಮೂರು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ದಸ್ತಗಿರಿ ಸಾಹೇಬ್ ಕಂಡ್ಲೂರು ಅವರು ಕರ್ನಾಟಕ ರಕ್ಷಣಾ ವೇದಿಕೆ



(ನಾರಾಯಣಗೌಡ ಬಣ) ಕೊಡ ಮಾಡುವ ಕರ್ನಾಟಕ ಸಾರ್ವಭೌಮ ಪ್ರಶಸ್ತಿಗೆ–2026 ಗೆ ಉಡುಪಿ ಜಿಲ್ಲೆಯಿಂದ ಆಯ್ಕೆಯಾಗಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆ ಉಡುಪಿ ಜಿಲ್ಲಾಧ್ಯಕ್ಷ ಪ್ರಭಾಕರ್ ಪೂಜಾರಿ ಮತ್ತು ಜಿಲ್ಲೆಯ ಸಂಘಟನೆ ಹಿರಿಯರು ಸೇರಿದಂತೆ ಪದಾಧಿಕಾರಿಗಳು 2026ನೇ ಸಾಲಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ನೀಡುವ ಕರ್ನಾಟಕ ಸಾರ್ವಭೌಮ ಪ್ರಶಸ್ತಿಯನ್ನು ಕುಂದಾಪುರ ತಾಲೂಕಿನ ಕಂಡ್ಲೂರು ದಸ್ತಗಿರಿ ಸಾಹೇಬರಿಗೆ ನೀಡುವ ಬಗ್ಗೆ ಶಿಫಾರಸು ಮಾಡಿದ್ದರು.

ಮೊದಲನೇ ಪುಟದಿಂದ

ರಸ್ತೆ ಬದಿ ಆಸ್ಪತ್ರೆ ತ್ಯಾಜ್ಯ

ವಾರ್ಡ್ ಸದಸ್ಯರು ತ್ಯಾಜ್ಯವನ್ನು ಪತ್ತೆಹಚ್ಚಿದ್ದಾರೆ. ಅನಂತಪುರ ಕೈಗಾರಿಕಾ ಉದ್ಯಾನವನದ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ತರಲಾದ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಸುರಿಯಲಾಗಿದೆ.
ಪ್ಲಾಸ್ಟಿಕ್ ಚೀಲಗಳಲ್ಲಿ ನಿಗೂಢ ರಾಶಿಯಲ್ಲಿ ಬಂಡಲ್‌ಗಳು ಬಿದ್ದಿರುವುದನ್ನು ನೋಡಿದ ಪುತ್ತಿಗೆ ಪಂಚಾಯತ್‌ನ 11ನೇ ವಾರ್ಡ್‌ನ ಸದಸ್ಯ ಸತೀಶ ಅವರು, ತಪಾಸಣೆಯ ಸಮಯದಲ್ಲಿ ಅದು ಆಸ್ಪತ್ರೆಯ ತ್ಯಾಜ್ಯ ಎಂದು ಗುರುತಿಸಿದ್ದಾರೆ. ಕೂಡಲೇ ಅವರು ತಕ್ಷಣ ಪಂಚಾಯತ್ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಘಟನೆ ಮಾಹಿತಿ ತಿಳಿದು ಪಂಚಾಯತ್ ಕಾರ್ಯದರ್ಶಿ ಮಧ್ಯಪ್ರವೇಶಿಸಿ ಸಂಬಂಧಪಟ್ಟ ಆಸ್ಪತ್ರೆ ಅಧಿಕಾರಿಗಳನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಸ್ಥಳಕ್ಕೆ ತಲುಪಲು ಕೇಳಿಕೊಂಡರು. ಆಸ್ಪತ್ರೆಯ ಅಧಿಕಾರಿಗಳು ಆಗಮಿಸಿ ರಸ್ತೆ ಬದಿಯಲ್ಲಿ ಸುರಿಯಲಾದ ತ್ಯಾಜ್ಯವನ್ನು ತಕ್ಷಣ ವಾಹನಗಳಲ್ಲಿ ತುಂಬಿಸಿ ವಿಲೇವಾರಿಗೊಳಿಸಿದರು.
ಪವಿತ್ರ ದೇವಾಲಯ ಮತ್ತು ಕೈಗಾರಿಕಾ ಉದ್ಯಾನವನಕ್ಕೆ ಪ್ರತಿದಿನ ನೂರಾರು ಜನರು ಭೇಟಿ ನೀಡುವ ಪ್ರದೇಶದಲ್ಲಿ ಇಂತಹ ಕೃತ್ಯವನ್ನು ಅತ್ಯಂತ ಗಂಭೀರವೆಂದು ಪಂಚಾಯತ್ ಪರಿಗಣಿಸಿದೆ. ಸಮಗ್ರ ತನಿಖೆ ನಡೆಸಲು ಸ್ಥಳೀಯರ ಒತ್ತಾಯ ಆಸ್ಪತ್ರೆ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸರಕಾರ ನಿರ್ದಿಷ್ಟ ಮಾನದಂಡಗಳನ್ನು ನಿಗದಿಪಡಿಸಿದೆ. ಆದಾಗ್ಯೂ ವಿಲೇವಾರಿ ಕೇಂದ್ರಕ್ಕೆ ಹೋಗುವ ದಾರಿಯಲ್ಲಿ ತ್ಯಾಜ್ಯವನ್ನು ಸುರಿಯುವುದು ಯಾರ ತಪ್ಪು ಎಂಬುದರ ಕುರಿತು ತನಿಖೆ ನಡೆಸಬೇಕೆಂದು ಸ್ಥಳೀಯರು ಆಗ್ರಹಿಸಿದರು. ಯಾವ ಸಂಸ್ಥೆ ತ್ಯಾಜ್ಯವನ್ನು ಸಾಗಿಸಿದೆ ಮತ್ತು ಯಾವ ವಾಹನದಲ್ಲಿ ಸಾಗಿಸಲಾಯಿತು ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು.

ಗಳಿಸುವುದೇ ಚಿಂತೆ!

ಸಣ್ಣ ಹೋಟೇಲ್ ವ್ಯವಹಾರಸ್ಥರು ತಮ್ಮ ಮನೆಗಳಲ್ಲಿ ಆಹಾರ ತಯಾರಿಸಿ ತಂದು ಮಾರಾಟ ಮಾಡುತ್ತಿದ್ದಾರೆ. ಹಲವೆಡೆ ಕಲ್ಯಾಣ ಮಂಟಪಗಳಿಗೂ ಗ್ಯಾಸ್ ಕೊರತೆ ಬಿಸಿ ತಟ್ಟಿದೆ. ವಾಣಿಜ್ಯ ಎಲ್ಪಿಜಿ ಸಿಲಿಂಡರ್ ಕೊರತೆಯಿಂದಾಗಿ ಮಾ.10ರಿಂದ ಉದ್ಭವಿಸಿರುವ ಬಿಕ್ಕಟ್ಟಿನಿಂದಾಗಿ ಶೇ.30–35 ವ್ಯವಹಾರ ಸ್ಥಗಿತಗೊಂಡಿದೆ. ಹೋಟೇಲ್‌ಗಳು, ಬಾರ್‌ಗಳು, ರೆಸ್ಟೋರೆಂಟ್‌ಗಳು ತೀವ್ರ ಸಂಕಷ್ಟದಲ್ಲಿವೆ.

ಉಡುಪಿಯಲ್ಲಿ 'ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮ ಉದ್ಘಾಟಿಸಿ ಎಂ.ಎ. ಗಫೂರ್ ಬಣ್ಣನೆ

ಸ್ವಾಸ್ಥ್ಯ ಸಮಾಜಕ್ಕೆ ದೇವರ ದಾಸಿಮಯ್ಯ ವಚನಗಳು ದಾರಿದೀಪ



ಉಡುಪಿ: 12ನೇ ಶತಮಾನದ ಆದ್ಯ ವಚನಕಾರ ದೇವರ ದಾಸಿಮಯ್ಯ ಅವರು ಸರಳ ಭಾಷೆಯ ವಚನಗಳ ಮೂಲಕ ಅಂದಿನ ಕಾಲಘಟ್ಟದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರು'' ಎಂದು ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಹೇಳಿದರು.
ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ (ಮಾ. 23) ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದ.ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ದೇವರದಾಸಿಮಯ್ಯಜಯಂತಿ'ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆದ್ಯ ವಚನಕಾರನ ಹೆಗ್ಗಳಿಕೆ

12ನೇ ಶತಮಾನದ ವಚನ ಚಳವಳಿಗಿಂತ ಮೊದಲೇ ಸರಳ ವಚನಗಳನ್ನು ರಚಿಸಿದ ಕೀರ್ತಿ ದಾಸಿಮಯ್ಯನವರದ್ದು. ಜಾತಿ, ಲಿಂಗ ತಾರತಮ್ಯ ಹಾಗೂ ಸ್ತ್ರೀ ಶೋಷಣೆಯನ್ನು ವಿರೋಧಿಸಿದ್ದ ಅವರು ನೈಜ ಸಮಾಜ ಸುಧಾರಕರಾಗಿದ್ದರು. ಇಂತಹ ಮಹನೀಯರ ಸಂದೇಶಗಳು ಯುವಪೀಳಿಗೆಯ ದ್ವೇಷ, ಅಸೂಯೆಗಳನ್ನು ಹೋಗಲಾಡಿಸಲು ದಾರಿದೀಪವಾಗಲಿವೆ ಎಂದು ಗಫೂರ್ ತಿಳಿಸಿದರು.

176 ವಚನಗಳು ಲಭ್ಯ

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಶೋಭಾ ಹರಿಪ್ರಸಾದ್ ಅವರು, ''ಹನ್ನೊಂದನೇ ಶತಮಾನದ ಉತ್ತರಾರ್ಧದಲ್ಲಿ ಬದುಕಿದ್ದ ದೇವರ ದಾಸಿಮಯ್ಯ (ಜೇಡರ ದಾಸಿಮಯ್ಯ) ಅವರು ವಚನ ಸಾಹಿತ್ಯದ ಬುನಾದಿ ಹಾಕಿದವರು. ಯಾದಗಿರಿ ಜಿಲ್ಲೆಯ ಮುದನೂರಿನಲ್ಲಿ ಜನಿಸಿದ ಇವರು, ನೇಕಾರಿಕೆಯನ್ನು ಕಾಯಕವಾಗಿ ಮಾಡಿಕೊಂಡಿದ್ದ ಸಮಾಜ ಸುಧಾರಕರು. ರಾಮನಾಥ ಎಂಬ ಅಂಕಿತನಾಮದಲ್ಲಿ ಇವರು ರಚಿಸಿದ 176 ವಚನಗಳು ನಮಗೆ ಲಭ್ಯವಿದ್ದು, ಇವು ಬಸವಣ್ಣನವರಿಗಿಂತ ಮೊದಲೇ ಸಮಸಮಾಜದ ಆಶಯವನ್ನು ಸಾರಿದ್ದವು. ಆಧ್ಯಾತ್ಮದ ಜ್ಞಾನವನ್ನು ಆಂಧ್ರದ ಶ್ರೀಶೈಲದಲ್ಲಿ ಪಡೆದಿದ್ದ ಇವರು, ಸಮಾಜದ ಟೀಕೆಗಳನ್ನು ಮೆಟ್ಟಿ ನಿಂತು ಸ್ತ್ರೀ ಶೋಷಣೆ ಮತ್ತು ತಾರತಮ್ಯದ ವಿರುದ್ಧ ಧ್ವನಿ ಎತ್ತಿದ್ದರು. ಅಂಧಕಾರದಿಂದ ಜ್ಞಾನದ ಕಡೆಗೆ ಸಮಾಜವನ್ನು ಮುನ್ನಡೆಸಿದ ಹಿರಿಮೆ ಅವರದ್ದು ಎಂದರು. ಅಲ್ಲದೆ, ಕರಾವಳಿಯ ನೇಕಾರಿಕೆಗೆ ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹ ಸಿಗಬೇಕು ಎಂದು ಅವರು ಒತ್ತಾಯಿಸಿದರು.

ಜ್ಞಾನ ಹೊಂದಿರಬೇಕು

ಪ್ರತಿಯೊಬ್ಬರೂ ಯಾವುದೇ ಕೆಲಸವನ್ನು ಮಾಡುವ ಮೊದಲು ಅದರ ಬಗ್ಗೆ ಜ್ಞಾನ ಹೊಂದಿರಬೇಕು. ಅನಗತ್ಯ ವಿಚಾರಗಳಿಗೆ ಗಮನಹರಿಸದೇ ತಮ್ಮ ಗುರಿಸಾಧನೆಯ ಕಡೆಗೆ ಗಮನವನ್ನು ಕೇಂದ್ರೀಕರಿಸಿಕೊಂಡಿರಬೇಕು ಎಂದರು.

ಶರಣ ಚಳವಳಿಯೇ ಭದ್ರ ಬುನಾದಿ

ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಅಬಿದ್ ಗದ್ಯಾಳ ಮಾತನಾಡಿ, ನೇಕಾರ ಸಮುದಾಯದ ಮೂಲಪುರುಷರಾದ ದಾಸಿಮಯ್ಯ ಅವರು ಶರಣ ಚಳವಳಿಗೆ ಭದ್ರ ಬುನಾದಿ ಹಾಕಿದವರು. ತ್ರಿಪದಿಗಳ ರೂಪದಲ್ಲಿ ಅವರು ರಚಿಸಿದ ವಚನಗಳು ಜನಸಾಮಾನ್ಯರಿಗೆ ಸಮಸಮಾಜದ ಸಂದೇಶವನ್ನು ನೀಡುತ್ತವೆ ಎಂದರು.
ಇದೇಸಂದರ್ಭದಲ್ಲಿಸಮುದಾಯದಸಾಧಕಗಿರೀಶ್ ಶೆಟ್ಟಿಗಾರ್ ವಿಟ್ಲ ಅವರನ್ನು ಸನ್ಮಾನಿಸಲಾಯಿತು. ದ.ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ ಅಧ್ಯಕ್ಷ ರವಿ ಶೆಟ್ಟಿಗಾರ್ ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಪೂರ್ಣಿಮಾ ಸ್ವಾಗತಿಸಿದರು, ಜಯರಾಮ ಶೆಟ್ಟಿಗಾರ್ ಮಣಿಪಾಲ ನಿರೂಪಿಸಿದರು ಮತ್ತು ಡಾ. ವೆಂಕಟರಾಯ್ ಶೆಟ್ಟಿಗಾರ್ ವಂದಿಸಿದರು.

ಕೈಮಗ್ಗಕ್ಕೆ ಹೆಚ್ಚಿನ ಮನ್ನಣೆ ದೊರೆಯಲಿ

ಕರಾವಳಿಯ ನೇಕಾರಿಕೆಗೆ ತನ್ನದೇ ಆದ ಹಿರಿಮೆ ಇದೆ. ನೇಕಾರ ವೃತ್ತಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸರಕಾರದ ವತಿಯಿಂದ ಸಿಗುವಂತಾಗಬೇಕು. ಕೈಮಗ್ಗದ ಕೆಲಸಗಾರರಿಗೆ ಹೆಚ್ಚಿನ ಮನ್ನಣೆ ದೊರೆಯುವಂತಾಗಬೇಕು.
● ಶೋಭಾ ಹರಿಪ್ರಸಾದ್

ಪಡುಕರೆ ಶಿರಸಿ ಮಾರಿಕಾಂಬಾ ದೇಗುಲ ವಾರ್ಷಿಕ ಪ್ರತಿಷ್ಠಾ ವರ್ಧಂತಿ



ಕೋಟ: ಕೋಟತಟ್ಟು ಪಡುಕರೆ ಶ್ರೀ ಶಿರಸಿ ಮಾರಿಕಾಂಬಾ ದೇಗುಲದ ವಾರ್ಷಿಕ ಪ್ರತಿಷ್ಠಾವರ್ಧಂತ್ಯುತ್ಸವ ಬ್ರಹ್ಮಕಲಶಾಭಿಷೇಕ ಸಂಪನ್ನಗೊಂಡಿತು.
ದೇಗುಲದ ಧಾರ್ಮಿಕ ವಿಧಿ ವಿಧಾನಗಳನ್ನು ವೇದಮೂರ್ತಿ ಮಧುಸೂದನ ಬಾಯರಿ ನೇತೃತ್ವದಲ್ಲಿ ದೇಗುಲದ ಅಧ್ಯಕ್ಷ ರಮೇಶ್ ಪೂಜಾರಿ ದಂಪತಿಗಳ ಮೂಲಕ ನೆರವೇರಿತು. ದೇಗುಲದಲ್ಲಿ ಪಂಚವಿಂಶತಿ ದ್ರವ್ಯ ಕಲಶ ಪೂರ್ವಕ ಬ್ರಹ್ಮಕಲಶ ಸ್ಥಾಪನೆ, ಅಧಿವಾಸ ಹೋಮ, ಬ್ರಹ್ಮಕಲಶಾಭಿಷೇಕ ಜರಗಿತು. ಶ್ರೀ ದೇಗುಲದ ಶ್ರೀಮಾರಿಕಾಂಬಾ ಮಹಿಳಾ ಭಜನಾ ತಂಡ, ಕೋಟದ ಪಂಚವರ್ಣ ಮಹಿಳಾ ಭಜನಾ ತಂಡ, ಭಗವತ್ ಭಜನಾ ತಂಡ ಪಡುಕರೆ ಇವರಿಂದ ಭಜನೆ ಜರಗಿತು. ಸಾಂಸ್ಕೃತಿಕ ಕಾರ್ಯಕ್ರಮದ ಸಲುವಾಗಿ ಕರೋಕೆ ಗಾಯನ, ಫಿಲ್ಮಿಡಾನ್ಸ್ ಓಂಕಾರ್ ಕಲಾವಿದರು ಕನ್ನುಕೆರೆ ಕಥೆ ಈಗ ಶುರು ನಗೆ ನಾಟಕ ಪ್ರದರ್ಶನಗೊಂಡಿತು.
ಶ್ರೀದೇವಿದ ದರ್ಶನವನ್ನು ನಂದಿ ಪೂಜಾರಿ ನೆರವೇರಿಸಿದರು. ಅಮೃತೇಶ್ವರಿ ದೇಗುಲದ ಧರ್ಮದರ್ಶಿ ಆನಂದ್ ಸಿ. ಕುಂದರ್, ಅರ್ಚಕ ನಂದ್ಯಪ್ಪ ಪೂಜಾರಿ, ಸಹ ಅರ್ಚಕ ಚಂದ್ರ ಪುತ್ರನ್ ಬಾರ್ಕೂರು, ದೇಗುಲದ ಅಧ್ಯಕ್ಷ ರಮೇಶ್ ಪೂಜಾರಿ, ಕಾರ್ಯದರ್ಶಿ ಮಂಜುನಾಥ ನಾಯ್ಕ್, ಕೋಶಾಧಿಕಾರಿ ನಾಗಪ್ಪ ಪೂಜಾರಿ, ವಿನಯ ಕುಂದರ್, ಉಪಾಧ್ಯಕ್ಷರಾದ ಚಂದ್ರ ಪುತ್ರನ್, ಜತೆಕಾರ್ಯದರ್ಶಿ ರಾಜೇಂದ್ರ, ಅರುಣ್ ಸಾಲಿಯಾನ್, ಸತೀಶ್ ಮೆಂಡನ್, ಗೌರವ ಸಲಹೆಗಾರ ಸಂಜೀವ ಆರ್ ಕುಂದರ್, ಬಸವ ಕುಂದರ್, ಸಿದ್ಧಿ ಶ್ರೀನಿವಾಸ ಪೂಜಾರಿ, ಕೃಷ್ಣ ಪುತ್ರನ್ , ಉದಯ್ ತಿಂಗಳಾಯ, ಪ್ರಭಾಕರ್ ತಿಂಗಳಾಯ, ರಘು ಪೂಜಾರಿ, ಅಶೋಕ್ ಪೂಜಾರಿ, ಅಣ್ಣಪ್ಪ ತಿಂಗಳಾಯ ಮತ್ತಿತರರು ಇದ್ದರು.

ಮಹಿಳೆಯರನ್ನು ಗೌರವಿಸಿದರೆ ಸಮಾಜ ಗೌರವಿಸಿದಂತೆ : ಆನಂದ ಸಿ . ಕುಂದರ್



ಕೋಟ: ಸಮಾಜದ ಬೇರೆ ಬೇರೆ ಸ್ತರಗಳಲ್ಲಿ ತಮ್ಮದೇ ಕೊಡುಗೆಯನ್ನು ನೀಡಿರುವ ಮಹಿಳೆಯರು ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಅವರನ್ನು ಗೌರವಿಸಿದರೆ ಸಮಾಜವನ್ನೇ ಗೌರವಿಸಿದಂತೆ. ಆಕೆ ತಾಯಿಯಾಗಿ, ಮಡದಿಯಾಗಿ ಗೆಳತಿಯಾಗಿ ಬೇರೆ ಬೇರೆ ಹುದ್ದೆಗಳನ್ನು ನಿರ್ವಹಿಸಿದಂತ ಕರ್ತವ್ಯ ಶ್ಲಾಘನೀಯವಾದದ್ದು ಎಂದು ಉದ್ಯಮಿ ಆನಂದ ಸಿ ಕುಂದರ್ ನುಡಿದರು.
ಅವರು ಇತ್ತೀಚಿಗೆ ಕೋಟದ ಕಾರಂತ ಥೀಂ ಪಾರ್ಕ್‌ನಲ್ಲಿ ಡಾ. ಶಿವರಾಮ ಕಾರಂತ ಪ್ರತಿಷ್ಠಾನ ಕೋಟ, ಕೋಟತಟ್ಟು ಗ್ರಾಮ ಪಂಚಾಯತ್, ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘ ಕೋಟ, ನೆನಪು ಮೂವೀಸ್ ಮತ್ತು ಉಸಿರು ಕೋಟ ಆಶ್ರಯದಲ್ಲಿ ನಡೆದ ಡಾ. ಶಿವರಾಮ ಕಾರಂತ ಸಾಧಕ ಸ್ತ್ರೀ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ ನುಡಿದರು.
ಪಂಚಾಯತ್ ಕಾರ್ಯದರ್ಶಿ ಸುಮತಿ ಅಂಚನ್ ಅಧ್ಯಕ್ಷತೆಯನ್ನು ವಹಿಸಿದ್ದರು.
ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕ ಮಹಿಳೆಯರಿಗೆ ಡಾ. ಶಿವರಾಮ ಕಾರಂತ ಸಾಧಕ ಸ್ತ್ರೀ ಪುರಸ್ಕಾರ ನೀಡಿ ಗೌರವಿಸಲಾಯಿತು.
ವೇದಿಕೆಯಲ್ಲಿ ಶಿವರಾಮ ಕಾರಂತ ಪ್ರತಿಷ್ಠಾನದ ಸದಸ್ಯರಾದ ಸುಶೀಲಾ ಸೋಮಶೇಖರ್, ಯು. ಎಸ್. ಶೆಣೈ, ಸುಮನಾ ಹೇರ್ಳೆ, ಕೋಟತಟ್ಟು ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಬಾರಿಕೆರೆ, ಸದಸ್ಯರಾದ ವಾಸು ಪೂಜಾರಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸತೀಶ್ ವಡ್ಡರ್ಸೆ ಸ್ವಾಗತಿಸಿ ವಾಣಿಶ್ರೀ ಅಶೋಕ ಐತಾಳ್ ವಂದಿಸಿದರು. ಕುಂದಾಪ್ರ ರೇಡಿಯೋನಿರ್ವಾಹಕಿಜ್ಯೋತಿಸಾಲಿಗ್ರಾಮ ಕಾರ್ಯಕ್ರಮ ನಿರೂಪಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರ ಎದುರು ರಘುಪತಿ ಭಟ್ ಅನಿರ್ದಿಷ್ಟಾವಧಿ ಧರಣಿ



ಉಡುಪಿ: ಬಡಾನಿಡಿಯೂರು ಗ್ರಾಮದ ಜಾಗಕ್ಕೆ ಏಕ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕಳೆದ ಎರಡು ವರ್ಷಗಳಿಂದ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ, ಮಾಜಿ ಶಾಸಕ ರಘುಪತಿ ಭಟ್ ಅವರು ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಎದುರು ಸೋಮವಾರದಿಂದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.
ಬೆಳಿಗ್ಗೆ 9:30ಕ್ಕೆ ಧರಣಿ ಆರಂಭಿಸಿದ ರಘುಪತಿ ಭಟ್ ಮಾತನಾಡಿ, 2024ರ ಮಾ. 20ರಂದೇ ಅರ್ಜಿ ಸಲ್ಲಿಸಿದ್ದರೂ ಪ್ರಾಧಿಕಾರವು ಅನುಮೋದನೆ ನೀಡದೆ ಸತಾಯಿಸುತ್ತಿದೆ. ನಕ್ಷೆಗೆ ಅನುಮೋದನೆ ನೀಡಬೇಕು ಅಥವಾ ತಾಂತ್ರಿಕ ಕಾರಣಗಳಿದ್ದರೆ ನೀಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಬೇಕು. ಅಲ್ಲಿಯವರೆಗೆ ಧರಣಿ ಕೈಬಿಡುವುದಿಲ್ಲ, ಹಿಂಬರಹ ನೀಡಿದರೆ ಅದರ ಆಧಾರದ ಮೇಲೆ ಕಾನೂನು ಹೋರಾಟ ಮುಂದುವರಿಸುತ್ತೇನೆ ಎಂದು ಎಚ್ಚರಿಸಿದರು. ಇವರ ಈ ಹೋರಾಟಕ್ಕೆ ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರು ಬೆಂಬಲ ಸೂಚಿಸಿ ಪಾಲ್ಗೊಂಡಿದ್ದಾರೆ.

ಆಯುಕ್ತರ ಸ್ಪಷ್ಟನೆ

ಈ ಕುರಿತು ಪ್ರತಿಕ್ರಿಯಿಸಿದ ಪ್ರಾಧಿಕಾರದ ಆಯುಕ್ತ ಮಹೇಶ್ ಜೆ. ಅವರು, ರಘುಪತಿ ಭಟ್ ಸಲ್ಲಿಸಿರುವ ಅರ್ಜಿಯಲ್ಲಿ ಯಾವುದೇ ಕಾನೂನು ತೊಡಕುಗಳಿಲ್ಲ, ಆದರೆ, ಕರಾವಳಿ ಯುವಕ ಮಂಡಲವು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವುದರಿಂದ, ಈ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು'' ಎಂದು ತಿಳಿಸಿದರು.

ಪ್ರಾಧಿಕಾರ ಅಧ್ಯಕ್ಷರ ಅಸಮಾಧಾನ

ಪ್ರಾಧಿಕಾರ ಅಧ್ಯಕ್ಷ ದಿನಕರ ಹೇರೂರು ಮಾತನಾಡಿ, ಬಡಾನಿಡಿಯೂರು ಏಕನಿವೇಶನದ ಅರ್ಜಿಯ ಬಗ್ಗೆ ಈಗಾಗಲೇ ಸಾಮಾನ್ಯ ಸಭೆಯಲ್ಲಿ ಸುದೀರ್ಘ ಚರ್ಚೆಯಾಗಿದೆ. ವಿಷಯವನ್ನು ಅಂತಿಮ ಹಂತಕ್ಕೆ ತರಬೇಕು ಎಂದು ನಿರ್ಣಯಿಸಿ, ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಆದರೂ ಆಯುಕ್ತರು ಸೂಚನೆಯನ್ನು ಪಾಲಿಸುತ್ತಿಲ್ಲ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪರಾರಿ ಶ್ರೀ ಬೊಬ್ಬರ್ಯ ದೈವಸ್ಥಾನ ಬ್ರಹ್ಮಕಲಶ: ಆಮಂತ್ರಣ ಬಿಡುಗಡೆ



ಬ್ರಹ್ಮಾವರ: ಹಾವಂಜೆ ಗ್ರಾಮದ ಪರಾರಿ ಶ್ರೀ ಬೊಬ್ಬರ್ಯ ದೈವಸ್ಥಾನದ ಪುನಃಪ್ರತಿಷ್ಠೆ ಬ್ರಹ್ಮಕಲಶೋತ್ಸವ ಮತ್ತು ನೇಮದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭವು ದೈವಸ್ಥಾನದ ವಠಾರದಲ್ಲಿ ನಡೆಯಿತು.
ಕ್ಷೇತ್ರದ ಪ್ರಧಾನ ಅರ್ಚಕ ಲಕ್ಷ್ಮೀಶ ಭಟ್ ಉಪ್ಪೂರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ, ದೇವರಿಗೆ ಪ್ರಾರ್ಥನೆ ಸಲ್ಲಿಸಿದರು. ಮಣಿಪಾಲ ಠಾಣಾಧಿಕಾರಿ ತಿಮ್ಮೇಶ್ ಬಿ.ಎನ್. ಹಾಗೂ ಬ್ರಹ್ಮಾವರ ಠಾಣಾಧಿಕಾರಿ ಅಶೋಕ್ ಮಳಬಾಗಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಗುರುರಾಜ್ ಭಟ್ ಕೊಳಲಗಿರಿ ಪ್ರಾಸ್ತಾವಿಕ ಮಾತನಾಡಿ, ಕಾರ್ಯ ಕ್ರಮದ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು. ಸಮಿತಿ ಗೌರವಾಧ್ಯಕ್ಷ ಸತೀಶ್ ಪೂಜಾರಿ ಕೀಳಂಜೆ ಮಾತನಾಡಿ, ಸರ್ವರ ಸಹಕಾರದಿಂದ ದೈವ ಸ್ಥಾನವು ಸುಂದರವಾಗಿ ಮೂಡಿ ಬಂದಿದ್ದು ಇನ್ನೂ ಹಲವಾರು ಅಭಿವೃದ್ಧಿ ಕಾಮಗಾರಿಗಳು ಆಗಬೇಕಿದ್ದು ಭಕ್ತಾದಿಗಳ ಸಹಕಾರ ಬೇಕೆಂದು ವಿನಂತಿಸಿದರು.
ಉಪ್ಪೂರು ಬಿಲ್ಲವ ಸೇವಾ ಸಂಘ ಅಧ್ಯಕ್ಷ ರಾಜು ಪೂಜಾರಿ, ತುಳುನಾಡ ರಕ್ಷಣೆ ವೇದಿಕೆ ಜಿಲ್ಲಾಧ್ಯಕ್ಷ ಫ್ರ್ಯಾಂಕಿ ಡಿಸೋಜ ಕೊಳಲಗಿರಿ, ಮಾಧವ ಪಾಣ, ವಿಕ್ರಾಂತ್ ಶೆಟ್ಟಿ ಕೀಳಂಜೆ, ಆತ್ಮರಾಮ್ ಪಾಟೀಲ್, ಮಧುಕರ್ ನಾಯ್, ಜಗದೀಶ್ ನಾಯಕ್ ಪರಾರಿ, ರಾಮ ನಾಯ್ಕ ಪರಾರಿ, ದೈವಸ್ಥಾನದ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಮಹಿಳಾ ಪದಾಧಿ ಕಾರಿಗಳು ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.
ರಾಮಮೂರ್ತಿ ರಾವ್ ಪಾಡಿಗಾರ್ ಸಹಕರಿಸಿದರು. ಶಿಕ್ಷಕ ಪ್ರಶಾಂತ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಏ.11ರಂದು ಕಟಪಾಡಿ ಶ್ರೀನಿವಾಸ ಕಲ್ಯಾಣೋತ್ಸವ, ಪೂರ್ವಭಾವಿ ಸಭೆ



ಶಿರ್ವ: ತಿರುಮಲ ತಿರುಪತಿ ದೇವಸ್ಥಾನದ ನೇತೃತ್ವದಲ್ಲಿ ಕೆ. ಕೃಷ್ಣಮೋಹನ್ ಪೈ ಯುಎಸ್‌ಎ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ, ಶ್ರೀ ಪುರುಷೋತ್ತಮ ಪೈ, ಮತ್ತು ಕುಟುಂಬಸ್ಥರ ವತಿಯಿಂದ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಹಾಗೂ ಕಟಪಾಡಿಯ ನಾಗರಿಕರು, ಗಣ್ಯರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ದೇವಸ್ಥಾನ ದೈವಸ್ಥಾನಗಳ ಆಡಳಿತ ಮಂಡಳಿ ಸಹಕಾರದೊಂದಿಗೆ ಏ.11ರಂದು ಎಸ್ ವಿಎಸ್ ಕ್ರೀಡಾಂಗಣದಲ್ಲಿ ಜರಗಲಿರುವ ಶ್ರೀನಿವಾಸ ಕಲ್ಯಾಣೋತ್ಸವ ಎರಡನೇ ಪೂರ್ವಭಾವಿ ಸಭೆ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಜರುಗಿತು.
ಸಭೆಯ ನೇತೃತ್ವ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ ಕಾರ್ಯಕ್ರಮ ಆಯೋಜಿಸಲು ತಿರುಪತಿ ದೇವಸ್ಥಾನದಿಂದ ಅಧಿಕೃತ ಒಪ್ಪಿಗೆ ಪತ್ರ ದೊರೆತಿದೆ ಎಂದರು.
ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಮಟ್ಟಾರು ದಿನೇಶ್ ಕಿಣಿ, ಕೋಟೆ ಶ್ರೀಬಬ್ಬುಸ್ವಾಮಿ ದೈವಸ್ಥಾನದ ಕರ್ತಾರರು ಡಾ.ಯು.ಕೆ. ಶೆಟ್ಟಿ, ಕಟಪಾಡಿ ಶ್ರೀವಿಶ್ವನಾಥ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ಮಹೇಶ್ ಎನ್ ಅಂಚನ್, ಧರ್ಮಸ್ಥಳ ಯೋಜನೆ ಯೋಜನಾಧಿಕಾರಿ ಮಮತಾ ಶೆಟ್ಟಿ, ಕೋಟೆ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಯೋಗೀಶ್, ಉದ್ಯಾವರ ಗ್ರಾ.ಪಂ. ಸದಸ್ಯ ರಾಜೇಶ್ ಶ್ರೀಯಾನ್, ಮೂಡುಬಿದಿರೆ ಆರ್‌ಕೆ ಎಂಟರ್ ಪ್ರೈಸಸ್ ಮುಖ್ಯಸ್ಥ ಆರ್ ಕೆ ಭಟ್, ಶ್ರೀ ವೆಂಕಟರಮಣ ದೇವಸ್ಥಾನದ ಮಹಿಳಾ ಮಂಡಳಿಯ ಅಧ್ಯಕ್ಷೆ ಶೈಲಾ ಕಾಮತ್, ಕಟಪಾಡಿ ರೋಟರಿ ಕ್ಲಬ್ ಮಾಜಿ ಅಧ್ಯಕ್ಷೆ ತುಳಸಿ ದೇವಾಡಿಗ, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಉಪಸ್ಥಿತರಿದ್ದರು. ಪ್ರಾಧ್ಯಾಪಕ ಸುರೇಶ್ ಕಾಮತ್, ಪತ್ರಕರ್ತ ಪ್ರಕಾಶ್ ಸುವರ್ಣ ಕಾರ್ಯಕ್ರಮ ನಿರ್ವಹಿಸಿದರು.

ಕೋಟೇಶ್ವರ ಪ್ರಥಮ ದರ್ಜೆ ಕಾಲೇಜು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಕುಂದಾಪುರ: ಕುಂದಾಪುರ ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲಿನ ಆಂತರಿಕ ಗುಣಮಟ್ಟ ಭರವಸಾ ಕೋಶ ಮತ್ತು ಮಹಿಳಾ ವೇದಿಕೆಯ ಜಂಟಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.
ಮುಖ್ಯ ಅತಿಥಿಯಾಗಿದ್ದ ಶಿರ್ವ ಸೈಂಟ್ ಮೇರಿಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಗುಲಾಬಿ ಪೂಜಾರಿ ಮಹಿಳಾ ದಿನಾಚರಣೆಯ ಮಹತ್ವವನ್ನು ತಿಳಿಸಿ, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಾಗಿ ಮಾತನಾಡಿದರು. ಜೊತೆಗೆ ವಿದ್ಯಾರ್ಥಿನಿಯರು ಆಧುನಿಕ ತಂತ್ರಜ್ಞಾನದ ಈ ಕಾಲದಲ್ಲಿ ಎಚ್ಚರಿಕೆಯಿಂದ ನಡೆದುಕೊಳ್ಳುವಂತೆ ಕಿವಿಮಾತು ಹೇಳಿದರು.
ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ನಾಗರಾಜ ವೈದ್ಯ ಎಂ., ಆಂತರಿಕ ಗುಣಮಟ್ಟ ಭರವಸಾ ಕೋಶದ ಸಂಚಾಲಕ ನಾಗರಾಜ ಯು., ಮಹಿಳಾ ವೇದಿಕೆಯ ಸಂಚಾಲಕಿ ರೋಹಿಣಿ, ಕಾಲೇಜಿನ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕೃತಿಕಾ ಕಾರ್ಯಕ್ರಮ ನಿರ್ವಹಿಸಿದರು. ಪೂಜಾ ವಂದಿಸಿದರು.

'ಕೂತು ಮಾತಾಡುವ' ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕ ಜೀವನರಾಂ ಸುಳ್ಯ ಆಶಯ

ಬದುಕಿನ ಸಾರ್ಥಕತೆಗೆ ನಾವೆಲ್ಲ ಮತ್ತೊಮ್ಮೆ ಮಕ್ಕಳಾಗಬೇಕು

ಉಡುಪಿ: ಬದುಕಿನ ಸಾರ್ಥಕತೆಯನ್ನು ಗಳಿಸಲು ನಾವೆಲ್ಲ ಮತ್ತೊಮ್ಮೆ ಮಕ್ಕಳಾಗಬೇಕು ಎಂದು ಖ್ಯಾತ ರಂಗ ನಿರ್ದೇಶಕ ಜೀವನರಾಂ ಸುಳ್ಯ ಹೇಳಿದರು.
ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ತಾಲೂಕು ಘಟಕ ಹಾಗೂ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಉಡುಪಿ ಮತ್ತು ಅವಿನಾಶ್ ಕಾಮತ್ ಇವರ ನೇತೃತ್ವದಲ್ಲಿ ಕೂತು ಮಾತಾಡುವ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು. ನಾವು ನಮ್ಮ ಋಣಾತ್ಮಕ ಅಂಶಗಳನ್ನು ಮತ್ತೊಬ್ಬರಿಗೆ ತಿಳಿಸದೆ, ಅದನ್ನು ಧನಾತ್ಮಕವಾಗಿ ತೆಗೆದುಕೊಳ್ಳುವ ಪರಿಪಾಠ ಬೆಳೆಯಬೇಕು ಎಂದರು.
ಅವರ ಬದುಕಿನ ರೋಚಕ ಕಥೆಗಳನ್ನು ವಿವರಿಸುತ್ತಾ ಅವರ ಸಾಧನೆಯ ಬಗ್ಗೆ ವಿಸ್ತಾರವಾಗಿ



ತಿಳಿಸಿದರು. ಉಡುಪಿಯ ಶಾರದಾ ಮಂಟಪ ರಸ್ತೆಯ ರಂಗವಲ್ಲಿ ಮನೆಯ ಆವರಣದಲ್ಲಿ ಈ ಕಾರ್ಯಕ್ರಮ ನಡೆಯಿತು.
ಬದುಕಿನಲ್ಲಿ ನಡೆದ ಹಲವು ಘಟನೆಗಳು, ಕಷ್ಟದಿಂದ ಮೇಲೆದ್ದು ಬಂದ ರೋಚಕ ಕಥೆಗಳು ಸಭಿಕರಿಗೆ ಭಾವನಾತ್ಮಕವಾಗಿ ಕಥೆಗಳ ಮೂಲಕ ವಿವರಿಸಿದರು. ಕಾರ್ಯಕ್ರಮವನ್ನು ನಿರೂಪಕ ಅವಿನಾಶ್ ಕಾಮತ್ ನೆರವೇರಿಸಿ ಕೊಟ್ಟರು.
ಕಾರ್ಯಕ್ರಮದ ಕೊನೆಯಲ್ಲಿ ಜೀವನ್ ರಾಮ್ ಅವರನ್ನು ಸಂಸ್ಥೆ ವತಿಯಿಂದ ಗೌರವಿಸಲಾಯಿತು.
ಕಸಾಪ ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್ ಪಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ಗೌರವಾಧ್ಯಕ್ಷ ವಿಶ್ವನಾಥ್ ಶೆಣೈ, ಅಧ್ಯಕ್ಷ ಪ್ರೊ. ಶಂಕರ್, ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರ್, ಕಸಾಪ ಉಡುಪಿ ತಾಲೂಕಿನ ಗೌರವ ಕಾರ್ಯದರ್ಶಿಗಳಾದ ಜನಾರ್ದನ ಕೊಡವೂರು, ರಂಜಿನಿ ವಸಂತ್, ಕೋಶಾಧಿಕಾರಿ ರಾಜೇಶ್ ಭಟ್ ಪಣಿಯಾಡಿ, ಸಂಧ್ಯಾ ಶೆಣೈ, ಶಿಲ್ಪಾ ಜೋಶಿ ರಾಘವೇಂದ್ರ ಪ್ರಭು ಕರ್ವಾಲು, ಸಿದ್ದಬಸಯ್ಯ ಸ್ವಾಮಿ ಚಿಕ್ಕಮಠ ಇನ್ನಿತರರು ಉಪಸ್ಥಿತರಿದ್ದರು.

ಉಡುಪಿ ಪೊಲೀಸ್ ಲೈನ್ ಶ್ರೀ ಮೂಕಾಂಬಿಕಾ ಮಂದಿರ

ಪ್ರತಿಷ್ಠಾ ವರ್ಧಂತ್ಯುತ್ಸವದ ಸಂಪನ್ನ

ಉಡುಪಿ: ನಗರದ ಜಿಲ್ಲಾ ಪೊಲೀಸ್ ಲೈನ್ ವಸತಿ ಗೃಹಗಳ ಸಮುಚ್ಚಯದ ಆವರಣದಲ್ಲಿರುವ ಶ್ರೀ ಮೂಕಾಂಬಿಕಾ ಭಜನಾ ಮಂದಿರದ ಪ್ರತಿ?ಠಾ ವರ್ಧಂತ್ಯುತ್ಸವವು ಸೋಮವಾರ ಅತ್ಯಂತ ಶ್ರದ್ಧಾಭಕ್ತಿಯಿಂದ ಜರುಗಿತು.
ವರ್ಧಂತ್ಯುತ್ಸವದ ಅಂಗವಾಗಿ ಬೆಳಿಗ್ಗೆಯಿಂದಲೇ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಶ್ರೀ ಸತ್ಯನಾರಾಯಣ ಪೂಜೆ, ಶ್ರೀ ಮೂಕಾಂಬಿಕಾದೇವಿಗೆವಿಶೇಷಹೂವಿನ ಅಲಂಕಾರ ಹಾಗೂ ಮಹಾಪೂಜೆ ನಡೆಯಿತು. ಮಧ್ಯಾಹ್ನ ಪರಿವಾರ ದೈವಗಳಿಗೆ ಅಭಿಷೇಕ ಹಾಗೂ ತೀರ್ಥ



ಪ್ರಸಾದ ವಿತರಣೆ ಮಾಡಲಾಯಿತು. ಸಾರ್ವಜನಿಕ ಅನ್ನಸಂತರ್ಪಣೆ ನಡೆದ ಬಳಿಕ, ಸಂಜೆ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಸಂಕೀರ್ತನೆ ಹಾಗೂ ಮಂಗಲಾರತಿಯೊಂದಿಗೆ ಕಾರ್ಯಕ್ರಮವು ಮಂಗಲಗೊಂಡಿತು.
ಉಡುಪಿ ಜಿಲ್ಲಾ ಪೊಲೀಸ್ ಲೈನ್‌ನ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಪೊಲೀಸ್ ಅಧೀಕ್ಷಕರ ಕಚೇರಿಯ ಸಿಬ್ಬಂದಿ ಹಾಗೂ ಸಶಸ್ತ್ರ ಮೀಸಲು ಪಡೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.
ಮಂದಿರದ ಮಹಿಳಾ ಮಂಡಳಿಯ ಸದಸ್ಯರು, ಅರ್ಚಕ ಹರೀಶ್ ಕೊಡಂಚ ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಉಪಸ್ಥಿತರಿದ್ದು ಪ್ರಸಾದ ಸ್ವೀಕರಿಸಿದರು.